ಮನನ


ಕಾಮ
ಲೈಂಗಿಕ ಶಿಕ್ಷಣ
ಆಯಾಸ
ಚಳವಳಿ
ಕೊರತೆ
ಒಂದೇ ಏಟಿಗೆ ಎರಡು ಹಕ್ಕಿ
ಸೇವೆ
ಕಾಯಬೇಕು
ಗಾಢವಾದ
ಉಪಹಾರ
ತರುಣ
ಆನಂದ
ಸನ್ಮಾನ
ನಿರ್ಧಾರ
ನಿರುದ್ಯೋಗ

ಾಂ.ಶಿ.

ಮನನ

ಆರೆಕ್ಷಣ

ರಾ. ಶಿ.

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

ಬೆಲೆ ರೂ. 9–00

ಮುದ್ರಣ 1980. ಪ್ರಕಾಶಕರು : ಪಿ.ಎನ್. ಕಾಮತ್, ಐಬಿಎಚ್ ಪ್ರಕಾಶನ, ಐದನೆಯ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು 560 009.

ಮುದ್ರಕರು : ಎಚ್. ಎಸ್. ಎನ್. ರಾವ್, ಐಬಿಎಚ್ ಪ್ರಕಾಶನ ಪ್ರಿಂಟರಿ, ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು 560 054

ಮಾರ್ಗಶಿರ ಶುದ್ಧ ಚತುರ್ದಶಿ

ಚಿ| ರಾ| ಕುಮಾರ್

ಚಿಂತನಶೀಲ ಪ್ರವೃತ್ತಿಯನ್ನು

ವರ್ಷೇ ವರ್ಷೇ ಅಭಿವೃದ್ಧಿ ಪಡಿಸಿಕೊಳ್ಳುವಂತಾಗಲಿ

ಎಂದು ಹಾರೈಸುತ್ತೇನೆ

ಎಂ. ಶಿವರಾಂ

ಕಾಲ - ಭೈರವ

ಅವತ್ತು ಸಂಜೆ ಗಾಳಿ ವಿಹಾರಕ್ಕೆಂದು ನಡೆದು ಹೋಗುತ್ತಿದ್ದಾಗ, ಬಾಲ ಚಮೂಗಳ ದಳವೊಂದು ಬಾಜಾ ಬಜಂತ್ರಿ ಬಜಾಯಿಸುತ್ತ ನನ್ನೆದುರಿಗೆ ಬಂದಿತು. ಲಕ್ಷಣವಾದ ಹುಡುಗರು, ಶಿಸ್ತಿನ ನಡಿಗೆ, ಗರಿಗರಿಯಾದ ಸಮ ವಸ್ತ್ರ. ತಾಳದ ನಡಿಗೆಗೆ ಅನುವಾಗುವಂತೆ:

ದೇವರಾಜ ಸೇವ್ಯಮಾನ ಪಾವನಾಂಘ್ರಿ ಪಂಕಜಂ
ವ್ಯಾಲಯಜ್ಞ ಸೂತ್ರಮಿಂದುಶೇಖರಂ ಕೃಪಾಕರಂ
ನಾರದಾದಿ ಯೋಗಿ ವೃಂದ ವಂದಿತಂ ದಿಗಂಬರಂ
ಕಾಶಿಕಾಪುರಾಧಿನಾಥ ಕಾಲಭೈರವಂ ಭಜೆ

ಎಂದು ಸಾಮೂಹಿಕವಾಗಿ ನುಡಿಯುತ್ತಿದ್ದರು. ನನ್ನ ಸಮಕ್ಕೆ ಬಂದು ಅವರು ಮುನ್ನಡೆಯುವಾಗ 'ದಿಗಂಬರಂ' ಎಂದು ಹಾಡಿದ್ದರು. ಹತ್ತಿರದಲ್ಲೇ ಇದ್ದುದರಿಂದ ಗಟ್ಟಿಯಾಗಿಯೇ ಕೇಳಿಸಿತು.

ದಿಗಂಬರಂ — ದಿಕ್ ಅಂಬರಂ

ಈ ಪದವು ನನ್ನ ಮನಸ್ಸಿನಲ್ಲಿ ಗುಂಯ್‌ಗುಡತೊಡಗಿತು. ದಿಕ್ ಅಂಬರಂ—ದಿಗಂಬರಂ. ದಿಕ್ಕೇ ಬಟ್ಟೆಯಾದವನಿಗೆ, ಬೇರೆ ಹೊದಿಕೆಯ ಅಗತ್ಯವೇ ಇರುವುದಿಲ್ಲ! ಅಂತಹವನು ದಿಗಂಬರ. ಪವಿತ್ರ ಕಾಶಿ ಕ್ಷೇತ್ರದ ಅಧಿಪತಿಯಾದ ಕಾಲಬೈರವನು ದಿಕ್-ಅಂಬರ. 'ಕಾಲ'ನು ದಿಕ್-ಅಂಬರ ಹೊಂದಿದವನು!!

ಕಾಲ ಅಂದರೆ Timeಅನ್ನು, ದಿಕ್-ಅಂಬರ ಅಂದರೆ Spaceಅನ್ನು ಹೊದ್ದುಕೊಂಡವನು ಎಂದು ವರ್ಣಿಸಿದಂತಾಯಿತು. ಇವೆರಡೂ ಅವಿಚ್ಛಿನ್ನ ಎಂದಂತೂ ಆಯಿತು.

* * *

ಸಾಮಾನ್ಯವಾಗಿ, ಎರಡು ಘಟನೆಗಳ ಅಂತರವನ್ನು ಕಾಲ ಎಂದು ಕರೆ ಯುತ್ತೇವೆ. ಇಂದಿನ ಸೂರ್ಯೋದಯಕ್ಕೂ, ನಾಳಿನ ಸೂರ್ಯೋದಯಕ್ಕೂ

ನಡುವಿನ ಅಹೋರಾತ್ರಿ ಅಂತರವನ್ನು ಇಪ್ಪ್ಟು ಘಳಿಗೆಗಳು ಎಂದು ಕೃತಕ ವಾಗಿ ವಿಂಗಡಿಸಿದೆವು. ಒಂದು ಘಳಿಗೆಯನ್ನು ಇಪ್ಪು ವಿಘಳಿಗೆಗಳು ಎಂದೂ ವಿಂಗಡಿಸಿದೆವು. ಈ ಕಲ್ಪನೆಯಿಂದ ವ್ಯವಹಾರದಲ್ಲಿ ತುಂಬಾ ಪ್ರಯೋಜನ ವಾಯಿತು. ಸೂರ್ಯೋದಯವು ಮಾನವನ ಅನುಭವದಲ್ಲಿ ತುಸು ಹೆಚ್ಚು ಕಡಿಮೆಯಾಗುವುದು ಗಡಿಯಾರದ ಸೃಷ್ಟಿಯಾದನಂತರ ಕಂಡುಬಂದಿತು. ಆದಕಾರಣ, ಸೂರ್ಯೋದಯಕ್ಕೆ ಬದಲು, ಒಂದು ಸ್ಥಳದಲ್ಲಿ, ಸೂರ್ಯನು ನೆತ್ತಿಯ ಮೇಲೆ ನೇರ ಕಾಣಿಸಿದ ಹೊತ್ತಿನಿಂದ ಮರುದಿನ ಅದೇ ರೀತಿ ಕಾಣಿಸಿಕೊಳ್ಳುವ ಹೊತ್ತಿನ ತನಕ ಇರುವ ಅಹೋರಾತ್ರಿಯ ಅಂತರವನ್ನು ಇಪ್ಪತ್ತುನಾಲ್ಕು ಗಂಟೆಗಳು, ಒಂದು ಗಂಟೆಗೆ 60 ನಿಮಿಷಗಳು, ಒಂದು ನಿಮಿಷಕ್ಕೆ 60 ಸೆಕೆಂಡುಗಳು ಎಂದು ವಿಭಜಿಸಿದರು. ಹಗಲು, ರಾತ್ರಿ ಎಂಬ ಎರಡು ವಿಂಗಡಣೆಗಳು ಸ್ಪಷ್ಟವಾಗಿ ಕಾಣಿಸುತ್ತಿದ್ದುದರಿಂದ, ಹನ್ನೆರಡು ಗಂಟೆ ಗಳನ್ನು ಮಾತ್ರ ಗುರುತಿಸುವ ಗಡಿಯಾರಗಳನ್ನು ರಚಿಸಿದರು. 8 a.m. Ante Meridiem; ಮೆರಿಡಿಯನ್, ನೆತ್ತಿಯ ಮೇಲಕ್ಕೆ ನೇರವಾಗಿ ಸೂರ್ಯನು ಬರುವ ಕಾಲಕ್ಕೆ ಮೊದಲು ಎಂದಂತಾಯಿತು. ಬೆಳಗಿನ ಎಂಟು ಗಂಟೆ ಎಂದು ಸ್ಪಷ್ಟವಾಯಿತು. 8 p.m. ಎಂದರೆ Post-Meridiem; ನೆತ್ತಿಯಮೇಲಕ್ಕೆ ನೇರವಾಗಿ ಸೂರ್ಯನು ಕಾಣಿಸಿಕೊಂಡು ಹೋದ ಮೇಲೆ ಆದಷ್ಟು ಅಂತರ ಎಂದಂತಾಯಿತು. ರಾತ್ರಿ ಎಂಟು ಎಂದು ಖಚಿತವಾಯಿತು. ಹೀಗಾಗಿ ಇಪ್ಪತ್ತುನಾಲ್ಕು ಗಂಟೆಗಳನ್ನು ಎಣಿಸಿಡುವ ಬದಲು ಹನ್ನೆರಡ ರಲ್ಲಿಯೇ ಗಡಿಯಾರದ ರಚನೆಯಾಯಿತು.

ವ್ಯಾವಹಾರಿಕವಾಗಿ a.m., p.m. ಎಂದು ಹೇಳುವುದರಿಂದ, ತಪ್ಪಾಗ ಬಹುದು ಎಂದನಿಸಿದುದರಿಂದ Zero hour to 24 hours ಎಂದು, ಸಾರಿಗೆ ವ್ಯವಹಾರಗಳಲ್ಲಿ ಬಳಸುತ್ತಿದ್ದಾರೆ.

ಕಾಲವು ಒಂದು ಅನಂತವಾಹಿನಿ. ಕಾಲಚಕ್ರವು ಉರುಳುತ್ತಲೇ ಇರು ತ್ತದೆ. ನಿರಂತರವಾದ ಕಾಲದ ಸರಿಯುವಿಕೆಗೆ ತಡೆಯೇ ಇಲ್ಲ. The Time Arrow. ಬಿಟ್ಟಬಾಣದಂತೆ ಗುರಿಮುಟ್ಟುವತನಕ ಕಾಲವು ಮುಂದುವರಿಯು ತ್ತದೆ. ಹೀಗೆಲ್ಲಾ ಕಾಲವನ್ನು ವರ್ಣಿಸಿದರು. ಗುರಿಮುಟ್ಟುವತನಕ ಎಂದರೆ ಕಾಲವೆಂಬ ಬಾಣಕ್ಕೆ ಗುರಿಯೊಂದುಂಟೆ ? ಇದ್ದರೆ ಅದೇನು ? ಎಂದಾಗ, ಗುರಿಯೇನೋ ನಮಗೆ ಈ ತನಕ ತಿಳಿಯದು. ಆದರೂ ಅಂತ್ಯವೇ ಇರದ Infinity ಏನೋ ಎಂದರು ಭೌತವಿಜ್ಞಾನಿಗಳು.

ಇದು ಸತ್ಯವೇ ? ಕಾಲವು ಸ್ತಬ್ಧವಾಗುವುದಿಲ್ಲವೇ ? ಅಥವಾ ಹಿನ್ನಡೆಯುವುದು ಅಸಾಧ್ಯವೇ ? ಬಾಳಿನ ಅನುಭವವನ್ನು ಗಮನಿಸಿದರೆ, ಮುಪ್ಪು ಸಾವುಗಳು ತಪ್ಪದೆ ಸಂಭವಿಸುವುದನ್ನು ನೋಡಿದರೆ Time Arrowಅನ್ನುವುದು ನ್ಯಾಯ ಎನ್ನಿಸುತ್ತೆ.

ಆದರೆ ಸ್ವಲ್ಪ ವಿವರವಾಗಿ ಪರಿಶೀಲಿಸಿದರೆ Time Arrow ಸುಳ್ಳೇನೋ ಎನಿಸುತ್ತದೆ. ಕಾಲವು ಅನಂತವಾಹಿನಿಯಲ್ಲವೇನೋ ಎಂಬ ಅನುಮಾನವೂ ಮೂಡುತ್ತದೆ.

1) ಗಿಡದ ಬಾಳಿನ ನಿದರ್ಶನವನ್ನು ಪರಿಶೀಲಿಸೋಣ. ಗಿಡ ಹುಟ್ಟುತ್ತದೆ. ಬೆಳೆಯುತ್ತದೆ. ಹೂ ಬಿಡುತ್ತದೆ. ಗರ್ಭಧಾರಣೆಯನ್ನು ಹೂ ಸಾಧಿಸುತ್ತದೆ. ಕಾಯಿಯಾಗುತ್ತದೆ. ಕಾಯಿ ಹಣ್ಣಾಗುತ್ತದೆ. ಆ ವೇಳೆಗೆ ಅದರಲ್ಲಿರುವ ಬೀಜಗಳು ಸದೃಢವಾಗಿರುತ್ತವೆ. ತಿನ್ನಲು ಖಗ ಮೃಗಗಳು ಹಣ್ಣನ್ನು ಗಿಡದಿಂದ ಕೀಳುತ್ತವೆ. ನಂತರ ಹತ್ತಿರದಲ್ಲೋ ತುಸು ದೂರದಲ್ಲೋ ಹಣ್ಣನ್ನು ತಿಂದು ಬೀಜವನ್ನು ಎಸೆಯುತ್ತದೆ. ಎಸೆಯಲ್ಪಟ್ಟ ಬೀಜವು ಅನುಕೂಲಕರವಾದ ನೆಲದಲ್ಲಿ ಬಿದ್ದರೆ, ಅದು ಮೊಳಕೆಯೊಡೆಯುತ್ತದೆ. ಗಿಡವಾಗುತ್ತದೆ. ಗಿಡ–ಬೀಜದ ಬಾಳ ಚಕ್ರ. ಗಿಡದ ಅಥವಾ ಬೀಜದ ಬಾಳಚಕ್ರದಲ್ಲಿ ಒಂದಾದ ಮೇಲೊಂದು ಅವಸ್ಥೆಯು ನಿರಂತರವಾಗಿ ಸಾಗಿರುತ್ತದೆ. ಅಂದರೆ ಅದರ ದೃಷ್ಟಿಯಿಂದ ಕಾಲಚಕ್ರವು ನಿರಂತರವಾಗಿ ಉರುಳುತ್ತಲೇ ಇದೆ.

ಬಿತ್ತಿದ ಬೀಜವು ಮೊಳಕೆಯೊಡೆಯಲು ಎರಡು ವಾರಗಳಾಗುತ್ತವೆ ಎಂದನ್ನೋಣ. ಅದರಿಂದ ಮುಂದೆ ಬರುವ ಒಂದೊಂದು ಅವಸ್ಥೆಗೂ ಸುಮಾರು ನಿಖರವಾದ ಅಂತರವು ಸಾಮಾನ್ಯವಾಗಿ ಇರುತ್ತದೆ.

ಆದರೆ ಬೀಜವನ್ನು ಬಿತ್ತದೆ ಗಾಜಿನ ಶೀಷೆಯಲ್ಲಿ ಇಟ್ಟೆವು ಅನ್ನಿ. ಎರಡು ಸಾವಿರ ವರ್ಷಗಳಾದ ಮೇಲೆ ಅದನ್ನು ಹೊರತೆಗೆದು ಅನುಕೂಲಕರವಾದ ನೆಲದಲ್ಲಿ ಬಿತ್ತಿದೆವು ಅನ್ನಿ. ಆಗ ಬೀಜವು ಮೊಳಕೆಯೊಡೆಯುತ್ತದೆ. ಅದರ ಕಾಲಚಕ್ರವು ಅನಂತರ ನಿರಂತರವಾಗಿ ಸಾಗುತ್ತದೆ. ಆದರೆ ಗಾಜಿನ ಶೀಷೆಯಲ್ಲಿದ್ದ ಎರಡು ಸಾವಿರ ವರ್ಷಗಳು ಅದರ ಕಾಲ ಚಕ್ರವು ನಿಂತೇಹೋಗಿತ್ತು. ಅಂದರೆ ಬೀಜವು 'ಸಮಾಧಿ'ಯಲ್ಲಿತ್ತು ಎನ್ನಬಹುದು. ಆ ಅಂತರದಲ್ಲಿ ಅದು 'ಕಾಲಾತೀತ'ವಾಗಿತ್ತು ಎನ್ನಲು ಅಡ್ಡಿಯಿಲ್ಲ.

2) ಮಾನವನ ಅನುಭವದ ದೃಷ್ಟಿಯಿಂದಲೂ 'ಕಾಲ'ದ ಸರಿಯು

ವಿಕೆಯು ವಿಪರೀತ ವರ್ತನೆಯನ್ನು ಕಾಣಿಸುತ್ತದೆ. ಸುಖದಿಂದಿರುವಾಗ ಕಾಲವು ಬಲು ವೇಗವಾಗಿ ಸಲೀಸಾಗಿ ಹರಿದು ಹೋದಂತೆ ಭಾಸವಾಗುತ್ತದೆ. ನೋವನ್ನು ಅನುಭವಿಸುತ್ತಾ ದುಃಖದಿಂದಿರುವಾಗ ಕಾಲವು ಮಂದಗತಿಯಿಂದ ಶ್ರಮವಹಿಸಿ ಸಾಗಿದಂತೆ ಅನಿಸುತ್ತದೆ. ಪ್ರೇಯಸಿಗೆ ಕಾದಿರಲು ಕ್ಷಣಕ್ಷಣವೂ ಯುಗದಂತೆ, ಪ್ರೇಯಸಿಯ ತೆಕ್ಕೆಯಲಿ ಯುಗಯುಗವು ಕ್ಷಣದಂತೆ ಎಂದು ಅನ್ನುವುದು ಕಾಲದ ವಿಪರೀತ ವರ್ತನೆಯನ್ನು ಸೂಚಿಸುತ್ತದೆ. ಅನುಭವದ ದೃಷ್ಟಿಯಿಂದ ಕಾಲವು ವೈಯಕ್ತಿಕವಾದುದು. ಅದಕ್ಕೂ ಗಡಿಯಾರದ ಅಥವಾ ವ್ಯವಹಾರಿಕ ಕಾಲಕ್ಕೂ ನಿಕಟ ಸಂಬಂಧವಿದ್ದಂತೆ ಕಾಣಿಸುವುದಿಲ್ಲ.

ನಿರಂತರವಾಗಿ ನಿಷ್ಠುರವಾಗಿ 'ಕಾಲ'ವು ಸರಿಯುತ್ತದೆ ಎನ್ನುವುದು ಸಮಂಜಸವಲ್ಲ ಎಂದನಿಸಲೇಬೇಕು.

* * *

Theory of Relativity —ಸಾಪೇಕ್ಷತಾ ವಾದವನ್ನು ಐನ್‌ಸ್ಟೈನ್ ಋಷಿಯು ಸಿದ್ಧಾಂತವನ್ನಾಗಿ ಹೊರಗೆಡಹಿದ ನಂತರ ಕಾಲದ ವಿಷಯದಲ್ಲಿ ಭೌತವಿಜ್ಞಾನಿಗಳು ಆತನಕ ಹೊಂದಿದ್ದ ಅಭಿಪ್ರಾಯವನ್ನು ಬದಲಿಸಲೇ ಬೇಕಾಯಿತು.

ಸೌರವ್ಯೂಹದಲ್ಲಿ, ಅಂದರೆ, ನಮ್ಮ ಸೂರ್ಯಮಂಡಲದಲ್ಲಿ ಯಾವುದೊಂದು ಕಣವೂ ಕೂಡ ಬೆಳಕಿನ ಕಣದ ವೇಗಕ್ಕಿಂತ ಹೆಚ್ಚು ವೇಗದಲ್ಲಿ ಚಲಿಸಲು ಅಸಾಧ್ಯ ಎಂದು ಐನ್‌ಸ್ಟೈನ್ ಮಹಾಶಯನು ಸಿದ್ಧಾಂತಮಾಡಿದ. ಈ ಅಸ್ತಿ ಭಾರದ ಮೇಲೆ ತನ್ನ ವಾದವನ್ನು ಸುಪುಷ್ಟಿಗೊಳಿಸಿದ. ಕಣವೆಂದರೇನು ? ಕಣವೆಲ್ಲಿದೆ ? ಅದಿರಲು ಸ್ಥಳವೊಂದಿರಲೇ ಬೇಕು. Spaceನಲ್ಲಿ ಅದಿರಬೇಕು. ಎರಡು ಕಣಗಳಿದ್ದರೆ ಒಂದರಿಂದ ಇನ್ನೊಂದು ನೇರ ದೂರದಲ್ಲಿ, ಇಷ್ಟು ಎತ್ತರದಲ್ಲಿ ಅಥವಾ ಆಳದಲ್ಲಿ, ಇಂತಿಷ್ಟು ಅಗಲ ದೂರದಲ್ಲಿ ಇದೆ ಎಂದು ಹೇಳಬಹುದು. ಒಂದಕ್ಕೆ ಅನ್ವಯಿಸಿದಂತೆ ಇನ್ನೊಂದರ ಸ್ಥಾನವನ್ನು ನಿಷ್ಕರ್ಷಿಸಬಹುದು. ಕಣದ ವೇಗಕ್ಕೆ ಮಿತಿಯನ್ನು ನಿರ್ಧಾರಮಾಡಿದಾಗ, Spaceಅನ್ನೂ, Timeಅನ್ನೂ ಬೆಸೆದಂತಾಯಿತು. ವೇಗ ಎಂದರೆ ಇಂತಿಷ್ಟು ಕಾಲದಲ್ಲಿ, Spaceನಲ್ಲಿ ಇಂತಿಷ್ಟು ದೂರ ಸಾಗುವುದು ಎಂದು ಅರ್ಥ. ಅಂದರೆ ಕಾಲ ಎಂಬುದೊಂದು ಪ್ರತ್ಯೇಕವಾದುದಿಲ್ಲ. Space ಎಂಬುದೂ ಪ್ರತ್ಯೇಕವಾಗಿ ಇಲ್ಲ. ಇವೆರಡೂ ಕೂಡಿದ Space-time Continuum ಮಾತ್ರ ಉಂಟು ಎಂದರು ವಿಜ್ಞಾನಿಗಳು. ನಂತರದ ಪ್ರಗತಿ

ಯಲ್ಲಿ "Curved-linear Space-time continuum" ಎಂದು ನಿಖರವಾಗಿ ಸಿದ್ಧಾಂತ ಮಾಡಿದರು.

ಅಂದರೆ 'ಕಾಲ' ಎಂಬುದರ ಗತಿ ? ಪರಾವಲಂಬಿಯಾಗಬೇಕಾಯಿತು. ಕಾಲ : Spaceಅನ್ನು ಅನವರತ ಅವಲಂಬಿಸಿಕೊಂಡಿರಬೇಕು !

*

ಬ್ರಹ್ಮಾಂಡದ ಸ್ವರೂಪವನ್ನು ವಿಶ್ಲೇಷಿಸುತ್ತಾ ಸಾಂಖ್ಯಕಾರರು ಒಂದು ಸಿದ್ಧಾಂತವನ್ನು ಮಾಡಿದರು. ಬ್ರಹ್ಮಾಂಡದ ಆದಿಮೂಲವು, ದೇಶಾವಚ್ಛಿನ್ನವಾದುದು, ಕಾಲಾವಚ್ಛಿನ್ನವಾದುದು ಮತ್ತು ನಿಮಿತ್ತಾವಚ್ಛಿನ್ನವಾದುದು ಎಂದರು. ದೇಶ ಎಂದರೆ ಸ್ಥಳ. Space ಎನ್ನುವ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ದೇಶ, ಕಾಲ ಮತ್ತು ನಿಮಿತ್ತ ಇವು ಮೂರೂ ಸಂಪೂರ್ಣವಾಗಿ ಬೆಸೆದುಕೊಂಡಿರುವುದೇ ಆದಿಮೂಲ ಎಂದರು. 'ನಿಮಿತ್ತ' ಎನ್ನುವಾಗ, "The Primordial cause" ಎನ್ನುವ ಅರ್ಥದಲ್ಲಿ ಆ ಪದವನ್ನು ಬಳಸಿದರು. ಅಂದರೆ ದೇಶ ಮತ್ತು ಕಾಲದ ಒಕ್ಕೂಟವೇ Space-time continuum ಆದರೆ, ಇನ್ನೊಂದು ಅತ್ಯಗತ್ಯವಾದ ಅಂಶವನ್ನು ಭೌತ ವಿಜ್ಞಾನಿಗಳು ಗಣನೆಗೆ ತಂದುಕೊಂಡಿಲ್ಲ ಎಂದನ್ನಬಹುದು. ಸಾಂಖ್ಯಕಾರರ ದೃಷ್ಟಿಯಿಂದ ನೋಡಿದರೆ, ಸತ್ಯವಾಗಿರುವುದು "Space-time primordial cause continuum."

ಆದರೆ 'ನಿಮಿತ್ತ'ವು ಭೌತ ಅಥವಾ ಇತರ ವಿಜ್ಞಾನಿಗಳ ಅಳತೆಗೆ ಇನ್ನೂ ದೊರಕಿಲ್ಲ. ಆದುದರಿಂದ ಬ್ರಹ್ಮಾಂಡದ ಸ್ವರೂಪವನ್ನು ವಿಶ್ಲೇಷಿಸಹೋಗುವಾಗ, ಅವರುಗಳು ಇಂದಿನ ಹಂತದಲ್ಲಿ 'ನಿಮಿತ್ತ'ದ ಅಂಶವನ್ನು ಗಮನಿಸಿಲ್ಲ. ವಿಜ್ಞಾನವು ವಿಶೇಷ ಜ್ಞಾನವಾದಾಗ, ನಿಮಿತ್ತದ ಅರಿವೂ ಸ್ಪಷ್ಟವಾಗುತ್ತದೆ.

*

ವಾಕಿಂಗ್ ಮುಗಿಸಿಕೊಂಡು ಮನೆಗೆ ಹಿಂತಿರುಗುವ ಮುನ್ನ, ಈ ಎಲ್ಲ ಯೋಚನೆಗಳೂ ಒಂದರ ಹಿಂದೆ ಒಂದು ಬಂದುವು. ಇದಕ್ಕೆ ಪ್ರೇರಣೆ ಬಾಲಚಮೂದಳದವರು ನುಡಿದ 'ದಿಗಂಬರಂ' ಪದ. ಕಾಲಭೈರವನ ವರ್ಣನೆಯ ಪದ.

Space-time continuum ಅನ್ನುವುದಕ್ಕಿಂತಲೂ, ದಿಕ್–ಅಂಬರ ಎಂದರೇ ಅದೇ ಅರ್ಥವು ಎಷ್ಟು ಹಿತವಾಗಿ ಕಲಾತ್ಮಕವಾಗಿ, ಕಾಣಬರುತ್ತದೆ.

ತಾಯ ಹಾಲು

"ಡಬ್ಬದ ಹಾಲನ್ನು ಮಗುವಿಗೆ ಕೊಡಬೇಕು, ಯಾವುದು ಒಳ್ಳೆಯದು ಹೇಳಿ" ಎಂದು ಪ್ರಾಯದ ತಾಯಂದಿರು ಕೇಳುವುದು ಸಾಮಾನ್ಯ ಅನುಭವ. ಮಗುವಿನ ಬೆಳವಣಿಗೆಗೆ ಅಗತ್ಯವಾದ ಆಹಾರಾಂಶಗಳೆಲ್ಲವನ್ನೂ ಕೂಡಿಸಿಯೇ ಡಬ್ಬದ ಹಾಲನ್ನು ತಯಾರಕರು ನಿರ್ಮಿಸುತ್ತಾರೆ. ಇಂದಿನ ವಿಜ್ಞಾನದ ಹಂತದಲ್ಲಿ ತಿಳಿದಿರುವ ಎಲ್ಲ ವಿಷಯಗಳನ್ನೂ ತಯಾರಕರು ಬಳಸಿಕೊಳ್ಳುತ್ತಾರೆ. ಆಹಾರ ಮತ್ತು ಔಷಧಗಳ ಕಾನೂನುಗಳು ಈ ವಿಷಯದಲ್ಲಿ ಕಟ್ಟುನಿಟ್ಟಾಗಿವೆ. ಅಂದಮೇಲೆ ಬಹುತೇಕ ಎಲ್ಲ ಡಬ್ಬದ ಹಾಲುಗಳೂ ಒಳ್ಳೆಯವೇ! ಆದರೂ ವೈಯಕ್ತಿಕ ರುಚಿಯ ಮೇಲೆ ಒಂದು ಮಾದರಿಯದು ಒಂದು ಮಗುವಿಗೆ ಪ್ರಶಸ್ತವಾಗಬಹುದು. ಈ ಸಣ್ಣ ಅಂಶವನ್ನು ಬಿಟ್ಟರೆ ಯಾವ ಡಬ್ಬದ ಹಾಲಾದರೂ ಸರಿಯೇ!

ಈ ಪ್ರಶ್ನೆಯನ್ನು ಕೇಳಿದಾಗಲೆಲ್ಲ ನನಗೆ ಅಮೆರಿಕನ್ ಸಿಪಾಯಿನ ನೆನಪು ಬರುತ್ತದೆ.

ಎರಡನೆಯ ಮಹಾಯುದ್ಧದಲ್ಲಿ ಅಮೆರಿಕಾ ತನ್ನ ಸೈನಿಕರನ್ನು ಯೂರೋಪಿಗೆ ಕಳುಹಿಸಿತು. 18–25ರ ಪ್ರಾಯದ, ಆರೋಗ್ಯವಂತರಾಗಿದ್ದ, ತುಂಡಾಡಿಗಳಾಗಿ ಬೆಳೆದಿದ್ದ ಅಮೆರಿಕನ್ ಸಿಪಾಯಿಗಳು ಯುರೋಪಿನಲ್ಲಿ ಹಳ್ಳಿ ಗಲ್ಲಿಗಳಲ್ಲಿ ಇವರು ಬಿಡಾರ ಹೂಡಿ, ಕಾಡುಮೇಡುಗಳಲ್ಲಿ ಯುದ್ಧ ಮಾಡಬೇಕು.

ಹಳ್ಳಿ ಗ್ರಾಮಗಳಲ್ಲಿ ಯುದ್ಧ ಕಾಲದಲ್ಲಿ ಸಿಗಬಹುದಾದ ಆಹಾರವು, ಶುಚಿಯಾಗಿಯೂ ರುಚಿಯಾಗಿಯೂ ಇರುತ್ತದೆಂಬ ಭರವಸೆ ಇಲ್ಲವೇ ಇಲ್ಲ. ಅಮೆರಿಕಾ ಶ್ರೀಮಂತ ರಾಷ್ಟ್ರ. ಆದಕಾರಣ ತನ್ನ ಸಿಪಾಯಿಗಳಿಗೆ ಅಗತ್ಯವಾದ ಆಹಾರ ಮತ್ತು ಪಾನೀಯಗಳನ್ನು ಸಮರಭೂಮಿಗೆ ಅಮೆರಿಕಾದಿಂದಲೇ ಸರಬರಾಜು ಮಾಡುವ ಏರ್ಪಾಡನ್ನು ಯಶಸ್ವಿಯಾಗಿ ಮಾಡಿತು. ಆಹಾರ ವಿಜ್ಞಾನ ಶಾಸ್ತ್ರಕ್ಕನುಗುಣವಾಗಿ, ಹೋರಾಡುವ ಸಿಪಾಯಿಗೆ ಅಗತ್ಯ

ವಾದ ಆಹಾರಗಳನ್ನೂ, ನೀರು ಮತ್ತು ಇತರ ಪಾನೀಯಗಳನ್ನೂ ಧಾರಾಳ ವಾಗಿ ಸರಬರಾಜು ಮಾಡಿತು.

ಭುಜಕ್ಕೆ ಭುಜ ಕೊಟ್ಟು ಹೋರಾಡುತ್ತಿದ್ದ ಬ್ರಿಟಿಷ್, ಫ್ರೆಂಚ್ ಮತ್ತು ಇತರ ಯೂರೋಪಿಯನ್ ಮಿತ್ರ ರಾಷ್ಟ್ರಗಳ ಸೈನಿಕರು, ದೊರಕಿದ್ದನ್ನು ತಿಂದುಕೊಂಡು, ಸಿಕ್ಕಿದ್ದನ್ನು ದಕ್ಕಿಸಿಕೊಂಡು ಯುದ್ಧ ಮಾಡುತ್ತಿದ್ದರು. ಅಮೆರಿಕನ್ ಸೈನಿಕನನ್ನು ಕಂಡು ಕರುಬಿರಲೂಬಹುದು.

ಆದರೆ ಸುಮಾರು ಸಂಖ್ಯೆಯಲ್ಲಿ ಅಮೆರಿಕನ್ ಸೈನಿಕರು ಹೊಟ್ಟೆನೋವು, ಕಮರು ತೇಗು, ಕರುಳು ಕಚ್ಚುವುದು ಇತ್ಯಾದಿ ಉದರ ಬೇನೆಗಳಿಂದ ನರಳಿ ಆಸ್ಪತ್ರೆಗೆ ದಾಖಲಾಗುತ್ತಿದ್ದರು. ಸಿಕ್ಕಿದ್ದನ್ನು ತಿಂದು, ಎಲ್ಲೆಲ್ಲಿನ ನೀರನ್ನು ಕುಡಿಯುತ್ತಿದ್ದ ಇತರ ಯೂರೋಪಿಯನ್ ಸೈನಿಕರು ಆರೋಗ್ಯವಾಗಿಯೇ ಇದ್ದರು. ಅಮೆರಿಕನ್ ಸೈನಿಕರ ಪ್ರಮಾಣದಲ್ಲಿ ಇವರು ನರಳಲೇ ಇಲ್ಲ.

ಒಳ್ಳೆಯ ಪುಷ್ಟಿಯುತ ಆಹಾರವನ್ನು ಕೊಟ್ಟರೂ ಹೀಗೇಕೆ ಎಂದು ಅಮೆರಿಕನ್ ವೈದ್ಯರು ಪ್ರಯೋಗಗಳನ್ನು ನಡೆಸಿ ವಿಚಾರ ಮಾಡಿದರು.

"ಯುದ್ಧ ಮಾಡುತ್ತಿದ್ದ ಅಮೆರಿಕನ್ ಸೈನಿಕರು, ಶಿಶುಗಳಾಗಿದ್ದಾಗ, ಅಂದರೆ 20-22 ವರ್ಷಗಳ ಹಿಂದೆ, ಅಮೆರಿಕಾದಲ್ಲಿ ಹುಚ್ಚು ಸಂಪತ್ತು ಉತ್ಪನ್ನವಾಗುತ್ತಿತ್ತು. ದುಡಿವ ಗಂಡಸು ಹೇರಳ ಹಣವನ್ನು ಗಳಿಸುತ್ತಿದ್ದ. ಅವನನ್ನು ತನ್ನ ತೋಳ್ತೆಕ್ಕೆಯಲ್ಲಿ ಭದ್ರವಾಗಿರಿಸಿಕೊಳ್ಳಲು ಹೆಂಡತಿಯು ತನ್ನ ಸೌಂದರ್ಯವನ್ನು ಕಾಪಾಡಿಕೊಳ್ಳಬೇಕಾಗಿತ್ತು. ಮಗುವಿಗೆ ಹಾಲು ಕುಡಿಸಿದರೆ ತನ್ನ ಸೌಂದರ್ಯವು ಜೋಲು ಬೀಳುತ್ತದೆ ಎಂದು ಹೆದರಿ ಆಕೆಯು ಡಬ್ಬದ ಹಾಲನ್ನು ಶೀಷೆಗೆ ಹಾಕಿ ಕುಡಿಸಲು ಆರಂಭಿಸಿದಳು. ಎಷ್ಟು ಹಣವನ್ನಾದರೂ ತೆರಲು ಸಿದ್ಧ. ಅಂದ ಮೇಲೆ ಹಣದಾಸೆಯಿಂದ ತಯಾರಕರು, ಉತ್ಕೃಷ್ಟ ಡಬ್ಬದ ಹಾಲನ್ನು, ಸೋಂಕಿರದ ಶೀಷೆಗಳನ್ನು ತಯಾರಿಸಿದರು.

ತೊಟ್ಟಿಲಲ್ಲಿ ಮಲಗಿದ ಮಗುವು ಶೀಷೆಯನ್ನು ಹಿಡಿದುಕೊಂಡು ಹೊಟ್ಟೆ ತುಂಬಿಸಿಕೊಂಡಿತು. ತೊಟ್ಟಿಲ ಮೇಲೆ ಕಟ್ಟಿದ್ದ ಬೊಂಬೆಯನ್ನೋ, ಶೀಷೆಯನ್ನು ಹಿಡಿದಿದ್ದ ನೀಗ್ರೋ ದಾಯಿಯನ್ನೋ ನೋಡುತ್ತ ಕುಡಿಯಿತು, ಆಹಾರಾಂಶಗಳು ಪಗದಸ್ತಾಗಿದ್ದರಿಂದ ತೋಳನಂತೆ ಬೆಳೆಯಿತು.

ತಾಯಿಯ ಮುಖವನ್ನೇ ನೋಡುತ್ತಾ ಬಿಡುಗೈಯಲ್ಲಿ ಆಡುತ್ತ ಸ್ತನ್ಯ ಪಾನ ಮಾಡುವ ಮಗುವಿಗೆ ಆಹಾರವು ದೊರಕುತ್ತದೆ. ಆದರೆ ಮನಸ್ಸಿನಲ್ಲಿ

ಸಂತಸವೂ ಉಂಟಾಗುತ್ತದೆ. ಸಂತಸದಿಂದ ಆತ್ಮವಿಶ್ವಾಸವೂ ವಿಕಸಿತವಾಗುತ್ತದೆ. ಶೀಷೆ ಹಾಲು ಕುಡಿಯುವ ಮಗುವಿಗೆ ಈ ಸಂತಸವು ಬರುವುದಿಲ್ಲ. ಆತ್ಮವಿಶ್ವಾಸವು ಕುಂಟುತ್ತದೆ.

ಇಂತಹ ಮಗುವು, ಶೀಷೆ ಹಾಲಿನ ಮಗುವು ಪ್ರಾಯಸ್ಥನಾದಾಗ, ತನ್ನ ಸುರಕ್ಷಿತ ಪರಿಸರದಲ್ಲಿದ್ದಾಗ ಲಕ್ಷಣ ಆರೋಗ್ಯದಿಂದಿರುತ್ತಾನೆ. ಆದರೆ ಸಮರಭೂಮಿಗೆ ಹೋಗಿ ಮುಂದೇನಾಗುವುದೋ ನಾಳೆ ಇರುವೆನೋ ಇಲ್ಲವೋ ಎಂಬ ಅಸಾಧ್ಯ ಹೆದರಿಕೆಯಿಂದ ಇರಬೇಕಾದಾಗ, ಆತ್ಮ ವಿಶ್ವಾಸವು ವಿಕಸಿತವಾಗದ ಕಾರಣ, ರೋಗಗ್ರಸ್ತನಾಗುತ್ತಾನೆ. ಉದರ ಬೇನೆಗಳಿಂದ ನರಳುತ್ತಾನೆ."

– ಎಂದು ತೀರ್ಮಾನಿಸಿದರು. ಅಮೆರಿಕನ್ ಸಿಪಾಯಿಯನ್ನು G.I. ಎಂದು ಕರೆಯುತ್ತಾರೆ. G.I. ಅಂದರೆ Gastro intestinal ಎಂದೂ ಅರ್ಥ ಬರುತ್ತದೆ. ಅಮೆರಿಕನ್ ಸಿಪಾಯಿಯ ಬೇನೆಯನ್ನು g. i. disease ಎಂದು ಎರಡೂ ಅರ್ಥದಲ್ಲಿ ಕರೆದರು.

*

ತಾಯಿ ಸ್ತನ್ಯಪಾನವನ್ನು ಮಾಡುವಾಗ, ಅಗತ್ಯದ ಆಹಾರದ ಜತೆಗೂ ಮಗುವಿಗೆ ಸಂತೃಪ್ತಿ, ಸುರಕ್ಷತೆ, ಆದರ, ಇವುಗಳೂ ದೊರೆತರೆ, ದೇಹದ ಜತೆಗೆ ಮನಸ್ಸೂ ಹಿತ ರೀತಿಯಲ್ಲಿ ವಿಕಸಿಸುತ್ತದೆ. ಇಲ್ಲವಾದರೆ ಬೆಳೆದ ಮೇಲೆ, ಬಾಳಿನ ಝುಂಝಾಟದಲ್ಲಿ ಸಿಕ್ಕಿದಾಗ, ಅನಿರೀಕ್ಷಿತ ಆಕಸ್ಮಿಕಗಳ ಭಯ ಉಂಟಾದಾಗ, ತೋಳನಂತೆ ಬೆಳೆದಿದ್ದರೂ, ಹುಲ್ಲೆಯಂತೆ ಹೆದರಿ ಕಂಗಾಲಾಗುತ್ತಾನೆ. ರೋಗ ಪೀಡಿತನಾಗುತ್ತಾನೆ.

ಮಕ್ಕಳು ಬೆಳೆದ ಮೇಲೂ ಆರೋಗ್ಯವಂತರಾಗಿರಬೇಕು ಎಂದು ಹಂಬಲಿಸುವ ತಾಯಂದಿರು ಮನನ ಮಾಡಬೇಕಾದ ವಿಷಯ.

"To be or not to be"

ವಿಶ್ವವಿಖ್ಯಾತ ನಾಟಕಕಾರನಾದ ಷೇಕ್ಸ್‌ಪಿಯರ್ ರಚಿಸಿದ ದುರಂತ ನಾಟಕಗಳಲ್ಲಿ ಹ್ಯಾಮ್ಲೆಟ್ ಪ್ರಾಯಶಃ ಅದ್ವಿತೀಯವಾದುದು. ಅತಿ ಸರಳವಾಗಿ ಹಾಗೂ ಪ್ರಗಲ್ಭವಾಗಿ ಹ್ಯಾಮ್ಲೆಟ್ಟನ ಮನೋವಿಶ್ಲೇಷಣೆಯನ್ನು ಅಮರ ಕವಿಯು ಸಾಧಿಸಿದ್ದಾನೆ.

'ಮಾನವರು' ಎಂದುಕೊಂಡ ನಾವೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಹ್ಯಾಮ್ಲೆಟ್ಟುಗಳೇ.

ತಂದೆ ತಾಯಿ ಮನೆತನ ಎಂಬ ಕಲ್ಪನೆಗಳು ಭೂತದಂತೆ ಒಂದು ಕಡೆ ಕೆಣಕಿ ಕಾಡುತ್ತವೆ. ಒಫೀಲಿಯಾ ಅಂತಹ ಸುಂದರ ಮುಗ್ಧೆಯರು ನಿಷ್ಕಳಂಕ ಪ್ರೇಮದಿಂದ, ವಯಸ್ಸಾಕಂತದಿಂದ ಮತ್ತೊಂದು ಕಡೆಗೆ ಸೆಳೆಯುತ್ತಾರೆ. ಸುತ್ತಲೂ ಸಮಾಜದಲ್ಲಿ ಆಗುತ್ತಿರುವ—ಆಗಿರಬಹುದಾದ ಅನ್ಯಾಯಗಳು "ನ್ಯಾಯ ದೊರಕಿಸು" ಎಂದು ಕೆರಳಿಸುತ್ತವೆ. ಈ ಮೂರೂ ಸೆಳೆತಗಳಲ್ಲಿ ಸಿಕ್ಕಿ, ನೆಲೆಗಾಣದೆ ತೊಳಲುತ್ತಾನೆ ಹ್ಯಾಮ್ಲೆಟ್. To be or not to be ಎಂದು ಕೊರಗುತ್ತಾನೆ. ಇರಬೇಕೇ ಅಥವಾ ಇರಬಾರದೇ ಎಂದು ತೋಡಿಕೊಳ್ಳುತ್ತಾನೆ.

ಇಂಥದೇ ಸಮಸ್ಯೆಯನ್ನು ಅರ್ಜುನನೂ ಎದುರಿಸಬೇಕಾಯಿತು. ತನ್ನ ಮನೆತನ, ಗುರುಗಳು ಒಂದು ಕಡೆ. ಕೈಹಿಡಿದ ಹೆಂಡತಿಗಾದ ಅವಮಾನ ಅಪಚಾರಗಳು ಸೇಡಿಗಾಗಿ ಇನ್ನೊಂದು ಕಡೆ ಕಾಡುತ್ತವೆ. ಸಮಾಜದಲ್ಲಿ ಅಧರ್ಮವು ತಾಂಡವವಾಡುತ್ತಿರುವುದೂ ಒಂದು ಕಡೆ ಅವನನ್ನು ಕೆರಳಿಸುತ್ತದೆ. ಒಂದರ ಪರಿಹಾರವು ಇನ್ನೊಂದನ್ನು ಉಲ್ಬಣಿಸುವುದರಿಂದ ಯಾವ ನಿರ್ಧಾರವನ್ನೂ ಮಾಡಲಾಗದೆ, ಕುರುಕ್ಷೇತ್ರದಲ್ಲಿ ಪಾರ್ಥ ಷಂಡನಂತೆ ನಿರ್ವೀರ್ಯನಾದ.

ಅಮರಕವಿ ಷೇಕ್ಸ್‌ಪಿಯರ್ ತನ್ನ ಕಥಾನಾಯಕನ ಸಮಸ್ಯೆಯನ್ನು ಯಾವ ರೀತಿಯಲ್ಲಿ ಪರಿಹರಿಸಿದ! ಒಫೀಲಿಯಾ ಸತ್ತಳು. ಹ್ಯಾಮ್ಲೆಟ್ಟೂ

ಸತ್ತ; ಯಾವ ಪುರುಷಾರ್ಥವನ್ನೂ ಸಾಧಿಸಲಾರದೆ. ಇನ್ನು ಯಾವ ಪರಿಹಾರವೂ ಇರಲಿಲ್ಲವೆ? ಷೇಕ್ಸ್‌ಪಿಯರನ ಕಾಲದಲ್ಲಿ ಅವನಿದ್ದ ದೇಶದಲ್ಲಿ ಇನ್ನು ಯಾವ ಪರಿಹಾರವೂ ಸಾಧ್ಯವಿರಲಿಲ್ಲ. ಅಂತಹ ದಾರ್ಶನಿಕರು ಇರಲಿಲ್ಲ.

ಆದರೆ ಪಾರ್ಥನಿಗಾದರೋ, ಶ್ರೀಕೃಷ್ಣನ ಉಪದೇಶ ದೊರಕಿತು. ಅಂದರೆ ಉಪನಿಷತ್ತಿನ ತಿರುಳನ್ನು ವ್ಯಾಸ ಮಹರ್ಷಿಗಳು ಭಟ್ಟಿ ಇಳಿಸಿ ಸರಳವಾಗಿ ವಿವರಿಸಿದರು. ಇಂತಹ ಬೋಧನೆಯು ಷೇಕ್ಸ್‌ಪಿಯರನಿಗೆ ಜೀವಿತ ಕಾಲದಲ್ಲಿ ದೊರಕಿದ್ದರೆ, ಅವನೂ ಹ್ಯಾಮ್ಲೆಟ್ಟಿನ ಬಾಯಿಯಲ್ಲಿ ಪರಿಹಾರ ಮಾರ್ಗವನ್ನು ಹೊರಹೊಮ್ಮಿಸುತ್ತಿದ್ದ. ಏನೆಂದು ?

To be or not to be, That is the question
To be and not to be That is the answer

ಎಂದು ನುಡಿಸುತ್ತಿದ್ದ. ಇರಲೇಬೇಕು, ಹಾಗೂ ಇದ್ದರೂ ಇಲ್ಲದಂತಿರಬೇಕು ಎಂದನ್ನುತ್ತಿದ್ದ.

ಸನಾತನ ಧರ್ಮದ, ನಮ್ಮ ಹಿರಿಯರು ತಪಸ್ಸುಗೈದು ಸಿದ್ಧಪಡಿಸಿದ, ಬಾಳ ಭವ್ಯತೆಗೆ ಅಗತ್ಯವಾದ ಮೂಲ ಉಪದೇಶವಿದು. ಮನನ ಮಾಡೋಣ.

ಇರಲೇಬೇಕು ಎಂದರೆ ಈ ಬಾಳಿನಲ್ಲಿ ಧೃತಿಗೆಡದೆ ಬದುಕಲೇಬೇಕು. ಹೀಗೆ ಮಾಡಬೇಕು ಎಂದೇ ಹ್ಯಾಮ್ಲೆಟ್, ಅರ್ಜುನ ಮತ್ತು ನಾವೂ ಆಸೆ ಪಡುವುದು. ಆದರೆ ಬಾಳಿ ಬದುಕಲು 1) ನಮ್ಮ ಮನಸ್ಸಿನಲ್ಲಿ ರೂಢಿತವಾದ ಧ್ಯೇಯಗಳು 2) ನಮ್ಮ ಸ್ವಾಭಾವಿಕ ಆಸೆಗಳು, ಹಾಗೂ 3) ಸಮಾಜದ ಕಟ್ಟು ಕಟ್ಟಲೆಗಳು, ಇವು ಮೂರು ಪರಸ್ಪರ ವಿರೋಧಿಗಳಾಗಿ ಪರಿಣಮಿಸುತ್ತವೆ. ಒಂದನ್ನು ಒಪ್ಪಿಸ ಹೋದರೆ ಇನ್ನೊಂದು ಮೊಂಡು ಬೀಳುತ್ತದೆ. ಈ ಝಂಝಾಟದಿಂದಲೇ, ಇರಲೇಬಾರದು ಎಂಬ ಯೋಚನೆಯು ಒದ್ದು ಕೊಂಡು ಬರುತ್ತದೆ. ಹಾಗಾಗಿ ಹ್ಯಾಮ್ಲೆಟ್ ಸತ್ತ.

ಹಾಗೂ ಇದ್ದರೂ ಇಲ್ಲದಂತಿರಬೇಕು ಎಂಬ ಉಪದೇಶವನ್ನು ಕೇಳಿದ ಅರ್ಜುನ ತನ್ನ ಬಾಳ ಕಾಯಕವನ್ನು ಕಾಲ ನಿಯಮಕ್ಕನುಗುಣವಾಗಿ ನಡೆಸಿದ. ಇರುವಾಗಲೂ ಇಲ್ಲದಂತಿರುವುದು, ಇಲ್ಲದಂತೆ ಇರಬೇಕಾದುದು ಯಾವುದು? ಇರುವಾಗ, ಇದ್ದು ಕಾಯಕವನ್ನು ನಡೆಸುವಾಗ, "ಇದನ್ನೆಲ್ಲಾ ನಾನು ಮಾಡುತ್ತಿದ್ದೇನೆ. ಇದನ್ನೆಲ್ಲಾ ನಾನು ಸಾಧಿಸುತ್ತಿದ್ದೇನೆ" ಎಂದಂದುಕೊಳ್ಳು

ತ್ತೇವೆ. 'ನಾನು' ಎನ್ನುವುದು ನಮ್ಮ ಮನಸ್ಸಿನಲ್ಲಿ ಬಾಲ್ಯದಿಂದಲೂ ಬೇರೂರಿ ಬೆಳೆದಿರುವ ಒಂದು ಕಲ್ಪನೆ. ಈ ಕಲ್ಪನೆಯ ಪರಿಣಾಮವಾಗಿ ನಾನು ಹಿಗ್ಗುತ್ತೇನೆ; ನಾನು ಕೊರಗುತ್ತೇನೆ; ನಾನು ನಗುತ್ತೇನೆ; ನಾನು ಅಳುತ್ತೇನೆ; ಎಂಬೆಲ್ಲಾ ಅನುಭವಗಳೂ, ರಾಗ ದ್ವೇಷಗಳೂ ನನ್ನ ಮನಸ್ಸಿನಲ್ಲಿ ಉಂಟಾಗುತ್ತವೆ.

ಬಾಲ್ಯದಿಂದಲೂ ಮನಸ್ಸಿನಲ್ಲಿ ರೂಢಿಸಿಕೊಂಡು ಬಂದ 'ನಾನು' ಎಂಬ ಕಲ್ಪನೆಯು ಹುಂಬತನ ಎಂಬ ಅರಿವು ಮೂಡಿದಾಗ, 'ನಾನು' ಇಲ್ಲದಂತಾಗುತ್ತದೆ. ಮನಸ್ಸಿನಲ್ಲಿ ಕಲ್ಪಿಸಿಕೊಂಡುದು ಮಾಯಾ ಸ್ವರೂಪದ್ದೇ. ಅದಕ್ಕೆ ವಾಸ್ತವಿಕತೆ ಇಲ್ಲ. ಇದು ಕಲಿಸುವ ಪಾಠವಲ್ಲ. ಸ್ವಯಂ ಕಲಿತುಕೊಳ್ಳುವ ಪಾಠ. ಸ್ವಯಂ ಕಲಿತುಕೊಳ್ಳಲು ಅರಿತವರು ಕೈಮರಗಳಾಗಬಹುದು. ಅರ್ಜುನನಿಗೆ ಕೃಷ್ಣನು ಕೈಮರವಾದಂತೆ.

ಬಾಳಿನಲ್ಲಿ ಬದುಕು ನಡೆಸುವಾಗಲೂ, ಈ 'ನಾನು' ಇಲ್ಲದಂತಿರಬೇಕು. 'ನಾನು' ಇಲ್ಲದ ಮೇಲೆ, ಸ್ವಾರ್ಥವಿರದಮೇಲೆ ರಾಗ ದ್ವೇಷಗಳೂ ತಾಪತ್ರಯಗಳು ಇರುವುದೇ ಇಲ್ಲ. ಅಂದರೆ ಆಸೆ, ಫಲಾಪೇಕ್ಷೆ ಇರುವುದೇ ಇಲ್ಲ. ಫಲಾಪೇಕ್ಷೆಯಿಲ್ಲದೆ ಬಾಳ ಕರ್ಮವನ್ನು ಮಾಡಬೇಕು ಎಂದು ಅನ್ನಬೇಕು.

ಪರೀಕ್ಷೆಗೆಂದು ಪುಸ್ತಕವನ್ನು ಓದುತ್ತೇವೆ. ಫಲಾಪೇಕ್ಷೆಯಿಂದ ಅನಿವಾರ್ಯ ವ್ಯಾಸಂಗ ಎನಿಸುತ್ತದೆ. ಪರೀಕ್ಷೆಯು ಮುಗಿದ ಮೇಲೆ ರಜ ಬಂದಾಗ ಅದೇ ಪುಸ್ತಕವನ್ನು ಓದುತ್ತೇವೆ. ಬಹಳ ಖುಷಿ ಪಡುತ್ತೇವೆ. ಅನಿವಾರ್ಯ ವ್ಯಾಸಂಗ ಎಂದು ಬೋರ್ ಆಗುವುದಿಲ್ಲ.

To be and not to be, ಮನನ ಮಾಡಬೇಕಾದ ತತ್ತ್ವ.

ಅರಪೇಶ್‌ನವರ ಅಕ್ಕರದ ವಿದ್ಯೆ

ಮಕ್ಕಳಿಗೆ ಬಾಲ್ಯದೊಳಕ್ಕರದಿ ವಿದ್ಯೆಯ ಕಲಿಸದಿರ್ದೊಡೆ ಕೊಂದಂ.
ಲಕ್ಕಧನವಿರಲು ಕೆಡಗುಂ, ಚಿಕ್ಕಂದಿನ ವಿದ್ಯೆ ಪೊರಗು ಚೂಡಾರತ್ನ.

ಚಿಕ್ಕಂದಿನಲ್ಲಿ ಕಲಿತ ವಿದ್ಯೆಯು ಬಾಳನ್ನು ಕಾಪಾಡುತ್ತದೆ, ಬಾಳನ್ನು ಹಿತವಾಗಿಸುತ್ತದೆ ಎಂಬುದೇ ಈ ಸುಭಾಷಿತದ ತಿರುಳು. ಚಿಕ್ಕಂದಿನಲ್ಲಿ ಕಲಿತ ವಿದ್ಯೆಯು ಎಂತಹುದಾಗಿರಬೇಕು? ನಾವು ಮಕ್ಕಳಿಗೆ ಚಿಕ್ಕಂದಿನಲ್ಲಿ ಕಲಿಸುತ್ತಿರುವುದು ಒಳಿತಾದುದೇ?

ಮನನ ಮಾಡಬೇಕಾದ ವಿಷಯ.

*

ಎರಡು ವರ್ಷದ ಮಗುವು ಅಜ್ಜಿಯ ಬಳಿಗೆ, ಅವಳ ಕೈಯ್ಯಲ್ಲಿದ್ದ ಕೋಡುಬಳೆಯನ್ನು ಕಂಡು ಓಡೋಡಿ ಬರಲಾರಂಭಿಸಿತು. ಬಿತ್ತು, ಮಂಡಿ ತರಚಿತು. ಲಬೋ ಲಬೋ ಮಾಡಲಾರಂಭಿಸಿತು. ಆಗ ಅಜ್ಜಿ ಓಡಿಬಂದಳು. ಅಳುತ್ತಿದ್ದ ಮಗುವನ್ನು ಎತ್ತಿಕೊಂಡಳು. "ಬಿದ್ದೆಯಾ ಮರಿ! ಪೆಟ್ಟಾಯಿತೇ! ಹಾಳು ನೆಲ ನಿನ್ನಕಾಲಿಗೆ ತೊಡರಿಕೊಂಡಿತೇ? ತಡಿ, ನೆಲಕ್ಕೆ ಹತ್ತಮಾಡ್ತೀನಿ" ಎಂದು ಹೇಳುತ್ತಾ, ಅಜ್ಜಿ ನೆಲವನ್ನು ದಬದಬ ಬಡಿಯುತ್ತಾಳೆ. ಅಜ್ಜಿಯ ಆವೇಶವನ್ನು ಕಂಡೋ, ಕೋಡುಬಳೆಯು ಹತ್ತಿರಬಂತು ಎಂತಲೋ, ಮಗು ಅಳುವನ್ನು ನಿಲ್ಲಿಸುತ್ತದೆ. ಅಜ್ಜಿಗೆ ಸಮಾಧಾನ.

ಆದರೆ ಚಿಕ್ಕ ಮಗುವಿನ ಮನಸ್ಸಿನಲ್ಲಿ 'ನೆಲ ತಪ್ಪುಮಾಡಿತು, ಆದ್ದರಿಂದ ನಾನು ಬಿದ್ದೆ' ಎಂಬ ಅಭಿಪ್ರಾಯವು ಮೂಡುತ್ತದೆ. 'ನನ್ನದಲ್ಲ ತಪ್ಪು, ನೆಲದ್ದು' ಎನ್ನುವ ಕಲ್ಪನೆಯು ಅದರ ಮನಸ್ಸಿನಲ್ಲಿ ಬೇರೂರುತ್ತದೆ. ಇದೇ ಅದು ಕಲಿಯುವ ವಿದ್ಯೆ.

ಚಿಕ್ಕಂದಿನಲ್ಲಿ ಕಲಿತ ಈ ವಿದ್ಯೆಯು, ಬೆಳೆದಮೇಲೆ ಪ್ರಭಾವವನ್ನು ಬೀರುತ್ತದೆ. ಪರೀಕ್ಷೆಯಲ್ಲಿ ಉತ್ತೀರ್ಣನಾಗದಿದ್ದರೆ, ತಾನು ಸಾಕಷ್ಟು ವ್ಯಾಸಂಗ ಮಾಡಲಿಲ್ಲ ಎಂದೆಂದುಕೊಳ್ಳುವುದಿಲ್ಲ. ಪರೀಕ್ಷಕರು ಜಾತಿಯನ್ನು

ನೋಡಿ ನಂಬರು ಹಾಕಿದರು, ಅವರದು ತಪ್ಪು ಎಂದನ್ನುತ್ತಾನೆ. ಚಾಕರಿಯಲ್ಲಿ ಚೂಟಿಯನ್ನು ತೋರಿಸದೆ ಇದ್ದಾಗ, ಅಧಿಕಾರಿಗಳು ಬಡ್ತಿಯನ್ನು ಮುಂದೂಡಿದರೆ, ತನ್ನ ತಪ್ಪು ಎಂದವ ಅನ್ನುವುದಿಲ್ಲ. ಅಧಿಕಾರಿಗೆ ನನ್ನ ಮೇಲೆ ಮತ್ಸರ ಎಂದೇ ಅನ್ನುತ್ತಾನೆ. ಕಚೇರಿಯ ಹೊತ್ತಿಗೆ ಅಡಿಗೆಯು ಸಿದ್ಧವಾಗದಿದ್ದರೆ, ತಾನು ಹಸಿ ಸೌದೆಯನ್ನು ತಂದೆ, ಒಲೆ ಉರಿಯಲಿಲ್ಲ, ಎಂದನ್ನುವುದಿಲ್ಲ. ಹೆಂಡತಿಗೆ ಅಡಿಗೆ ಬಾರದು, ಅವರಮ್ಮ ಕಲಿಸಲಿಲ್ಲ ಎಂದು ಬೈಯ್ಯುತ್ತಾನೆ. ಕುದುರೆ ಜೂಜಿಗೆ ಹೋಗಿ, ಸಾಲಮಾಡಿ ತಂದಿದ್ದ ಹಣವನ್ನು ಕಳೆದುಕೊಂಡು ಬಂದು, ಅದೃಷ್ಟ ಖುಲಾಯಿಸಲಿಲ್ಲ, ಎಂದು ಅದೃಷ್ಟವನ್ನು ಬೈಯ್ಯುತ್ತಾನೆಯೇ ವಿನಾ, ತಾನು ಮಾಡಿದ್ದು ತಪ್ಪು ಎಂದು ಯೋಚಿಸುವುದೂ ಇಲ್ಲ.

ಒಟ್ಟಿನಲ್ಲಿ ತನ್ನ ಮೂಗೇ ನೇರ, ತಾನು ಅಂದಿದ್ದೇ ಸರಿ, ತಾನು ಹೇಳಿದ್ದೇ ಸತ್ಯ ಎಂದು ಪೂರ್ಣ ನಂಬುಗೆಯನ್ನು ಬೆಳಸಿಕೊಳ್ಳುತ್ತಾನೆ. ಮಾಡಿದ ತಪ್ಪನ್ನು ಗುರುತಿಸಲು ಆಗದಿದ್ದರೆ ಮುಂದೆ ಬೆಳೆಯುವುದೆಂತು? ಹಿತ ಬಾಳ ನಡೆಸುವುದೆಂತು?

ಚುಚ್ಚಲ್ಪಟ್ಟ ಸಾವಿರಕಾಲಿನ ತರಹ, ಅವ ಮುನ್ನಡೆಯಲಾರದೆ, ತನ್ನ ತನದಲ್ಲಿ ಸುರುಳಿ ಸುತ್ತಿಕೊಂಡು ಇದ್ದಲ್ಲೇ ಬಿದ್ದಿರುತ್ತಾನೆ.

ಚಿಕ್ಕಂದಿನಲ್ಲಿ ಕಲಿತವಿದ್ಯೆಯ ವಿರಾಟ್‌ಪ್ರಭಾವವಿದು.

*

ಇನ್ನೊಂದು ದೃಶ್ಯವನ್ನು ನೋಡೋಣ. ಅನಾಗರಿಕರೆಂದೆನಿಸಿಕೊಂಡ ಪುರಾತನವಾದ ಗೋತ್ರದವರ ಕಲಿಕೆಯ ವಿಧಾನವನ್ನು ತೆರೆದ ಮನಸ್ಸಿನಿಂದ ಕಾಣುವ.

ಆಸ್ಟ್ರೇಲಿಯಾಕ್ಕೂ ಇಂಡೊನೇಷ್ಯಾಕ್ಕೂ ಮಧ್ಯೆ ಇರುವ ದ್ವೀಪ ಸಮೂಹದಲ್ಲಿ 'ನ್ಯೂಗಿನಿ' ಎಂಬುದೊಂದಿದೆ. ಈ ದ್ವೀಪದ ಒಂದು ಭಾಗದಲ್ಲಿ 'ಅರಪೇಶ್' ಎಂಬ ಒಂದು ಪುರಾತನ ಜನಾಂಗವಿದೆ. ನಾವು ಅರಿತಿರುವ ಅರ್ಥದಲ್ಲಿ ಆ ಜನಾಂಗವು ಬಹಳ ಮಟ್ಟಿಗೆ ಹಿಂದುಳಿದಿದೆ. ಅಲ್ಲಿ ವಿಮಾನಗಳಿಲ್ಲ, ಮೋಟಾರು ಕಾರುಗಳಿಲ್ಲ, ಆಟೋರಿಕ್ಷಾಗಳಿಲ್ಲ, ಕುದುರೆ ಅಥವಾ ಎತ್ತಿನ ಬಂಡಿಗಳು ಕೂಡಾ ಇಲ್ಲ. ವಿದ್ಯುತ್ ಶಕ್ತಿಯೇ ಇಲ್ಲ. ಅಂದಮೇಲೆ ರೇಡಿಯೋ, ಟೆಲಿವಿಷನ್, ಜಗಜ್ಯೋತಿ ದ್ವೀಪಗಳೂ ಇಲ್ಲ.

ಮಾರ್ಗರೆಟ್ ಮೀಡ್ ಎಂಬಾಕೆಯು ಆ ಜನಾಂಗದವರ ಬಾಳಿನ ವಿಷಯ ಗಳನ್ನು ಭಕ್ತಿಯಿಂದ ಅಭ್ಯಸಿಸಿ, ಅಚ್ಚರಿ ಪಡುವಂತಹ ವಿಷಯಗಳನ್ನು ಬರೆ ದಿದ್ದಾಳೆ. ಅವುಗಳಲ್ಲಿ ಒಂದು—

ಹಾಲೂಡಿಸುವಾಗ ಅರಪೇಶ್ ತಾಯಿಯು ಮಗುವಿನ ಬೆನ್ನನ್ನು ತಡವರಿ ಸುತ್ತಾ ಅಕ್ಕರೆಯ ಮಾತುಗಳನ್ನು ಆಡುತ್ತಾಳೆ. ತಾಯಿಯು ಆಡಿದ ಮಾತು ಮಗುವಿಗೆ ಅರ್ಥವಾಗುವುದಿಲ್ಲ ದಿಟ. ಆದರೆ ಹಾಲಿನಿಂದ ಹೊಟ್ಟೆಯನ್ನು ತುಂಬಿಸಿಕೊಳ್ಳುವಾಗ ಮಗುವಿಗೆ ಸಂತೋಷವಾಗಿರುತ್ತದೆ. ಬೆನ್ನನ್ನು ತಾಯಿ ತಡವರಿಸಿದಾಗ ಎಂತದೋ ಅನಿರ್ವಚನೀಯ ಸುಖವೂ ಮಗುವಿಗೆ ಆಗು ತ್ತದೆ. ಸಂಪೂರ್ಣ ಸುರಕ್ಷತೆಯಲ್ಲಿರುವ ಮಗುವಿನ ಮನಸ್ಸು ಆಗ ಪ್ರಫುಲ್ಲಿತ ವಾಗಿರುತ್ತದೆ.

ಮಗುವಿಗೆ ಹಾಲೂಡಿಸುವಾಗ ಗುಡಿಸಿಲಿಗೆ ಬಂದ ಇತರರಿಂದಲೂ ತಾಯಿಯು ಮಗುವನ್ನು ತಡವರಿಸಿಸುತ್ತಾಳೆ. ಅಷ್ಟೇ ಅಲ್ಲ! ಗುಡಿಸಿಲಲ್ಲಿರುವ ಹಸು,ಕರು ಇತ್ಯಾದಿ ಪ್ರಾಣಿಗಳನ್ನೂ ಮಗುವಿನ ಕೈಯಿಂದ ತಡವರಿಸಿಸುತ್ತಾಳೆ. ಹಾಗೆ ಮಾಡುವಾಗಲೆಲ್ಲ 'ಒಳ್ಳೆಯದು, ಒಳ್ಳೆಯದು' ಎಂಬ ಪಿಸುಮಾತನ್ನು ಮಗುವಿಗೆ ಹೇಳುತ್ತಿರುತ್ತಾಳೆ. ಒಳ್ಳೆಯದು ಎಂಬುದರ ಪೂರ್ಣ ಕಲ್ಪನೆಯು ಮಗುವಿಗೆ ಬರುವುಲ್ಲ. ಆದರೂ ತಾಯಿಯು ನುಡಿದ 'ಒಳ್ಳೆಯದು' ಎಂಬ ನುಡಿಯ ಅಕ್ಕರದ ದನಿಯು, ಪ್ರಫುಲ್ಲವಾಗಿರುವ ಅದರ ಮನಸ್ಸಿನಲ್ಲಿ ಚಿರ ಸ್ಥಾಯಿಯಾಗುತ್ತದೆ. ಅದರೊಂದಿಗೇ ಹೊಟ್ಟೆ ತುಂಬಿದ ಸಂತಸವೂ, ಮೈದಡವಿದ ಸಂತೋಷವೂ, ಜತೆಜತೆಯಾಗಿ ಸ್ಮರಣೆಯಲ್ಲಿ ಉಳಿಯುತ್ತದೆ. ಮುಂದೆ ಬೆಳೆದು ಬಾಳುವಾಗಲೂ, ಈ ಸ್ಮರಣೆಯು ಹಚ್ಚ ಹಸುರಾಗಿದ್ದು 'ಎಲ್ಲರೂ ಒಳ್ಳೆಯವರು, ಎಲ್ಲವೂ ಒಳ್ಳೆಯದು' ಎಂಬ ದೃಢ ನಂಬಿಕೆಯು ಬೇರೂರುತ್ತದೆ. ಇಂತಹವರು ಬೆಳೆದಮೇಲೆ, ಆ ಜನಾಂಗವು 'ಒಳ್ಳೆಯ' ಜನಾಂಗವಾಗುವುದು ಅನಿವಾರ್ಯ.

ಆ ಜನಾಂಗದಲ್ಲಿ ಪೋಲೀಸರಿಲ್ಲ. ಕೊತ್ವಾಲರಿಲ್ಲ. ಅಂದಮೇಲೆ ಕಳ್ಳರೂ ಇಲ್ಲ. ಗುಡಿಸಿಲುಗಳಿಗೆ ಬಾಗಿಲ ಬೀಗವಿಲ್ಲ. ದ್ವೇಷವಿಲ್ಲ, ಕೋರ್ಟು ಕಚೇರಿ ಗಳಂತೂ ಇಲ್ಲವೇ ಇಲ್ಲ. ಜನಾಂಗದ ಎಲ್ಲರೂ ವಾತ್ಸಲ್ಯಮಯ ಬಾಳನ್ನು ನಡಸುತ್ತಿದ್ದಾರೆ.

ಚಿಕ್ಕಂದಿನಲ್ಲಿ ಅರಪೇಶ್ ಜನಾಂಗದವರು ಕಲಿಸಿದ ಅಕ್ಕರೆಯ ವಿದ್ಯೆಯ ಪ್ರಭಾವವಿದು.

*

ನಮ್ಮ ಮಕ್ಕಳಿಗೆ ನಾವು ಚಿಕ್ಕಂದಿನಲ್ಲಿ ಅಕ್ಕರದಿ ವಿದ್ಯೆಯ ಕಲಿಸುತ್ತಿದ್ದೇವೆಯೇ? ಬಾಳು ಹಸನಾಗುವಂತೆ, ಹಿತಬಾಳು ಫಲಿಸುವಂತೆ, ವ್ಯಷ್ಟಿ ಸಮಷ್ಟಿಯು ಸಮನ್ವಯಗೊಳ್ಳುವಂತೆ, ತಾನೇ ಎಲ್ಲವೂ, ಎಲ್ಲವೂ ತಾನೇ ಎಲ್ಲವೂ ಸತ್ಯ ಸುಂದರ ಮತ್ತು ಮಂಗಳಕಾರಿಯಾದ ಶಿವ, ಎಂದು ಅರಿವು ಮೂಡುವಂತೆ, ವಿದ್ಯೆಯನ್ನು ಕಲಿಸುತ್ತಿದ್ದೇವೆಯೇ?

ಪುನಃ ಪುನಃ ಮನನ ಮಾಡಬೇಕಾದ ವಿಷಯ!

ಗುರುಬಲ

ಸೌರ ಮಂಡಲದಲ್ಲಿನ ಗ್ರಹಗಳಲ್ಲಿ ಗುರುವು ಅತ್ಯಂತ ದೊಡ್ಡದಾದುದು. ಸೂರ್ಯನ ಜತೆಗೆ ಹೋಲಿಸಿದರೆ ಅದು ಪುಟಾಣಿಯೇನೋ ಹೌದು. ಆದರೆ ಅದು ಅಡ್ಡಳತೆಯಲ್ಲಿ ನಮ್ಮ ಭೂಮಿಗಿಂತ ಹನ್ನೊಂದರಷ್ಟು ಹೆಚ್ಚಾಗಿದೆ. ಘನಪ್ರಮಾಣದಲ್ಲಿ ಭೂಮಿಗಿಂತ 3600ದಷ್ಟು ಹೆಚ್ಚಾಗಿದೆ. ಆದರೆ ತೂಕದಲ್ಲಿ 318ರಷ್ಟು ಮಾತ್ರ ಹೆಚ್ಚಾಗಿದೆ. ಅಂದರೆ ಭೂಗ್ರಹಕ್ಕಿಂತ ಗುರು ಗ್ರಹವು ಹಗೂರಾಗಿದೆ. ಭೂಮಿಯ ಸಾಂದ್ರತೆ ನೀರಿಗಿಂತ 5.5ರಷ್ಟು ಹೆಚ್ಚಾಗಿದೆ. ಆದರೆ ಗುರುವು 1.3ರಷ್ಟು ಮಾತ್ರ ಹೆಚ್ಚಾಗಿದೆ. ಅಂದರೆ ಗುರು ಗ್ರಹದಲ್ಲಿ ಘನ ಬಂಡೆಗಳು ಪ್ರಾಯಶಃ ಇಲ್ಲ.

ಭೂಮಿ–ಗುರು

ಸೂರ್ಯನಿಗೂ ಭೂಮಂಡಲಕ್ಕೂ ಇರುವ ಅಂತರದ 5.2 ರಷ್ಟು ದೂರದಲ್ಲಿದೆ, ಗುರು ಗ್ರಹ. ಹಾಗಾಗಿ ಸೂರ್ಯನಿಂದ ಅದು ಪಡೆಯುವ ಶಾಖವು, ನಾವು ಪಡೆಯುತ್ತಿರುವ ಶಾಖದ ಇಪ್ಪತ್ತೇಳರಲ್ಲಿ ಒಂದು ಪಾಲಿನಷ್ಟು ಮಾತ್ರ. ಆದಕಾರಣ ಗುರು ಗ್ರಹದ ಶಾಖವು–220° F ಪ್ರಾಯಶಃ ಅಲ್ಲಿ ಜೀವವು, ನಮ್ಮಲ್ಲಿರುವಂತೆ, ಇಲ್ಲ.

ಗುರುವು ಒಂದು ವಿಚಿತ್ರ ಗ್ರಹ. ಕುತೂಹಲವನ್ನು ಕೆರಳಿಸುತ್ತದೆಯೇ ಹೊರತು, ನಾವಲ್ಲಿ ವಲಸೆ ಹೋಗುವ ಯಾವ ಆಸೆಯೂ ಇಲ್ಲ. ರಾಕೆಟ್ ಯಾನದಲ್ಲಿ ಅಲ್ಲಿಗೆ ಹೋಗಿ ಹಿಂತಿರುಗಲು, ಈಗಿರುವ ವ್ಯವಸ್ಥೆಗಳ ಪ್ರಕಾರ, ಹತ್ತು ವರ್ಷಗಳಾಗುತ್ತವೆ. ಗುರು ಗ್ರಹದ ಮೇಲೆ ವಿಷಗಾಳಿಗಳ ವಾತಾವರಣವಿರುವುದರಿಂದ, ಅಲ್ಲಿನ ಕೊರೆತವು ಅಸಾಧ್ಯವಾದುದರಿಂದ, ಅಲ್ಲಿನ ಗುರುತ್ವಾಕರ್ಷಣೆಯು ಭೂಲೋಕದಲ್ಲಿಗಿಂತ 2.7 ರಷ್ಟು ಹೆಚ್ಚಾಗಿರುವುದರಿಂದ, ಮಾನವನು ಅಲ್ಲಿ ಇಳಿಯಲು ಪ್ರಯತ್ನಿಸಿದರೆ, ವಿಷಗಾಳಿಯನ್ನು ಉಸಿರಿಸದೇ ಇದ್ದರೂ ಕೊರೆತಕ್ಕೆ ಉಪಾಯವನ್ನು ಸಾಧಿಸಿದರೂ, ಗುರುತ್ವಾಕರ್ಷಣೆಯ ಬಲದಿಂದ, ಜಜ್ಜಲ್ಪಡುತ್ತಾನೆ. ಹಾಗೂ ನಿಲ್ಲಲು ಗಟ್ಟಿಯಾದ

ನೆಲೆ ಇಲ್ಲದಿರುವುದರಿಂದ, ಸರ್ರನೆ ಅಧಃಪಾತಾಳಕ್ಕೆ ಬಿದ್ದಂತಾಗುತ್ತಾನೆ. ಗುರು ಗ್ರಹದ ವಿಚಾರ ನಮಗೆ ಈಗ ತಿಳಿದಿರುವುದು ಇಷ್ಟು. ವಾತಾವರಣದ ವಿವರಗಳು, ಗ್ರಹದ ಒಳಾಒಳಗಿನ ಶಾಖ ಇತ್ಯಾದಿಗಳು ಗೊತ್ತಾಗಿವೆ. ಆದರೆ ಸ್ಥೂಲವಾಗಿ ಗುರು ಗ್ರಹದ ಪರಿಚಯವಿಷ್ಟು.

ಧೂಮಕೇತುಗಳು

ಸೌರವ್ಯೂಹದಲ್ಲಿ ಸೂರ್ಯನ ಸುತ್ತಲೂ ಗ್ರಹಗಳು ಪ್ರದಕ್ಷಿಣೆಯನ್ನು ಹಾಕುತ್ತಿವೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಇವಲ್ಲದೆ ಬ್ರಹ್ಮಾಂಡ ದಲ್ಲಿ ಧೂಮಕೇತುಗಳಿರುವುದೂ ಎಲ್ಲರಿಗೂ ತಿಳಿದ ವಿಷಯ. ಆಗೊಮ್ಮೆ ಈಗೊಮ್ಮೆ ಧೂಮಕೇತುಗಳು ಸೌರವ್ಯೂಹದೊಳಗೆ ಚಲಿಸುತ್ತವೆ. ಭೂಲೋಕ ದಲ್ಲಿದ್ದವರಿಗೂ ಆಗ ಕಾಣಿಸುತ್ತವೆ; ಬರಿಗಣ್ಣಿಗೆ ಅಥವಾ ಟೆಲಿಸ್ಕೋಪಿನಲ್ಲಿ ಅದರ ಪ್ರಮಾಣ ಮತ್ತು ಗಾತ್ರಕ್ಕನುಸಾರವಾಗಿ, ಧೂಮಕೇತುಗಳು ಸೂರ್ಯನ ಝಳಕ್ಕೆ ಒಳಗಾದಾಗ, ಅವುಗಳಲ್ಲಿರುವ ಆಲಿಕಲ್ಲುಗಳು ಆವಿ ಯಾಗುತ್ತವೆ ; ಕಲ್ಲು ಧೂಳುಗಳು ಮೀಟಿಯರ್‌ಗಳಾಗುತ್ತವೆ.

ಗುರು ಗ್ರಹದ ಸಮೀಪದಲ್ಲೇ ಮೀಟಿಯರ್‌ಗಳ ಸಂತೆಯೊಂದು ಸೂರ್ಯನ ಸುತ್ತಲೂ ಗ್ರಹಗಳಂತೆ ಪ್ರದಕ್ಷಿಣೆಯನ್ನು ಹಾಕುತ್ತಿದೆ. ಇದನ್ನು ಆಸ್ಟಿರಾಯ್ಡ್ಸ್ ಪಟ್ಟಿ ಎಂದು ಕರೆಯುತ್ತಾರೆ. ಧೂಮಕೇತುಗಳು ನಾಶ ವಾಗುತ್ತಿರುತ್ತವೆ. ಹೊಸ ಹೊಸದು ಹುಟ್ಟಿಕೊಳ್ಳುತ್ತಲೇ ಇರುತ್ತವೆ.

ಇಂತಹ ಧೂಮಕೇತುಗಳು ಸೌರವ್ಯೂಹವನ್ನು ಪ್ರವೇಶಿಸಿದಾಗ, ಯಾವು ದಾದರೂ ಗ್ರಹವನ್ನು ಸಮೀಪಿಸಿದಾಗ, ಗ್ರಹವು ತನ್ನೆಡೆಗೆ ಅದನ್ನು ಸೆಳೆದು ಕೊಳ್ಳಲೇಬೇಕು ಎಂದೇನಲ್ಲ. ಪರಸ್ಪರ ಆಕರ್ಷಣೆಗಳಿಂದ ಧೂಮಕೇತುವಿನ ಪಥವು ವ್ಯತ್ಯಾಸವಾಗುತ್ತದೆ.

ಗ್ರಹವನ್ನು ಧೂಮಕೇತುವು ನೇರ ಎದುರಿಸಿದಾಗ, ಎರಡರ ಪಥವೂ ಒಂದಕ್ಕೊಂದು ವಿರುದ್ಧವಾಗಿದ್ದಾಗ, ಧೂಮಕೇತುವು ಸೌರವ್ಯೂಹದಿಂದ ಹೊರಕ್ಕೆ ಎಸೆಯಲ್ಪಡುತ್ತದೆ. ಹಾಗಲ್ಲದಿದ್ದರೆ, ಗ್ರಹವು ಧೂಮಕೇತುವನ್ನು ಸೆಳೆದು ಹೇಳ ಹೆಸರಿಲ್ಲದಂತಾಗಿಸುತ್ತದೆ.

ಸೌರವ್ಯೂಹದ ಹೊರವಲಯದಲ್ಲಿ, ಆದರೂ ಸೂರ್ಯನ ಗುರುತ್ವಾ ಕರ್ಷಣೆಗೆ ಒಳಪಟ್ಟಿರುವ, ಧೂಮಕೇತುಗಳಿರುವ ಭಾರೀ ಗೋಳವೇ ಒಂದಿದೆ. ಸೌರವ್ಯೂಹದ ಘನಪ್ರಮಾಣಕ್ಕಿಂತ, ಧೂಮಕೇತುಗಳಿರುವ ಗೋಳದ

ಪ್ರಮಾಣವು 1000 ಕೋಟಿಯಷ್ಟು ಹೆಚ್ಚಾಗಿದೆ ಎಂದು ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ. ಅಂದರೆ ಎಷ್ಟು ಧೂಮಕೇತುಗಳಿರಬಹುದು! ಅಬ್ಬಾ ಎನಿಸುತ್ತದೆ.

ಧೂಮಕೇತುಗಳನ್ನು ನಾಶ ಮಾಡುವ ಸೌರವ್ಯೂಹದ ಗ್ರಹಗಳಲ್ಲಿ ಗುರು ಗ್ರಹವು ಅತಿ ಪ್ರಮುಖವಾದುದು. ಆದಕಾರಣ ಖಗೋಳ ಶಾಸ್ತ್ರಜ್ಞರು ಗುರುವನ್ನು 'ಸೌರವ್ಯೂಹದ ಪೋಲೀಸ್‌ಮನ್' ಎಂದೂ ಕರೆಯುತ್ತಾರೆ.

ಸೌರವ್ಯೂಹದಲ್ಲಿ ಗುರು ಗ್ರಹದ ಪಾತ್ರವು ಅತಿ ಮುಖ್ಯವಾದುದು. ಬಂದು ಅಪ್ಪಳಿಸಬಹುದಾದ ಧೂಮಕೇತುಗಳನ್ನು ತಹಬಂದಿಯಲ್ಲಿಡುವುದು ಗುರುವಿನ ಕೆಲಸ. ಅದಿರದಿದ್ದರೆ ಇತರ ಗ್ರಹಗಳ ಪಾಡು ಎಂದೋ ಏನೋ ಆಗುತ್ತಿತ್ತು.

ಇಷ್ಟೊ ವಿಜ್ಞಾನಿಗಳಿಂದ ಇಂದು ನಾವು ಕಲಿತಿರುವುದು.

* * *

ಮನಶ್ಶಕ್ತಿ

ಆದರೆ ನಮ್ಮ ಹಿರಿಯ ಋಷಿಗಳು ಸೌರವ್ಯೂಹದ ಕುಂಡಲಿಯೊಂದನ್ನು, ತಮ್ಮ ತೀವ್ರ ಮನನ ಶಕ್ತಿಯಿಂದ, ರಚಿಸಿದ್ದರು. ತಾವು ಕಂಡ ದಿವ್ಯ ದರ್ಶನವನ್ನು ಇತರರಿಗೆ ತಿಳಿಸಲೋಸುಗ. ಅವರು ಕುಂಡಲಿಯ ರೂಪವೊಂದನ್ನು ಸಂಕೇತವಾಗಿ ಬಳಸಿಕೊಂಡರು. ಸೂರ್ಯ, ಚಂದ್ರ, ಬುಧ, ಶುಕ್ರ, ಕುಜ, ಶನಿ, ಗುರು ಮತ್ತು ರಾಹು, ಕೇತುಗಳನ್ನು ಉದಹರಿಸಿದರು. ರಾಹು, ಕೇತುಗಳು ಅರ್ಧಗ್ರಹಗಳು; ಒಂದಕ್ಕೆ ತಲೆಯಿಲ್ಲ, ಒಂದಕ್ಕೆ ಒಡಲಿಲ್ಲ ಎಂದರು. ಭೂಲೋಕದಲ್ಲಿರುವ ಜೀವಗಳ ಮೇಲೆ ಇವೆಲ್ಲವೂ ಹೆಚ್ಚು ಕಡಿಮೆ ಪ್ರಮಾಣದಲ್ಲಿ, ಪ್ರಭಾವವನ್ನು ಬೀರುತ್ತವೆ ಎಂದರು. ಜ್ಯೋತಿಷ್ಯ ಶಾಸ್ತ್ರವನ್ನೇ ರಚಿಸಿ ಸ್ಫುಟ ಮಾಡಿಟ್ಟರು.

ಹೀಗೆ ಮಾಡುವಾಗ ರಾಹು ಕೇತುಗಳ ಪ್ರಭಾವವನ್ನು ಸೌರವ್ಯೂಹದ ಹೊರವಲಯದಲ್ಲಿರುವ ಧೂಮಕೇತುಗಳ ಸಂತೆಯ ಪ್ರಭಾವವನ್ನೇ ಗಣನೆಗೆ ತೆಗೆದುಕೊಂಡಿದ್ದರು. ಒಂದಕ್ಕೊಂದು ವಿರೋಧವಾಗಿರುವ, ಒಂದರಿಂದೊಂದು ಸದಾ ಏಳನೆಯ ಮನೆಯಲ್ಲಿರುವ, ರಾಹು ಕೇತುಗಳು, ಇವು ಧೂಮಕೇತುಗಳ ಸಂತೆಯ ಸಂಕೇತವೇ ಆಗಿರಬೇಕು.

ಸೌರವ್ಯೂಹದ ಪೋಲೀಸ್‌ಮನ್

ಇವುಗಳು ಹಾಗೂ ಇತರ ದುಷ್ಪರಿಣಾಮವನ್ನು ಬೀರಬಹುದಾದ ಗ್ರಹಗಳ ಪ್ರಭಾವವನ್ನು ಗುರುವು ತಹಬಂದಿನಲ್ಲಿಡುತ್ತಾನೆ ಎಂದರು. "ಸೌರವ್ಯೂಹದ ಪೋಲೀಸ್‌ಮನ್" ಎಂದು ಖಗೋಳ ಶಾಸ್ತ್ರಜ್ಞರು ಇಂದು ಕರೆಯುವುದನ್ನು, ಹಿರಿಯ ಋಷಿಗಳು, ಗುರುವಿನ ಬಲ ಗುರುವು ಕ್ಷೇಮಕಾರಿ, ಗುರುಬಲವಿದ್ದರೆ ಬಲು ಚೆನ್ನು ಎಂದು ಕರೆದರು.

ಅಣುಗಳ ಸಮೂಹದಿಂದ ಬ್ರಹ್ಮಾಂಡವೇ ಬೆಳೆದಿದೆ. ಹಾಗೆಯೇ ಬ್ರಹ್ಮಾಂಡದ ಪ್ರತಿಬಿಂಬವೇ ಅಣುವಿನಲ್ಲಿಯೂ ಇದೆ ಎಂದು ಈಗ ಎಲ್ಲರಿಗೂ ತಿಳಿದಿದೆ. ಹಾಗಾದರೆ ಮಾನವನಲ್ಲಿ ಸೌರವ್ಯೂಹದ ಪ್ರತಿಬಿಂಬವೇ ಇರಬೇಕು. ಸೌರವ್ಯೂಹಕ್ಕೆ ಗುರುವು ಪೋಲೀಸಿನವನಾದರೆ, ಮಾನವನಿಗೂ ಅದರ ರಕ್ಷಣೆಯು ದೊರೆಯಲೇಬೇಕು.

ಗುರುಬಲವಿದ್ದಾಗ ಮಾತ್ರ ಜವಾಬ್ದಾರಿಯುತ ಕೆಲಸಗಳನ್ನು ಕೈಗೊಳ್ಳಬೇಕು ಎಂದು ನಮ್ಮ ಹಿರಿಯರು ನುಡಿದಿದ್ದು, ಖಗೋಳಶಾಸ್ತ್ರದ ಇಂದಿನ ದೃಷ್ಟಿಯಿಂದಲೂ ಸಮಂಜಸ ಎನಿಸುತ್ತದೆ. ಅವರಾಡಿದ ಸಾಂಕೇತಿಕ ನುಡಿಗಳ ದಿವ್ಯ ಅರ್ಥವನ್ನು ನಾವೂ ಅವರಂತೆಯೇ ಮನನ ಮಾಡಿ ತಿಳಿದುಕೊಳ್ಳಬೇಕು. ಕೇವಲ ಮೌಢ್ಯದಿಂದ ನಂಬಬಾರದು. ಹಾಗಾದಾಗ ಖಗೋಳಶಾಸ್ತ್ರಕ್ಕೆ ಪ್ರಭಾವಯುತವಾದ ಕಾಣಿಕೆಯನ್ನು ನಾವು ಸಲ್ಲಿಸಬಹುದು ಎನಿಸುತ್ತದೆ.

ಮನನ ಮಾಡಬೇಕಾದ ವಿಷಯ.

ಒಲವಿನ ಗುರುತ್ವಾಕರ್ಷಣೆ

ಪರಸ್ಪರ ಶಕ್ತಿಗಳು

ಎರಡು ಕಣಗಳ ಮಧ್ಯೆ ಪರಸ್ಪರವಾಗಿರುವ ಶಕ್ತಿಗಳನ್ನು ನಾಲ್ಕು ಬಗೆಯುವನ್ನಾಗಿ ಭೌತಶಾಸ್ತ್ರಜ್ಞರು ವಿಂಗಡಿಸಿದ್ದಾರೆ. 1. Strong Interaction– ತೀವ್ರವಾದ ಶಕ್ತಿ. ಲ್ಯಾಬೋರೇಟರಿಗಳಲ್ಲಿ ಇದನ್ನು ಪ್ರಯೋಗಗಳಿಂದ ಕಂಡುಹಿಡಿಯಬಹುದು. 2. ಅಲ್ಪವಾದ ಶಕ್ತಿ– Brownian move-ment ಎಂದು ಕಾಣಿಸುವಲ್ಲಿ ಈ ಶಕ್ತಿಯನ್ನು ಕಾಣಬಹುದು. 3. Gravitation–ಗುರುತ್ವಾಕರ್ಷಣ ಶಕ್ತಿ. ಸುಮಾರು ಮುನ್ನೂರು ವರ್ಷಗಳ ಹಿಂದೆ, ನ್ಯೂಟನ್ ಮಹಾಶಯನು ಈ ಶಕ್ತಿಯ ವಿಶ್ಲೇಷಣೆ ಮಾಡಿದ. 4. Electro-magnetic Interaction–ವಿದ್ಯುತ್ ಅಯಸ್ಕಾಂತ ಶಕ್ತಿ. ಸುಮಾರು ನೂರು ವರ್ಷಗಳ ಕೆಳಗೆ ಮ್ಯಾಕ್ಸ್‌ವೆಲ್ ಮಹಾಶಯ ಈ ಶಕ್ತಿಯನ್ನು ವಿಶ್ಲೇಷಿಸಿದ.

ಈ ನಾಲ್ಕು ತೆರನ ಪರಸ್ಪರ ಶಕ್ತಿಗಳಲ್ಲಿ, ಅಥವಾ ಪರಸ್ಪರ ಪ್ರತಿಕ್ರಿಯೆಗಳಲ್ಲಿ ಗುರುತ್ವಾಕರ್ಷಣೆಯು ತುಂಬಾ ಕಡಿಮೆಯಾದುದು. ಆದರೂ ಭೂಮಿಯ ಮೇಲೆ ಇದನ್ನು ಸುಲಭವಾಗಿ ಗುರುತಿಸಬಹುದಾದ್ದರಿಂದ, ಇದರ ವ್ಯಾಸಂಗವು ಹೆಚ್ಚಾಗಿ ನಡೆದಿದೆ.

ಗುರುತ್ವಾಕರ್ಷಣೆಯು ಅಲ್ಪವಾದರೂ, ಅಂತರ – ಅಂತರ, Distance Squaredವಷ್ಟು ವೃದ್ಧಿಯಾಗುತ್ತದೆ. 32 feet per second per second ಅಂದರೂ ಇದೇ ಅರ್ಥ ಬರುತ್ತದೆ.

ಸೂರ್ಯಮಂಡಲದಲ್ಲಿಯೂ ಗುರುತ್ವಾಕರ್ಷಣೆಯು ಇದ್ದೇ ಇದೆಯಲ್ಲ. ಅಂದರೆ ಸೂರ್ಯಮಂಡಲದ ಹೊರ ಹಗುರಾದ ವಲಯದಲ್ಲಿರುವ ವಸ್ತುಗಳು ಮಂಡಲದ ಒಳಾಒಳಕ್ಕೆ ಸೆಳೆಯಲ್ಪಡುತ್ತಲೇ ಇರಬೇಕು. ಹಾಗಾಗಿ ಸೂರ್ಯಮಂಡಲವು ಚಿಕ್ಕದೂ ಆಗುತ್ತಿರಬೇಕು. ಬಿಗಿಯುತ್ತಲೂ ಇರಬೇಕು. ಏಕೆಂದರೆ ಸೂರ್ಯಮಂಡಲದಲ್ಲಿ ಭೂಮಿಯಲ್ಲಿದ್ದಂತೆ ಘನವಸ್ತುವಿಲ್ಲ.

ಅಣುಬಂಧನ

ಆದರೆ ಸೂರ್ಯಮಂಡಲದ ಪ್ರಮಾಣವು ಇದ್ದಂತೆಯೇ ಇದೆ. ಇದು ಹೇಗೆ ಸಾಧ್ಯ? ಸೂರ್ಯನ ಒಳಗೆ ಅಹೋರಾತ್ರಿ ನಡೆಯುತ್ತಿರುವ Nuclear Fission and Nuclear Fusion– ಅಣುವಿಚ್ಛೇದನ ಅದಕ್ಕಿಂತ ಮಿಗಿಲಾಗಿ ಅಣುಬಂಧನ. ಈ ಕ್ರಿಯೆಗಳು ಅಪಾರವಾದ ಶಾಖವನ್ನು ಉತ್ಪಾದಿಸುತ್ತವೆ. ಅತ್ಯುಗ್ರವಾದ ಈ ಶಾಖದಿಂದ ಪ್ರಮಾಣವು ಹಿರಿದಾಗುತ್ತ ಹೋಗುತ್ತದೆ.

ಈ ಎರಡೂ ಕ್ರಿಯೆಗಳು ಸೂರ್ಯನಲ್ಲಿ ಬಹಳ ಸೂಕ್ಷ್ಮ ರೀತಿಯಲ್ಲಿ ಸರಿಸಮಾನವಾಗಿರುವುದರಿಂದ ಸೂರ್ಯಮಂಡಲದ ಪ್ರಮಾಣವು ಬಹು ಕಾಲದೀದಲೂ ಒಂದೇ ತೆರನಾಗಿದೆ.

ನಮ್ಮ ಸೂರ್ಯನಂತೆಯೇ, ಅದಕ್ಕಿಂತಲೂ ಅಗಾಧ ಪ್ರಮಾಣವಿರುವ ಸೂರ್ಯಗಳು ಎಷ್ಟೋ ಇವೆ. ಗಗನದಲ್ಲಿ ನಕ್ಷತ್ರಗಳಂತೆ ಕಾಣಿಸುತ್ತವೆ. ಇಂತಹ ನಕ್ಷತ್ರಗಳಲ್ಲಿ, ಕೆಲವು ನಾಶವಾಗುತ್ತಿರುವುದನ್ನು ಗುರುತಿಸಿದ್ದಾರೆ. ಅದರ ಒಳಾಒಳಗಿನ ಬಳಿಗೆ ಸೆಳೆಯುತ್ತಿರುವ ಗುರುತ್ವಾಕರ್ಷಣೆಯು ಬಲು ಹೆಚ್ಚಾಗಿದೆ. ಅದನ್ನು ಪ್ರತಿ ವಿರೋಧಿಸುವ ಅಣುಬಂಧನ, ಅಣುವಿಚ್ಛೇದನ ಕ್ರಿಯೆಗಳು ಯಾವ ಕಾರಣದಿಂದಲಾಗಲೀ ತುಂಬಾ ಕಡಿಮೆಯಾಗಿದೆ. ಆದುದರಿಂದ ಗಾಳಿಯು ಸಡಿಲಿದ ಟೈರಿನಂತೆ ಆ ನಕ್ಷತ್ರಗಳು, ಅಂದರೆ ಸೂರ್ಯಗಳು, ನಿಟ್ಟುಸಿರು ಬಿಟ್ಟು ತೆಪ್ಪಗಾಗುತ್ತವೆ.

ಇದೇ ರೀತಿಯ ಪ್ರತಿಕ್ರಿಯೆಯು ನಮ್ಮ ಸೂರ್ಯನಲ್ಲಿ ಶುರುವಾದರೆ, ಸುಮಾರು ಅರ್ಧ ಗಂಟೆಯ ಹೊತ್ತಿನಲ್ಲಿ ಸೂರ್ಯನು ಪುಟಾಣಿಯಾದ, ಹೊಳೆಯುವುದಿಲ್ಲದ, ಚಿಕ್ಕಬಿಂದುವಾಗಿಬಿಡುತ್ತಾನೆ ಎಂದು ಭೌತಶಾಸ್ತ್ರಜ್ಞರ ಎಣಿಕೆ... "ಅಬ್ಬಾ ! ಇಷ್ಟೇನೇ ಸೂರ್ಯದೇವ" ಎಂದು ಉದ್ಗರಿಸುವಂತಾಗುತ್ತದೆ.

ಯಾವುದು ಆ ಶಕ್ತಿ ?

ಗುರುತ್ವಾಕರ್ಷಣೆಯು ಒಂದು ತೆರನಾದ ಸೆಳೆತ. ಒಂದು ಚೆಂಡನ್ನು ಜೋರಾಗಿ ಎಸೆದರೆ, ನಮ್ಮ ತೋಳ್ಬಲಕ್ಕನುಗುಣವಾಗಿ, ಚೆಂಡಿನ ಭಾರಕ್ಕೆ ಅನುಗುಣವಾಗಿ ಚೆಂಡು ಅಷ್ಟು ದೂರ ಹೋಗುತ್ತದೆ. ಹಾಗಾಗುವಾಗಲೆಲ್ಲ ಗುರುತ್ವಾಕರ್ಷಣೆಯು ಅದನ್ನು ಭೂಮಿಯ ಕೇಂದ್ರದತ್ತ ಸೆಳೆಯುತ್ತಿರುತ್ತದೆ.

ಆದಕಾರಣ ಚೆಂಡು ನೆಲಕ್ಕೆ ಬೀಳುತ್ತದೆ, ಸ್ವಲ್ಪ ದೂರ ಹಾರಿ ಹೋದ ಮೇಲೆ.

ಆದರೆ ರಾಕೆಟ್ಟಿನ ಮೂಲಕ ಅತಿ ವೇಗದಲ್ಲಿ ಭೂಮಿಯಿಂದ ತಳ್ಳಲ್ಪಟ್ಟರೆ, ಗುರುತ್ವಾಕರ್ಷಣೆಯು ಪ್ರಭಾವವನ್ನು ಬೀರಲಾರದಷ್ಟು ದೂರಕ್ಕೆ ಹೋದರೆ, ಆಗ ಭೂಮಿಯ ಸುತ್ತಲೂ ಚಂದ್ರನಂತೆ ಉಪಗ್ರಹವಾಗಿ ಭೂಮಿಯ ಪ್ರದಕ್ಷಿಣೆಯನ್ನು ಮಾಡುತ್ತಿರಬೇಕು.

ಅಂದರೆ ಮುಂದಕ್ಕೆ ದೂಡುವ ಶಕ್ತಿ, ಹಾಗೂ ಸೆಳೆದುಕೊಳ್ಳುವ ಶಕ್ತಿ, ಎಂಬ ಎರಡು ತೆರನ ಶಕ್ತಿಗಳನ್ನು ಗುರುತಿಸಬಹುದು. ಮುಂದಕ್ಕೆ ದೂಡುವ ಶಕ್ತಿಯು ಯಾವಾಗಲಾದರೂ ವ್ಯಯವಾಗಲೇಬೇಕು. ಒಂದು ಲೀಟರ್ ಪೆಟ್ರೋಲನ್ನು ಉರಿಸಿದರೆ ಮೋಟಾರುಕಾರು ಆರೇಳು ಕಿಲೋಮೀಟರ್ ಹೋಗುತ್ತದೆ. ನಂತರ ಶಕ್ತಿಯು ವ್ಯಯವಾದ ಕಾರಣ ಕಾರು ನಿಂತು ಹೋಗುತ್ತದೆ. ಸೆಳೆದುಕೊಳ್ಳುವ ಶಕ್ತಿಯೂ ಅದೇ ರೀತಿ ವ್ಯಯವಾದ ಮೇಲೆ ಸೆಳೆತವು ನಿಂತುಹೋಗುತ್ತದೆ.

ಆದರೆ ಬ್ರಹ್ಮಾಂಡದಲ್ಲಿ ವ್ಯಯವಾಗದೆ ಇರುವ ಶಕ್ತಿಯೊಂದಿದೆ ಎನ್ನುವುದನ್ನೂ ಸುಲಭವಾಗಿ ತಿಳಿಯಬಹುದು. ಖರ್ಚು ಮಾಡಿದಷ್ಟೂ ವೃದ್ಧಿಯಾಗುವ ಇಂತಹ ಶಕ್ತಿ ಯಾವುದು, ಇದ್ದರೆ ? ಹಾಯ್ಲ್ ಮತ್ತು ನಾರ್ಲಿಕರ್ ಅವರು ಒಂದು ಸಲಹೆಯನ್ನು ಮುಂದಿಟ್ಟರು. ಸೆಳೆಯುವ ಇಂತಹ ಶಕ್ತಿಯು Negative ಶಕ್ತಿ. ಉದಾಹರಣೆಗೆ–6 ಮೈನಸ್‌ಸಿಕ್ಸ್. ಇದರಿಂದ 1ಅನ್ನು ಸೆಳೆದು ಕೊಂಡರೆ ಉಳಿಯುವುದು–7 ಮೈನಸ್ ಸೆವೆನ್. ಅಂದರೆ ಎಳೆದುಕೊಂಡಷ್ಟೂ ವೃದ್ಧಿಯಾದಂತೆ. ಅನಾದಿ ಅನಂತವಾಗಬಹುದಾದುದು ಈ ಸೆಳೆತದ ಶಕ್ತಿ.

ಬ್ರಹ್ಮಾಂಡದ ಗಣಿ

ನೂರು ರೂಪಾಯಿ ಸಾಲವನ್ನು ಪಡೆದವನು, ಇನ್ನೂ ಹತ್ತು ರೂಪಾಯಿಗಳ ಸಾಲವನ್ನು ಪಡೆದರೆ, ಸಾಲವು ನೂರು ಮತ್ತು ಹತ್ತು ರೂಪಾಯಿಗಳಾಗುತ್ತವೆ. ಸಾಲವು ವೃದ್ಧಿಯಾಗುತ್ತದೆ. ಆದರೆ ಸಾಲ ಕೊಟ್ಟವನು ಕಳೆದುಕೊಳ್ಳುತ್ತಿರುತ್ತಾನೆ. ನಿದರ್ಶನವು ಒಂದು ದೃಷ್ಟಿಯಿಂದ ಸರಿಯಾದರೂ ವಸ್ತು ಭೇದವಿದೆ. ಸಾಲವು ಒಂದು ವಸ್ತು. ಆದರೆ ಶಕ್ತಿಯು Negative ಆದಾಗ ಅದಿನ್ನೂ ಶಕ್ತಿಯಾಗಿಯೇ ಇದೇ, ವಸ್ತುವಾಗಿ ಘನೀಭೂತವಾಗಿಲ್ಲ. ಆಗ ಅದು ವೃದ್ಧಿಯಾಗುವುದಾದರೆ, ಮತ್ತೆ ಯಾವುದೋ ಶಕ್ತಿಯು ಕ್ಷೀಣ

ವಾಗುತ್ತಿರಬೇಕು. ಆದರೆ ಹಾಗಾಗದೆ Negative ಶಕ್ತಿಯು ಗಣಿಯೇ ಬ್ರಹ್ಮಾಂಡದಲ್ಲಿದೆ. ಆದರಿಂದಲೇ ವ್ಯಯವಾದಷ್ಟೂ ವೃದ್ಧಿಯಾಗುವ ಸೆಳೆತದ ಶಕ್ತಿಯು ಕಾಣಬರುತ್ತದೆ. ಗುರುತ್ವಾಕರ್ಷಣೆಯ ಮೂಲವು ಈ ರೀತಿ ಇರಬಹುದೇನೋ ಎಂದು ಹಾಯ್ಲ್ ಮತ್ತು ನಾರ್ಲಿಕರ್ ಅವರು ಸೂಚಿಸಿದರು. ಗಣಿತಶಾಸ್ತ್ರದ ಪ್ರಕಾರ ಹೀಗಾಗಬಹುದು ಎಂದು ಸಿದ್ಧಾಂತವನ್ನೂ ಮಾಡಿದರು. ಎಲ್ಲ ಅಂಶಗಳಲ್ಲೂ ಅವರ ಸಿದ್ಧಾಂತವು ಸಾಧುವಲ್ಲ. ಕೆಲವು ಅಂಶಗಳಲ್ಲಿ ಮಾತ್ರ ಸಾಧುವಾಗಿದೆ ಎಂದು ಹಲವಾರು ಭೌತ ಶಾಸ್ತ್ರಜ್ಞರು ಹೇಳಿದ್ದಾರೆ.

ನಮ್ಮಲ್ಲಿ ಕಂಡ ಅಂಶಗಳಿಂದಲೇ ಬ್ರಹ್ಮಾಂಡವೂ ರಚಿತವಾಗಿದೆಯೆಂದು ಸುಲಭವಾಗಿ ಎಲ್ಲರೂ ಒಪ್ಪಬಹುದು. ರಸಾಯನಿಕ ರಚನೆಯೊಂದರಲ್ಲೇ ಅಲ್ಲ, ಭೌತಶಾಸ್ತ್ರದ ರೀತಿ ನಿಯಮಗಳೂ ನಮಗೆ ಅನ್ವಯಿಸಲ್ಪಡುತ್ತವೆ.

ಒಲವಿನ ಸೆಳವು

ಆದರೆ ನಮ್ಮ ಭಾವನೆಗಳಲ್ಲಿ ಒಲವು ಎಂಬ ಅಂಶವನ್ನು ನಾವು ಕಾಣುತ್ತೇವೆ. ತಾಯಿ ಕೂಸನ್ನು ನೋಡುವಾಗ ಆ ನೋಟದಲ್ಲಿ ಒಲವನ್ನು ಕಾಣುತ್ತೇವೆ. ಇದು ಪರಸ್ಪರ ಸೆಳೆತ. ಮುಂದೂಡುವ ಶಕ್ತಿಯಂತಲ್ಲ. ಇದೂ ಒಂದು ರೀತಿಯಲ್ಲಿ Negative ಶಕ್ತಿ. ವ್ಯಯ ಮಾಡಿದಷ್ಟೂ ವೃದ್ಧಿಯಾಗುತ್ತದೆ. ನೈಜ ಪ್ರೇಮಿಗಳು ಒಲವಿನಿಂದ ಬಂಧಿತವಾದಾಗ, ಇಬ್ಬರ ಒಲವೂ ವೃದ್ಧಿಯಾಗುತ್ತದೆಯೇ ವಿನಾ ಕ್ಷೀಣವಾಗುವುದಿಲ್ಲ. ಇಂತಹ ಒಲವನ್ನು ಭಕ್ತೆ ಮೀರಾ ಕೃಷ್ಣನಲ್ಲಿ ತೋರಿಸಿದಳು. ಒಲವು ಪಟ್ಟಷ್ಟೂ ಅದು ಹೆಚ್ಚಾಗುತ್ತಿತ್ತು. ಚೆನ್ನಮಲ್ಲಿಕಾರ್ಜುನನ ಮೇಲೆ ಅಕ್ಕಮಹಾದೇವಿಯು ಇದೇ ರೀತಿಯ ಒಲವನ್ನು ಹರಿಸಿದಳು. ಹರಿಸಿದಷ್ಟೂ ಆಕೆಯ ಒಲವು ವೃದ್ಧಿಯಾಯಿತು. ಇಂತಹ ಉದಾಹರಣೆಗಳನ್ನು ಎಷ್ಟು ಸಂಖ್ಯೆಯಲ್ಲಾದರೂ ನೀಡಬಹುದು.

ನಮ್ಮಲ್ಲಿ ಕಾಣಬರುವ, ಬಹಳ ವಿರಳವಾಗಿಯಾದರೂ ಒಮ್ಮೊಮ್ಮೆ ಒಬ್ಬಿಬ್ಬರಲ್ಲಿ ಕಾಣಬರುವ ಇಂತಹ ಒಲವು, ಬ್ರಹ್ಮಾಂಡದಲ್ಲಿಯೂ ಗಣಿಯಾಗಿರಲೇಬೇಕು. ಇದರಿಂದ ನಾವು ಸೆಳೆದುಕೊಂಡಷ್ಟೂ ಅದು ವೃದ್ಧಿಯಾಗುತ್ತಲೇ ಇರುತ್ತದೆ. ಅಂದರೆ ಅದು ಅನಾದಿ, ಅನಂತ. ಒಲವನ್ನೂ ಅನಾದಿ, ಅನಂತ ಎಂದು ವರ್ಣಿಸಿದರು ನಾಡ ಋಷಿಗಳು, ಮನನ ಮಾಡಿದವರು.

ಹಾಯ್ಲ್ ಮತ್ತು ನಾರ್ಲಿಕರ್ ಸೂಚಿಸಿದ Negative force reservoir ಒಲವೇ ಇರಬಹುದೇ ? ಭಾವನೆಗಳನ್ನು ಗಣಿತಕ್ಕೆ ಅನ್ವಯಿಸುವ ವಿದ್ಯೆಯನ್ನು ನಾವು ಇನ್ನೂ ಕಲಿತಿಲ್ಲ. ಹಾಗಾಗಿ ಸಾಕ್ಷ್ಯ ತೋರಿಸಲು ಇಂದು ಸಾಧ್ಯವಾಗದೇ ಇರಬಹುದು. ಮುಂದೆ ಇದೂ ಸಾಧ್ಯವಾಗಬಹುದು. ವೈಯಕ್ತಿಕ ಜ್ಞಾನವನ್ನು ಇತರರಿಗೆ ತೋರಿಸಲು ಸಾಧ್ಯವಾಗಬಹುದು.

ಮನನ ಮಾಡಬೇಕಾದ ವಿಷಯ.

ನೆಲ್ಲಿಕಾಯಿ ಉಪ್ಪಿನಕಾಯಿ

ಒಳ್ಳೆಯ ನಿವಾರಕ

1564ರಲ್ಲಿ, ರಾನ್ಸಿಯಸ್ ಎಂಬ ಪುಸ್ತಕದ ಮೂರನೆಯ ಹೇಳಿಕೆಯಲ್ಲಿ, ಸ್ಪೈನ್ ದೇಶದಿಂದ ಹಿಂತಿರುಗುತ್ತಿದ್ದ ಡಚ್ ನಾವಿಕರಿಗೆ, ವಸಡಿನಲ್ಲಿ ರಕ್ತ ಬರುವುದು, ಚರ್ಮದಲ್ಲಿ ಅಲ್ಲಲ್ಲಿ ರಕ್ತಸ್ರಾವವಾಗುವುದು, ಶೋಭೆ ಇತ್ಯಾದಿ ಚಿಹ್ನೆಗಳಿದ್ದು ರೋಗ ಬಡಿದಾಗ, ಹಡಗುಗಳಲ್ಲಿ ಅವರು ಸಾಗಿಸುತ್ತಿದ್ದ ಕಿತ್ತಳೆ ಹಣ್ಣುಗಳನ್ನು ಮತ್ತು ನಿಂಬೆ ಹಣ್ಣುಗಳನ್ನು ಸೇವಿಸಿದರು – ಆಗ ಅವರ ರೋಗ ನಿವಾರಣೆಯಾಯಿತು, ಎಂದು ಬರೆಯಲಾಗಿದೆ.

ಅಂದರೆ ಸ್ಕರ್ವಿ ಎಂದು ಕರೆಯಲ್ಪಡುವ ಬೇನೆಗೆ ನಿಂಬೆಹಣ್ಣು, ಮತ್ತು ಅದೇ ಗೋತ್ರದ ಕಿತ್ತಲೇಹಣ್ಣು, ಒಳ್ಳೆಯ ನಿವಾರಕಗಳು ಎಂಬುದು ಹದಿನೈದನೆ ಶತಮಾನದಲ್ಲಿ ತಿಳಿದಿತ್ತು.

ಆದರೆ ಈ ವಿಷಯವು ಎಲ್ಲ ಜನರಲ್ಲೂ ಪ್ರಚುರವಾದುದು ಹದಿನೇಳನೆಯ ಶತಮಾನದ ಮಧ್ಯಭಾಗದಲ್ಲಿ. ಬ್ರಿಟಿಷ್ ನಾವಿಕರು ಆ ಕಾಲದಲ್ಲಿ ಪ್ರಪಂಚದ ಎಲ್ಲ ಮೂಲೆಗಳಿಗೂ ವ್ಯಾಪಾರಕ್ಕಾಗಿ ಪ್ರಯಾಣ ಮಾಡುತ್ತಿದ್ದರು. ಹಲವಾರು ತಿಂಗಳುಗಳು ಸಮುದ್ರದಮೇಲೆಯೇ ಇರಬೇಕು. ಅಲ್ಲಿ ಹಾಲು, ಹಸಿರು ತರಕಾರಿಗಳು ದೊರೆಯುತ್ತಿರಲಿಲ್ಲ. ಬಹು ಸಂಖ್ಯಾತ ನಾವಿಕರಿಗೆ ಸ್ಕರ್ವಿರೋಗವು ಬಡಿಯುತ್ತಿತ್ತು. ಸುಮಾರು ಜನರು ಸಾಯುತ್ತಲೂ ಇದ್ದರು. ಆಗ ಜೇಮ್ಸ್ ಲಿಂಡ್ ಎಂಬ ಬ್ರಿಟಿಷನು, ಇಂತಹ ರೋಗಿಗಳಿಗೆ ಹಣ್ಣುಗಳನ್ನು ತಿನ್ನಲು ಕೊಡುವುದರಿಂದ ಬೇನೆಯನ್ನು ಗುಣಪಡಿಸಿದ. ಆ ನಂತರ ಬ್ರಿಟಿಷ್ ನಾವಿಕರು ನಿಂಬೆಹಣ್ಣನ್ನು ಕಡ್ಡಾಯವಾಗಿ ಸೇವಿಸಲೇ ಬೇಕು ಎಂದು ಹಡಗಿನವರ ಕಟ್ಟಪ್ಪಣೆಯಾಯಿತು. ಆ ಕಾರಣದಿಂದ ಬ್ರಿಟಿಷ್ ನಾವಿಕರನ್ನು 'ಲೆಮ್ಮಿಸ್' ಎಂದು ಕರೆಯಲಾರಂಭಿಸಿದರು.

ಹತ್ತೊಂಬತ್ತನೆ ಶತಮಾನದ ಅಂತ್ಯದಲ್ಲಿ ಸರ್ ಫ್ರೆಡರಿಕ್ ಗೌಲೆಂಡ್ ಹಾಪ್‌ಕಿನ್ಸ್ ಎಂಬ ಪ್ರಸಿದ್ಧ ಬ್ರಿಟಿಷ್ ವಿಜ್ಞಾನಿಯು, "accessory food

factors", ಅತ್ಯಗತ್ಯವಾದ ಆಹಾರದ ಅಂಶಗಳು ಇವೆ ಎಂಬುದನ್ನು ಪ್ರಯೋಗಗಳಿಂದ ದೃಢಪಡಿಸಿದ. ಇವನ್ನೇ ವೈಟಮಿನ್ನುಗಳು ಎಂದು ಈಗ ಕರೆಯುತ್ತಾರೆ.

ಈ ಶತಮಾನದ ಮೊದಮೊದಲಿನಲ್ಲಿ ವೈಟಮಿನ್ನುಗಳ ವಿಶ್ಲೇಷಣೆಯನ್ನು ಮಾಡಲಾಯಿತು. ಅಕ್ಷರ ಮಾಲೆಯ ಪ್ರಕಾರ ಅವುಗಳಿಗೆ ಹೆಸರಿಡಲಾಯಿತು.

ಅಭಾವದ ಬೇನೆ

ಜೆಂಟ್ ಗೋರ್ಗಿ ಎಂಬಾತನ ಸೂಕ್ಷ್ಮ ಶೋಧನೆಗಳಿಂದಾಗಿ ವೈಟಮಿನ್ ಸಿ ಎಂಬ ವಸ್ತುವಿನ ರಸಾಯನಿಕ ರಚನೆಯನ್ನು ಕಂಡುಹಿಡಿಯಲಾಯಿತು. ಈ ವಸ್ತುವು ಸ್ಕರ್ವಿ ಬೇನೆಗೆ ಸಿದ್ಧೌಷಧವೆಂದೂ, ಸೇವಿಸುವ ಆಹಾರದಲ್ಲಿ ವೈಟಮಿನ್ ಸಿ ಇಲ್ಲದಿರುವುದರಿಂದ ಆ ಬೇನೆಯು ಬರುತ್ತದೆಂದೂ ತಿಳಿಯಿತು. ಆಹಾರದ ಅಗತ್ಯವಾದ ಒಂದು ಅಂಶದ ಅಭಾವದಿಂದ ಈ ಬೇನೆಯು ಬರುವುದರಿಂದ, ಇದನ್ನು Difiency disease ಅಭಾವದ ಬೇನೆ ಎಂದು ಕರೆದರು.

ರಸಾಯನಿಕ ಲ್ಯಾಬೋರೇಟರಿಗಳಲ್ಲಿ ಇಂದು ವೈಟಮಿನ್ ಸಿ ಯನ್ನು ಕೃತಕವಾಗಿ ತಯಾರಿಸುತ್ತಾರೆ. ಹಾಗಾಗಿ ಅದರ ಬೆಲೆಯು ತುಂಬಾ ಅಗ್ಗಕ್ಕಿಳಿದಿದೆ. ಇದಕ್ಕೆ ಮೊದಲು ಹಣ್ಣು ಕಾಯಿಗಳನ್ನು ಬಳಸಿಕೊಂಡು ತಯಾರಿಸಬೇಕಾಗಿತ್ತು, ಬೆಲೆಯೂ ಅಧಿಕವಾಗಿತ್ತು.

ಸಾಕಷ್ಟು ಪ್ರಯೋಗಗಳನ್ನು ನಡೆಸಿದ ನಂತರ ವೈಟಮಿನ್ ಸಿ ಯ ಗುಣಗಳನ್ನು ಸಿದ್ಧಾಂತ ಮಾಡಿದ್ದಾರೆ. Ascorbic acid ಎಂಬ ಆಮ್ಲ ಪದಾರ್ಥವಿದು. ಬಿಸಿಲಿನಲ್ಲಿ ಕಾಯಿಸಿದರೆ, ಅದು ಛಿದ್ರವಾಗಿ ಅನುಪಯೋಗವಾಗುತ್ತದೆ. ಅಂತೆಯೇ ಲೋಹದ ಪಾತ್ರೆಯಲ್ಲಿ ಇಟ್ಟರೆ ಕೆಲಕಾಲದ ಮೇಲೆ, ಆಸ್ಕಾರ್ಬಿಕ್ ಆ್ಯಸಿಡ್ಡು, ಲೋಹಗಳ ಸಂಪರ್ಕದಿಂದ ಛಿದ್ರವಾಗುತ್ತದೆ. ಅದರ ಗುಣವು ನಾಶವಾಗುತ್ತದೆ. ಹಾಗೂ ಆಮ್ಲಪದಾರ್ಥವಾದುದರಿಂದ, ಆಲ್ಕಲಿಗಳ ಸಂಪರ್ಕವಾದರೆ ಆಗಲೂ ಛಿದ್ರವಾಗಿ ಗುಣಹೀನವಾಗುತ್ತದೆ. ಈ ಮೂರು ಮುಖ್ಯಾಂಶಗಳನ್ನು ಉಲ್ಲೇಖಿಸಿದರು.

ಅಲ್ಲದೆ ಟೊಮಾಟೊ, ಅಂದರೆ ಚಪ್ಪರಬದನೆ ಹಣ್ಣಿನಲ್ಲಿ ಮತ್ತು ಕಿತ್ತಲೆ ಹಣ್ಣುಗಳಲ್ಲಿ ಮತ್ತು ಕಿತ್ತಲೆ ಜಾತಿಯ ಸಿಟ್ರಸ್ ಹಣ್ಣುಕಾಯಿಗಳಲ್ಲಿ ವೈಟ

ಮಿನ್ ಸಿ ಇರುತ್ತದೆ. ನೂರು ಗ್ರಾಂ ತೂಕದ ಕಿತ್ತಳೆಹಣ್ಣಿನಲ್ಲಿ 20 ಮಿಲಿ ಗ್ರಾಂ ವೈಟಮಿನ್ ಸಿ ಇರುತ್ತದೆ. ಚಪ್ಪರ ಬದನೆಯ ಹಣ್ಣಿನಲ್ಲಿ ಕೂಡ ಸುಮಾರು ಅದೇ ಪ್ರಮಾಣವಿರುತ್ತದೆ. ಈ ಅಂಶಗಳನ್ನೂ ಕಂಡುಹಿಡಿದರು. ಇವೆಲ್ಲಾ ಪಾಶ್ಚಾತ್ಯರ ಸಂಶೋಧನೆಗಳು.

ಬೆಟ್ಟದ ನೆಲ್ಲಿ

ಭಾರತದಲ್ಲಿ ಆಹಾರ ವೈಜ್ಞಾನಿಕ ಸಂಶೋಧನೆಯು ಆರಂಭವಾದ ಮೇಲೆ, ಇಲ್ಲಿ ಬಳಕೆಯಲ್ಲಿರುವ ಆಹಾರ ಪದಾರ್ಥಗಳ ಸಂಶೋಧನೆಯನ್ನು ಶುರು ಮಾಡಿದರು: ಆಗ ತಿಳಿದು ಬಂದಿತು: ನೂರು ಗ್ರಾಂ ಬೆಟ್ಟದ ನೆಲ್ಲಿ ಕಾಯಿನಲ್ಲಿ 600 ಮಿಲಿ ಗ್ರಾಂ ವೈಟಮಿನ್ ಸಿ ಇರುತ್ತದೆ ಎಂದು. ಅಂದರೆ ಕಿತ್ತಳೆ ಅಥವಾ ಟೊಮಾಟೊಕ್ಕಿಂತ ಮೂವತ್ತು ಪಾಲು ಹೆಚ್ಚಾಗಿರುತ್ತದೆ ಎಂದು.

ಪುರಾತನ ಕಾಲದಿಂದಲೂ ನಮ್ಮಲ್ಲಿ ನೆಲ್ಲಿಯ ಕಾಯಿ ಕಾಲದಲ್ಲಿ, ಅವನ್ನು ಶೇಖರಿಸಿ ಉಪ್ಪಿನಕಾಯಿ ಹಾಕಿ ಇಟ್ಟು, ವರ್ಷಾಕಾಲ ಉಪಯೋಗಿಸುತ್ತಿದ್ದರು. ಉಪ್ಪಿನಕಾಯನ್ನು ಹಾಕುವಾಗ ಕಲ್ಲುಮರಿಗೆಯಲ್ಲಿ ಹಾಕಬೇಕು ಎಂದು ನಿಯಮಿಸಿದ್ದರು. ಉಪ್ಪಿನಕಾಯಿಗೆ ನಿಂಬೆಯ ಹುಳಿಯನ್ನೋ ಹುಣಿಸೆಯ ಹುಳಿಯನ್ನೋ ಹಾಕುತ್ತಿದ್ದರು. ಅಂದರೆ ಆಮ್ಲ ಪದಾರ್ಥಗಳು ಹೆಚ್ಚಾಗಿರುತ್ತಿದ್ದುವು. ಉಪ್ಪಿನಕಾಯನ್ನು ಹಾಕಿದ ಮೇಲೆ ಮರಿಗೆಗೆ ಶುಭ್ರವಾದ ಬಟ್ಟೆಯಿಂದ ಭದ್ರವಾಗಿ ಬಾಯಿಕಟ್ಟಿ, ದೇವರ ಕೋಣೆಯಲ್ಲಿಯೋ, ಅಡಿಗೆಮನೆಯಲ್ಲಿಯೋ, ಬೆಳಕಿಲ್ಲದ, ಒಂದು ಕತ್ತಲೆಯ ಮೂಲೆಯಲ್ಲಿ ಇರಿಸುತ್ತಿದ್ದರು. ಅಗತ್ಯಬಿದ್ದಂತೆ ಸ್ವಲ್ಪ ಸ್ವಲ್ಪ ತೆಗೆದು ವರ್ಷಾಕಾಲ ಬಳಸುತ್ತಿದ್ದರು.

ಸಾಂಪ್ರದಾಯಕವಾಗಿ, ಬಹುಕಾಲದಿಂದಲೂ ನಡೆಸಿಕೊಂಡು ಬಂದ ಈ ಪದ್ಧತಿಯು ಇಂದಿನ ವೈಜ್ಞಾನಿಕ ದೃಷ್ಟಿಯಿಂದಲೂ ಎಷ್ಟು ಸಮಂಜಸ! ನಮ್ಮ ಪೂರ್ವಿಕರಿಗೆ ವೈಟಮಿನ್ ಸಿ ಎಂಬ ಹೆಸರಾಗಲಿ, ಅದರ ರಸಾಯನಿಕ ರಚನೆಯಾಗಲಿ ತಿಳಿದಿರಲಿಲ್ಲ, ದಿಟ. ಆದರೂ ಅನುಭವದಿಂದ ರೂಢಿಸಿಕೊಂಡ ಜ್ಞಾನದಿಂದ, ವೈಟಮಿನ್ ಸಿ ಅತಿ ಹೆಚ್ಚಾಗಿರುವ ಬೆಟ್ಟದನೆಲ್ಲಿಯ ಕಾಯನ್ನು, ಹೇರಳವಾಗಿ ದೊರಕುವ ಕಾಲದಲ್ಲಿ ಶೇಖರಿಸಿ, ವರ್ಷಾಕಾಲ ಒದಗುವಂತೆ ಉಪ್ಪಿನಕಾಯಾಗಿ ಹಾಕಿಡುತ್ತಿದ್ದರು.

ಬೆಳಕು ಇರಬಾರದು, ಲೋಹದ ಸಂಪರ್ಕವಿರಬಾರದು, ಆಮ್ಲಗಳಿರಬೇಕು, ಆಲ್ಕಲಿಗಳು ಇರಬಾರದು, ಇವನ್ನೆಲ್ಲಾ ಸಾಧಿಸುತ್ತಿದ್ದರು. ಏಕೆ ಹೀಗೆ ಮಾಡಬೇಕು ಎಂಬ ಕಾರಣಗಳು ತಿಳಿಯದೆ ಇದ್ದಿರಬಹುದು ಆದರೂ ಫಲಿತಾಂಶವು ಸ್ಪಷ್ಟ.

ಲಾಗಾಯ್ತಿನಿಂದ ರೂಢಿಯಲ್ಲಿ ಬಂದಿರುವ ಹಲವಾರು ಸಂಪ್ರದಾಯಗಳನ್ನು, ಮೂಢತನ ಎಂದು ಮೊದಲ ನೋಟಕ್ಕೆ ಮೂದಲಿಸದೆ, ಅವುಗಳ ವೈಜ್ಞಾನಿಕ ವಿಶ್ಲೇಷಣೆಯನ್ನು ಮಾಡ ಹೊರಟರೆ, ಪ್ರಪಂಚದ ವಿಜ್ಞಾನಕ್ಕೂ ನಾವು ಹೊಸ ಕಾಣಿಕೆಯನ್ನು ಕೊಡುವಂತಾಗಬಹುದು.

ಮನನ ಮಾಡಬೇಕಾದ ವಿಷಯ.

ಮಾವಿನರಸದ-ತೆರ

ಚಿಕ್ಕ ಹುಡುಗನಾಗಿದ್ದಾಗ ಅನುಭವಿಸಿದ ಒಂದು ಸಂಕಟವು ನೆನಪಿನಲ್ಲಿ ಇನ್ನೂ ದೃಢವಾಗಿದೆ. ಸುಮಾರು ಅರವತ್ತು ವರ್ಷಗಳು ಕಳೆದಿದ್ದರೂ ಆ ನೆನಪು ಮಾಸಿಲ್ಲ. ಅಂದಿನ ಡಾಕ್ಟರು ಸಲಹೆಮಾಡಿದಂತೆ, ಬೆಳಗಾಗುತ್ತಲೂ ಒಂದು ದೊಡ್ಡ ಚಮಚ ಮೀನೆಣ್ಣೆಯನ್ನು ಅಮ್ಮ ಕುಡಿಸುತ್ತಿದ್ದಳು. "ರಿಕೆಟ್ಸ್ ಬಂದುಬಿಟ್ಟಿದೆಯಂತೆ ನಿನಗೆ. ಇದನ್ನು ಕುಡಿದರೆ ಗಟ್ಟಿ ಗಡತವಾಗ್ತೀಯಂತೆ, ಕುಡಿ" ಎಂದು ಹೇಳುತ್ತಾ ಹಾಗೂ "ಬರೆ ಹಾಕಿಬಿಡ್ತೀನಿ ಕುಡಿಯದೆ ಇದ್ದರೆ" ಎಂದು ಬೆದರಿಸುತ್ತ ಮೀನೆಣ್ಣೆಯನ್ನು ಹತ್ತಿರ ತರುತ್ತಿದ್ದಳು. ಆ ದರಿದ್ರ ಮೀನೆಣ್ಣೆಯೋ ಲೋಳೆ ಲೋಳೆಯಾಗಿರೋದು. ಅದರ ವಾಸನೆಯನ್ನು ಈಗ ಜ್ಞಾಪಿಸಿಕೊಂಡರೂ ವಾಕರಿಕೆ ಬರುತ್ತೆ. ಇದನ್ನು ಕುಡಿಯುವ ಬದಲು ಬರೆಹಾಕಿಸಿಕೊಳ್ಳುವುದು ವಾಸಿ ಎಂದೆನಿಸುತ್ತಿತ್ತು.

ಇಂಗ್ಲೇಂಡಿನಲ್ಲಿ ಸೂರ್ಯನ ಪ್ರಕಾಶವು ಬೀಳುವುದು ತುಂಬಾ ಕಡಿಮೆ. ಛಳಿಯವಾತಾವರಣವಿರುವುದರಿಂದ ಅಲ್ಲಿನ ಜನರು ಮೈತುಂಬಾ ಉಡುಪು ಧರಿಸುತ್ತಾರೆ. ಸೂರ್ಯ ರಶ್ಮಿಯು ಮೈಮೇಲೆ ಬೀಳುವುದು ಅತಿವಿರಳ. ಅಲ್ಲಿ ಮೀನೆಣ್ಣೆಯನ್ನು ಮಕ್ಕಳಿಗೆ ರಿಕೆಟ್ಸ್ ಬಾರದೆ ಇರಲಿ, ಎಂದು ಕುಡಿಸುತ್ತಿದ್ದರು. COD ಮೀನಿನ ಲಿವರ್‌ಅನ್ನೇ ರುಚಿ ಎಂದು ತಿನ್ನುವವರಿಗೆ COD LIVER OIL ಬೇಸರ ತರಲಾರದು. ಅಲ್ಲಿಂದ ಬಂದ ಡಾಕ್ಟರುಗಳು, ನಮ್ಮೂರು ಡಾಕ್ಟರುಗಳಿಗೆ ಈ ಪಾಠವನ್ನು ಕಲಿಸಿದರು. ಮಕ್ಕಳಿಗೆ ಕಾಡ್ ಲಿವರ್ ಆಯಿಲ್ ಕುಡಿಸಬೇಕು ಎಂಬ ಪಾಠ ಪಾಶ್ಚಾತ್ಯರಿಂದ ಬಂದಮೇಲೆ, ಶಂಖದಲ್ಲಿ ಬಂದ ತೀರ್ಥ. ಎತ್ತು ಈಯಿತು ಅಂದರೆ ಕೊಟ್ಟಿಗೆಗೆ ಕಟ್ಟಿದಹಾಗೆ ನಮ್ಮವರು ಮಕ್ಕಳಿಗೆ ಈ ಸಂಕಟವನ್ನು ಒಡ್ಡುತ್ತಿದ್ದರು.

ವೈಟಮಿನ್ ಡಿ

ಇತ್ತೀಚೆಗೆ ಕಾಡ್‌ಲಿವರ್ ಆಯಿಲಿನಲ್ಲಿ ರಿಕೆಟ್ಸ್‌ನ್ನು ಪರಿಹರಿಸುವ ಅಂಶವು ವೈಟಮಿನ್ ಡಿ ಎಂದೂ, ಈ ವೈಟಮಿನ್ನನ್ನು ಪರಿಶುದ್ಧಿಸಿ ಮೀನಿನ

ವಾಸನೆ ಇಲ್ಲದಂತೆ ತಯಾರಿಸಬಹುದೆಂದೂ ಕಂಡುಹಿಡಿದರು. ಅನಂತರ 'ವೈಟಮಿನ್ ಡಿ' ಅನ್ನು ಇತರ ಪದಾರ್ಥಗಳಿಂದಲೂ ತಯಾರಿಸಬಹುದು ಎಂದು ರಸಾಯನ ಶಾಸ್ತ್ರಿಗಳು ಕಂಡುಹಿಡಿದರು. STEROLS ಎಂಬ ರಚನೆಯ ವಸ್ತುಗಳನ್ನು ಸೂರ್ಯ ರಶ್ಮಿಯಲ್ಲಿ ಸ್ವಲ್ಪ ಕಾಲ ಕಾಯಿಸಿದರೆ, ಆಗ ವೈಟಮಿನ್ ಡಿ ಉತ್ಪನ್ನವಾಗುತ್ತದೆ ಎಂದು ತೋರಿಸಿದರು. ಎರ್ಗಟ್ ವನಸ್ಪತಿಯಲ್ಲಿ ಎರ್ಗೋಸ್ಟೀರಾಲ್ ಎಂಬುದು ದೊರೆಯುತ್ತದೆ. ಒಂದು ಪ್ರಮಾಣದ ಸೂರ್ಯರಶ್ಮಿಯನ್ನು ವಿರ್ಗೋ ಸ್ಟೀರಾಲ್‌ನ ಮೇಲೆ ಬೀರಿದರೆ, ಇರ್ರ್ಯಾಡಿಯೇಟೆಡ್ ಎರ್ಗೋ ಸ್ಟೀರಾಲ್ ಆಗುತ್ತದೆ. ವೈಟಮಿನ್ ಡಿ ಇನ ರಸಾಯನಿಕ ರಚನೆಯು, ಇರ್ರ್ಯಾಡಿಯೇಟೆಡ್ ಎರ್ಗೋಸ್ಟೀರಾಲ್‌ನಲ್ಲಿಯೂ ಇದೆ. ಇದನ್ನೇ ಮಹಾಯುದ್ಧದ ಕಾಲದಲ್ಲಿ ಸೈನಿಕರಿಗೆ ವೈಟಮಿನ್ ಡಿ ಅನ್ನು ಒದಗಿಸಲು ಬಳಸುತ್ತಿದ್ದರು. ಅನಂತರ ನಡೆಸಿದ ಪ್ರಯೋಗಗಳಿಂದ, ವೈಟಮಿನ್ ಡಿ 1, ಡಿ 2, ಡಿ 3 ಇತ್ಯಾದಿಗಳನ್ನು ಕಂಡುಹಿಡಿದರು.

ನಮ್ಮ ದೇಶದಲ್ಲಿ

1) ನಮ್ಮ ದೇಶದಲ್ಲಿ ಸೂರ್ಯನ ಝಳುವು ವರ್ಷದಲ್ಲಿ ಸುಮಾರು ಕಾಲ ಇರುತ್ತದೆ. ಆದುದರಿಂದಲೇ ಸಾಮಾನ್ಯರ ಉಡುಪೂ ಹಗುರ. ಬಡವರನಕ ಮಾನ ಮುಚ್ಚಲು ಮಾತ್ರ ಬಟ್ಟೆಗಳನ್ನು ಧರಿಸುತ್ತಾರೆ. ಬಿಸಿಲಿನ ಝಳವಿದ್ದರೆ ಮೈ ಬೆವರುವುದೂ ಹೆಚ್ಚು, ಸುರಿದ ಬೆವರು ಒಣಗುವುದೂ ಹೆಚ್ಚು. ಬೆವರಿನಲ್ಲಿ ಸ್ಟೀರಾಲ್ ರಚನೆಯ ವಸ್ತುಗಳೂ ಇರುತ್ತವೆ. ಬಿಸಿಲಿನ ಝಳದಲ್ಲಿ ಬೆವರಿನ ಸ್ಟೀರಾಲ್‌ಗಳು ಇರ್ರ್ಯಾಡಿಯೇಟ್ ಆಗುತ್ತದೆ. ಚರ್ಮದಿಂದ ಇದು ದೇಹಕ್ಕೆ ಹೀರಲ್ಪಡುತ್ತದೆ. ಅಂದರೆ ವೈಟಮಿನ್ ಡಿ ದೇಹಕ್ಕೆ ದೊರೆಯುತ್ತದೆ. ಈ ಕಾರಣದಿಂದ, ಉಷ್ಣವಲಯಗಳ ಅಂದರೆ ನಮ್ಮ ದೇಶದ ಜನರಲ್ಲಿ, ಸೇವಿಸುವ ಆಹಾರದ ವೈಟಮಿನ್ ಡಿ ಅಭಾವವಿದ್ದರೂ ರಿಕೆಟ್ಸ್ ಕಾಣಬರುವುದಿಲ್ಲ. ಏಕೆಂದಿರೆ ಚರ್ಮದಂದ ಅದು ದೊರೆಯುತ್ತದೆ ಎಂದು ವಿಜ್ಞಾನಿಗಳು ಸಿದ್ಧಾಂತ ಮಾಡಿದ್ದಾರೆ.

2) ಅಧಿಕವಾಗಿ ಮಾವಿನ ಹಣ್ಣನ್ನು ನಮ್ಮ ದೇಶದಲ್ಲಿ ಬೆಳೆಯುತ್ತಾರೆ. ಹಣ್ಣು ಫಲಕ್ಕೆ ಬರುವ ಕಾಲದಲ್ಲಿ ಎಷ್ಟು ತಿಂದರೂ, ಇನ್ನೂ ಹಣ್ಣುಗಳು ಉಳಿದು ಹೋಗುತ್ತವೆ. ಇಂತಹ ಹಣ್ಣುಗಳು ಕೆಲವು ದಿನಗಳಲ್ಲಿ ಕೊಳೆತು ಹೋಗುತ್ತವೆ. ವರ್ಷಾಕಾಲ ಕೆಡದಂತೆ ಈ ಹಣ್ಣುಗಳನ್ನು ಇಡಲು ವಿಧಾನಗಳನ್ನು ನಮ್ಮವರು ಹಿಂದೆ ಕಲಿತಿರಲಿಲ್ಲ. ಆದರೆ ಉಳಿದ ಹಣ್ಣುಗಳ ರಸ

ವನ್ನು ಹಿಂಡಿ, ಬಟ್ಟೆಯಮೇಲೆ ಹರಡಿ ಬಿಸಿಲಿನಲ್ಲಿ ಒಣಗಿಸುತ್ತಿದ್ದರು. ಒಂದು ಪದರವು ಚೆನ್ನಾಗಿ ಒಣಗಿದಮೇಲೆ, ಮಾರನೆಯದಿನ ಇನ್ನೊಂದು ಪದರವನ್ನು ಹರಡುತ್ತಿದ್ದರು. ಮಾವಿನ ಹಣ್ಣುಗಳೂ ಬಿಸಿಲಕಾಲದಲ್ಲಿ ಫಲವಾಗುವುದ ರಿಂದ, ಹರಡಿದ ರಸವು ಕೂಡ ಬೇಗ ಒಣಗುತ್ತಿತ್ತು. ಎರಡು ಮೂರು ವಾರ ಗಳಲ್ಲಿ ಒಂದೆರಡು ಅಂಗುಲ ದಪ್ಪವಿರುವ ಮಿಠಾಯಿನ ತರಹ ಇರುವ ಹಲ್ಲೆ ಗಳು ಒದಗುತ್ತಿದ್ದುವು. ಇವನ್ನು ಅಡಿಗೆಯ ಮನೆಯ ಒಲೆಯ ಮೇಲೆ, ಪಾತ್ರೆಗಳಲ್ಲಿಟ್ಟು ತೂಗು ಹಾಕಿಡುತ್ತಿದ್ದರು. ಅಡಿಗೆಯ ಒಲೆಯ ಕಾವಿನಿಂದ, ಹೊಗೆಯಿಂದ, ಹುಳುಹುಪ್ಪಟೆಗಳು, ಹಣ್ಣಿನ ರಸದ ಹಲ್ಲೆಗಳಿಗೆ ತಾಕುತ್ತಿರ ಲಿಲ್ಲ. ಇದನ್ನು ಆಗಿಂದಾಗ್ಗೆ ಮಕ್ಕಳಿಗೆ, ಈಗ ನಾವು ಚಾಕಲೇಟ್ ಪೆಪ್ಪರ ಮೆಂಟುಗಳನ್ನು ಕೊಡುವ ಹಾಗೆ, ಆಗ ಕೊಡುತ್ತಿದ್ದರು. ಆಂಧ್ರದಲ್ಲಿ, ಕೇರಳ ದಲ್ಲಿ, ಕಡಲ ತೀರದ ಕೆನರಾ ಪ್ರದೇಶಗಳಲ್ಲಿ ಈ ತೆರನ ವಾಡಿಕೆಯಿತ್ತು. 'ತೆರ' ಎಂದರೆ ಅಲೆಗಳು ಎಂಬ ಹೆಸರಿತ್ತು, ಕೇರಳದಲ್ಲಿ.

ಮಾವಿನ ಹಣ್ಣಿನ ರಸದಲ್ಲಿ ಸೈಟೋ ಸ್ಟೀರಾಲ್ ಎಂಬ ವಸ್ತುವಿದೆ. ಇದನ್ನು ಬಿಸಿಲಿನ ಝಳದಲ್ಲಿ ಕಾಯಿಸಿದಾಗ, ಇರ್ರ್‍ಯಾಡಿಯೇಟೆಡ್ ಸ್ಟೀರಾಲ್ ಆಗಿ ಪರಿವರ್ತನೆಯಾಗುತ್ತದೆ. ಇದರಲ್ಲಿ ವೈಟಮಿನ್ 'ಡಿ' ತರಹ ರಚನೆಯಿದೆ. ಅದರಂತೆಯೇ ದೇಹದಲ್ಲಿ ಕಾರ್ಯಮಾಡುತ್ತದೆ.

ಅಲ್ಲಗಳೆಯುವುದು ಸರಿಯಲ್ಲ

ಅಂದರೆ ಬಹಳ ಕಾಲದಿಂದಲೂ ಅನೂಚಾನವಾಗಿ ರೂಢಿಗೆ ಬಂದಿರುವ ಪದ್ಧತಿಗಳನ್ನು ಯಾವುದೋ ಕಂದಾಚಾರದ ಪದ್ಧತಿ, ಎಂದು ಅಲ್ಲಗಳೆಯು ವುದು ಸರಿಯಲ್ಲ. ಇವುಗಳ ವಿಶ್ಲೇಷಣೆಯನ್ನು ಮಾಡಿ, ಯಾವುದಾದರೂ ವೈಜ್ಞಾನಿಕ ಸತ್ವವು ಇದೆಯೇ ಎಂದು ಕಂಡುಹಿಡಿಯಬೇಕು. ರಸಾಯನ ಶಾಸ್ತ್ರದ ಪ್ರಚಂಡ ಪ್ರಗತಿಯಿಂದಾಗಿ ಇಂದು ವೈಟ್‌ಮಿನ್ ಡಿ ಬಲು ಅಗ್ಗದ ಬೆಲೆಯಲ್ಲಿ ದೊರೆಯುತ್ತದೆ. ನೋಡಲು ಲಕ್ಷಣವಾದ, ಸೇವಿಸಲು ಸುಖ ವಾದ ರೀತಿಯಲ್ಲಿ ಅದನ್ನು ಇಂದು ಬಳಸಬಹುದು. 'ತೆರ'ವನ್ನೂ ಇಂದು ತಯಾರಿಸಬೇಕು ಎಂದು ನಾನು ಹೇಳುತ್ತಿಲ್ಲ. ಅದರಿಂದ ರಿಕೆಟ್ಸ್ ಅನ್ನು ತಡೆಗಟ್ಟಬಹುದು ಎಂದು ಹೇಳುವಷ್ಟು ಮೂಢನೂ ಅಲ್ಲ.

ಆದರೆ ಇದೇ ರೀತಿಯಲ್ಲಿ ಸಾಂಪ್ರದಾಯಿಕವಾಗಿ ರೂಢಿಯಲ್ಲಿ ಬಂದಿರುವ ಪದ್ಧತಿಗಳನ್ನು ತೆರೆದ ಮನಸ್ಸಿನಿಂದ ಅಭ್ಯಾಸ ಮಾಡಬೇಕು. ಇಂದಿನ ವಿಜ್ಞಾ

ನದ ನೆರವಿನಿಂದ ವಿಶ್ಲೇಷಿಸಬೇಕು. ಆಗ ಹೊಸ ಹೊಸ ಅಂಶಗಳು ಪತ್ತೆಯಾಗಬಹುದು.

ಸರ್ಪಗಂಧಿ

ಉದಾಹರಣೆಗೆ–ಪುರಾತನ ಕಾಲದಿಂದಲೂ ನಮ್ಮಲ್ಲಿ ಸರ್ಪಗಂಧಿಬೇರನ್ನು ಹುಚ್ಚುಬೆಪ್ಪು ಶಿವಲೀಲೆಯಿಂದ ನರಳುತ್ತಿದ್ದವರಿಗೆ, ಔಷಧಿಯನ್ನಾಗಿ ಉಪಯೋಗಿಸುತ್ತಿದ್ದರು. ಪ್ರಯೋಜನವನ್ನು ಕಂಡುಹಿಡಿದುದರಿಂದಲೇ ಇದರ ಬಳಕೆಯು ಸಾರ್ವತ್ರಿಕವಾಯಿತು. ಹಾಗೂ ಮುಂದುವರಿಯಿತು. ನಮ್ಮ ದೇಶದ ವಿಜ್ಞಾನಿಗಳು, ಸರ್ಪಗಂಧಿಯ ವಿಧವಿಧ ರಸಾಯನಿಕ ಭಾಗಗಳನ್ನು ಪ್ರತ್ಯೇಕಪಡಿಸಿದರು. ಯಾವ ಅಂಶವು ಗುಣಕಾರಿಯಾಗುವುದೇ ಎಂದು ಪರೀಕ್ಷಿಸಲು ತೊಡಗಿದರು. ಸ್ತುತ್ಯಪ್ರಯತ್ನ.

ಆರಂಭಶೂರರು ನಾವು; ಮೊದಲ ಚುಂಬನದಲ್ಲಿ ಹಲ್ಲು ಮುರಿದು ಕೊಳ್ಳುವ ಪ್ರಯತ್ನಿಗರು. ಕಾರಣಾಂತರಗಳಿಂದ ಆ ಪ್ರಯತ್ನವು ಅಲ್ಲಿಯೇ ನಿಂತಿತು.

ಎರಡು ದಶಕಗಳನಂತರ ಸರ್ಪಗಂಧಿಯ ಬೇರುಗಳನ್ನು ಟನ್‌ಗಟ್ಟಲೆ ಕೊಂಡು, ಸ್ವಿಟ್ಸರ್‌ಲೆಂಡಿನವರು ತೆಗೆದುಕೊಂಡು ಹೋದರು. ವಿಧವಿಧ ಅಂಶಗಳನ್ನು ಬೇರ್ಪಡಿಸಿ, ಅವುಗಳ ಕಾರ್ಯಗುಣವನ್ನು ಗುರುತಿಸಿದರು. ಸರ್ಪಸಿಲ್ ಎಂಬ ಭಾಗವು ರಕ್ತದ ಒತ್ತಡವನ್ನು ಕಡಿಮೆ ಮಾಡುತ್ತದೆ, ಮನಸ್ಸಿಗೆ ಶಾಂತಿಯನ್ನು ತರುವ ಮೂಲಕ ರಕ್ತದ ಒತ್ತಡವನ್ನು ಇಳಿಸುತ್ತದೆ ಎಂದು ಕಂಡುಹಿಡಿದರು.

ಈ ಹಂತದಲ್ಲಿ ನಾವು ಸರ್ಪಗಂಧಿಯ ಪರೀಕ್ಷೆಯನ್ನು, ರಕ್ತದ ಒತ್ತಡವನ್ನಿಳಿಸುವ ಗುಣಕ್ಕಾಗಲೀ, ಮನಸ್ಸಿಗೆ ಶಾಂತಿಯನ್ನೀಯುವ ಗುಣಕ್ಕಾಗಲೀ ಮಾಡುವುದು ಬಹುಶಃ ವ್ಯರ್ಥ.

ಆದರೆ ಸರ್ಪಗಂಧಿಯನ್ನೂ ಸ್ವಲ್ಪಕಾಲ ಉಪಯೋಗಿಸಿದರೆ, ಭಾರೀ ನೆಗಡಿಯು ಹಿಡಿಯುತ್ತೆ. ಮೂಗು ಕಟ್ಟಿಕೊಳ್ಳುತ್ತೆ. ಇಂತಹ ರೋಗಿಗಳು ಉಸಿರಾಡುತ್ತಾರೆ ಎನ್ನಬಾರದು, ಬುಸುಗುಡುತ್ತಾರೆ ಎನ್ನಬೇಕು.

ಭೀಷ್ಮ ನೆಗಡಿ

ಕೆಲವು ಮನುಷ್ಯರು ವಾಸೋ ಮೋಟಾರ್ ರೈನಿಟಿಸ್ ಎಂಬ ಪ್ರಾಣಾಪಾಯವಿರದ ಆದರೆ ಅಸಾಧ್ಯ ಬೇಸರವನ್ನುಂಟುಮಾಡುವ ಬೇನೆಯಿಂದ

ನರಳುತ್ತಾರೆ. ಇದಕ್ಕೆ ಸೂಕ್ತ ಚಿಕಿತ್ಸೆಯನ್ನು ಯಾರೂ ಕಂಡುಹಿಡಿದಿಲ್ಲ. ಹಲವಾರು ತೆರನ ಉಪಚಾರಗಳನ್ನು ವೈದ್ಯರು ನಡೆಸುತ್ತಾರೆ. ಅಷ್ಟೇ! ಇಂತಹ ಭೀಷ್ಮ ನೆಗಡಿಯೂ ರೆಸರ್ಪಿನ್‌ಇಂದ ಉಂಟಾಗುವ ನೆಗಡಿಯೂ ಒಂದೇ ತೆರನಾಗಿರಬಹುದು ಎಂದು ಶಂಕಿಸುವುದು ಶಾಸ್ತ್ರಸಮ್ಮತ. ತೆರೆದ ಮನಸ್ಸಿನಿಂದ ನಾವು ಪರೀಕ್ಷೆಯನ್ನು ನಡೆಸಬೇಕು. ರೆಸರ್ಪಿನ್‌ನ ಯಾವ ಅಂಶವು ನೆಗಡಿಯನ್ನು ಉಂಟುಮಾಡುತ್ತದೆ ಎಂಬ ಪ್ರಯೋಗ ನಡೆಯಬೇಕು. ಯಾಕೆ ಉಂಟುಮಾಡುತ್ತದೆ ಎಂಬುದು ಮುಂದಿನ ಹೆಜ್ಜೆ. ಈ ತೆರನಾಗಿ ತೆರದ ಮನಸ್ಸಿನಿಂದ ಯಾವ ಅಡ್ಡಿ ತಡೆಗಳನ್ನೂ ಮನಸ್ಸಿಗೆ ತೊಡಿಸದೆ, ಕಂಡ ಅನುಭವಗಳಿಂದ ಸಮಸ್ಯೆಗಳನ್ನು ಊಹಿಸಬೇಕು. ಇದು ಯಾವ ದೊಡ್ಡ ವಿಷಯ ಎಂದು ಅಲ್ಲಗಳೆಯದೆ ಪ್ರಯೋಗಗಳನ್ನು ಮಾಡಬೇಕು.

ವಾಸೊ ಮೋಟಾರ್ ರೈನೈಟಿಸ್ಸಿಗೆ ಯಶಸ್ವೀ ಚಿಕಿತ್ಸೆಯನ್ನು ಕಂಡುಹಿಡಿದವನು ವ್ಯಾಪಾರಿಯಾದರೆ ಬಲು ಬೇಗ ಕೋಟ್ಯಾಧೀಶ್ವರನಾಗುತ್ತಾನೆ. ವಿಜ್ಞಾನಿಯಾಗಿಯೇ ಉಳಿದರೆ ನೋಬೆಲ್ ಪಾರಿತೋಷಕವನ್ನು ಸುಲಭವಾಗಿ ಪಡೆಯುತ್ತಾನೆ ಎಂದು ಖಂಡಿತವಾಗಿ ಹೇಳಬಹುದು.

ನಮ್ಮಲ್ಲಿ ರೂಢಿಯಲ್ಲಿ ಬಂದಿರುವುದನ್ನು ತೆರದ ಮನದಿಂದ ಹಾಗೂ ಸೃಜನಶಕ್ತಿಯ ಸ್ವತಂತ್ರ ಚೇತನದಿಂದ ಅಭ್ಯಾಸಮಾಡುವುದು ಅತ್ಯಗತ್ಯ.

ಮನನ ಮಾಡಬೇಕಾದ ವಿಷಯ.

ವಿಜ್ಞಾನಿಗಳ ಸಂಧ್ಯಾರಾಧನೆ

ಖಗೋಳಶಾಸ್ತ್ರವು ವಿಜ್ಞಾನದ ಒಂದು ಶಾಖೆ. ಮನುಷ್ಯ ದೇಹ ಕಾರ್ಯವನ್ನು ಅಭ್ಯಸಿಸುವ ಫಿಸಿಯಾಲಜಿಯು ವಿಜ್ಞಾನದ ಮತ್ತೊಂದು ಶಾಖೆ. ಮಿದುಳು ಮತ್ತು ನರಗಳ ಕಾರ್ಯವನ್ನು ವಿಶ್ಲೇಷಿಸುವ ಶಾಸ್ತ್ರವು, ಫಿಸಿಯಾಲಜಿಯ ಒಂದು ಉಪಶಾಖೆ. ಖಗೋಳಶಾಸ್ತ್ರಕ್ಕೂ ನರಗಳ ಶಾಸ್ತ್ರಕ್ಕೂ ಯಾವ ಸಂಬಂಧವು ಸಾಧ್ಯ ? ಒಂದಕ್ಕೊಂದು ಅನುವಾಗಬಹುದೇ, ನೆರವು ನೀಡಲು ಸಾಧ್ಯವೇ ? ಗಾದೆ ಹೇಳಿದಂತೆ ಗೋಕುಲಾಷ್ಟಮಿಯಿಂದು ಇಮಾಂಸಾಬಿ, ಕೃಷ್ಣನ ತೊಟ್ಟಿಲನ್ನು ಕಟ್ಟಲು ನೆರವಾಗುತ್ತಾನೆಯೋ ?

ಆಗುತ್ತಾನೆ ಎಂದು ಖಂಡಿತವಾಗಿ ಹೇಳಬಹುದು. ಉದಾಹರಣೆಗೆ—

ಇಂಗ್ಲೆಂಡಿನ ಗ್ರೀನಿಚ್ ಅಬ್ಸರ್ವೇಟರಿಯು ಭೂಲೋಕದಲ್ಲೆಲ್ಲಾ ಪ್ರಸಿದ್ಧವಾದುದು. ಗ್ರೀನಿಚ್ ಮೀನ್ ಟೈಂ ಎಂಬುದು ಕಾಲದ ಪ್ರಮಾಣವನ್ನು ಗುರುತಿಸಲು ಉಪಯೋಗಿಸಲ್ಪಡುವ ಅಳತೆಗೋಲು. ಮ್ಯಾಸ್ಕಿಲೈನ್ (Maskelyne) ಎಂಬ ಹಿರಿಯ ಪಂಡಿತನು ಆ ಅಬ್ಸರ್ವೇಟರಿಯ ಮುಖ್ಯಸ್ಥನಾಗಿದ್ದ. 1796ರಲ್ಲಿ ಗ್ರೀನಿಚ್ ಅಬ್ಸರ್ವೇಟರಿಯಲ್ಲಿ ಒಂದು ಸಣ್ಣ ಅಪವಾದದ ಘಟನೆಯು ನಡೆಯಿತು. ಮ್ಯಾಸ್ಕಿಲೈನ್ ನಡೆಸಿದ ಕೆಲವು ಪ್ರಯೋಗಗಳಿಂದ, ಆತ ಕೆಲವು ಫಲಿತಾಂಶಗಳನ್ನು ಪಡೆದಿದ್ದ. ಆದರೆ ಅವನ ಶಿಷ್ಯನೊಬ್ಬನು ಅದೇ ಪ್ರಯೋಗಗಳನ್ನು ನಡೆಸಿದಾಗ, ಅರ್ಧ ಸೆಕೆಂಡಿನಿಂದ, ಒಂದು ಸೆಕೆಂಡಿನತನಕ ಇರುವ ವ್ಯತ್ಯಾಸಗಳು ಕಂಡುಬಂದುವು. ಈ ವ್ಯತ್ಯಾಸವು ಏಕೆ ಬಂತು ಎಂದು ಮ್ಯಾಸ್ಕಿಲೈನ್ ವಿಶ್ಲೇಷಿಸಲಿಲ್ಲ. ಸತ್ಯವಾದ ವಿಜ್ಞಾನಿಯು ಹಾಗೆ ಮಾಡಬೇಕಾಗಿತ್ತು. ಆದರೆ ಮ್ಯಾಸ್ಕಿಲೈನ್ ಪ್ರಥಮತಃ ಮನುಷ್ಯ, ನಂತರ ವಿಜ್ಞಾನಿ. ಹಾಗಾಗಿ ಅವನ ಮನುಷ್ಯ ಗುಣವು ಈಗ ಮುಂದಾಯಿತು. ಶಿಷ್ಯನು ಪಡೆದ ಫಲಿತಾಂಶಗಳು, ತನಗೆ ದೊರಕಿದ ಫಲಿತಾಂಶಗಳಿಗಿಂತ ವ್ಯತ್ಯಾಸ ಹೊಂದಿದುದರಿಂದ ಅವನಿಗೆ ಸಾಮಾನ್ಯ ಮಾನವನಿಗೆ ಆಗುವಂತೆ ಕೋಪ ಬಂದಿತು. ಶಿಷ್ಯನನ್ನು ಕೆಲಸದಿಂದ ವಜಾ ಮಾಡಿದ.

ಈ ವಜಾಸುದ್ದಿಯು ಚಾಡಿ ಸುದ್ದಿಯ ಕಳೆಯನ್ನು ಹೊಂದಿ ಗ್ರೀನಿಚ್ ಅಬ್ಸರ್ವೇಟರಿಯ ವಾರ್ಷಿಕ ವರದಿಯಲ್ಲಿ ಪ್ರಕಟವಾಯಿತು.

ಹತ್ತು ವರ್ಷಗಳಾದನಂತರ ಈ ವರದಿಯನ್ನು ಜರ್ಮನಿಯಲ್ಲಿ ಪ್ರಸಿದ್ಧ ಖಗೋಳಶಾಸ್ತ್ರಜ್ಞನಾಗಿದ್ದ ಬೆಸ್ಸಲ್ (Bessel) ಎಂಬುವ ಓದಿದ. ಶಿಷ್ಯನಿಗೆ ಯಾಕೆ ಆ ತೆರನ ಫಲಿತಾಂಶಗಳು ದೊರಕಿದುವು ಎಂದವ ಮನನ ಮಾಡಿದ. ನಂತರ ತಾನೂ ಆ ಪ್ರಯೋಗಗಳನ್ನು ನಡೆಸಿದ. ಇತರರಿಂದ ಪಡೆಯಲಾಗಿದ್ದ ಫಲಿತಾಂಶಗಳನ್ನೂ ಅಭ್ಯಾಸ ಮಾಡಿದ. ಹತ್ತು ವರ್ಷಗಳ ಕಾಲ ಸತತ ಅಭ್ಯಾಸವನ್ನು ನಡಸಿದನಂತರ ಆತ ಒಂದು ಸತ್ಯಾಂಶವನ್ನು ಕಂಡು ಹಿಡಿದ. ಅದೇನೆಂದರೆ, ಯಾವುದಾದರೂ ಒಂದು ಘಟನೆಯನ್ನು ನೋಡುತ್ತಿರುವವರಲ್ಲಿ, ಘಟನೆಯು ನಡೆದ ಕಾಲಕ್ಕೂ. ಅದು ಅವರ ಮನಸ್ಸಿಗೆ ತಟ್ಟುವಕಾಲಕ್ಕೂ, ವ್ಯತ್ಯಾಸಗಳಿರುತ್ತವೆ ಎಂಬ ಸತ್ಯಾಂಶ. ಇಬ್ಬರು ಒಂದೆಡೆ ನಿಂತು ದೂರದಲ್ಲಿರುವ ಮರದಮೇಲೆ ಕುಳಿತಿರುವ ಪಕ್ಷಿಯನ್ನು ಒಟ್ಟಿಗೆ ನೋಡುತ್ತಾರೆ, ಅನ್ನಿ. ಒಬ್ಬನ ಮನಸ್ಸಿಗೆ ಪಕ್ಷಿಯು ಕೂತಿರುವುದು ಅರೆಕ್ಷಣದಲ್ಲಿ ತಿಳಿದರೆ, ಇನ್ನೊಬ್ಬನಿಗೆ ಮುಕ್ಕಾಲು ಕ್ಷಣವಾಗುತ್ತದೆ. ಏಕೆಂದರೆ ಒಬ್ಬನ ಮನಸ್ಸು ತಾನು ಕಂಡುದಕ್ಕೆ ಪ್ರತಿಕ್ರಿಯೆಯನ್ನು ಹೂಡಲು ಅರೆಕ್ಷಣ ತೆಗೆದುಕೊಳ್ಳುತ್ತದೆ. ಇನ್ನೊಬ್ಬನ ಮನಸ್ಸು ಮುಕ್ಕಾಲುಕ್ಷಣ. ಅಂದರೆ ವ್ಯಕ್ತಿಯ ಪ್ರತಿಕ್ರಿಯೆಯ ಅಂತರವು ವ್ಯತ್ಯಾಸ ಹೊಂದುತ್ತದೆ ಎಂದು. 'Personal Equation' —ಎಂದು ಇದನ್ನು ಬೆಸ್ಸಲ್ ನಾಮಕರಣ ಮಾಡಿದ. ಈಕ್ಷಿಸುವವನಿಗೆ ವ್ಯಕ್ತಿಶಃ ಅನ್ವಯಿಸುವ ಗುಣವಿದು. ವ್ಯಕ್ತಿ ವ್ಯಕ್ತಿಗಳ ಈ ಗುಣದಲ್ಲಿ ವ್ಯತ್ಯಾಸವೂ ಇರುತ್ತದೆ.

ಬೆಸ್ಸಲ್‌ನ ನಂತರ, ಸುಮಾರು ಮೂವತ್ತು ವರ್ಷಗಳ ಕಾಲ ಖಗೋಳ ಶಾಸ್ತ್ರಜ್ಞರು ತಮ್ಮ ಅಧ್ಯಯನವನ್ನು ಮುಂದುವರಿಸಿದರು. ವಿಜ್ಞಾನದ ಇತರ ಶಾಖೆಗಳ ಪ್ರಗತಿಯಿಂದ ಹಾಗೂ ತಾಂತ್ರಿಕ ಪ್ರಗತಿಯ ಅಸಾಧ್ಯ ಮುನ್ನಡೆಯಿಂದ, ಸ್ವಯಂಚಾಲಿತವಾದ, ತಮ್ಮ ಪಾಡಿಗೆ ತಾವೇ ಕಂಡುದನ್ನು ಗುರುತು ಮಾಡಿಡುವ ಸೂಕ್ಷ್ಮವಾದ ಯಂತ್ರಗಳನ್ನು ಸೃಷ್ಟಿಸಲಾಯಿತು. ಇವುಗಳ ನೆರವಿನಿಂದ 'Personal Equation'ಇನ ನಿಖರವಾದ ಪ್ರಮಾಣವನ್ನು ಕಂಡುಹಿಡಿಯಲು ಸಾಧ್ಯವಾಯಿತು.

ಈ ವಿವರಗಳೆಲ್ಲವೂ ವ್ಹಾನ್ ಹೆಲ್ಮ್ ಹೋಲ್ಟ್ಜ್ ಎಂಬ ಜರ್ಮನ್ ಪ್ರಚಂಡ ವಿಜ್ಞಾನಿಗೆ ತಿಳಿದಿತ್ತು. ಬೆಸ್ಸಲ್ ತನ್ನ ಪ್ರಯೋಗದ ಫಲಿತಾಂಶ

ಗಳನ್ನು ಬಹಿರಂಗ ಪಡಿಸಿದ ಮೇಲೆ ಐವತ್ತು ವರ್ಷಗಳಾದನಂತರ ವ್ಯಾನ್ ಹೆಲ್ಮ್ ಹೋಲ್ಟ್ಸ್ ನರಗಳ ಮೇಲೆ ಅಧ್ಯಯನವನ್ನು ನಡೆಸುತ್ತಿದ್ದ. ಬೆಸ್ಸಲ್ ಮತ್ತು ಇತರ ಖಗೋಳ ವಿಜ್ಞಾನಿಗಳು ಸಾಧಿಸಿದ ತಾಂತ್ರಿಕ ಪ್ರಗತಿಯಿಂದಾಗಿ, ವ್ಯಾನ್ ಹೆಲ್ಮ್ ಹೋಲ್ಟ್ಸ್ ನರಗಳಲ್ಲಿ ಸುದ್ದಿಯು ಹರಡುವುದರ ವೇಗವನ್ನು ನಿಖರವಾಗಿ ಕಂಡುಹಿಡಿದ. ಆ ತನಕ ನರಗಳಲ್ಲಿ ಸುದ್ದಿಯು ತಕ್ಷಣ ಹರಡುತ್ತದೆ ಎಂದು ನಂಬಲಾಗಿತ್ತು. ಇಂದು ಸಾಧಿಸಲಾಗಿರುವ ಮೆದುಳು ಮತ್ತು ನರಗಳ ಶಾಸ್ತ್ರಕ್ಕೂ ಮತ್ತು ಮನಸ್ಸಿನ ವಿಜ್ಞಾನಕ್ಕೂ, ವ್ಯಾನ್ ಹೆಲ್ಮ್ ಹೋಲ್ಟ್ಸ್ ನಡೆಸಿದ ಪ್ರಯೋಗವು ನಾಂದಿಯಾಯಿತು.

ಖಗೋಳ ಶಾಸ್ತ್ರಕ್ಕೂ ಮನಶ್ಶಾಸ್ತ್ರಕ್ಕೂ ಎಲ್ಲಿಂದೆಲ್ಲಿಗೆ ಸಂಬಂಧ ?

ಆದರೂ ವಿಜ್ಞಾನದ ಒಂದು ಶಾಖೆಯು, ಏನೂ ಸಂಬಂಧವಿರದಂತೆ ಕಾಣಿಸುವ, ಇನ್ನೊಂದು ಶಾಖೆಯ ಮೇಲೆ ತೀವ್ರಪರಿಣಾಮವನ್ನು ಬೀರುತ್ತದೆ, ಎಂಬುದು ಈಗ ಖಚಿತವಾಗಿದೆ. ವಿಜ್ಞಾನದ ಎರಡು ಶಾಖೆಗಳು ಸಂಧಿಸುವಲ್ಲಿ, ವಿಜ್ಞಾನಿಗಳು ತುಂಬಾ ಆಸಕ್ತಿಯನ್ನು ಹೊಂದಿರುತ್ತಾರೆ. ಪರಸ್ಪರವಾಗಿ ಎರಡೂ ಶಾಖೆಗಳಿಗೆ, ಇಂತಹ ಅಭ್ಯಾಸವು ತುಂಬಾ ಉಪಕಾರಿಯಾಗುತ್ತದೆ. ಆದುದರಿಂದಲೇ ಉತ್ಸಾಹೀ ವಿಜ್ಞಾನಿಗಳು ಈ ತೆರನ ಸಂಧಿ ಶಾಸ್ತ್ರಗಳನ್ನು Bridge Sciencesಎನ್ನು ಕಂಡಾಗ, ಸಂಧ್ಯಾರಾಧನೆಯನ್ನು ಮಾಡಿ, ತೆರೆದ ಮನಸ್ಸಿನಿಂದ ವಿಶ್ಲೇಷಣೆಯನ್ನು ಮಾಡುತ್ತಾರೆ.

ನಟರಾಜ
The Oscillating Universe

ರೈಲ್ವೆ ನಿಲ್ದಾಣದಲ್ಲಿ ನಿಂತಿರುವಾಗ ದೂರದಿಂದ ಬರುತ್ತಿರುವ ರೈಲು, ಸಿಳ್ಳು ಹಾಕುತ್ತಾ ಬರುತ್ತಿದ್ದರೆ, ಹತ್ತಿರ ಹತ್ತಿರಕ್ಕೆ ಬಂದಂತೆಲ್ಲ, ಸಿಳ್ಳಿನ ಧ್ವನಿಯಲ್ಲಿ ಏರಿಳಿತಗಳನ್ನು ಕೇಳುತ್ತೇವೆ. ರೈಲು ಇಂಜಿನ್ನಿನ ಸಿಳ್ಳು ಒಂದೇ ಪ್ರಮಾಣದಲ್ಲಿರುತ್ತದೆ. ಆದರೂ ಇಂಜಿನ್ನಿನ ವೇಗದೊಡನೆ ಧ್ವನಿಯ ವೇಗವೂ ಮಿಲನವಾಗುವುದರಿಂದ, ವ್ಯತ್ಯಾಸವು ಆದಂತೆ ಕೇಳಿಸುತ್ತದೆ. ಡಾಪ್ಲರ್ ಎಫೆಕ್ಟ್ ಎಂದು ಇದನ್ನು ಕರೆಯುತ್ತಾರೆ. ಧ್ವನಿಯು ಒಂದು ತೆರನ ತರಂಗವಾಹಿನಿ. ಬೆಳಕು ಕೂಡ ಇನ್ನೊಂದು ತೆರನ ತರಂಗವಾಹಿನಿ. ಚಲಿಸುವ ವಸ್ತುವಿನಿಂದ ಬೆಳಕು ಹೊರಬೀಳುತ್ತಿದ್ದರೆ, ಅದನ್ನು ಕಾಣುವ ಕಣ್ಣಿಗೆ, ಅಥವಾ ಸ್ಪೆಕ್ಟ್ರಾಸ್ಕೋಪಿಗೆ, ಕೆಂಪು ಬಣ್ಣವಿರುವ ಕಡೆಗೆ ಬೆಳಕು ವಾಲಿದಂತೆ ಕಾಣಿಸುತ್ತದೆ. ರೆಡ್ ಷಿಫ್ಟ್ ಎಷ್ಟರ ಪ್ರಮಾಣದಲ್ಲಿ ಕೆಂಪಿನ ಕಡೆಗೆ ವಾಲುತ್ತದೆಯೋ, ಅದನ್ನು ಸ್ಪೆಕ್ಟ್ರಾಸ್ಕೋಪಿನಲ್ಲಿ ಅಳೆದು, ಬೆಳಕು ಚೆಲ್ಲುತ್ತಿರುವ ವಸ್ತುವು ಇಂತಿಷ್ಟು ವೇಗದಲ್ಲಿ ಚಲಿಸುತ್ತಿದೆ ಎಂದು ಹೇಳಬಹುದು.

ಉಬ್ಬುತ್ತಿರುವ ಬ್ರಹ್ಮಾಂಡ

ರಾತ್ರಿ ವೇಳೆಯಲ್ಲಿ ಆಕಾಶಗಂಗೆಯನ್ನು ಕಾಣುತ್ತೇವೆ. ನಮ್ಮ ಸೂರ್ಯ ಮಂಡಲವು ಆಕಾಶಗಂಗೆಯಲ್ಲಿ ಒಂದು ಸಣ್ಣ ಚುಕ್ಕೆ ಎಂದೂ ತಿಳಿದಿದ್ದೇವೆ. ಆಕಾಶಗಂಗೆಯ ಹೊರಗಡೆಯಲ್ಲಿ ಕೋಟ್ಯಂತರ 'ನೆಬುಲೆ'ಗಳಿವೆ ; ಕೆಲವು ನೆಬುಲೆಗಳು ಬ್ರಹ್ಮಾಂಡದ ಧೂಳಿನಿಂದ ಕೂಡಿ ತಿರುಪಿನಂತೆ ಕಾಣುತ್ತವೆ ; ಮತ್ತೆ ಕೆಲವು ನಿಜವಾಗಿ ನಕ್ಷತ್ರಗಳ ದ್ವೀಪಗಳಿದ್ದಂತೆ ; ಇಂತಹ ನೆಬುಲೆಗಳನ್ನು ಸ್ಪೆಕ್ಟ್ರಾಸ್ಕೋಪ್ ಅಧ್ಯಯನಕ್ಕೆ ಒಳಪಡಿಸಿದಾಗ, ಅಲ್ಲಿ ಕಾಣಬರುವ ರೆಡ್‌ಷಿಫ್ಟ್‌ನಿಂದ, ನೆಬುಲೆಗಳು ಅತಿ ವೇಗವಾಗಿ ಒಂದರಿಂದ ಇನ್ನೊಂದು ದೂರವಾಗುತ್ತ ಹಾಗೂ ನಮ್ಮಿಂದ ಅಂದರೆ ಸೂರ್ಯಮಂಡಲದಿಂದಲೂ

ದೂರವಾಗುತ್ತ ಚಲಿಸುತ್ತಿವೆ, ಎಂದು ಸಿದ್ಧಾಂತವಾಗಿದೆ. ಅಂದರೆ ಬ್ರಹ್ಮಾಂಡವು ಉಬ್ಬುತ್ತಿದೆ ಎಂದಂತಾಯಿತು.

ಎಷ್ಟು ದಿನಗಳಿಂದ ಈ ರೀತಿ ಬ್ರಹ್ಮಾಂಡವು ಉಬ್ಬಲಾರಂಭಿಸಿತು? ಫ್ರೀಡ್‌ಮನ್ ಮತ್ತು ಐನ್‌ಸ್ಟೈನರ ಕಾಸ್ಮೋಲಾಜಿಕಲ್ ಮಾಡಲ್–ಗುರುತ್ವಾಕರ್ಷಣೆ ಮತ್ತು ಅದರ ವಿರುದ್ಧವಾದ ಉಬ್ಬುವಿಕೆ ಇವರುಗಳ ಲೆಕ್ಕದಲ್ಲಿ, 4500 ಮಿಲಿಯನ್ ವರ್ಷಗಳ ಹಿಂದೆ ಬ್ರಹ್ಮಾಂಡದ ಉಬ್ಬುವಿಕೆಯು ಪ್ರಾರಂಭವಾಗಿರಬೇಕು. ಆಗ ಬ್ರಹ್ಮಾಂಡವು ನ್ಯೂಕ್ಲಿಯರ್ ಫ್ಲೂಯಿಡ್ ಅಣುಗಳಲ್ಲಿರುವ ಅತಿ ಒತ್ತಡದಿಂದ ಕೂಡಿದ ದ್ರವದಿಂದ ತುಂಬಿದ್ದಿರಬೇಕು. ಒಂದು ಕ್ಯೂಬಿಕ್ ಸೆಂಟಿಮೀಟರಿನಷ್ಟು ನ್ಯೂಕ್ಲಿಯರ್ ಫ್ಲೂಯಿಡ್ 250 ಮಿಲಿಯನ್ ಟನ್ ತೂಕವಿರುತ್ತದೆ. ಒಂದು ಚಹಾ ಚಮಚದಲ್ಲಿ ಸುಮಾರು ಐದು ಕ್ಯೂಬಿಕ್ ಸೆಂಟಿಮೀಟರ್ ನೀರು ಹಿಡಿಸುತ್ತದೆ. ಅಂದರೆ ನ್ಯೂಕ್ಲಿಯರ್ ಫ್ಲೂಯಿಡ್‌ನಿಂದ ತುಂಬಿರುವ ಅಣುವನ್ನು ಸ್ಫೋಟಿಸಿದಾಗ ದೈತ್ಯಾಕಾರದ ಪ್ರಮಾಣದಲ್ಲಿ ಶಕ್ತಿಯು ಹೊರಹೊಮ್ಮುತ್ತದೆ ಎಂಬುದು ಸುಲಭವಾಗಿ ಅರ್ಥವಾಗುತ್ತದೆ. ಅತಿ ಒತ್ತಡದ ನ್ಯೂಕ್ಲಿಯರ್ ಫ್ಲೂಯಿಡ್‌ನಿಂದ ತುಂಬಿದ ಬ್ರಹ್ಮಾಂಡವು ಆಗ ಕೇವಲ 440 ಮಿಲಿಯನ್ ಕಿಲೋಮೀಟರುಗಳ ಅಡ್ಡಳತೆಯನ್ನು ಹೊಂದಿರುತ್ತದೆ. ಈಗಿನ ಬ್ರಹ್ಮಾಂಡವು ಒಂದು ಸಾವಿರ ಮಿಲಿಯನ್ ಲೈಟ್ ಈಯರ್ಸ್‌ಗೂ ಹೆಚ್ಚು!!

ಹೀಗೆ ಎಷ್ಟು ಹೊತ್ತು, ಇರುತ್ತದೆ? ಒಂದು ಕ್ಷಣಕ್ಕಿಂತ ಕಡಿಮೆ. ಉಬ್ಬುವ ಶಕ್ತಿಗಳು ಸ್ಫೋಟನೆಮಾಡಿ, ಬೆಳಕಿನ ವೇಗದ ಐದನೆಯ ಒಂದು ಭಾಗದ ರಭಸದಲ್ಲಿ ಹರಡಲಾರಂಭಿಸುತ್ತದೆ. ಬ್ರಹ್ಮನ ಅಂಡವು ಆಗ ಒಡೆದು ಬ್ರಹ್ಮಾಂಡವಾಗಲು ಪ್ರಾರಂಭವಾಯಿತು ಎಂದೂ ಅನ್ನಬಹುದು.

ಇದೊಂದು ಲೀಲೆ

ಈ ಉಬ್ಬುವ, ಉಬ್ಬುತ್ತಿರುವ, ಬ್ರಹ್ಮಾಂಡವು, ಇನ್ನೆಷ್ಟು ಕಾಲ ಹೀಗೆಯೇ ಉಬ್ಬುತ್ತ ಹೋಗುತ್ತದೆ? ಉಬ್ಬುವಶಕ್ತಿಗಳು ಗುರುತ್ವಾಕರ್ಷಣೆಯ ಶಕ್ತಿಯೊಂದಿಗೆ ಸೆಣಸಾಟವನ್ನು ನಿಲ್ಲಿಸುವ ತನಕ. ಓಪಿಕ್ ಮತ್ತು ಸಂಗಡಿಗರು, "ಈಗಾಗಲೇ ಸುಮಾರು 5000 ಮಿಲಿಯನ್ ವರ್ಷಗಳಿಂದ ಬ್ರಹ್ಮಾಂಡವು ಉಬ್ಬುತ್ತಲಿದೆ. ಉಬ್ಬುವಶಕ್ತಿ ಗುರುತ್ವಾಕರ್ಷಣೆಗಳ ಲೆಕ್ಕ ಹಾಕಿ ನೋಡಿದರೆ, ಇನ್ನೂ 10,000 ಮಿಲಿಯನ್ ವರ್ಷಗಳು ಉಬ್ಬುತ್ತಲೇ ಇರುತ್ತದೆ. ಅನಂತರ ಗುರುತ್ವಾಕರ್ಷಣೆಯು ಮೇಲುಗೈ

ಯಾಗಿ, ಬ್ರಹ್ಮಾಂಡವು ಕುಸಿದು ಬೀಳುತ್ತದೆ. ಕುಸಿದು ಬಿದ್ದ ನ್ಯೂಕ್ಲಿಯರ್ ಫ್ಲೂಯಿಡ್ ತುಂಬಿದ ಅಂಡವಾಗಲು 15,000 ಮಿಲಿಯನ್ ವರ್ಷಗಳು ಹಿಡಿಯುತ್ತವೆ" ಎಂದು ಸಿದ್ಧಾಂತ ಮಾಡಿದ್ದಾರೆ. ಈ ಲೆಕ್ಕವು ನಿರ್ದೋಷ ವಾದುದು ಎಂದು ಎಲ್ಲ ವಿಜ್ಞಾನಿಗಳೂ ಒಪ್ಪಿರದಿದ್ದರೂ, ಪ್ರಾಯಶಃ ಇದು ಸರಿಯಿರಬಹುದು ಎಂಬುದು ಸುಮಾರು ವಿಜ್ಞಾನಿಗಳ ಅಭಿಪ್ರಾಯ.

ಅಂದರೆ ಬ್ರಹ್ಮಾಂಡವು, ಅಂಡದ ಮೊದಲ ಹಂತದಿಂದ 15,000 ಮಿಲಿಯನ್ ವರ್ಷಗಳು ಉಬ್ಬುತ್ತಿರುತ್ತದೆ. ನಂತರ ಇನ್ನೂ 15,000 ಮಿಲಿಯನ್ ವರ್ಷಗಳು ಕುಸಿಯುತ್ತದೆ. ಅಂದರೆ ಬ್ರಹ್ಮಾಂಡವು ಉಬ್ಬಿ ಕುಸಿಯುವ ಈ ಲೀಲೆಯು 20,000 ಮಿಲಿಯನ್ ವರ್ಷಗಳ ಕಾಲ ನಡೆಯುತ್ತದೆ; ಒಂದು ಆಟದಲ್ಲಿ.

ಇದು ಇಂದಿನ ವಿಜ್ಞಾನದ ಹಂತದಲ್ಲಿ ಬ್ರಹ್ಮಾಂಡದ ಬಾಳಚರಿತ್ರೆ... ಅಥವಾ ಜಾತಕ ಫಲದೊಂದಿಗೆ.

*

ಬ್ರಹ್ಮನ ದಿನಮಾನ

ಬ್ರಹ್ಮನು ಶೌಚಕ್ಕೆ ಹೋದಾಗ ರಾವಣನು ಇನ್ನೂ ಗರ್ಭದಲ್ಲಿದ್ದನಂತೆ. ಶೌಚ ಮುಗಿಸಿಕೊಂಡು ಬಂದಾಗ, ರಾವಣನ ಆಟ ಎಂದೋ ಮುಗಿದು ಹೋಯಿತು ಎಂದು ಹೇಳಿದರಂತೆ. ರಾವಣನು ಲಕ್ಷಾಂತರ ವರ್ಷ ಇದ್ದ ಎಂದೂ ನಮ್ಮಲ್ಲಿ ಈ ಕತೆಯನ್ನು ಹೇಳಿದವರೇ ಆ ಕತೆಯನ್ನೂ ಕಟ್ಟಿ ಹೇಳಿದರು. ಬ್ರಹ್ಮನ ಶೌಚವು ಅವನ ದಿನದಲ್ಲಿ, ನೂರನೆ ಒಂದು ಪಾಲಿನಷ್ಟು ಅವಧಿಯದಿರಬಹುದು ನಮ್ಮ ಅನುಭವದ ಮೇರೆಗೆ ಎಣಿಸಿದರೆ.

ಬ್ರಹ್ಮನ ದಿನವು 15,000 ಮಿಲಿಯನ್ ವರ್ಷಗಳಾಗಿದ್ದು, ಬ್ರಹ್ಮಾಂಡವು ಉಬ್ಬುತ್ತ ಹೋಗಿರಬೇಕು. ಬ್ರಹ್ಮನ ರಾತ್ರಿಯು 15,000 ಮಿಲಿಯನ್ ವರ್ಷಗಳಾಗಿದ್ದು, ಬ್ರಹ್ಮಾಂಡವು ಕುಸಿಯುತ್ತ ಹೋಗಿರಬೇಕು. ಬ್ರಹ್ಮನ ಅಹೋರಾತ್ರಿಯು 20,000 ಮಿಲಿಯನ್ ವರ್ಷಗಳಾಗಿದ್ದಿರಬೇಕು. ಇದನ್ನು ನಮ್ಮ ಋಷಿಗಳು, ಮನನದಿಂದ ಬ್ರಹ್ಮಸಾಕ್ಷಾತ್ಕಾರವನ್ನು ಮಾಡಿಕೊಂಡು, ತಾವು ಮನಗಂಡುದನ್ನು, ಪುಟ್ಟ ಕತೆಯಂತೆ, ಇತರರಿಗೆ ಅಂದರೆ ಅರಿಯದ ಮಕ್ಕಳಿಗೆ ನಮ್ಮಂತಹವರಿಗೆ ಹೇಳಿರಬಹುದು ಎಂದು ಊಹಿಸುವುದು ನ್ಯಾಯಸಮ್ಮತವಾಗಿದೆ ಎನಿಸುತ್ತದೆ.

ಋಷಿಗಳು ಕಾಲವನ್ನು ವಿಂಗಡಿಸಿ ಬಳಸುತ್ತಿದ್ದ ಕಾಲ ವಿಭಾಗಗಳು, ಅವುಗಳ ಹೆಸರುಗಳನ್ನೂ ನೋಡಿದರೆ, ನಮ್ಮ ಊಹೆಯು ಸಮಂಜಸ ಎನಿಸುತ್ತದೆ. 'ಸಿದ್ಧಾಂತ ಶಿರೋಮಣಿ' ಎಂಬ ಗ್ರಂಥದಲ್ಲಿ ಜ್ಯೋತಿಷ್ಕರು, ಅಂದರೆ ಗ್ರಹಗಳ ಚಲನವಲನಗಳನ್ನೂ, ಮತ್ತು ಬ್ರಹ್ಮಾಂಡವನ್ನೂ ಅಧ್ಯಯನ ಮಾಡುತ್ತಿದ್ದ ಜ್ಯೋತಿಷ್ಕರು, ಬಳಸುತ್ತಿದ್ದ ಪಟ್ಟಿಯನ್ನು ನೋಡಿ :–

30 ಕ್ಷಣ—1 ದಿನ	30 ಕಾಷ್ಠಾ—1 ಕಲಾ
2 ಘಟಿಕಾ—1 ಕ್ಷಣ	18 ನಿಮೇಷ—1 ಕಾಷ್ಠಾ
3 ಕಲಾ—1 ಘಟಿಕಾ	30 ತತ್ಪರಾ—1 ನಿಮೇಷ

ಮತ್ತು 100 ತ್ರುತಿ—1 ತತ್ಸರ

ಅಂದರೆ ತ್ರುತಿ, ಅವರುಗಳ ಅತಿ ಪುಟ್ಟ ಕಾಲದ ಅಳತೆಯು 1/33750 ಸೆಕೆಂಡ್ (ನಮ್ಮ ಈಗಿನ ಸೆಕೆಂಡ್). ನಮ್ಮ ಒಂದು ಸೆಕೆಂಡಿನ ಅವಧಿಯನ್ನು 33,750 ಭಾಗಗಳನ್ನಾಗಿ ಮಾಡಿ, ಗ್ರಹಗಳ ನಕ್ಷತ್ರಗಳ ಗತಿಗಳನ್ನು ಎಣಿಸ ಹೋದವರು ಪ್ರಚಂಡರಾಗಿದ್ದಿರಬೇಕು.

ನಮ್ಮ ಪುರಾತನ ಭೌತವಿಜ್ಞಾನಿಗಳು ಶ್ರೀಧರನ ನ್ಯಾಯ ಕುಂಡಲಿಯು, ಅಥವಾ ಉದಯನನ ಕಿರಣಾವಳಿಯಲ್ಲಿ ಉಲ್ಲೇಖಿಸಿರುವ ಪಟ್ಟಿಯನ್ನು ಬಳಸುತ್ತಿದ್ದರು.

30 ಮುಹೂರ್ತ	=24 ಗಂಟೆಗಳು
30 ಕಲಾ	= 1 ಮುಹೂರ್ತ
30 ಕಾಷ್ಠಾ	= 1 ಕಲಾ
18 ನಿಮೇಷ	= 1 ಕಾಷ್ಠಾ
2 ಲವ	= 1 ನಿಮೇಷ
2 ಕ್ಷಣ	= 1 ಲವ

ಕ್ಷಣಾದ್ವಯಂ ಲವಃ, ಪ್ರೋಕ್ತೋ ನಿಮೇಷಸ್ತು ಲವದ್ವಯಂ.
ಅಷ್ಟಾದಶ ನಿಮೇಷಾಸ್ತು ಕಾಷ್ಠಾ ತ್ರಿಂಶನ್ತು ತಾಃ ಕಲಾ.
ತ್ರಿಂಶತ್ ಕಲಾ ಮುಹೂರ್ತೇಃ ಸ್ಯಾತ್ ತ್ರಿಂಶದ್ರಾತ್ರ್ಯ ಹರೀಚತೆ !
(ಉದಯನ ಕಿರಣಾವಳಿ)

ನ್ಯಾಯವೈಶೇಷಿಕದ 1 ಕ್ಷಣ – 2/45 ಸೆಕೆಂಡ್ !!

*

ಬ್ರಹ್ಮಾಂಡ ಉಬ್ಬುವುದೂ, ಕುಸಿಯುವುದೂ ತಾಳಬದ್ಧವಾದ ಬ್ರಹ್ಮಾಂಡದ ಲೀಲಾ ಕರ್ತೃವಿನ ನೃತ್ಯದಂತೆ ಇದೆ, ಅಲ್ಲವೆ? ಒಂದು ಅವಧಿಯಲ್ಲಿ ಉಬ್ಬುತ್ತಾ ಹೋಗುವುದು.–(ನಮ್ಮಂತೆಯೇ ಅನ್ನಿ). ಆಗ ಆಕಾಶ ಗಂಗೆಯ ನಕ್ಷತ್ರಗಳು, ಸೂರ್ಯಮಂಡಲಗಳು, ಭೂಮಂಡಲ ಮತ್ತು ನಾವು ಎಲ್ಲವೂ ಮೊಟ್ಟೆಯೊಡೆದು ಬಂದ ಕೋಳಿ ಮರಿಯಂತೆ ಬೆಳೆಯುತ್ತ, ಎಲ್ಲೆಲ್ಲೂ ಹರಡುತ್ತ ಹೋಗುವುದು. ತಿರುಗಿ ಎಲ್ಲವೂ ಬ್ರಹ್ಮಾಂಡವು ಕುಸಿಯುವ ಅವಧಿಯಲ್ಲಿ ಸಂಪೂರ್ಣ ನಾಶದತ್ತ, ಪ್ರಳಯದತ್ತ ಸಾಗುವುದು– (ನಮ್ಮಂತೆಯೇ ಅಲ್ಲವೇ).

ಅಂಡದ ಹಂತವು ಒಂದು ತ್ರುತಿಯಷ್ಟು ಮಾತ್ರ ಇರಲು ಸಾಧ್ಯ. ಮತ್ತೆ ಜಗತ್ ಕರ್ತೃವಿನ ನೃತ್ಯದ ಇನ್ನೊಂದು ಹೆಜ್ಜೆ.

ಜಗತ್ ಕರ್ತೃವನ್ನು ನಟರಾಜ ಎಂದು ಕಲ್ಪನೆ ಮಾಡಿ, ಅವನ ನೃತ್ಯವು ತಾಳಬದ್ಧವಾದುದು, 'ರಿಟಾ'ದ ಮಾದರಿಯದು ಎಂದು ಋಷಿಗಳು ಹೇಳಿದರು.

ದಿ ಆಸ್ಸಿಲೇಟಿಂಗ್ ಯೂನಿವರ್ಸ್ ಎಂಬ ಇಂದಿನ ವೈಜ್ಞಾನಿಕ ಕಲ್ಪನೆಯು ನಟರಾಜನ ಕಲ್ಪನೆಯನ್ನು ಸಾಕ್ಷಾತ್ ಪ್ರತಿಬಿಂಬಿಸುತ್ತದೆ, ಅಲ್ಲವೇ ?

ಮನನ ಮಾಡಿ ನುಡಿದ ನಮ್ಮ ಋಷಿಗಳು ನುಡಿದುದನ್ನು ನಾವೂ ಮನನ ಮಾಡಿ ಅರಿಯಬೇಕೆನ್ನಿಸುತ್ತದೆ. ಅತ್ಯಗತ್ಯ ಎಂದೂ ಅನ್ನಿಸುತ್ತಿದೆ.

*

(ನ ಅಂತಂ ನ ಮಧ್ಯಂ ನ ಪುನಃ ತವ ಆದಿಂ
ಪಶ್ಯಾಮಿ ವಿಶ್ವ ಈಶ್ವರ ವಿಶ್ವರೂಪಣ)
ನಾಂತಂ ನಮಧ್ಯಂ. ನಪುನಸ್ತವಾದಿಂ
ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ

– ಎಂಥ ಅರ್ಥಗರ್ಭಿತವಾದ ಶ್ಲೋಕ.

ತಾಯಿಯ ಹಲುಳ್ಳಾಯಿ

ಹಲು ಉಲುಳಾಯಿ
ಹವ್ವಿಯೆಂದೋರ್ರ್ಯಾರು
ಹವಳ ಕದ್ದೋರ್ರ್ಯಾರು
ನಾನಲ್ಲ ನಮ್ಮ ಮಗು ತಂತೂ

ಎಂದು ಜೋಗುಳವನ್ನು ಹಾಡುತ್ತಾ, ತೊಟ್ಟಿಲನ್ನು ತೂಗಿ, ಮಗುವು ನಿದ್ರಿಸುವಂತೆ ಪ್ರೇರೇಪಿಸುವುದು ನಮ್ಮಲ್ಲಿ ಕಾಲಾನುಕಾಲದಿಂದಲೂ ನಡೆದು ಬಂದ ಪದ್ಧತಿ. ಈ ಹಾಡನ್ನು ಹಾಡುವಾಗ, ಎಳೆದೆಳೆದು ಹಾಡಿದರೂ, ತಾಯಂದಿರು ತಾಳವನ್ನು ತಪ್ಪುವುದಿಲ್ಲ. ತಾಳದ ಮೇಲೆ ಗಮನವನ್ನಿಟ್ಟು ಕೊಂಡು, ಹಳ್ಳಿಯ ಹಾಗೂ ದಿಳ್ಳಿಯ ಹೆಂಗಸರು ಹಾಡುತ್ತಾರೆ ಎಂದೇನೂ ಅಲ್ಲ. ಆದರೆ ಸ್ವಾಭಾವಿಕವಾಗಿ, ತಮ್ಮ ಬಾಲ್ಯದಲ್ಲಿ ಕಲಿತುದುದನ್ನು ಹಾಗೆಯೇ ಅನುಸರಿಸಿ ಹಾಡುತ್ತಾರೆ. ತಾಳವೂ ಸರಿಗೂಡಿ ಬರುತ್ತದೆ, ಕಾಲಮಾನದ ಪ್ರಕಾರ, ತಾಳದ ಅಂತರವು ಎಷ್ಟು ಅಂತೀರಿ ?

ಇದೆಂಥ ಸೋಜಿಗ

ಆರೋಗ್ಯವಂತರಲ್ಲಿ ನಾಡಿಯು ನಿಮಿಷಕ್ಕೆ ಎಪ್ಪತ್ತೆರಡು ಬಾರಿ ಸರಾ ಸರಿಯಾಗಿ ಬಡಿಯುತ್ತದೆ. ಹಲುಉಲುಳಾಯಿಯ ತಾಳವೂ ನಿಮಿಷಕ್ಕೆ ಸುಮಾರು ಎಪ್ಪತ್ತೆರಡರ ಹತ್ತಿರವೇ ಇದೆ. ಇದು ಯಾಕೋ ಸೋಜಿಗದ ಆಕಸ್ಮಿಕದಂತೆ ಕಾಣಿಸುತ್ತದೆಯಲ್ಲವೇ ? ಮನನ ಮಾಡುವ.

ಶಿಶುಗಳಿಗೆ ಅಮೆರಿಕಾದ ತಾಯಂದಿರು ಸ್ತನ್ಯಪಾನವನ್ನು ಹೇಗೆ ಮಾಡಿ ಸುತ್ತಾರೆ ಎಂಬ ಸಂಶೋಧನೆಯನ್ನು ಕೆಲವು ವರ್ಷಗಳ ಹಿಂದೆ ಅಮೆರಿಕಾದಲ್ಲಿ ವಿಜ್ಞಾನಿಗಳು ನಡೆಸಿದರು. ಇಂತಹ ಸಂಶೋಧನೆಗಳೆಲ್ಲವೂ ವೈಜ್ಞಾನಿಕವಾಗಿ ಅಮೆರಿಕಾದಲ್ಲಿಯೇ ಸಾಧ್ಯ ! ಅಲ್ಲಿನ ಮನಃಶಾಸ್ತ್ರ ವಿಜ್ಞಾನಿಗಳಿಗೆ, ಮಾನವ ನಡವಳಿಕೆಯನ್ನು ಕುರಿತು ಸಂಶೋಧಿಸುವವರಿಗೆ, ಇಂತಹ ವಿಷಯಗಳಲ್ಲಿ

ಅಸಾಧ್ಯ ಕುತೂಹಲ. ಸಂಶೋಧನೆಯ ಫಲಿತಾಂಶಗಳು ಈ ರೀತಿ ಇದ್ದುವು. ನೂರರಲ್ಲಿ ಎಂಭತ್ತು ಜನ ತಾಯಂದಿರು, ಬಾಗಿದ ಎಡತೋಳಿನ ತೊಟ್ಟಿಲಿನಲ್ಲಿ ಮಗುವಿನ ತಲೆಯನ್ನು ಇರಿಸಿಕೊಂಡು, ಎಡ ಮೊಲೆಯಿಂದ ಹಾಲೂಡಿಸುತ್ತಿದ್ದರು. ಬಲಗೈಯನ್ನು ಇತರ ಕೆಲಸಗಳಿಗೆ ಬಳಸಿಕೊಳ್ಳಲು ಆಗ ಸಾಧ್ಯ; ಆದುದರಿಂದ ಹಾಗೆ ಮಾಡುತ್ತಾರೆ ಎಂದು ಹೇಳಬಹುದು. ಆದರೆ ಎಡಗೈ ಮುಂದಾದ ತಾಯಂದಿರು ಲೊಡ್ಡಗೈಯ್ಯಿನವರು ಅವರೂ ಮಗುವಿಗೆ ಎಡಸ್ತನದಿಂದಲೇ ಹಾಲೂಡಿಸುವುದು ಅತಿಯಾಗಿ ಕಂಡುಬಂದಿತು. ದಿಟ. ಬಲಸ್ತನದಿಂದಲೂ ಹಾಲನ್ನು ಕುಡಿಸುತ್ತಾರೆ. ಆದರೆ ಸರಾಸರಿ ಲೆಕ್ಕಮಾಡಿದಾಗ ಎಡಮೊಲೆಯ ಬಳಕೆಯು ಹೆಚ್ಚಾಗಿದ್ದುದು ಕಂಡು ಬಂತು.

ಏಕೆ ಹೀಗೆ?

ಹಾಲು ಕುಡಿಯುವ ಎಳೆಯ ಮಕ್ಕಳ ನಡವಳಿಕೆಯನ್ನೂ ಪರೀಕ್ಷಿಸಿದರು. ಎಡಸ್ತನ್ಯವನ್ನು ಹಿಡಿದು ಹಾಲು ಕುಡಿಯುವಾಗ ಮಕ್ಕಳು ಶಾಂತರಾಗಿಯೂ, ಸಮಾಧಾನ ಹೊಂದಿದವರೂ ಆಗಿರುತ್ತಿದ್ದರು. ಆದರೆ ಬಲಸ್ತನ್ಯ ಪಾನ ಮಾಡುವಾಗ, ತಂಟೆತಕರಾರನ್ನು ಮಾಡುತ್ತಿದ್ದವು. ಅಂಕಿ ಅಂಶಗಳಂತೆ ಗಮನಾರ್ಹವಾಗಿ ಈ ಫಲಿತಾಂಶಗಳು ಸಾಕ್ಷ್ಯನೀಡಿದುವು. ಏಕೆ ಹೀಗೆ ? ಬಲಮೊಲೆಗಿಂತ ಎಡಮೊಲೆಯು ಶಿಶುಗಳಿಗೆ ಹೆಚ್ಚು ಸಮಾಧಾನವನ್ನು ಏಕೆ ಕೊಡಬೇಕು ?

ಅನಂತರ ವಿಜ್ಞಾನಿಗಳು ಪರೀಕ್ಷಾ ಪ್ರಯೋಗವನ್ನು ನಡೆಸಿದರು. ಆಸ್ಪತ್ರೆಯೊಂದರಲ್ಲಿ ಹುಟ್ಟಿದ ಮಕ್ಕಳನ್ನು ಎರಡು ಗುಂಪುಗಳನ್ನಾಗಿ ಬೇರ್ಪಡಿಸಿದರು. ಒಂದೊಂದು ಗುಂಪಿನಲ್ಲಿ ಒಂಭತ್ತು ಮಕ್ಕಳಿದ್ದುವು. ಮಕ್ಕಳನ್ನು ಮಲಗಿಸಿದ ತೊಟ್ಟಿಲುಗಳನ್ನು ಕೊಠಡಿಯಲ್ಲಿಟ್ಟು, ಆ ಕೊಠಡಿಯಲ್ಲಿ ಟೇಪ್ ರೆಕಾರ್ಡ್‌ರನ್ನು ಇಟ್ಟರು. ಹೃದಯದ ಬಡಿತದ ಸದ್ದುಗಳನ್ನು ರೆಕಾರ್ಡ್ ಮಾಡಿದ ಟೇಪನ್ನು, ಆ ರೆಕಾರ್ಡರ್‌ನಲ್ಲಿಟ್ಟು ನಡೆಸಿದರು. ಹೃದಯವು ಬಡಿಯುತ್ತಿದ್ದಂತೆ ಆದ ಸದ್ದುಗಳು ಕೊಠಡಿಯಲ್ಲಿ ಹದವಾಗಿ ಕೇಳಿಬರುತ್ತಿತ್ತು.

ರೆಕಾರ್ಡರ್‌ಅನ್ನು ನಡೆಸದೆ ಇದ್ದಾಗ, ಕೊಠಡಿಯು ನಿಶ್ಶಬ್ದವಾಗಿದ್ದಾಗ, ಹಲವಾರು ಮಕ್ಕಳು, ಒಂದು ಗಂಟೆಯಲ್ಲಿ ಮೂವತ್ತು ನಲವತ್ತು ನಿಮಿಷ ರಚ್ಚೆ ಹಿಡಿದು ಅಳುತ್ತಿದ್ದುವು. ಆದರೆ ಟೇಪ್ ರೆಕಾರ್ಡರನ್ನು ನಡೆಸಿದಾಗ, ನಿಮಿಷಕ್ಕೆ ಎಪ್ಪತ್ತೆರಡು ಬಾರಿ ಹೃದಯವು ತಮಟೆ ಬಾರಿಸಿದಾಗ ಮಕ್ಕಳು ಗಂಟೆಯೊಂದರಲ್ಲಿ ಕೇವಲ 15–20 ನಿಮಿಷಗಳು ಅಳುತ್ತಿದ್ದುವು.

ಎರಡೂ ಗುಂಪಿನ ಮಕ್ಕಳಿಗೆ, ತೂಕಕ್ಕೆ ತಕ್ಕ ಆಹಾರವನ್ನು ಸಮಸಮ ಕೊಟ್ಟರು. ಒಂದು ಗುಂಪಿನ ಮಕ್ಕಳಿದ್ದ ಕೊಠಡಿಯು ನಿಶ್ಯಬ್ದವಾಗಿತ್ತು. ಇನ್ನೊಂದರ ಕೊಠಡಿಯಲ್ಲಿ ಹೃದಯದ ಬಡಿತದ ರೆಕಾರ್ಡರ್ ನಡೆಯುತ್ತಿತ್ತು. ಕೆಲವು ವಾರಗಳ ನಂತರ, ಪರೀಕ್ಷಿಸಿದಾಗ, ರೆಕಾರ್ಡರ್ ಇದ್ದ ಕೊಠಡಿಯ ಮಕ್ಕಳು ಹೆಚ್ಚು ತೂಕವನ್ನು ಹೊಂದಿದ್ದರು. ಆದರೆ ನಿಶ್ಯಬ್ದದ ಕೊಠಡಿಯ ಮಕ್ಕಳು ಅತ್ತು ಅತ್ತು ರಂಪ ಮಾಡುವುದರಲ್ಲಿ, ಸೇವಿಸಿದ ಆಹಾರದ ಒಂದು ಭಾಗವನ್ನು ಉಪಯೋಗಿಸಿಕೊಂಡಿದ್ದರು. ಆದ ಕಾರಣ ತೂಕದ ಹೆಚ್ಚು ವಿಕೆಯು ಇಳಿಮುಖವಾಗಿತ್ತು.

ಹೃದಯದ ಬಡಿತ

ಸ್ವಲ್ಪ ಬೆಳೆದಿದ್ದ ಅಂದರೆ ಐದು – ಆರು ತಿಂಗಳು ವಯಸ್ಸಾಗಿದ್ದ ಮಕ್ಕಳನ್ನು ಇನ್ನೊಂದು ಪರೀಕ್ಷೆಗೆ ಒಳಪಡಿಸಿದರು. ಹೃದಯದ ಬಡಿತದ ಟೇಪ್ ಇದ್ದ ರೆಕಾರ್ಡರನ್ನು ಒಂದು ಕೊಠಡಿಯಲ್ಲಿ ಇರಿಸಿದರು. ಇನ್ನೊಂದು ಕೊಠಡಿಯು ನಿಶ್ಯಬ್ದವಾಗಿತ್ತು. ಮೂರನೆಯ ಕೊಠಡಿಯಲ್ಲಿ ಟಿಕ್‌ಟಾಕ್ ಸದ್ದು ಮಾಡುವ ಗಡಿಯಾರದಂತಹ, ಮೆಟ್ರೋನೋಮ್ ಎನ್ನುವ ಯಂತ್ರವನ್ನು ಇರಿಸಿದರು. ಮಕ್ಕಳಿಗೆ ಎಷ್ಟು ಹೊತ್ತಿನಲ್ಲಿ ನಿದ್ರೆ ಹತ್ತುತ್ತದೆ ಎಂದು ಪರೀಕ್ಷೆ ಮಾಡಿದರು. ಹೃದಯದ ಬಡಿತವು ಕೇಳಿಸಿದ ಕೊಠಡಿಯಲ್ಲಿದ್ದ ಮಕ್ಕಳು, ಇತರ ಗುಂಪಿನ ಮಕ್ಕಳಿಗಿಂತ, ಅರ್ಧದ ಕಾಲಾವಧಿಯಲ್ಲಿ ನಿದ್ರೆ ಮಾಡಿದುವು. ಹೃದಯದ ಬಡಿತದ ಸದ್ದು ಎಳೆಯ ಮಕ್ಕಳಿಗೆ ತುಂಬಾ ಸಮಾಧಾನವನ್ನು ಕೊಡುತ್ತದೆ; ಆ ತಾಳದಂತೆ ಸದ್ದು ಮಾಡುವ ಮೆಟ್ರೋನೋಮ್ ಈ ರೀತಿಯ ಸಮಾಧಾನವನ್ನು ಕೊಡುವುದಿಲ್ಲ; ಎಂಬುದು ಖಚಿತವಾಯಿತು. ಹೀಗೇಕೆ ?

ತಾಯ ಗರ್ಭದಲ್ಲಿ

ತಾಯಗರ್ಭದಲ್ಲಿರುವಾಗ, ಗರ್ಭಧಾರಣೆಯಾದ ಎರಡು–ಮೂರು ತಿಂಗಳುಗಳಾದಮೇಲೆ, ಒಂದು ತೆರನ ಅರಿವು ಮೂಡುತ್ತದೆ. ಅವುಗಳ ತಲೆಯಮೇಲೆಯೇ ಎಂಬಂತೆ ತಾಯಹೃದಯವು ಬಡಿದುಕೊಳ್ಳುತ್ತಲೇ ಇರುತ್ತದೆ. ತಾಯಗರ್ಭದಲ್ಲಿರುವ ಭ್ರೂಣಗಳಿಗೆ ಈ ಸದ್ದೇ ಮೊದಲು ಕೇಳಿಸುವುದು. ಪ್ರತಿ ನಿಮಿಷವೂ, ಪ್ರತಿ ತಾಸೂ,-ದಿನರಾತ್ರಿ ಎಂಬ ಭೇದವಿಲ್ಲದೆ, ಆರೇಳು ತಿಂಗಳುಗಳ ಕಾಲ, ಈ ಶಬ್ದವನ್ನೇ ಕೇಳುತ್ತಿರುತ್ತವೆ. ಅದೇ

ಅವುಗಳಿಗೆ 'ಲಾಲಿ' ಹಾಡಿದಂತಿರುತ್ತವೆ. ಭ್ರೂಣಗಳು ತೇಲಾಡುವ ನೀರಿನ ತೊಟ್ಟಿಲಿನಲ್ಲಿ ಈ ಶಬ್ದ ತರಂಗಗಳು ತಾಳಕ್ಕೆ ಸರಿಯಾಗಿ ಸುವ್ವಿ ಹಾಡಿದಂತಿರುತ್ತದೆ. ಗರ್ಭದಲ್ಲಿರುವ ಮಕ್ಕಳು ಈ ಶಬ್ದಕ್ಕೆ ಮಾರುಹೋಗಿರುತ್ತವೆ.

ಜನ್ಮ ತಾಳಿದ ಮೇಲೆ, ಹೊರಪ್ರಪಂಚದಲ್ಲಿ ಬಾಳಿ ಬೆಳೆಯುವಾಗಲೂ, ಆ ಸುರಕ್ಷಿತವಾಗಿದ್ದ ಕಾಲದ ಸ್ಮರಣೆಯು ದೃಢವಾಗಿಯೇ ಇರುತ್ತದೆ. ಆದ ಕಾರಣವೇ, ಆ ಶಬ್ದವು ಚೆನ್ನಾಗಿ ಕೇಳಿಸುವ ಹಾಗಾದಾಗ ಮಕ್ಕಳು ನೆಮ್ಮದಿಯಿಂದಿರುತ್ತವೆ. ಆದುದರಿಂದಲೇ ಎಡಸ್ತನ್ಯಪಾನವು ಹೆಚ್ಚು ಹಿತ ಮಕ್ಕಳಿಗೆ, ಏಕೆಂದರೆ ತಾಯಹೃದಯದ ಬಡಿತವು ಆ ಪಕ್ಕದಲ್ಲಿ ತಾನೇ ಲಕ್ಷಣವಾಗಿ ಕೇಳಿಸುವುದು. ತೊಟ್ಟಿಲನ್ನು ತೂಗುವಾಗಲೂ ನಿಮಿಷಕ್ಕೆ ಎಪ್ಪತ್ತೆರಡರ ಸುಮಾರಿಗೆ ತೂಗಿದರೆ, ಮಕ್ಕಳು, ಆರೋಗ್ಯವಂತ ಮಕ್ಕಳು, ಬೇಗ ಮಲಗುತ್ತವೆ.

ಎಷ್ಟು ವೈಜ್ಞಾನಿಕ

ಇವೆಲ್ಲ ಪ್ರಯೋಗಗಳನ್ನು ನಡೆಸಿ, ನಮ್ಮ ತಾಯಂದಿರು, ಪುರಾತನ ಕಾಲದಲ್ಲಿ ಈ ರೀತಿ ನಿರ್ಧರಿಸಿ, ಆಚರಿಸಿದರು ಎಂದೇನೂ ಹೇಳುತ್ತಿಲ್ಲ. ಆದರೆ ಅನುಭವದಿಂದ ಕಲಿತು ಹಲುಉಳ್ಳಾಯಿ ಹಾಡನ್ನು ನಿಮಿಷಕ್ಕೆ ಎಪ್ಪತ್ತೆರಡರ ಸುಮಾರಿನ ತಾಳಕ್ಕೆ ಸರಿಯಾಗಿ ಹಾಡುತ್ತಾ, ಅದೇ ತರಹ ತೊಟ್ಟಿಲನ್ನು ತೂಗುತ್ತಾ, ಮಕ್ಕಳಿಗೆ ನೆಮ್ಮದಿಯ ನಿದ್ರೆಯನ್ನು ತರಿಸುತ್ತಿದ್ದರು. ಮಕ್ಕಳ ಬೆಳವಣಿಗೆಗೂ ಈ ಹಾಡುಗಳಿಂದ ಅನುಕೂಲವಾಗುತ್ತಿತ್ತು. ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳಿಂದ, ಈ ವಿಷಯವು ಖಚಿತವಾಗಿದೆ, ಅಲ್ಲವೇ ?

ತೇನ ವಿನಾ

ಯಾವುದು ಆ ಮರ್ಮ ?

"ಅಂಗೈರೇಖೆಯನ್ನು ನೋಡಿ, ಆ ಜ್ಯೋತಿಷ್ಕ ಶುಕ್ರನಾಡಿಯಲ್ಲಿ ನನ್ನ ಜಾತಕವನ್ನು ತೆಗೆದ. ಫಲವನ್ನು ಓದಿದ. ಚಾಚೂ ತಪ್ಪದೆ ಸರಿಯಾಗಿತ್ತು. ಅದೇನು ಅಚ್ಚರಿಯಪ್ಪ ! ಯಾವ ಪುರಾತನ ಕಾಲದಲ್ಲೊ ಬರೆದಿಟ್ಟಿದ್ದು. ಬರೆದಿಟ್ಟ ಋಷಿಗಳಿಗೆ, ನೂರಾರು ವರ್ಷಗಳ ಮುಂದೆ ನನ್ನಂತಹವನು ಹುಟ್ಟುತ್ತಾನೆ ಎಂದು ಹೇಗೆ ತಿಳಿಯಿತು ?" ಎಂದು ಜನ ಹೇಳುವುದನ್ನು ಕೇಳಿದ್ದೇನೆ. ಆಶ್ಚರ್ಯಪಡುವಂತಹ ಪವಾಡವೇ ಇದು.

ಆದರೆ ಈ ರೀತಿ ಭವಿಷ್ಯವನ್ನು ಹೇಳಿದಾಗ ಹತ್ತರಲ್ಲಿ ಆರೋ ಏಳೋ ಸುಳ್ಳಾಗುತ್ತವೆ. ಮಿಕ್ಕ ಮೂರೋ ನಾಲ್ಕೋ ದಿಟವಾಗುತ್ತವೆ. ಕಾಕತಾಳ ನ್ಯಾಯ ಎಂದು ತಳ್ಳಿಬಿಡಬಹುದು. ಆದರೂ ಈ ಕಾಕತಾಳ ನ್ಯಾಯವು, ಎಲ್ಲ ವಿವರಗಳಲ್ಲಿಯೂ ಸರಿಯಾಗಿರಬೇಕಾದರೆ, ಇವರಲ್ಲಿ ಯಾವುದೋ ಮರ್ಮವಿರಲೇಬೇಕು. ಅದು ನಿತ್ಯವೂ ಸತ್ಯವೂ ಆಗಿರಲೇಬೇಕು.

*

ಭೌತಶಾಸ್ತ್ರದ ಪ್ರಗತಿಯಲ್ಲಿ ಐನ್‌ಸ್ಟೈನ್ ಋಷಿಯದು ಮಹತ್ತರ ಪಾತ್ರ. ಆ ಋಷಿಯು ಸಿದ್ಧಾಂತ ಮಾಡಿಟ್ಟ ಒಂದು ವಿಷಯ ಹೀಗಿದೆ : - ಸೂರ್ಯಮಂಡಲದಲ್ಲಿ ಯಾವ ವಸ್ತುವೇ ಆಗಲಿ, ಬೆಳಕಿನ ವೇಗಕ್ಕಿಂತ ಹೆಚ್ಚು ವೇಗದಲ್ಲಿ ಸಾಗಲು ಅಸಾಧ್ಯ. ಬೆಳಕಿನ ಕಣದ ವೇಗವು ಸೆಕೆಂಡೊಂದಕ್ಕೆ 186284 ಮೈಲಿಗಳು. ಯಾವ ಕಣವೇ ಆಗಲಿ, ಇದಕ್ಕಿಂತ ಹೆಚ್ಚು ವೇಗವನ್ನು ಸಾಧಿಸಲಾರದು.

ಪ್ರೊ. ಸುದರ್ಶನ್ ಜಾಂಡಿ ಅವರು, - ಈ ಸಿದ್ಧಾಂತವನ್ನು ಪ್ರಶ್ನಿಸಿದ್ದಾರೆ. ಕೆಲವು ಪರಿಸ್ಥಿತಿಗಳಲ್ಲಿ ಕೆಲವು ತೆರನ ಕಣಗಳು (ಪಾರ್ಟಿಕಲ್ಸ್)

ಬೆಳಕಿನ ವೇಗಕ್ಕಿಂತಲೂ ವೇಗವಾಗಿ ಸಾಗುತ್ತಿದೆ, ಸಾಗಲು ಸಾಧ್ಯವಿದೆ ಎಂದು ಗಣಿತ ಶಾಸ್ತ್ರದ ಮೂಲಕ ತೋರಿಸಿಕೊಟ್ಟಿದ್ದಾರೆ.

ಇವೆಲ್ಲಾ ಭೌತ ಪ್ರಪಂಚದಲ್ಲಿ ; ವಸ್ತುಪ್ರಪಂಚದಲ್ಲಿ.

*

ಮನಸ್ಸು ಕಂಡಿತು

ಇಂತಹ ಸಿದ್ಧಾಂತಗಳನ್ನು ಮಾಡಿಟ್ಟುದು ಯಾವುದು ? ಋಷಿ ಐನ್‌ಸ್ಟೈನರ, ಪ್ರೊ. ಸುದರ್ಶನ್‌ರ ಮನಸ್ಸು. ಅವರುಗಳು ಮನಸ್ಸನ್ನು ಏಕಾಗ್ರದತ್ತ ನಿಲ್ಲಿಸಿ, ಮನನ ಮಾಡಿದರು, ಧ್ಯಾನ ಮಾಡಿದರು, ಧಾರಣ ಮಾಡಿದರು. ಸಮಾಧಿಸ್ಥಿತಿಯಲ್ಲಿದ್ದಾಗ, ಈ ಸತ್ಯವನ್ನು, ಈ ಸಿದ್ಧಾಂತವನ್ನು ಮನಸ್ಸು ಕಂಡಿತು. ಯಥಾಸ್ಥಿತಿಗೆ ಅವರ ಮನಸ್ಸು ಬಂದಾಗ ಮನಗಂಡ ಸಿದ್ಧಾಂತದ ಸ್ಮರಣೆಯು ಲಕ್ಷಣವಾಗಿತ್ತು, ಅದನ್ನು ಬಹಿರಂಗ ಪಡಿಸಿದರು.

ಮನಸ್ಸು ಒಂದು ತೆರನ ಶಕ್ತಿ. ಧ್ಯಾನ ಧಾರಣದಿಂದ ಈ ಶಕ್ತಿಯನ್ನು ವೃದ್ಧಿಪಡಿಸಬಹುದು. ಎಲ್ಲರಿಗೂ ಸಾಧ್ಯವಿರದೇ ಇರಬಹುದು. ಆದರೆ ಐನ್‌ಸ್ಟೈನ್ ಮತ್ತು ಸುದರ್ಶನ್ ಅವರು ಮನಸ್ಸಿನ ಶಕ್ತಿಯನ್ನು ವೃದ್ಧಿಪಡಿಸಿಕೊಂಡಿದ್ದಾರೆ ಎನ್ನುವುದು ಸ್ವತಃವೇದ್ಯ.

ಮನಸ್ಸು, ಯಾವ ವೇಗದಲ್ಲಿ ಹಾರುತ್ತದೆ, ಅಥವಾ ಚರಿಸುತ್ತದೆ ? ಇದನ್ನು ಯಾರೂ ಅಳೆದು ನೋಡಿಲ್ಲ. ಏಕೆಂದರೆ ಮನಸ್ಸು ಎನ್ನುವ ಶಕ್ತಿ ಇದೆ ಎಂದು ತಿಳಿದಿದೆಯೇ ಹೊರತು, ಅದರ ಸ್ವರೂಪವಾಗಲೀ, ಗುಣಗಳಾಗಲೀ, ಅಳತೆಗೆ ಸಿಕ್ಕಿಲ್ಲ. ಮಾನವನ ಇಂದಿನ ಹಂತದಲ್ಲಿ ಮನಸ್ಸು ಈ ರೀತಿ ಇರುತ್ತದೆ, ಅದರ ಗುಣಗಳು ಹೀಗೆ ಎಂದು ಹೇಳುವುದನ್ನೆಲ್ಲ, ಮನಸ್ಸೇ ಊಹಿಸಿ ಅಥವಾ ಚರ್ಚಿಸಿ, ಅಥವಾ ಸ್ಫೂರ್ತಿಯಿಂದ ಹೇಳಿದೆ. ಕಳ್ಳ ಹೇಳಿದ ಸಾಕ್ಷ್ಯವನ್ನು ಪರಿಶೀಲಿಸದೆ, ಒಪ್ಪಬಾರದು. ಅಂತೆಯೇ ಮನಸ್ಸು ಮನಸ್ಸನ್ನು ವಿವರಿಸುವಾಗ, ಎಚ್ಚರದಿಂದ ಒಪ್ಪಬೇಕು.

ಆದರೂ ಮನಸ್ಸು ಒಂದು ವಸ್ತುವಲ್ಲ, ಅಷ್ಟು ಮಾತ್ರ ಒಪ್ಪಬಹುದು. ಈ ಕ್ಷಣದಲ್ಲಿ ನಾನು ಚಂದ್ರನನ್ನು ಮನಸ್ಸಿನಲ್ಲಿ ಸ್ಮರಿಸಿದರೆ, ನೀಲ್ ಆರ್‌ಮ್‌ಸ್ಟ್ರಾಂಗ್ ಅದರ ಮೇಲೆ ಹೆಜ್ಜೆಯಿಟ್ಟಿದ್ದು ನೆನಪಾಗುತ್ತದೆ. ಅಂದರೆ ನನ್ನ ಮನಸ್ಸು ನೀಲ್‌ನ ಜತೆಗೂ ಒಂದಾಗಿ, ಅವನು ಹೆಜ್ಜೆ ಇಟ್ಟಾಗಲೂ ಒಂದಾಗಿರುತ್ತದೆ. ಅಂದರೆ ಸೆಕೆಂಡಿನ ಒಂದು ಅತ್ಯಲ್ಪ ಭಾಗದಲ್ಲಿ ನನ್ನ

ಮನಸ್ಸು ಎರಡೂವರೆ ಲಕ್ಷ ಮೈಲಿಗಳ ಚಂದ್ರನ ಬಳಿಗೆ ಹೋದ ಹಾಗೆಯೇ. ಮನಸ್ಸು ಬೆಳಕಿನ ವೇಗಕ್ಕಿಂತ ಬಲುಪಾಲು ಹೆಚ್ಚಾಗಿ ಸಾಗಬಲ್ಲದು ಎಂದಂತೆ ಆಯಿತು.

ಅತಿಮಾನಸಸ್ಥಿತಿ

ಇದರ ಪರಿಣಾಮವು ಏನಾಗಬಹುದು ?

ಧ್ಯಾನ ಧಾರಣದಿಂದ ಮನಸ್ಸನ್ನು ಬಿಗಿದು ನಡೆಸಿದರೆ, ಆಗ ಅದು ಅತಿ ವೇಗದಿಂದ, ವಸ್ತುಪ್ರಪಂಚದಿಂದ, ದೂರವಾಗುತ್ತದೆ. ಧ್ಯಾನ ಧಾರಣದಿಂದ ಮನಸ್ಸನ್ನು ನಿಯಂತ್ರಿಸಲು, ಮಸಲಾ ಐದು ವರ್ಷಗಳಾದುವು ಅನ್ನಿ. ಸಮಾಧಿಸ್ಥಿತಿಗೆ ಬಂದಾಗ, ಮನಸ್ಸು ಬಲುಮುಂದೆ ಎಂದರೆ, ಐವತ್ತೋ ಐದುನೂರೇ ವರ್ಷಗಳಷ್ಟು ಮುಂದಿರುತ್ತದೆ. ಆ ಹಂತದಿಂದ ಆ ಸ್ಥಿತಿಯಲ್ಲಿರುವ ಮನಸ್ಸು ವಸ್ತುಪ್ರಪಂಚದ ಸ್ಥೂಲ ದೃಷ್ಟಿಯನ್ನು ಪಡೆಯುತ್ತದೆ. ಸಮಾಧಿಸ್ಥಿತಿಯಿಂದ ಸಾಮಾನ್ಯಸ್ಥಿತಿಗೆ ಇಳಿದ ಮೇಲೂ ಈ ದೃಷ್ಟಿಯು ಕೆಲ ಕಾಲ ಇರುತ್ತದೆ. ಇಂತಹ ದೃಷ್ಟಿಗೆ ಕಾಣಿಸುವ ವಸ್ತು ಪ್ರಪಂಚವು, ಇನ್ನು ಐವತ್ತೋ ಐದುನೂರೋ ವರ್ಷಗಳಾದಮೇಲೆ ಇರಬಹುದಾದ ಪ್ರಪಂಚ. ಹಾಗಾಗಿ ಈ ತೆರನ ದೃಷ್ಟಾರರು ನುಡಿದುದು, ಹಲವಾರು ವರ್ಷಗಳಾದ ಮೇಲೆ ನಡೆಯುತ್ತದೆ. ಎಂತಹ ಮಹಾತ್ಮರಪ್ಪ! ಭವಿಷ್ಯದ ಅರಿವು ಇದ್ದಿತು ಅವರಿಗೆ! ಎಂದು ಅಚ್ಚರಿಪಡುತ್ತೇವೆ. ಮುಂದಿನ ಐವತ್ತೋ, ಐದುನೂರೋ ವರ್ಷಗಳು, ಎನ್ನುವ ಅವಧಿಯು, ಧ್ಯಾನಧಾರಣದ ತೀಕ್ಷ್ಣತೆಯನ್ನು ಅವಲಂಬಿಸಿರುತ್ತದೆ. ಬೆಳಕು, ಲೇಸರ್ ಆಗಿ ನಿಯಂತ್ರಿತಗೊಂಡಾಗ, ಬೆಳಕಿಗಿಂತ ಅತಿ ತೀಕ್ಷ್ಣವಾದ ಜ್ವಾಲೆಯಾಗುತ್ತದೆ. ಅದೇ ತರಹ ಮನಸ್ಸು, ಧ್ಯಾನ ಧಾರಣದಿಂದ ನಿಯಂತ್ರಿತಗೊಂಡಾಗ, ಅತಿ ಚುರುಕಾಗುತ್ತದೆ, ಅತಿಮಾನಸ ಸ್ಥಿತಿಯನ್ನು (ಸೂಪ್ರಮೆಂಟಲ್ ಸ್ಟೇಟ್) ಪಡೆಯುತ್ತದೆ.

*

ಧ್ಯಾನ ಧಾರಣದಿಂದ

ಮೂರೋ ನಾಲ್ಕೋ, ಕೆಲವು ಅನ್ನೋಣ; ಶತಮಾನಗಳ ಹಿಂದೆ ಶುಕ್ರನಾಡಿಯನ್ನು ನುಡಿದ ಮಹನೀಯರು, ತಮ್ಮ ಮನಸ್ಸನ್ನು ಈ ರೀತಿ ಧ್ಯಾನ ಧಾರಣದಿಂದ ನಿಯಂತ್ರಿಸಿದ್ದರೇನೊ! ಇದು ನಮ್ಮ ಭರತಖಂಡದಲ್ಲೇ

ಸಾಧ್ಯ. ಸಂಸ್ಕೃತ ಕಲಿತವರಲ್ಲೇ ಸಾಧ್ಯ ಅಥವಾ ತಮಿಳು ಕಲಿತವರೇ ಹೀಗೆ ನುಡಿದರು ಎಂದೇನೂ ಅಲ್ಲ.

ಹದಿನಾರನೆಯ ಶತಮಾನದಲ್ಲಿ ನಾಸ್ಟ್ರಾಡೊಮಸ್ ಎಂಬುವ ಫ್ರಾನ್ಸಿನಲ್ಲಿ ವೈದ್ಯನಾಗಿದ್ದ. ಜ್ಯೋತಿಷ್ಯವು ವೈದ್ಯನಿಗೆ ಬೆಂಬಲ ನೀಡುತ್ತಧೆಂದು ನಂಬಿ ಆತ ಜ್ಯೋತಿಷ್ಯವನ್ನು ಅಭ್ಯಾಸಮಾಡತೊಡಗಿದ. ತೀವ್ರವಾಗಿ ಮನನ ಮಾಡಿದಾಗ, ಮನಗಂಡುದನ್ನು ಆತ ಬರೆದಿಟ್ಟ. ಅರೆಕಲ್ಸ್ ಆಫ್ ನಾಸ್ಟ್ರಾಡೊಮಸ್ ಎನ್ನುವ ಆ ಪುಸ್ತಕದಲ್ಲಿ ಕಳೆದ ಮೂರು ಶತಮಾನಗಳಲ್ಲಿ ನಡೆದ ಪ್ರಪಂಚದ ಹಿರಿಯ ಘಟನೆಗಳು ಸೂಚಿಸಲ್ಪಟ್ಟಿವೆ. ಅತ್ಯಚ್ಚರಿಯಾಗುವಂತೆ ಭವಿಷ್ಯವನ್ನು ಹೇಳಿದ, ಎಂದವ ಪಾಶ್ಚಾತ್ಯರಲ್ಲಿ ಪ್ರಸಿದ್ಧನಾಗಿದ್ದಾನೆ.

ಆದರೆ ಭವಿಷ್ಯವನ್ನು ಸತ್ಯವಾಗಿ ಹೇಳಬಹುದು ಎಂದು ಒಪ್ಪಬೇಕು.

*

ಹೀಗೆ ಒಪ್ಪಿದರೆ, ಇನ್ನೊಂದು ತಾಪತ್ರಯವು ಹುಟ್ಟಿಕೊಳ್ಳುತ್ತದೆ. ಇನ್ನೂರು ವರ್ಷಗಳ ಮೇಲೆ ಹೀಗಾಗುತ್ತೆ ಎಂದು ಇವತ್ತೇ ಭವಿಷ್ಯ ಹೇಳಿದರೆ, ಅದು ದಿಟವಾದರೆ, ಪ್ರಪಂಚದಲ್ಲಿ ಹೀಗೆ ಹೀಗೆ, ಈ ಈ, ಕಾಲಕ್ಕೆ ನಡೆಯಲೇಬೇಕು ಎಂದು ತೀರ್ಮಾನವಾಗಿರಲೇಬೇಕು. ಹಾಗಾಗಿದ್ದರೆ ಮನುಷ್ಯನ ಸ್ವಪ್ರಯತ್ನ ಎನ್ನುವುದು ಶುದ್ಧ ಸುಳ್ಳು ಎನ್ನಬೇಕು. ಇದನ್ನು ಒಪ್ಪಿಕೊಳ್ಳಲು ಯಾರಿಗೂ ಇಷ್ಟವಿಲ್ಲ.

ದಿಟ-ಸುಳ್ಳು

ಮೃಗಾಲಯದಲ್ಲಿ ಹುಲಿಗಳನ್ನು ಇಟ್ಟಿದ್ದಾರೆ. ಭವಿಷ್ಯ ಹೇಳಿದವರು, ಹುಲಿಗಳು ಮೃಗಾಲಯದಲ್ಲಿ ಇರುತ್ತವೆ ಎನ್ನುತ್ತಾರೆ. ಆದರೆ ಹುಲಿಯು ಬೋನಿನೊಳಗಿರಬಹುದು, ಅಥವಾ ಬೋನಿನ ಹಿಂದಿರುವ ಬಯಲಿನಲ್ಲಿ ಬಿಸಿಲು ಕಾಯುಸುತ್ತಿರಬಹುದು ಅಥವಾ ಇನ್ನೊಂದು ಹುಲಿಯೊಂದಿಗೆ ಸರಸವಾಡುತ್ತಿರಬಹುದು. ಇವೆಲ್ಲ ಅದರ ಸ್ವಪ್ರಯತ್ನ.

ಬಾಳ ಸಂತೆ ಎನ್ನುವ ಮೃಗಾಲಯದಲ್ಲಿ ನಾವೂ ಇದ್ದೇವೆ. ಪುರುಷ ಪ್ರಯತ್ನ ಎನ್ನುವುದೆಲ್ಲ ಮೃಗಾಲಯದಲ್ಲಿ ಸೆರೆಯಾಗಿರುವ ಹುಲಿಯ ಚಲನ ವಲನಗಳಂತೆ. ಅಂತಹ ಬಾಳು ಕೂಡ ಕೆಲವು ದಶಕಗಳಷ್ಟು; ಸಹಸ್ರಾರು

ವರ್ಷಗಳ ಮಾನವ ಜೀವನದಲ್ಲಿ, ವ್ಯಕ್ತಿಯ ಬಾಳು ಅಲ್ಪ. ಭವಿಷ್ಯಕಾರರು ನುಡಿಯುವಾಗ ಸಹಸ್ರಾರು ವರ್ಷಗಳ ಮಾದರಿಯನ್ನು ಮುಂದಿಡುತ್ತಾರೆ. ಆ ದೃಷ್ಟಿಯಿಂದ, "ತೇನ ವಿನಾ ತೃಣಮಪಿ ನ ಚಲತಿ" ಎಂಬುದು ಸತ್ಯ. ಆ ಮಾದರಿಯಲ್ಲೇ ನಡೆಯುವ ವ್ಯಕ್ತಿಗೂ ಭವಿಷ್ಯವೂ ಅನ್ವಯಿಸಲೇಬೇಕು. ಹೀಗಾಗುವುದರಿಂದಲೇ ಕೆಲವು ವೇಳೆ ಭವಿಷ್ಯವು ದಿಟವಾಗುತ್ತದೆ. ಹಲವಾರು ವೇಳೆ ಸುಳ್ಳಾಗುತ್ತದೆ. ವ್ಯಕ್ತಿಗಳೆಲ್ಲ ಒಂದೇ ಮಾದರಿಯಂತೆ ಇರುವುದಿಲ್ಲವಲ್ಲ!

ಪಂಡಿತ ಪುತ್ರ

ಆನೆ ಹೊಟ್ಟೆಯಲ್ಲಿ ಹೆಗ್ಗಣ

ಮೊದಲ ಸಲ ಆ ಪಂಡಿತರನ್ನು ನೋಡಿದಾಗ, ಅವರ ತೇಜೋಮಯ ಮುಖವನ್ನು ಕಂಡಾಗ, ಅವರ ಹಿತೋಪದೇಶವನ್ನು ಕೇಳಿದಾಗ, ಸಾಷ್ಟಾಂಗ ವೆರಗಿದೆ. ಇಂತಹವರ ಪಾದಸೇವೆಯನ್ನು ಮಾಡುವುದೇ ಪುಣ್ಯ ಎಂದೆನಿಸಿತು. ಕೆಲವು ಕಾಲದ ಮೇಲೆ ಅವರ ಒಬ್ಬನೇ ಮಗನ ಪರಿಚಯವಾಯಿತು. ಶುದ್ಧ ಶುಂಠತ್ವಕ್ಕೆ ಅವನನ್ನು ಬಿಟ್ಟರೆ ಬೇರೊಬ್ಬರಿರಲಾರರು ಅನ್ನಿಸಿತು. ಪಂಡಿತ ಪುತ್ರ ಎಂದು ಜನ ಹೀಯಾಳಿಸುವುದನ್ನು ಕೇಳಿದ್ದೇನೆ. ಆದರೆ ಹೀಗೆ ಯಾಕೆ ಆಗಬೇಕು. ಆನೆ ಹೊಟ್ಟೆಯಲ್ಲಿ ಹೆಗ್ಗಣ ಹೇಗೆ ಹುಟ್ಟುತ್ತೆ?

ಉಷಃಕಾಲದಲ್ಲಿ ಎದ್ದು ಗುರುಗಳು ನಿಯಮಿಸಿದಂತೆ ಪಾಠ ಪ್ರವಚನ ಗಳನ್ನು ಶ್ರದ್ಧೆಯಿಂದ ಅಧ್ಯಯನವನ್ನು ಸಾಕಷ್ಟು ಕಾಲ ಮಾಡಿದರೆ, ಆನು ವಂಶಿಕವಾಗಿ ಬಂದ ಬುದ್ಧಿಯೂ ಸಾಕಷ್ಟು ಇದ್ದರೆ, ಅಂತಹವನು ಕಾಲಾನು ಕಾಲದಲ್ಲಿ ಪಂಡಿತೋತ್ತಮನಾಗುತ್ತಾನೆ. ತಾನು ಕಲಿತುದನ್ನು, ತನ್ನ ಬುದ್ಧಿಯ ಒರೆಗೆ ಹಾಕಿ, ಜ್ಞಾನಾರ್ಜನೆಯನ್ನು ಮಾಡುತ್ತಾನೆ. ಆಗ ವಾಕ್ ಸ್ಫುಟವು ತಾನಾಗಿಯೇ ಸಿದ್ಧಿಸುತ್ತದೆ. ಸುಲಭವಾಗಿ ಬೋಧಿಸುವ ಗುರುವೂ ಆಗುತ್ತಾನೆ. ಶಿಷ್ಯರ ಅವಿಚ್ಛಿನ್ನ ಗೌರವ ಮತ್ತು ಭಕ್ತಿಯನ್ನೂ, ಸಮಾಜ ದಲ್ಲಿ ಮನ್ನಣೆಯನ್ನೂ ಪಡೆಯುತ್ತಾನೆ. ದಿನವಿಡೀ ಜ್ಞಾನಾರ್ಜನೆಯನ್ನೂ ಜ್ಞಾನ ಪ್ರಸಾರವನ್ನೂ ಮಾಡುತ್ತಾನೆ.

ಇಂತಹ ಪಂಡಿತನೂ ಮೂಲತಃ ಒಬ್ಬ ಮನುಷ್ಯನೇ ಅಲ್ಲವೇ? ಮಾನವ ಸಹಜವಾದ ಬೇಡಿಕೆಗಳು ಇವನನ್ನೂ ಕಾಡಲೇಬೇಕು. ತರಹಾವಾರಿ ಹಸಿವು ಆಗಲೇಬೇಕು.

ಯಾವುದೋ ಕಾವ್ಯದ ಪಂಕ್ತಿಗಳನ್ನು ಗುಣುಗುತ್ತಿರುತ್ತಾನೆ. ಭಾವ ಸಮಾಧಿಯಲ್ಲಿರುವಾಗ, ಗುಣುಗುತ್ತಿರುವ ಪಂಕ್ತಿಗಳು ಸೂಚಿಸುವ ಅಥವಾ

ವರ್ಣಿಸುವ ದೃಶ್ಯದಲ್ಲಿ ತಾನೂ ಒಂದಾಗಿರುತ್ತಾನೆ. ಕವಿ ಕಲ್ಪನೆಯಾದ ಆ ದೃಶ್ಯದೊಂದಿಗೆ, ತನ್ನತನವನ್ನು ತಾತ್ಕಾಲಿಕವಾಗಿ ಕಳೆದುಕೊಂಡ ಪಂಡಿತನು ತನ್ನ ಕಲ್ಪನಾ ದೃಶ್ಯವನ್ನೂ ಸಮನ್ವಯಗೊಳಿಸಿರುತ್ತಾನೆ. 'ಸಮಾನಧರ್ಮಿ' ಯಾಗುತ್ತಾನೆ.

ಬಕಾಸುರನ ಜ್ಞಾಪಕ

ಪರಾತ್ತನೆ ಬಕಾಸುರನ ಜ್ಞಾಪಕವು ಬರುತ್ತದೆ. ಅವನ ಊಟದ ವೈಭವ ವರ್ಣನೆಯೂ ನೆನಪಾಗುತ್ತದೆ. ಏಕೆ? ಪಂಡಿತನ ಹೊಟ್ಟೆ ತಾಳ ಹಾಕಲಾ ರಂಭಿಸಿರುತ್ತದೆ. ಹೊಟ್ಟೆಯ ತಾಳವು ಭಾವಸಮಾಧಿಯಿಂದ ಪಂಡಿತನನ್ನು ಜಗ್ಗಿ ಇಳಿಸುತ್ತದೆ. ಹೊಟ್ಟೆಯು ತಾಳ ಹಾಕುವುದೂ ಅಭ್ಯಾಸವಾಗಿದ್ದ ಹೊತ್ತಿನಲ್ಲಿ, ಅಡಿಗೆಯ ಮನೆಯಿಂದ ಊಟದ ವಾಸನೆಯೂ ಹೊರಸೂಸುತ್ತಿರುತ್ತದೆ.

ಈ ಸ್ಥಿತಿಯಲ್ಲಿ ಪಂಡಿತ ಹಸಿದ ಹುಲಿಯಂತೆ ಆಗಿರುತ್ತಾನೆ. ಹುಲಿಯಂತೆಯೇ ರಭಸದಿಂದ ಊಟದ ಮನೆಗೆ ನುಗ್ಗುತ್ತಾನೆ. ಹಸಿದ ಹುಲಿ ದನವನ್ನು ಗಬಗಬ ಅಂತ ಮುಕ್ಕುವಂತೆ, ಪಂಡಿತನೂ ಬಡಿಸಿದುದನ್ನು ಕಂಠ ಪೂರ್ತಿ ಮುಕ್ಕುತ್ತಾನೆ. ಉಣ್ಣುವ ಪದಾರ್ಥದ ರುಚಿ, ಶೃಂಗಾರ, ಇವುಗಳ ಮೇಲೆ ಅವನ ಗಮನವು ಹೆಚ್ಚಾಗಿರುವುದಿಲ್ಲ. ಹೊಟ್ಟೆಯನ್ನು ಭಾರವಾಗಿಸುವ ಪ್ರಮಾಣದ ಮೇಲೆಯೆ ಅವನ ಗಮನ. ಹಿಡಿದು ತಿಂದ ಮೇಲೆ ಹುಲಿ ಯಂತೆಯೇ ನೆರಳಿಗೆ ಹೋಗಿ ಬಿದ್ದುಕೊಳ್ಳುತ್ತಾನೆ.

ಇದು ಶುದ್ಧ ಸುಳ್ಳು. ನಾವು ಕಂಡ ಪಂಡಿತರುಗಳು ಎಂತಹ ರಸಿಕರು! ತುತ್ತು ತುತ್ತಿಗೂ ಮುತ್ತು ಕೊಟ್ಟು ನಂತರ ಮೆಲ್ಲುತ್ತಾರೆ. ಬಲು ಭರ್ಜರಿ ಯಾಗಿ ರಸಾಸ್ವಾದನೆಯನ್ನು ಮಾಡುತ್ತಾರೆ, ಎಂದು ಓದುಗರು ಅನ್ನ ಬಹುದು. ಇದನ್ನು ನಾನೂ ಒಪ್ಪುತ್ತೇನೆ. ಆದರೆ ರಸಿಕಪಂಡಿತರ ಮಕ್ಕ ಳನ್ನು 'ಪಂಡಿತ ಪುತ್ರ' ಎಂದು ಕರೆಯುವುದಿಲ್ಲ. ಇಂತಹವರ ಮಕ್ಕಳು ತಂದೆ ತಾಯಿಯರಂತೆಯೇ ರಸಿಕರಾಗುವ, ಜಾಣರೂ ಆಗುವ ಸಂಭವವೇ ಹೆಚ್ಚು. 'ಪಂಡಿತ ಪುತ್ರ'ರ ಜನ್ಮದಾತರಾದ ಪಂಡಿತರ ವಿಶ್ಲೇಷಣೆಯನ್ನು ಮಾಡಲೆತ್ನಿ ಸುತ್ತಿದ್ದೇನೆ. ಅಂತಹವರು ನಾನು ವಿವರಿಸಿದ ರೀತಿಯಲ್ಲಿ ಊಟಮಾಡುವುದು; ಊಟ ಅನ್ನಬಾರದು, ಹುಲಿಯಂತೆ ಅವರೂ ಆಹಾರವನ್ನು ನುಂಗುತ್ತಾರೆ ಎನ್ನಬೇಕು. ತಾನು ತಿನ್ನುವ ದನವು ಲಕ್ಷಣವಾಗಿದೆಯೇ? ಮೈ ತುಂಬಿ

ಕೊಂಡಿದೆಯೇ? ಅದಕ್ಕೆ ಉಪ್ಪುಸಾಕೇ? ಎಂದು ಹುಲಿಯು ಪರೀಕ್ಷೆ ಮಾಡುವುದಿಲ್ಲ. ಕಾವ್ಯ ಸಮಾಧಿಯಲ್ಲಿ ಮುಳುಗಿದ ಪಂಡಿತನ ಹಣೇಬರಹವೂ ಇಷ್ಟೇ.

ವಿಚಿತ್ರ ಬೇಡಿಕೆ

ದೇಹದ ಇನ್ನೊಂದು ಬೇಡಿಕೆಯನಕ ವಿಚಿತ್ರ. ಶಕುಂತಳಾ, ದುಷ್ಯಂತರ ಸರಸ ಸಲ್ಲಾಪಗಳನ್ನು ಕವಿವರನ ಕಾವ್ಯದಲ್ಲಿ ಓದುತ್ತಿರುತ್ತಾನೆ. ಭಾವನಾ ಪ್ರಪಂಚದಲ್ಲಿ ತಾನೂ ವಿಹರಿಸುತ್ತ, ತಾನೇ ದುಷ್ಯಂತನಾಗುತ್ತಾನೆ. ಮುಗ್ಧೆ ಶಕುಂತಳೆಯನ್ನು ಭೇಟಿಯಾಗುತ್ತಾನೆ, ಕಲ್ಪನಾ ಲೋಕದಲ್ಲಿ. ಕವಿ ಕಾಳಿದಾಸನಿಗಿಂತ ಮಿಗಿಲಾಗಿ, ಭಾವನಾಸರಸವನ್ನಾಡುತ್ತಾನೆ. ಅಂತಹ ಸರಸವು ಮಾನಸಿಕವಾಗಿ ಅತ್ಯಾನಂದವನ್ನು ನೀಡುತ್ತದೆ. ದೇಹಕ್ಕೆ ಯಾವ ಶ್ರಮವಾಗಲೀ, ಸುಸ್ತಾಗಲೀ ಆಗುವುದಿಲ್ಲ. ಮನಸ್ಸಿನಲ್ಲೇ ಜೊಲ್ಲು ಸುರಿಸುತ್ತಾನೆ ಪಂಡಿತ.

ಆದರೆ ದೇಹಕ್ಕೆ ಬೇಡಿಕೆಯ ಪೂರೈಕೆಯಾಗಿರುವುದಿಲ್ಲ. ಹಸಿವಾದಾಗ ಹೊಟ್ಟೆಯು ತಾಳವನ್ನು ಹಾಕಿದಂತೆ. ಈಗ ಪಂಡಿತನ ಸೊಂಟವು ಮಿಂಟಲಾರಂಭಿಸುತ್ತದೆ. ಈ ಮಿಂಟುವಿಕೆಯು ಪಂಡಿತನನ್ನು ಭಾವಸಮಾಧಿಯಿಂದ ಜಗ್ಗಿ ಬಗ್ಗಿಸುತ್ತದೆ. ಮನಸ್ಸು ಆಗ ಥರಥರಗುಟ್ಟುತ್ತದೆ. ಮನಸ್ಸು ಸೊಂಟದಲ್ಲಿ ಪೂರ್ಣವಾಗಿ ಮಗ್ನವಾಗುತ್ತದೆ. ಆಗ ಹೋರಿ ಹುಲಿಯಂತೆ ಹಾರುತ್ತಾನೆ. ಒಡಲ ಬೇಡಿಕೆಯನ್ನು ಪೂರೈಸುತ್ತಾನೆ. ಅಭಿರುಚಿ, ಲಲ್ಲೆಯಾಟ, ಶೃಂಗಾರ, ರಸಿಕತೆ ಇವೆಲ್ಲವೂ ಭಾವಸಮಾಧಿಯಲ್ಲಿ ಪೂರ್ಣಗೊಂಡಿರುತ್ತವೆ. ಸಮಾಧಿಸ್ಥಿತಿಯಿಂದ ಇಳಿದು, ನಿಜಲೋಕಕ್ಕೆ ಬಂದಾಗ, ಹೋರಿ ಹುಲಿಯಂತೆ ನಡೆದುಕೊಳ್ಳುತ್ತಾನೆ.

ಹೋರಿ ಹುಲಿಯು ಏನು ಮಾಡುತ್ತದೆ? ಚೆಂದದ ಹೆಣ್ಣೇ ಬೇಕು, ಕನ್ಯೆಯೇ ಬೇಕು; ಪಿ. ಯು. ಸಿ. ಮಾಡಿದ ಹೆಣ್ಣೇಬೇಕು ಎಂದೇನೂ ಹುಡುಕಾಡುವುದಿಲ್ಲ. ಉದ್ರೇಕಗೊಂಡಾಗ ಸಿಕ್ಕಿದ್ದನ್ನು ದಕ್ಕಿಸಿಕೊಳ್ಳುತ್ತದೆ. ಪಂಡಿತನೂ ಸೊಂಟದ ಮಿಂಟುವಿಕೆಯನ್ನು ಹುಲಿಯಂತೆಯೇ ಶಮನಗೊಳಿಸುತ್ತಾನೆ.

ತಾಯಿತಂದೆಯರ ಲೈಂಗಾಣುಗಳ ಸಂಯೋಜನೆಯಿಂದ ಮಗುವು ಜನ್ಮವನ್ನು ಪ್ರಾರಂಭಿಸುತ್ತದೆ. ಆದಕಾರಣವೇ ತಾಯಿ-ತಂದೆಯರ ಲಕ್ಷಣಗಳು, ಕೆಲವು ಅಧಿಕವಾಗಿ, ಕೆಲವು ಅಲ್ಪವಾಗಿ, ಮಗುವಿನಲ್ಲಿ ಕಾಣಿಸಿಕೊಳ್ಳುತ್ತವೆ.

ಕೆಲವು ವೇಳೆ-ಅಜ್ಜ ಅಜ್ಜಿಯರ ಲಕ್ಷಣಗಳನ್ನೂ ಮಗುವಿನಲ್ಲಿ ಕಾಣಬಹುದು. ಅಜ್ಜನ್ನ ಹೋತುಕೊಂಡಿದೆ ಕಣೇ, ಅಪ್ಪನ ಹಾಗೆಯೇ ಇದೆ, ಥೇಟ್ ಅಮ್ಮನ ಪಡಿಯಚ್ಚು; ಇತ್ಯಾದಿ ನುಡಿಗಳೆಲ್ಲವೂ ಈ ಸಿದ್ಧಾಂತವನ್ನೇ ಸೂಚಿಸುತ್ತದೆ.

ಇವೆಲ್ಲ ದೇಹದಲ್ಲಿ ಕಾಣಬರುವ ಲಕ್ಷಣಗಳು. ಅಜ್ಜನ ಬೆಕ್ಕಿನ ಕಣ್ಣು, ಅಥವಾ ತಾಯಿಯ ಬಾವಲಿಕಿವಿ, ಅಥವಾ ಅಪ್ಪನ ಗಿಣಿ ಮೂಗು, ಇವುಗಳ ಪಡಿಯಚ್ಚವನ್ನೇ ಮಗುವು ಕಾಣಿಸುತ್ತದೆ. ಆದರೆ ತಾಯ್ತಂದೆಯರ ಮಾನಸಿಕ ಪರಿಸ್ಥಿತಿಯೂ ಮಗುವಿನ ಸ್ಮರಣೆಯಲ್ಲಿರಬೇಕಲ್ಲ! ಅದನ್ನೂ ಮಗುವು ಹೋತುಕೊಳ್ಳಬೇಕಲ್ಲ!

ತಾಯ್ತಂದೆಯರ ಮಾನಸಿಕ ಸ್ಥಿತಿಯು, ಲೈಂಗಾಣುಗಳನ್ನು ಭೇಟಿಮಾಡಿಸುವಾಗ, ಸಂತಾನಾಭಿವೃದ್ಧಿಯ ಪ್ರೇರಕದಿಂದಲೇ ತುಂಬಿ ಹೋಗಿರುತ್ತದೆ, ಹಾಗಾಗಿ ಹುಟ್ಟಿದ ಮಕ್ಕಳು ಪ್ರಾಪ್ತ ವಯಸ್ಸಿನಲ್ಲಿ ಲೈಂಗಾಣುಗಳ ಭೇಟಿ ಮಾಡಿಸುವ ಛಟವನ್ನೇ ಉಗ್ರವಾಗಿ ಪ್ರದರ್ಶಿಸುತ್ತಾರೆ. ಪ್ರಕೃತಿ ನಿಯಮವಿದು. ಸಂತಾನಾಭಿವೃದ್ಧಿಗಾಗಿ ಪ್ರಕೃತಿಯು ಹೂಡುವ ಜಾಣತನ.

ಆ ಹಿರಿಯ ಹಂಬಲವು ಮುಗಿಯುವಂತಾದಾಗ ಮನಸ್ಸಿನ ಇತರ ಪರಿಸ್ಥಿತಿಗಳೂ ಮಗುವಿನ ಮೇಲೆ ಪರಿಣಾಮವನ್ನುಂಟುಮಾಡುತ್ತವೆ. ಹೋರಿ ಹುಲಿಯಂತಿರುವ, ಸಮಾಜದಲ್ಲಿ ಮನ್ನಣೆಯನ್ನು ಪಡೆದ ಪಂಡಿತನ ಹೆಂಡತಿಯು ಸಾಮಾನ್ಯವಾಗಿ ಸಾಧು ಹಸುವಿನಂತಿರುತ್ತಾಳೆ. ಅಂದರೆ ಆಕೆಯ ಮನಃಸ್ಥಿತಿಯು ಸಾಧುವಂತಿದ್ದು ಅತ್ಯುದ್ರೇಕವಾಗಿರುವುದಿಲ್ಲ. ಭಯದ ಚಿಹ್ನೆಯೂ ಆಕೆಯ ಮನಸ್ಸಿನಲ್ಲಿ ಮೂಡಿರುತ್ತದೆ. ತಂದೆಯ ಮನಸ್ಸಿನಲ್ಲಿ ಹೋರಿ ಹುಲಿಯ ಪ್ರವೃತ್ತಿಯೇ ತುಂಬಿರುತ್ತದೆ. ಹಾಗಾಗಿ ಪಂಡಿತನ ಪುತ್ರನ ಮನಸ್ಸು ವನ್ಯ ಮೃಗದ ಮನಸ್ಸಿನಂತೆಯೇ ಇರುತ್ತದೆ. ಜತೆಗೆ ಅಂಚಿನಲ್ಲಿ ಭಯವೂ ಲೇಪವಾದಂತಿರುತ್ತದೆ. ಹೀಗಾಗಿ ಅವ 'ಪಂಡಿತ ಪುತ್ರ'ನಾಗುತ್ತಾನೆ. ಅಂತಹವರ ಹೊಟ್ಟೆಯಲ್ಲಿ ಹುಟ್ಟಿದರೂ, ಅಂತಹ ಸಮಯದಲ್ಲಿ, ಅಂತಹ ಮಾನಸಿಕ ಪರಿಸ್ಥಿತಿಯಲ್ಲಿದ್ದಾಗ ಹುಟ್ಟಿದುದರಿಂದ, ಅವ 'ಪಂಡಿತ ಪುತ್ರ'ನಾದ. ಅದು ಅವನ ತಪ್ಪೇ! ಅಲ್ಲವೇ ಅಲ್ಲ!

ದೋಷ ಯಾರಲ್ಲಿ?

'ಪಂಡಿತ ಪುತ್ರ'ನಿಗೆ ಜನ್ಮವಿತ್ತ ಪಂಡಿತನ ತಪ್ಪು. ಕೇವಲ ಭಾವನಾ ಲೋಕದಲ್ಲಿ ವಿಹರಿಸದೆ, ಕಾವ್ಯಮಯ ಜೀವನವನ್ನು ದೈಹಿಕವಾಗಿಯೂ ನಡೆ

ಸಿದ್ದರೆ, 'ಪಂಡಿತ ಪುತ್ರ' ಹುಟ್ಟುತ್ತಿರಲಿಲ್ಲ. ಪಂಡಿತನಾಗುವ ಪುತ್ರ ಹುಟ್ಟು ತ್ತಿದ್ದ. ಮನಸ್ಸನ್ನು ಅದರ ಔನ್ನತ್ಯಕ್ಕೆ ಏರಿಸುವಾಗ, ಒಡಲನ್ನು ಕಡೆಗಣಿಸಿ ದುದರಿಂದಲೇ ಹೀಗಾದುದು. ಇಂತಹ ಪಂಡಿತ, ಒಂದು ಅರ್ಥದಲ್ಲಿ ಸಂಪೂರ್ಣ ಸ್ವಾರ್ಥಿ. ತನ್ನ ಮನಸ್ಸಿನ ಖುಷಿಯನ್ನೇ ಅಟ್ಟಿಸಿಕೊಂಡು ಹೋದ, ಹುಟ್ಟುವ ಮಗನ ಕಾಳಜಿಯನ್ನು, ಕ್ಷೇಮವನ್ನು ಅವ ಕಡೆಗಣಿಸಿದ ಎನ್ನ ಬಹುದು.

'ಪಂಡಿತ ಪುತ್ರ'ರನ್ನು ಮೂದಲಿಸಬಾರದು, ಅಂತಹವರ ತಂದೆಯನ್ನು ತೆಗಳಬೇಕು.

ಮನನ ಮಾಡಬೇಕಾದ ವಿಷಯ, ಸುಪುತ್ರರನ್ನು ಪಡೆಯುವ ಆಸೆ ಇದ್ದವರೆಲ್ಲ.

ಲೌಕಿಕ ಧಾರಣ-ಧ್ಯಾನ

ಲೌಕಿಕ ಸಮಸ್ಯೆ ; ಲೌಕಿಕ ಆಶೆ

ಉಪನಿಷತ್ಕಾಲದಲ್ಲಿ ನಮ್ಮ ಹಿರಿಯರು, ಮನಸ್ಸನ್ನು ವಿಶೇಷ ವಿಶ್ಲೇಷಣೆಗೆ ಅರಿಸಿಕೊಂಡಿದ್ದರು. ಮನಸ್ಸಿನಿಂದ ಮಾನವ ಪ್ರಕೃತಿಯಲ್ಲಿ ಹಿರಿಯ ಸ್ಥಾನವನ್ನು ಗಳಿಸಿದ್ದಾನೆ. ಅಂತಹ ಮನಸ್ಸಿನ ಪೂರ್ಣ ಅರಿವನ್ನು ಪಡೆಯಬೇಕು ಎಂದವರು ಪರಿತಪಿಸಿದ್ದರು. ಇಂತಹ ತಪಸ್ಸಿನ ಫಲವಾಗಿ ಅವರು ಕೆಲವು ವಿಷಯಗಳನ್ನು ಅರಿತರು: 1) ಮನಸ್ಸು ಸುಸೂತ್ರವಾಗಿ ಕಾರ್ಯ ಮಾಡಬೇಕಾದರೆ, ದೇಹವು ಶಿಸ್ತು ಸಂಯಮಗಳಿಂದ ಸುಸಜ್ಜಿತವಾಗಬೇಕಾದುದು ಅತ್ಯಗತ್ಯ. 2) ಇದಾದ ಮೇಲೆ ಮನಸ್ಸನ್ನು ಮನಸ್ಸಿನಿಂದಲೇ ಸುಶಿಕ್ಷಿಸಬೇಕು. ಹಂತಹಂತವಾಗಿ ಮಾಡಿದರೆ ಚೆನ್ನು. 3) ಇವೆಲ್ಲಕ್ಕೂ ಧ್ಯೇಯ ಒಂದಿರಬೇಕು. ಅಂತಹ ಧ್ಯೇಯ ಸಾಧನೆಗಾಗಿ ಸ್ಪಷ್ಟವಾದ ಸಂಕಲ್ಪವಿರಬೇಕು. 4) ಆಗ ಸಿದ್ಧಿಯು ದೊರಕುತ್ತದೆ. ಇಷ್ಟಾರ್ಥವು ಫಲಿಸುತ್ತದೆ.

ಐದು ಶಿಸ್ತುಗಳು

ದೇಹದ ಶಿಕ್ಷಣಕ್ಕೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ ಎಂಬ ಐದು ಶಿಸ್ತುಗಳನ್ನು ವಿವರಿಸಿದರು.

ಇದನ್ನು ಸಾಧಿಸಿದ ಮೇಲೆ ಮನಸ್ಸನ್ನು ಸಜ್ಜುಗೊಳಿಸಲು, ಧಾರಣ, ಧ್ಯಾನ, ಸಮಾಧಿ ಎಂಬ ಮೂರು ಸ್ಥಿತಿಗಳನ್ನು ವಿವರಿಸಿದರು. ಸಮಾಧಿಯ ಸ್ಥಿತಿಗೆ ಏರಿದಾಗ ಮನಸ್ಸಿನ ಅರಿವು, ಮನಸ್ಸನ್ನು ಯಾವುದು ನಡೆಸುತ್ತದೆಯೋ ಅದರ ಅರಿವು ಮೂಡುತ್ತದೆ ಎಂದರು. ಎಂಟು ಅಂಗಗಳುಳ್ಳ, ಈ ಅಷ್ಟಾಂಗ ಸಾಧನೆಯನ್ನು ಯೋಗಾಭ್ಯಾಸ ಎಂದರು. ಇದರಿಂದ ಆತ್ಮದ ಅರಿವು ಉಂಟಾಗುತ್ತದೆ. ಮನಸ್ಸು ಶಾಂತಿ, ಸಮಾಧಾನ, ಆನಂದಗಳಿಂದ ಕೂಡಿರು

ತ್ತದೆ ಎಂದು ನುಡಿದರು. ಆಧ್ಯಾತ್ಮಿಕದ ದೃಷ್ಟಿಯಿಂದ ಇದು ಶ್ರೇಯಸ್ಕರ ವಿರಬಹುದು. ಯೋಗ ಕ್ಷೇಮಕ್ಕೆ ಇದು ಸರಿಯಿರಬಹುದು.

ಲೌಕಿಕ ಸಮಸ್ಯೆ

ಆದರೆ ಲೌಕಿಕದಲ್ಲಿರುವ ನಮಗೆ ಭೋಗ ಕ್ಷೇಮದ ಮೇಲೆ ಹೆಚ್ಚು ಆಸೆ. ಇಂತಹ ಇಷ್ಟಾರ್ಥವನ್ನು ಪಡೆಯಲು ಅಷ್ಟಾಂಗ ಯೋಗದ ನೆರವನ್ನು ಪಡೆಯಲು ಸಾಧ್ಯವೇ? ಸಾಧ್ಯ ಎನ್ನಿಸುತ್ತದೆ. ಬೇಡಿದುದನ್ನು ಕೈ ತುಂಬಾ ಕೊಡುವ ದೇವರು ಬಿಡಿಪೈಸೆ ಬೇಡಿದರೆ ಇಲ್ಲ ಎನ್ನುವುದಿಲ್ಲ.

ಜೇಮ್ಸ್‌ವ್ಯಾಟ್ ಎಂಬವನ ಹೆಸರನ್ನು ಕೇಳದೆ ಇದ್ದವರು ಅಕ್ಷರಸ್ಥರಲ್ಲಿ ಯಾರೂ ಪ್ರಾಯಶಃ ಇರಲಾರರು. ಸ್ಟೀಂ ಎಂಜಿನ್ನ್ಅನ್ನು ಕಂಡುಹಿಡಿದ ಪ್ರಚಂಡ ಅವ. ಇಂದಿನ ರೈಲುಬಂಡಿಗಳಿಗೆಲ್ಲಾ ಅವನೇ ನಾಂದಿಯನ್ನು ಹಾಡಿದವ. ಅದೂ ಎಷ್ಟು ಪವಿತ್ರವಾಗಿ!

ಅವ ಯುವಕನಾಗಿದ್ದಾಗ, ಪ್ರಸಿದ್ಧಿಯನ್ನು ಪಡೆಯುವುದಕ್ಕೆ ಮೊದಲು, ಸೀಸದ ಗುಂಡುಗಳ ತಯಾರಿಕೆಯಲ್ಲಿ ಕುತೂಹಲಿಯಾಗಿದ್ದ. ಹಾರಾಡುವ ತರಕಾರಿಗಳಾಗಿದ್ದ, ವಿಧವಿಧ ಜಾತಿಯ ಕೋಳಿ, ಮತ್ತು ಬಾತುಗಳನ್ನು ಆಗಿನ ಕಾಲದಲ್ಲಿ ಸೀಸದ ಗುಂಡುಗಳಿಂದ ಹೊಡೆದು ಶಿಕಾರಿ ಮಾಡುತ್ತಿದ್ದರು. ಸೀಸದ ದುಂಡು ಗುಂಡುಗಳು ಅಧಿಕ ಸಂಖ್ಯೆಯಲ್ಲಿ ಬೇಕಾಗಿದ್ದುವು. ಸೀಸದ ದಪ್ಪ ತಂತಿಯನ್ನು ಸಣ್ಣ ಸಣ್ಣದಾಗಿ ಕತ್ತರಿಸಿ, ಅನಂತರ ಅವುಗಳನ್ನು ದುಂಡುದುಂಡಾಗಿ ಅರದಿಂದ ತಿಕ್ಕುವುದು. ಹೀಗೆ ತಯಾರಿಸಿದ ಸೀಸದ ಗುಂಡುಗಳು, ಸಾಕಷ್ಟು ದುಂಡಾಗಿರದಿದ್ದರೂ, ಕೋವಿಯಿಂದ ಹಾರಿಸಲು ಸಾಧ್ಯವಾಗಿತ್ತು. ಆದರೆ ಗುಂಡುಗಳನ್ನು ತಯಾರಿಸಲು ತುಂಬಾ ಕಾಲ ಅಗತ್ಯವಾಗಿತ್ತು.

ಸೀಸದ ತೆಳು ಹಲಗೆಗಳನ್ನು ಚೌಕಾಕಾರವಾಗಿ ಕತ್ತರಿಸಿ, ಅವುಗಳನ್ನು ಭಾರವಾದ ಕಬ್ಬಿಣದ ಗುಂಡುಗಳಿಂದ ಒತ್ತಿ ಅರೆಯುವುದು. ಇದರಿಂದಲೂ ಸೀಸದ ಗುಂಡುಗಳು ಸಿದ್ಧವಾಗುತ್ತಿದ್ದುವು. ಈ ವಿಧಾನವನ್ನೂ ಬಳಸುತ್ತಿದ್ದರು.

ಇವು ತುಂಬಾ ಪ್ರಯಾಸದ ವಿಧಾನಗಳು. ಇವುಗಳಿಗಿಂತಲೂ ತುಂಬಾ ಸುಲಭವಾದ ವಿಧಾನವನ್ನು ಕಂಡುಹಿಡಿಯಬೇಕು ಎಂದು, ಜೇಮ್ಸ್‌ವ್ಯಾಟ್ ಸದಾಶಿವನಿಗೆ ಅದೇ ಧ್ಯಾನ ಎಂಬಂತೆ, ಧ್ಯಾನ ಮಾಡಲಾರಂಭಿಸಿದ.

ಲೌಕಿಕವಾದ ಸಮಸ್ಯೆ. ಲೌಕಿಕವಾದ ಆಸೆ. ಲೌಕಿಕವಾದ ಸಂಕಲ್ಪ. ದೇಹವನ್ನು ಸಜ್ಜುಗೊಳಿಸಲು ಯಮ ನಿಯಮ ಆಸನೇತ್ಯಾದಿ ಶಿಸ್ತುಗಳನ್ನು ಅವ ಮನಸ್ಸಿಟ್ಟು ಆಚರಿಸದೇ ಇದ್ದರೂ, ಲೌಕಿಕವಾದ ಸಂಕಲ್ಪ, ಲೌಕಿಕವಾದ ಆಸೆಗಳು ಪ್ರೇರಕವಾಗಿದ್ದರೂ, ಹೆಚ್ಚಾಗಿ ತಿಂದು ಕುಡಿಯುತ್ತಿರಲಿಲ್ಲ, ಈ ಯೋಚನೆಯಲ್ಲಿ ಮಗ್ನನಾದುದರಿಂದ ಎಂದು ಊಹಿಸಬಹುದು.

ನಿದ್ರೆಯಲ್ಲಿ ಕನಸು

ಹೀಗೆ ಧ್ಯಾನವನ್ನು ಸದಾಶಿವನಂತೆ ಮಾಡಿದ. ಅಂದರೆ ಯೋಚನೆಯು ಆ ಸಮಸ್ಯೆಯಲ್ಲಿ ಮಗ್ನವಾಯಿತು. ಇತರ ಯಾವ ಯೋಚನೆಗಳೂ ಅವನ ಮನಸ್ಸನ್ನು ಕಾಡಲಿಲ್ಲ.

'ಧ್ಯಾನ'ವು ಸ್ವಲ್ಪ ಕಾಲ ನಡೆದರೂ ಅವನಿಗೆ ಸಮಾಧಿಯು ದೊರಕಲಿಲ್ಲ. ಬದಲು ನಿದ್ರೆಯು ಬಂತು. ಗಾಢವಾದ ನಿದ್ರೆಯು ಬಂತು.

ಅಂದು ರಾತ್ರಿ ನಿದ್ರೆಯಲ್ಲಿ ಕನಸು ಬಿತ್ತು. ತುಂಬಾ ರಭಸದಿಂದ ಮಳೆಯು ಬೀಳುತ್ತಿದ್ದಾಗ, ದಪ್ಪ ದಪ್ಪ ಹನಿಗಳನ್ನು ಹಾಕಿಕೊಂಡು ಮಳೆಯು ಬೀಳುತ್ತಿದ್ದಾಗ ಅವ ನಡೆಯುತ್ತಿದ್ದ ಹಾಗೆ ಕನಸು. ಆದರೆ ಅದೇನು ಸೋಜಿಗ! ಅವನ ಕಾಲ ಬಳಿಯಲ್ಲಿ ಮಳೆಯ ಹನಿಗಳು ಬಿದ್ದಾಗ, ತತ್‌ಕ್ಷಣ ಅವು ಸೀಸದ ದುಂಡು ಗುಂಡುಗಳಾದುವು. ಅವನ ಕಾಲನ್ನು ಕನಸಿನಲ್ಲಿ ರಪ ರಪ ಬಾರಿಸಿದುವು.

ಒಂದು ದಿನವಲ್ಲಾ ಈ ಕನಸು ಬಿದ್ದಿದುದು, ಇಡೀ ಒಂದು ವಾರ. ಅವನ ಹೇಳಿಕೆಯ ಪ್ರಕಾರ, ಇದೇ ಕನಸು ಅವನನ್ನು ಕಾಡಿತು.

ಇದೇನು ? ದೈವಾನುಗ್ರಹವೇ ? ಅಥವಾ ಭೂತ ಚೇಷ್ಟೆಯೇ? ಎಂದವನು ವಿಹ್ವಲಗೊಂಡ, "ತಡೆದುಕೊಳ್ಳುವುದು ಇನ್ನು ಸಾಧ್ಯವಿಲ್ಲ. ಈ ಕನಸನ್ನು ಪ್ರಯೋಗಕ್ಕೆ ಒಳಪಡಿಸೋಣ" ಎಂದು ನಿರ್ಧರಿಸಿದ.

ನೀರಿದ್ದ ಕಂದಕದ ಬಳಿಗೆ ಹೋದ. ಕೋಟೆಯ ಗೋಡೆಯ ಮೇಲೆ ಹತ್ತಿ ಹೋಗಿ, ಕೆಟಲ್ ಒಂದರಿಂದ ಕರಗಿದ ಸೀಸವನ್ನು ಮೆಲ್ಲಮೆಲ್ಲಗೆ ತೊಟ್ಟು ತೊಟ್ಟಾಗಿ ಸುರಿದ. ಅವೆಲ್ಲವೂ ಕಂದಕದ ನೀರಿನಲ್ಲಿ ಮೇಲಿನಿಂದ ಬಿದ್ದುವು. ಕೆಟಲ್ ಖಾಲಿಯಾಯಿತು. ಕೋಟೆ ಗೋಡೆಯಿಂದ ಇಳಿದು ಬಂದ. ಕಂದಕದ ತಳದಲ್ಲಿ ಬಿದ್ದಿದ್ದ ಆಗ ಘನೀಭೂತವಾಗಿದ್ದ ಸೀಸದ ತೊಟ್ಟುಗಳನ್ನು ಆರಿಸಿ ತೆಗೆದ. ಎಲ್ಲವೂ ಲಕ್ಷಣವಾದ ದುಂಡು ದುಂಡಾದ ಗುಂಡುಗಳಾಗಿದ್ದುವು.

ಅಂದಿನಿಂದ ಸೀಸದ ಗುಂಡುಗಳನ್ನು ದುಂಡು ದುಂಡಾಗಿ ತಯಾರಿಸಲು ಜೇಮ್ಸ್‌ವ್ಯಾಟ್‌ನ ವಿಧಾನವನ್ನು ಅನುಸರಿಸುತ್ತಿದ್ದಾರೆ, ಇಂದಿನ ತನಕ. ಇತರ ಎಲ್ಲಾ ವಿಧಾನಗಳೂ ಕಾಡುಪಾಲಾದುವು.

ಧ್ಯಾನವನ್ನು ಜೇಮ್ಸ್‌ವ್ಯಾಟ್ ತೀವ್ರವಾಗಿ ಮಾಡಿದ. ಲೌಕಿಕ ಆಸೆಯಿಂದ ಪ್ರೇರೇಪಿತನಾಗಿದ್ದ. ಲೌಕಿಕ ಫಲಿತಾಂಶಕ್ಕಾಗಿ ಹಾತೊರೆಯುತ್ತಿದ್ದ.

ಈ ತೆರನ ತೀವ್ರ ಧ್ಯಾನವು ಫಲವಿತ್ತಿತು - ಲೌಕಿಕ ಆಸೆಯಿಂದ, ಲೌಕಿಕ ಇಷ್ಟಾರ್ಥದಿಂದ, ಲೌಕಿಕ ಇಷ್ಟಾರ್ಥಕ್ಕಾಗಿ.

ಸಮಾಧಿಯು ನಿದ್ರೆಯ ರೂಪದಲ್ಲಿ ಬಂದಿತು. ಆತ್ಮದ ದರ್ಶನವು ನಿದ್ರೆಯಲ್ಲಿ ಆಗಲಿಲ್ಲ. ಆದರೆ ಕನಸಿನ ರೂಪದಲ್ಲಿ, ಇಷ್ಟಾರ್ಥವನ್ನು ಈಡೇರಿಸಿತು. ತಾಂತ್ರಿಕ ವಿಜ್ಞಾನಕ್ಕೆ ಅಮೋಘವಾದ ಕಾಣಿಕೆಯಾಯಿತು.

ಜೇಮ್ಸ್‌ವ್ಯಾಟನು ಭೋಗಾಭ್ಯಾಸಿ. ಯೋಗಾಭ್ಯಾಸದ ಶಿಸ್ತುಗಳನ್ನು ಅರಿವಿಲ್ಲದೆಯೇ ಪ್ರತಿಪಾಲಿಸಿದ್ದ. ಅವನ ಲೌಕಿಕ ಇಷ್ಟಾರ್ಥಗಳು ಅವ್ಯಕ್ತ ಪರಮ ಆತ್ಮನಿಂದ ಕರುಣಿಸಲ್ಪಟ್ಟವು.

ನಮ್ಮಂತಹ ಭೋಗಾಭ್ಯಾಸಿಗಳು ಮನನ ಮಾಡಬೇಕಾದ ವಿಷಯ.

ಜರಾ - ಭಯ

ವಂಶಪಾರಂಪರ್ಯವನ್ನು ಮುನ್ನಡೆಸಿಕೊಂಡು ಹೋಗುವ ತೀವ್ರ ಆಕಾಂಕ್ಷೆಯಿಂದ ಪ್ರಾಣಿಗಳು ಲೈಂಗಿಕ ಪ್ರವೃತ್ತಿಯಲ್ಲಿ ತೊಡಗುತ್ತವೆ. ಇಂತಹ ಪ್ರವೃತ್ತಿಯು ಯಾವ ವಯಸ್ಸಿನಲ್ಲಿ ಸ್ವಾಭಾವಿಕವಾಗಿ ಕುಂಠಿತಗೊಳ್ಳುತ್ತದೆಯೋ ಆಗ ಮುಪ್ಪು ಬಂದಿದೆ ಎಂದು ಸಾಮಾನ್ಯವಾಗಿ ಹೇಳಬಹುದು.

ಯೌವನ-ಮುಪ್ಪು

ಸಸ್ಯವರ್ಗದಲ್ಲಿ ಹಲವಾರು ಜಾತಿಗಳು ಲೈಂಗಿಕ ಪ್ರವೃತ್ತಿಯನ್ನು ಹೂವು ಪರಾಗ, ಕಾಯಿ ಹಣ್ಣು ಬೀಜ, ಇತ್ಯಾದಿ ರೂಪಗಳಲ್ಲಿ ಕಾಣಿಸುತ್ತವೆ. ಆದರೆ ಇನ್ನು ಕೆಲವು ರೀತಿಯ ವೃಕ್ಷಗಳು ಬೆಳೆದು ಎದ್ದು ಕೊಂಬೆಗಳಿಂದ ನೆಲಕ್ಕೆ ಬಿಳಲುಗಳನ್ನು ಬಿಟ್ಟು, ಅವುಗಳು ಬೇರಿಡುವಂತೆ ಸಾಧಿಸಿಕೊಂಡಿವೆ. ಉದಾ:—ಅಶ್ವತ್ಥವೃಕ್ಷ. ಒಂದು ಕಡೆ ಹೊಸ ಹೊಸದಾಗಿ ಚಿಗುರುತ್ತ, ಮತ್ತೊಂದು ಕಡೆ ಬಾಡಿ ನಶಿಸುತ್ತಾ ಇರುವ ಅಶ್ವತ್ಥಮರಕ್ಕೆ ಮುಪ್ಪು ಯಾವಾಗಬಂತು ಎಂದು ಹೇಳುವಂತಿಲ್ಲ. ಆದರೂ ಅಶ್ವತ್ಥದ ಒಂದು ಭಾಗವು ಮುಪ್ಪಿಗೆ ಈಡಾಗಿದೆ. ಆ ಭಾಗವು ಸ್ವಲ್ಪ ಕಾಲದಲ್ಲಿ ಮರಣ ಹೊಂದಿ ನಾಶವಾಗುತ್ತದೆ ಎಂದೆನ್ನಬಹುದು. ಆದರೆ ವೃಕ್ಷದ ಇನ್ನೊಂದು ಭಾಗ ಬಾಲ್ಯದ ಹುರುಪಿನಿಂದ ಹಸಿರು ಹಸಿರಾಗಿ ಕವಲೊಡೆದು ಬೆಳೆಯುತ್ತಿರುತ್ತದೆ. ಒಂದೇ ವೃಕ್ಷದಲ್ಲಿ ಮುಪ್ಪು ಮತ್ತು ಬಾಲ್ಯ ಏಕಕಾಲದಲ್ಲಿ ಕಾಣಿಸುತ್ತದೆ. ವೃಕ್ಷವು ಬದುಕಿರುತ್ತದೆ, ಬೆಳೆಯುತ್ತಿರುತ್ತದೆ. ಜರಾ ಮರಣ ಭಯವು ಅಶ್ವತ್ಥವೃಕ್ಷಕ್ಕೆ ಇದೆ ಎಂದರೆ ಅಲ್ಲ ಎಂದು ಹೇಳಬರುವುದಿಲ್ಲ. ಯಯಾತಿಯಂತೆ ಚಿರಯೌವನವನ್ನು ಸಾಧಿಸಿಕೊಂಡಿದೆ ಎಂದರೂ, ಅಲ್ಲ ಎಂದು ಹೇಳಲಾಗುವುದಿಲ್ಲ. ಆದಕಾರಣವೇ–

ಅಶ್ವತ್ಥವಿಲ್ಲಿ ಬಾಡಿದೊಡೇನು ? ಚಿಗುರಲ್ಲಿ,
ನಶ್ವರತೆ ವಿಟಪ ಪರ್ಣಂಗಳಲಿ ಮಾತ್ರ।

ಶಾಶ್ವತತೆ ರುಂಡಮೂಲದಲಿ ಪರಿಚರಿಸದನು
ವಿಶ್ವಪ್ರಗತಿಯಿಂತು - ಮಂಕುತಿಮ್ಮ॥

ಎಂದು ಎಲ್ಲರಿಗೂ ಮಂಕು ಹಿಡಿಸುವ ತಿಮ್ಮ ನುಡಿದುದು.

ಮುಪ್ಪಿನ ನಿವಾರಣೆಯನ್ನು, ಕಾಯಕಲ್ಪವನ್ನು ಅಶ್ವತ್ಥವೃಕ್ಷವು ಈ ರೀತಿಯಲ್ಲಿ ಸಾಧಿಸಿಕೊಂಡಿದೆ.

ವಿಚಿತ್ರ ರೀತಿ

ಪ್ರಾಣಿವರ್ಗದ ಮೂಲಮೂಲದ ಹಂತಗಳಲ್ಲಿ ಒಂದೇ ಸೆಲ್ಲು ಇರುವ ಏಕಾಣು ಜೀವಿಗಳು ಕಾಣಿಸಿಕೊಂಡುವು. ಅಮೀಬಾ ಇಂತಹುದೊಂದು. ಎಲ್ಲ ಜೀವಿಗಳಂತೆ ಇದು ಕೂಡ ಆಹಾರವನ್ನು ಗ್ರಹಿಸುತ್ತದೆ. ಅಗತ್ಯವಾದುದನ್ನು ಬಳಸಿಕೊಂಡು ಮಿಕ್ಕಿದುದನ್ನು ವಿಸರ್ಜಿಸುತ್ತದೆ. ಆಕ್ಸಿಜನ್ನನ್ನು ಉಪಯೋಗಿಸಿಕೊಳ್ಳುತ್ತದೆ.

ವಂಶಪಾರಂಪರ್ಯವನ್ನು ಮುನ್ನಡೆಸುವಾಗ ವಿಚಿತ್ರ ರೀತಿಯಲ್ಲಿ ನಡೆಯುತ್ತದೆ. ಮೂಲ ಅಮೀಬಾವು ಮದುವೆಯಾಗಿ, ಮನೆಮಾಡಿಕೊಂಡು ಮಕ್ಕಳಿಗಾಗಿ ಕಾರ್ಯಕ್ರಮವನ್ನು ನಡೆಸುವುದಿಲ್ಲ. ಒಂದು ನಿಗದಿಯಾದ ಪ್ರಮಾಣದಷ್ಟು ಬೆಳೆದ ಮೇಲೆ, ಅದು ಎರಡಾಗಿ ಸಮಸಮನಾಗಿ ಒಡೆಯುತ್ತದೆ. ಮರಿ ಅಮೀಬಾಗಳೆರಡೂ ಆಗ ಯೌವನದ ಉತ್ಸಾಹದಿಂದ ಬಾಳನ್ನು ಪ್ರಾರಂಭಿಸುತ್ತವೆ. ಮೂಲ ಅಮೀಬಾ ಸತ್ತಿತು ಎನ್ನುವಂತಿಲ್ಲ. ಏಕೆಂದರೆ ಸತ್ತಾಗ ಹೆಣ ಬೀಳಬೇಕಲ್ಲ! ಅಮೀಬಾದ ಹೆಣವು ಬೀಳುವುದಿಲ್ಲ! ಆದರೆ ಎರಡು ಮಕ್ಕಳು ಹುಟ್ಟಿವೆ. ವಂಶಾಭಿವೃದ್ಧಿಯೂ ಆಗಿದೆ. ದೇಹದ ದೃಷ್ಟಿಯಿಂದ ನೋಡಿದರೆ ಅಮೀಬಾವು ಚಿರಂಜೀವಿ. ಅಶ್ವತ್ಥಾಮ, ಮಾರ್ಕಂಡೇಯ ಇವರುಗಳ ಜತೆಗೆ ಅಮೀಬಾವನ್ನೂ ಸ್ಮರಿಸಬೇಕು.

ಅದಕ್ಕೆ ನಿಗದಿಯಾದ ಒಂದು ಪ್ರಮಾಣಕ್ಕೆ ಬಂದಾಗ ಅದು ಒಡೆದು ಎರಡು ಮರಿಗಳಾಗುತ್ತವೆ. ಅಂದರೆ ಆ ಪ್ರಮಾಣಕ್ಕೆ ಬಂದಾಗ ಅದಕ್ಕೆ ಮುಪ್ಪು ಬಂತು ಎನ್ನಬಹುದೇ ? ಮುಪ್ಪು ಅಡರಿದಾಗ ಅದು ಮರಿಗಳನ್ನು ಹಾಕಿತು ಎನ್ನಬೇಕೇ ? ಅಥವಾ ಅಮೀಬಾಕ್ಕೂ ಜರಾ ಮರಣ ಭಯವಿಲ್ಲ ಎಂದನ್ನಬೇಕೆ ? ಜರಾ ಮರಣ ಭಯದಿಂದ ನಿವೃತ್ತಿಗೊಳ್ಳುವುದು, ಮನನ ಮಾಡುವ ಮಾನವನ ಧ್ಯೇಯ. ಅಮೀಬಾವು ಈ ಧ್ಯೇಯವನ್ನು ಸ್ವಾಭಾವಿಕವಾಗಿ ಸಾಧಿಸಿಕೊಂಡಿದೆ ಎನ್ನಬಹುದೇ ?

ಜೀವನದ ಮೊದಲ ಮೊದಲ ಹಂತದಲ್ಲಿ ಕಾಣಿಸಿಕೊಂಡ ಅಮೀಬಾವು, ಇಂದು ಪ್ರಚಂಡ ಪ್ರಗತಿಯನ್ನು ಸಾಧಿಸಿದ್ದೇನೆ ಎಂದು ಹೆಮ್ಮೆಪಡುವ ಮನುಷ್ಯನ ಜತೆಯಲ್ಲಿ ಸಹಬಾಳ್ವೆಯನ್ನು ನಡೆಸುತ್ತಲೇ ಇದೆ.

ಏಕಾಣು ಜೀವಿಗಳು

ಅಮೀಬಾದ ನಂತರ ಏಕಾಣು ಜೀವಿಗಳು ಪ್ರಗತಿ ಹೊಂದಿದಾಗ ಇನ್ನೊಂದು ಏಕಾಣುಜೀವಿಯು ಉದ್ಭವಿಸಿತು. ಪ್ಯಾರಮಿಸಿಯಂ ಎಂಬ ಹೆಸರಿನ ಏಕಾಣು ಜೀವಿ. ಅಮೀಬಾಕ್ಕಿಂತ ಇದು ಶರೀರದಲ್ಲಿ ಅಭಿವೃದ್ಧಿಯನ್ನು ಹೊಂದಿದೆ. ಬಾಯಿ ಮತ್ತು ಅನ್ನನಾಳ ಎನ್ನುವಂತೆ ಇದರ ಶರೀರದಲ್ಲಿ ಪ್ರತ್ಯೇಕವಾದ ಏರ್ಪಾಡಿದೆ. ಈಜಾಡಲು ಸಹಾಯವಾಗಲು, ಕೈಕಾಲುಗಳಿಗೆ ಬದಲು, ಕೂದಲುಗಳಂತಿರುವ, ಸೀಲಿಯಾಗಳಿವೆ. ವಿಸರ್ಜನಾ ಕಾರ್ಯಕ್ರಮಗಳಿಗೆ ಪ್ರತ್ಯೇಕವಾದ ವ್ಯವಸ್ಥೆಯೂ ಇದೆ. ವಂಶಪಾರಂಪರ್ಯವನ್ನು ಮುಂದುವರೆಸುವಾಗ, ಅಮೀಬಾದಂತೆಯೇ, ಬಲಿತ ಒಂದು ಒಡೆದು ಎರಡು ಮರಿಗಳು ಹುಟ್ಟುತ್ತವೆ. ಈ ರೀತಿಯಲ್ಲಿ ಸಂತಾನಾಭಿವೃದ್ಧಿಯು ಆಗುತ್ತದೆ.

ಆದರೆ ಬಲಿತ ಒಂದು ಪ್ಯಾರಮಿಸಿಯಂ, ಕೆಲ ಕಾಲಾನಂತರ, ನೂರಾರು ಜನ್ಮಗಳಾದ ನಂತರ, ಎಂತದೋ ಮಂಕು ಬಡಿದಂತಾಗಿ ಮೂಲೆಯನ್ನು ಹಿಡಿಯುತ್ತದೆ. ಆ ಮುಂದೆ ಒಡೆದು ಎರಡಾಗುವ ಪ್ರವೃತ್ತಿಯನ್ನು ತೋರಿಸುವುದಿಲ್ಲ. ಸೊಂಟಬಾಗಿದ ಮುಪ್ಪಿನ ಮುದುಕರಂತೆ ಮೂಲೆಯೊಂದರಲ್ಲಿ ಕೊರಡಿನಂತೆ ಬಿದ್ದಿರುತ್ತದೆ. ಆದರೆ ಆಶ್ಚರ್ಯ! ಇಂತಹ ಮುಪ್ಪುಬಡಿದ ಎರಡು ಪ್ಯಾರಮಿಸಿಯಂಗಳು ಒಮ್ಮೊಮ್ಮೆ 'ಕಾಂಜುಗೇಟ್ ಬಾಡಿ' ಆಗುತ್ತದೆ. ನವ ಯೌವನವನ್ನು ಪಡೆಯುತ್ತದೆ.

*

ಮುಪ್ಪಿನ ನಿವಾರಣೆಗಾಗಿ ಮಾನವನು ಹಾತೊರೆಯುತ್ತಾನೆ. ವೈದ್ಯ ಮತ್ತು ಪ್ರಾಣಿ ವಿಜ್ಞಾನಿಗಳು ಮುಪ್ಪು ಎಂದರೇನು? ಇದು ಹೇಗೆ ಬಲಿಯುತ್ತದೆ? ಇದನ್ನು ತಡೆಗಟ್ಟುವುದು ಹೇಗೆ? ಎಂಬ ಪ್ರಶ್ನೆಗಳಿಗೆ ಸತತವಾಗಿ ಉತ್ತರ ಪಡೆಯಲು ಶ್ರಮಿಸುತ್ತಿದ್ದಾರೆ. ಸಹಸ್ರಾರು ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಜರಾ ಭಯದಿಂದ ಮೋಕ್ಷವನ್ನು ಪಡೆಯಲು ಒದ್ದಾಡು

ತ್ತಿದ್ದಾರೆ. ಇಂತಹ ಪ್ರಯೋಗಗಳಲ್ಲಿ ಪ್ಯಾರವಿಸಾಸಿಯಂಅನ್ನು ಅರಿಯುವ ಯತ್ನವು ಬಹುತೇಕ ನಡೆಯುತ್ತಿದೆ. ಜೀವನದ ಮೊದಮೊದಲ ಹಂತವೇ, ಈ ತುದಿಯಲ್ಲಿರುವ ಮಾನವನಿಗೆ 'ಗುರು'ವಾಗಬೇಕಾಗಿದೆ.

ಅಷ್ಟು ಭಯವೇಕೆ ?

ಮುಪ್ಪು ಎಂದರೆ ಅಷ್ಟು ಭಯವೇಕೆ ? ಹಲ್ಲಿಲ್ಲ, ಕಿವಿಯಿಲ್ಲ, ಕಣ್ಣಿಲ್ಲ, ಹೆಣ್ಣಿಲ್ಲ; ಹೀಗಿದ್ದು ಏನು ಸಾರ್ಥಕ ಎಂಬ ನಿರಾಸೆಯೇ ಜರಾಭಯಕ್ಕೆ ಕಾರಣ. ನಿರಾಸೆಗೆ, ಮೊದಲು ಆಸೆಪಡುವುದೇ ಕಾರಣ. ಆದುದರಿಂದಲೇ ವಿಶಾಲಬುದ್ಧಿಯ ವ್ಯಾಸ ಮಹರ್ಷಿಗಳು,

"ಜರಾ ಮರಣಮೋಕ್ಷಾಯ ಮಾಂ ಆಶ್ರಿತ್ಯ ಯತಂತಿ ಯೇ
ತೇ ಬ್ರಹ್ಮತದ್ವಿದುಃ ಕೃತ್ಸ್ನಂ ಅದ್ಯಾತ್ಮಂಕರ್ಮಚ ಅಖಿಲಂ"

ಎಂದು ನುಡಿದರು. ಈ ಉಪದೇಶದಿಂದ ಮುಪ್ಪನ್ನು ನಿವಾರಿಸಿದಂತಾಗಲಿಲ್ಲ. ಆದರೆ ಅದಕ್ಕಿಂತಲೂ ಘೋರವಾದ ಅದರ ಭಯವನ್ನು ನಿರ್ಮೂಲ ಮಾಡಬಹುದು. ಮನನ ಮಾಡಬೇಕಾದ ವಿಷಯ.

ನಾಯಿ ಕಲಿಸಿದ ಪಾಠ!

ಕಿಟಕಿಯಾಚೆ ಕಂಬದಡಿ ಬೌಬೌ, ಘುರ್‌ಘುರ್ ಅಂತ ಅಸಾಧ್ಯ ಹೋರಾಟದ ಶಬ್ದವು ಕೇಳಿಸಿತು. ಸ್ವಾಮಿ ರಾಮಕೃಷ್ಣಾನಂದರು ಬರೆದಿರುವ 'The Life of Sri Ramanuja' ಎಂಬ ಪುಸ್ತಕವನ್ನು ಓದುತ್ತಿದ್ದೆ. ಪುಸ್ತಕವನ್ನು ಕೈಮೇಜಿನ ಮೇಲೆ ಇಟ್ಟು, ಕಿಟಕಿಯಬಳಿಗೆ ಹೋಗಿ ಇಣಕಿ ನೋಡಿದೆ. ಲಾಂದ್ರದ ಕಂಬದ ಬಳಿಯಲ್ಲಿ ಎರಡು ಭಾರೀ ನಾಯಿಗಳು ಕಚ್ಚಾಡುತ್ತಿದ್ದುವು. ಯಾತಕ್ಕಾಗಿ ಕಚ್ಚಾಡುತ್ತಿವೆ ಎಂಬುದು ತಿಳಿಯದೇ ಇದ್ದರೂ, ಕಚ್ಚಾಟವು ರೋಷಭರಿತವಾದುದರಿಂದ, ಕಣ್ಣುಗಳನ್ನು ಸೆರೆ ಹಿಡಿಯಿತು. ಕಾರಣ, ನೋಡುತ್ತ ನಿಂತೆ. ಹಿಂದೆ ಯಾವುದೋ ಜನ್ಮದಲ್ಲಿ ನಾಯಿಯಾಗಿದ್ದಿರಬೇಕು. ಆಗ ಇದೇ ರೀತಿ ನಾನೂ ಕಚ್ಚಾಡಿರಬೇಕು, ಆ ಕಚ್ಚಾಟದ ಸ್ಮರಣೆಯು, ಒಂದು ರೀತಿಯ ಜನ್ಮ ಜನ್ಮಾಂತರದ ವಾಸನೆಯಾಗಿ ನನ್ನಲ್ಲಿ ಉಳಿದಿದ್ದಿರಬೇಕು...ಎದುರಿಗೆ ನಾಯಿಗಳು ಕಚ್ಚಾಡುವಾಗ, ಈ ವಾಸನೆಯು ಉದ್ರೇಕವಾಗಿ, ನಾಯಿಗಳ ಕಚ್ಚಾಟದಲ್ಲಿ ಮಾನಸಿಕವಾಗಿ ನಾನೂ ಪಾಲುಗೊಳ್ಳುವಂತೆ ಆಗಿರಬೇಕು ಎಂದನಿಸಿತು. ಇಲ್ಲದೆ ಇದ್ದರೆ ಅಷ್ಟು ಆಸ್ತೆ ಯಾಕೆ' ನಾಯಿಗಳ ಕಚ್ಚಾಟವನ್ನು ನೋಡಲು?

ಒಂದು ಕರಿಯ ಕಂತ್ರಿನಾಯಿ, ಇನ್ನೊಂದು ಮಣ್ಣು ಬಣ್ಣದ ಅಲ್ಸೇಷಿಯನ್. ಇದ್ದ ಹಲ್ಲುಗಳನ್ನೆಲ್ಲಾ ಪ್ರದರ್ಶಿಸುತ್ತ, ಚುನಾವಣಾ ಘೋಷಣೆಗಳ ತೆರದಲ್ಲಿ ಘುರ್‌ಘುರ್ ಮಾಡುತ್ತ, ಎರಡೂ ಘೋರ ಕಾಳಗಕ್ಕಿಳಿದಿದ್ದುವು. ಸುಮಾರು ಐದು ಆರು ನಿಮಿಷ ಒಂದನ್ನೊಂದು ಕಚ್ಚಿದುವು. ದೇಹಗಳಲ್ಲಿ ರಕ್ತ ಹರಿಯಲಾರಂಭಿಸಿತು. ಹೊರಗೆ ಹೋಗಿ ಕಲ್ಲು ಬೀರಿ, ಅವುಗಳ ಕಿತ್ತಾಟವನ್ನು ನಿಲ್ಲಿಸಬೇಕು ಎನ್ನುವ ಯೋಚನೆಯು ಮೂಡಲೇ ಇಲ್ಲ. ಅಂದರೆ ಆ ಹೊತ್ತಿನಲ್ಲಿ ಅವುಗಳಂತೆ ನಾನೂ ನಾಯಿಯೇ ಆಗಿದ್ದಿರಬೇಕು.

ಕಂತ್ರಿನಾಯಿಯು ಅಲ್ಸೇಷಿಯನ್ನಿನ ಕತ್ತಿಗೆ ಬಾಯಿಹಾಕಿತು. ಅಂದ

ಮೇಲೆ ಕಾಳಗ ಮುಗಿಯಿತು ಎಂದುಕೊಂಡೆ. ಕಂತ್ರಿನಾಯಿಯು ಅಷ್ಟು ದಢೂತಿಯಾಗಿ ಬೆಳೆಯಬೇಕಾದರೆ, ಜೀವನ ಸಂಗ್ರಾಮದಲ್ಲಿ ಅದು ಭಾರೀ ಅನುಭವವನ್ನು ಪಡೆದಿರಲೇಬೇಕು. ಹಾಗಿಲ್ಲದಿದ್ದರೆ ಎಂದೋ ಅದು ಗಾಡಿಯ ಚಕ್ರಕ್ಕೆ ಸಿಕ್ಕಿಯೋ, ಇನ್ನೊಂದು ನಾಯಿಯ ಬಾಯಿಗೆ ಸಿಕ್ಕಿಯೋ ಸತ್ತಿರಬೇಕಾಗಿತ್ತು. ಆ ಅನುಭವದ ಮುಂದೆ, ಸಾಕು ನಾಯಿಯಾಗಿದ್ದ ಅಲ್ಸೇಷಿಯನ್ಸ್ ಎಷ್ಟೇ ಹೊರವಾಗಿ ಬೆಳೆದಿದ್ದರೂ, ಬೇಳೆ ಬೇಯಿಸುವಂತಿರಲಿಲ್ಲ. ಕಂತ್ರಿನಾಯಿಗೆ ಕರುಣೆ ಮೂಡುವುದುಂಟೇ? ಶತ್ರುವಿನ ಕತ್ತು ಅಣಿಯಾಗಿ ಸಿಕ್ಕಿದಾಗ, ಆ ಸದವಕಾಶವನ್ನು ಅದು ಉಪಯೋಗಿಸಿಕೊಂಡು ಶತ್ರುದಮನವನ್ನು ಮಾಡದೆಬಿಡುತ್ತದೆಯೇ? ಇನ್ನೇನು? ಕಂತ್ರಿನಾಯಿಯು ಬಾಯನ್ನು ಕಟಕಾರಿಸಬೇಕು!

ಅಷ್ಟರಲ್ಲೇ ಅಲ್ಸೇಷಿಯನ್ ಬೆನ್ನಮೇಲೆ ಬಿದ್ದುಕೊಂಡಿತು. ನಾಲ್ಕೂ ಕಾಲುಗಳನ್ನು ಮೇಲಕ್ಕೆತ್ತಿತು. "ಅಯ್ಯೋ ಮಂಕುಮುಂಡೇದು, ಅದರ ದೇಹದಲ್ಲಿ ಹೊಟ್ಟೆಯೇ ಅಪಾಯಕ್ಕೀಡಾಗಬಹುದಾದ ಭಾಗ. ಅಲ್ಲಿ ಮೂಳೆಗಳಿಲ್ಲ ರಕ್ಷಣೆಗೆ. ಅಂದ ಮೇಲೆ ಕಂತ್ರಿನಾಯಿ ಹೊಟ್ಟೆಗೆ ಬಾಯಿಹಾಕಿದರೆ ಕರುಳು ಕಿತ್ತುಬರುತ್ತೆ, ಅಲ್ಸೆಷಿಯನ್ ಸತ್ತೇಹೋಗುತ್ತೆ" ಎಂದಂದುಕೊಂಡೆ.

ಆದರೆ ಅದೇನಾಶ್ಚರ್ಯ! ಅಂಗತನಾಗಿ ಅಲ್ಸೇಷಿಯನ್ ಬಿದ್ದುಕೊಂಡಾಗ, ಕಂತ್ರಿನಾಯಿಯು ತನ್ನ ಬಾಯನ್ನು ಬಿಚ್ಚಿತು. ಅಲ್ಸೇಷಿಯನ್ನಿನ ಕತ್ತನ್ನು ಬಿಟ್ಟಿತು. ಕಾದಾಟವನ್ನೂ ನಿಲ್ಲಿಸಿತು. ಕಂತ್ರಿನಾಯಿಗೂ ಕರುಣೆಯು ಉಕ್ಕಿರಬೇಕು. ಅಂಗತನಾಗಿ ಶರಣಾಗತನಾದೆ ಎಂದು ಅಲ್ಸೇಷಿಯನ್ ಬಿದ್ದುಕೊಂಡಾಗ, ಕಂತ್ರಿನಾಯಿಯು ಶರಣಾಗತ ರಕ್ಷಕನಾಯಿತು. ತನ್ನಪಾಡಿಗೆ ತಾನು ಬಾಲವನ್ನು ಕುಣಿಸುತ್ತ ಯುದ್ಧದಲ್ಲಿ ಗೆದ್ದ ವೀರನಂತೆ ಹಾಗೂ ಶತ್ರುವಿಗೆ ಕ್ಷಮೆಯನ್ನು ನೀಡಿದ ಧೀರನಂತೆ ಹೊರಟು ಹೋಯಿತು. ಅರೆಕ್ಷಣವಾದ ಮೇಲೆ ಅಲ್ಸೇಷಿಯನ್ ಎದ್ದು ಮೈಝಾಡಿಸಿ, ಮನೆಗೆ ಹೋಯಿತು ಬಾಲ ಮುದುರಿಕೊಂಡು.

*

ಕಿಟಕಿಯ ಬಳಿಯಿಂದ, ನನ್ನ ಕುರ್ಚಿಗೆ ಹಿಂತಿರುಗಿದೆ. ಜನ್ಮ ಜನ್ಮಾಂತರದ ವಾಸನೆಯು ಉದ್ರೇಕವು ಅಡಗಿದ್ದಿರಬೇಕು. ಕುರ್ಚಿಯಲ್ಲಿ ಕುಳಿತೆ, ತಿರುಗಿ ಪುಸ್ತಕವನ್ನು ಕೈಗೆ ತೆಗೆದುಕೊಂಡೆ.

'ಶ್ರದ್ಧೆಯಿಂದ ಧ್ಯಾನವನ್ನು ಮಾಡುವುದು ಮಾತ್ರದಿಂದಲೇ 'ಭಕ್ತಿ' ಅನ್ನಬಾರದು. ಅದರ ಜತೆಯಲ್ಲಿ ಶ್ರೀ ನಾರಾಯಣನನ್ನು ಪ್ರೀತಿಯಿಂದ, ಒಲವಿನಿಂದ, ಧ್ಯಾನಮಾಡಬೇಕು. ಆಗ ಅಂತಹ ಧ್ಯಾನವನ್ನು ಭಕ್ತಿ ಎನ್ನಬೇಕು, ವಿವೇಕ; ವಿಮೋಕ ಎಂದರೆ ಮಾನಸಿಕ ತ್ಯಾಗ; ಅಭ್ಯಾಸ, ಕ್ರಿಯೆ, ಎಂದರೆ ಪಂಚಕರ್ಮಗಳು; ಕಲ್ಯಾಣ ಎಂದರೆ ಸತ್ಯ, ಅಹಿಂಸೆ ಇತ್ಯಾದಿಗಳ ಅನುಷ್ಠಾನ ಮತ್ತು ಅನುದ್ಧರ್ಷ, ಎಂದರೆ ಅತ್ಯುದ್ವೇಗಕ್ಕೆ ಒಳಗಾಗದೆ ಇರುವುದು; ಈ ಐದೂ ಭಕ್ತನಾಗುವವನಿಗೆ ಬೆಂಬಲ ನೀಡುತ್ತವೆ.

ಆದರೆ ಪ್ರಪತ್ತಿ, ಅಥವಾ ಶರಣಾಗತಿ ಎಂದರೆ, ಸಂಪೂರ್ಣವಾಗಿ, ವಿರೋಧದ ಲವಲೇಶವೂ ಇಲ್ಲದೆ, ಶ್ರೀ ನಾರಾಯಣನಿಗೆ ಆತ್ಮಾರ್ಪಣೆ ಮಾಡಿಕೊಳ್ಳುವುದು. ಆಗ ನಾರಾಯಣನೇ ಸಂಪೂರ್ಣ ರಕ್ಷಣೆಯನ್ನು ಅನುಗ್ರಹಿಸುತ್ತಾನೆ ಎಂಬ ದೃಢವಾದ ಅಚಲವಾದ ವಿಶ್ವಾಸವು ಇದ್ದೇ ಇರುತ್ತದೆ.

ಭಕ್ತಿ ಮತ್ತು ಪ್ರಪತ್ತಿ ಇವೆರಡೂ ಪರಸ್ಪರ ವಿರೋಧವೇನೂ ಇಲ್ಲ. ಭಕ್ತನಲ್ಲಿ ಪ್ರಪತ್ತಿಯ ಅಂಶವು ಇದ್ದೇ ಇರುತ್ತದೆ. ಹಾಗೂ ಪ್ರಪತ್ತಿಯಲ್ಲಿ ಭಕ್ತಿಯ ಅಂಶವೂ ಇರುತ್ತದೆ. ಭಕ್ತಿಯು ತುಸುವಿಳಂಬವಾದ ಮಾರ್ಗ, ಪ್ರಪತ್ತಿಯು ಬೇಗ ಗುರಿ ತಟ್ಟುವ ಮಾರ್ಗ.

ಎಂದು ಅರ್ಥ ಬರುವ ಭಾಗವನ್ನು ಓದಿದೆ.

*

ಕಂತ್ರಿನಾಯಿಯು ಅಲ್ಸೇಷಿಯನ್ನಿನ ಕತ್ತು ಹಿಡಿದಾಗ, 'ಇನ್ನು ಯಾವ ರಕ್ಷಣೆಯೂ ನನಗಿಲ್ಲ. ನನ್ನ ಸಾಮರ್ಥ್ಯವೆಲ್ಲವೂ ತೀರಿಹೋಯಿತು' ಎಂದಂದುಕೊಂಡು, ಅಲ್ಸೇಷಿಯನ್ನು ಸಂಪೂರ್ಣ ಶರಣಾಗತವಾಯಿತು. ಹೊಟ್ಟೆಯನ್ನು ಮುಂದೆ ಚಾಚಿ, ಶತ್ರುವಿಗೆ ಅರ್ಪಿಸಿತು. ಈ ರೀತಿಯ ಪೂರ್ಣ ಶರಣಾಗತಿಯನ್ನು ಕಂಡು, ಕಂತ್ರಿ ನಾಯಿಯು ತನ್ನ ವೈರವನ್ನು ಸಾಧಿಸದೆ, ಹಗೆತನವನ್ನು ಮರೆತಿತು. ಶರಣಾಗತನಾದವನಿಗೆ ರಕ್ಷಣೆಯನ್ನೂ ಕೊಟ್ಟಿತು. ನಾಯಿಗಳಲ್ಲಿ ಶರಣಾಗತಿಯು ದೇಹಕ್ಕೆ, ದೇಹದ ರಕ್ಷಣೆಗೆ ಅನ್ವಯಿಸಿದೆ.

ಆದರೆ ಮನುಷ್ಯನು ತನ್ನ ಮನಸ್ಸಿನ ಪ್ರಗತಿಯಿಂದ, ದೇಹದ ಮೇಲೆ ಸಾಕಷ್ಟು ಹತೋಟಿಯನ್ನು ಪಡೆದಿದ್ದಾನೆ. ಆದರೂ ಮನಸ್ಸು ಮನಸ್ಸಿನಿಂದಲೇ ತಾಪತ್ರಯಗಳಿಗೆ ಒಳಗಾಗಿ ತನ್ನಲ್ಲಿ ತಾನೇ ಕಾದಾಡುತ್ತದೆ. ಆಗ ಸಂಪೂರ್ಣವಾಗಿ ಮನಸ್ಸನ್ನು ಭಗವಂತನಲ್ಲಿ ಶರಣಾಗತವಾಗುವಂತೆ ಮಾಡಿ

ದರೆ, ಆಗ ಭಗವಂತನೇ ಮುಂದೆ ಬಂದು ಸಕಲ ರಕ್ಷಣೆಯನ್ನೂ ಮನಸ್ಸಿಗೆ ಇತ್ತು ಮನಸ್ಸು ಭಗವಂತನಲ್ಲಿ ಐಕ್ಯವಾಗುವಂತೆ ಅನುಗ್ರಹಿಸುತ್ತಾನೆ.

ಅಂದರೆ ನಾಯಿಃಗಳಲ್ಲಿ ರಕ್ಷಣೆಯನ್ನು ಕಡೆಗಾಲದಲ್ಲಿ ಪಡೆಯಬೇಕಾದರೆ, ಶರಣಾಗತಿಯೇ ಉಪಾಯ. ಹಾಗೆಯೇ ಮಾನವರಲ್ಲಿ ರಕ್ಷಣೆಯನ್ನು ಮನಸ್ಸಿನ ಕಡೆಗಾಲದಲ್ಲಿ ಪಡೆಯಬೇಕಾದರೆ ಪ್ರಪತ್ತಿಯೇ ದಿವ್ಯೋಪಾಯ ಎನ್ನಲೂ ಬಹುದು.

ಹೆಬ್ಬೆರಳು

ಗಾಯತ್ರೀ ಜಪವನ್ನು ಮಾಡುವಾಗ, ಹೆಬ್ಬೆರಳ ತುದಿಯಿಂದ ಇತರ ಬೆರಳುಗಳ ಕೀಲುಗಳನ್ನು, ಒಂದೊಂದು ಜಪ ಮಾಡಿದಾಗಲೂ, ವರಸೆಯಾಗಿ ಮುಟ್ಟುವುದನ್ನು ಕಲಿಸುತ್ತಾರೆ. ಇಷ್ಟು ಜಪಗಳನ್ನು ಮಾಡಿದೆವು ಎಂದು ಲೆಕ್ಕವನ್ನು ಇಡಲು ಇದು ಸಹಾಯಕವಾಗುತ್ತದೆ. ಹಾಗೂ ಬೆರಳುಗಳಿಗೆ ನಿಖರವಾದ ಹಾಗೂ ಅಭ್ಯಾಸವಾಗಿರುವ ಕೆಲಸವೊಂದಿದ್ದರೆ, ಆಗ ಜಪ ಮಾಡುವವನ ಮನಸ್ಸು ದೇವೀ ಗಾಯತ್ರಿಯಲ್ಲಿ ಮಗ್ನವಾಗುವುದು ಹೆಚ್ಚು ಸುಲಭ. ಈ ರೀತಿ ಹೆಬ್ಬೆರಳಿನಿಂದ ಇತರ ಬೆರಳುಗಳ ಕೀಲುಗಳನ್ನು ಮುಟ್ಟುವುದರಲ್ಲಿ ಇನ್ನೂ ಯಾವುದಾದರೂ ಗೂಢಾರ್ಥವಿರಬಹುದೇ?

*

ಹೆಬ್ಬೆರಳು

ಮೃಗಾಲಯದಲ್ಲಿರುವ ಕೋತಿಗಳನ್ನು ನೋಡಲು, ಕುತೂಹಲವಿದ್ದ ಮನುಷ್ಯರಿಗೆಲ್ಲಾ ತುಂಬಾ ಆಸೆ. ಚಿತ್ರ ವಿಚಿತ್ರವಾದ, ಕಂಡವರ ಕಣ್ಣುಸೆಳೆಯುವ ರಂಗು ಎಲ್ಲೆಲ್ಲೋ ಇರುವ, ವಿಧವಿಧ ಗಾತ್ರದ ಕೋತಿಗಳು, ಪುರಾತನ ಕಾಲದಲ್ಲಿ ನಮ್ಮ ದಾಯಾದಿಗಳಾಗಿದ್ದರು ಎಂದು ಖಚಿತವಾಗಿದೆ. ಅಪ್ರಿಯವಾದರೂ ಈ ಸಿದ್ಧಾಂತವನ್ನು ಅಲ್ಲಗಳೆಯುವಂತಿಲ್ಲ.

ಪಂಜರದಲ್ಲಿರುವ ಕೋತಿಗಳಿಗೆ ನೆಲಗಡಲೆಕಾಯನ್ನು ಎಸೆಯುವುದು ಮಕ್ಕಳಿಗೆ ತುಂಬಾ ಖುಷಿಯಾದ ಆಟ. ನೆಲಗಡಲೆಕಾಯನ್ನು ಬಿಡಿಸಿ, ಕಾಳನ್ನು ಮುಕ್ಕಿದಾಗ, ನೋಡಿದ ಮಕ್ಕಳು "ಎಷ್ಟು ಲಕ್ಷಣವಾಗಿ ನಮ್ಮಂತೆಯೇ ಕಾಯನ್ನು ಬಿಡಿಸಿ, ಹೊಟ್ಟನ್ನು ಎಸೆದು, ಕಾಳನ್ನು ತಿನ್ನುತ್ತದೆ, ಎಷ್ಟು ಜಾಣವಮುಂಡೇದು" ಎಂದು ಉದ್ಗಾರ ತೆಗೆಯುವುದೂ ಸ್ವಾಭಾವಿಕ. ನೆಲಗಡಲೆಕಾಯನ್ನು ಕೋತಿಯು ಬಿಡಿಸುವಾಗ, ಯಾವ ರೀತಿಯಲ್ಲಿ ಕಡಲೆ

ಕಾಯನ್ನು ಕೋತಿಯು ಹಿಡಿದುಕೊಳ್ಳುತ್ತದೆ ಎನ್ನುವುದನ್ನು ಮಕ್ಕಳು ಗಮನಿಸುವುದಿಲ್ಲ.

ಬೆರಳುಗಳ ಮಧ್ಯೆ ಕಾಯನ್ನು ಭದ್ರವಾಗಿಟ್ಟುಕೊಂಡು, ಹಲ್ಲಿನಿಂದ, ಹೊಟ್ಟನ್ನು ಕಡಿದು, ನಂತರ ಬಿಸಾಕಿ, ಕಾಳನ್ನು ತಿನ್ನುತ್ತವೆ. ಹೆಬ್ಬೆರಳು ತೋರ ಬೆರಳುಗಳ ತುದಿಯಿಂದ, ನಾವು ಮಾಡುವಂತೆ ನೆಲಗಡಲೆಕಾಯನ್ನು ಹಿಡಿದುಕೊಂಡು, ಇನ್ನೊಂದು ಬೆರಳ ತುದಿಯ ಉಗುರಿನಿಂದ ಕಾಯನ್ನು ಬಿಡಿಸುವುದಿಲ್ಲ; ಕೋತಿಗಳು. ಏಕೆಂದರೆ ಅವುಗಳ ದೇಹರಚನೆಯು ಸಾಧಿಸಿರುವ ಪ್ರಗತಿಯ ಹಂತದಲ್ಲಿ ಹೆಬ್ಬೆರಳ ತುದಿಯಿಂದ ಇತರ ಬೆರಳುಗಳ ತುದಿಯನ್ನು ಅವು ಮುಟ್ಟಲಾರವು. ಮನುಷ್ಯನ ಹಂತಕ್ಕೆ ಬಂದಾಗ ಹೆಬ್ಬೆರಳು ಈ ರೀತಿ ಅದೇ ಕೈಯ್ಯಿನ ಇತರ ಬೆರಳುಗಳನ್ನು ಬುಡದಿಂದ ತುದಿಯುವರೆಗೆ ಮುಟ್ಟಲು ಸಾಧ್ಯವಾಗುತ್ತದೆ.

ನಾನಾ ಪ್ರಯೋಜನ

ಈ ಸೌಲಭ್ಯದಿಂದ ಮಾನವನು ಅತ್ಯಂತ ಉಪಯುಕ್ತವಾದ ಪ್ರಯೋಜನವನ್ನು ಪಡೆದಿದ್ದಾನೆ. ಬಿಲ್ಲಿಗೆ ಹೆದೆಯೇರಿಸಿ ಬಾಣ ಬಿಡುವುದು, ಈ ಸೌಲಭ್ಯದಿಂದಲೇ ಸಾಧ್ಯವಾಗಿರುವುದು. ಕೋವಿಯನ್ನು ಹಿಡಿದು ಗುಂಡನ್ನು ಬಾರಿಸುವ ಮೊದಲು, ಕುದುರೆಯನ್ನು (Trigger) ಎಳೆಯುವುದೂ ಈ ಸೌಲಭ್ಯದಿಂದಲೇ. ಚಿಟಿಕೆ ನಶ್ಯವನ್ನು ಏರಿಸಬೇಕಾದರೂ, ಈ ಸೌಲಭ್ಯವೇ ಸಹಕಾರಿಯಾಗಿದೆ. ಕೋತಿಗಳು ಅಣಕಿಸುವ ಸ್ವಭಾವವನ್ನು ಹೊಂದಿರುತ್ತವೆ. ಸಾಕಿದ ಕೋತಿಗಳ ಎದುರು, ಪ್ರಯೋಗಕನು ನಶ್ಯ ಹಾಕಿಕೊಂಡ ಅನ್ನಿ. ನಂತರ ಕೋತಿಗಳೆದುರಿಗೆ ನಶ್ಯದ ಪೆಟ್ಟಿಗೆಯನ್ನು ತೆರೆದಿರಿಸಿದ ಅನ್ನಿ. ಅಣಕಿಸುವ ಸ್ವಭಾವವುಳ್ಳ ಕೋತಿಯು, ಜಾಯಮಾನವು ನಶ್ಯ ಹಾಕಿಕೊ ಎಂದು ಒತ್ತಾಯಪಡಿಸಿದರೂ, ಮನುಷ್ಯನಂತೆ ಚಿಟಿಕೆ ನಶ್ಯವನ್ನು ಹಿಡಿಯಲೂ ಆಗದು ; ಮೂಗಿಗೆ ಏರಿಸಲೂ ಆಗದು. ಈ ಒಂದು ಚಟದಿಂದ ಕೋತಿಯು ಪಾರಾಗಿರುವುದು ಒಳ್ಳೆಯದೇ ಆಯಿತು ಎನ್ನಬೇಕು. ಏಕೆಂದರೆ ಸಾಕುಕೋತಿಗಳಿಗೆ, ಸಿಗರೇಟ್ ಸೇದುವುದನ್ನು ಕಲಿಸಿದ್ದಾರೆ. ಬೆರಳು ಸೇರಿ ಹೋದವರು, ಲೋಟಾವನ್ನು ಅಂಗೈಯಲ್ಲಿ ಅವಲಕ್ಷಣವಾಗಿ ಹಿಡಿಯುವುದಿಲ್ಲವೇ, ಹಾಗೆ ಸಾಕು ಕೋತಿಗಳು ಪ್ರಯೋಗಶಾಲೆಗಳಲ್ಲಿ ಲೋಟಗಳನ್ನು ಹಿಡಿದು ಕುಡಿಯುವುದನ್ನೂ ಕಲಿತಿವೆ.

ಹೆಬ್ಬೆರಳ ತುದಿಯಿಂದ ಅದೇ ಕೈಯ್ಯಿನ ಇತರ ಬೆರಳುಗಳನ್ನು ಸಂಪೂರ್ಣ

ವಾಗಿ ತಡವರಿಸಲು ಸಾಧ್ಯವಾಗಿರುವುದು, "Opponens" ಎಂಬ ಕಿರು ಮಾಂಸಖಂಡಗಳಿಂದ. ಇವು ಹೆಬ್ಬೆರಳಿಗೆ ಲಗತ್ತಾಗಿ, ಈ ರೀತಿಯ ಚಲನ ಗಳನ್ನು ಮಾಡಿಸುತ್ತದೆ. ಪ್ರಕೃತಿಯ ಪ್ರಗತಿಯ ಕೆಲವು ಕೆಳ ಹಂತದ ಪ್ರಾಣಿಗಳೊಂದೆರಡರಲ್ಲಿ ಹೆಬ್ಬೆರಳಿಗೆ "Opponens" ಮಾಂಸಗಳು ಇರು ತ್ತವೆ. ಆದರೆ ಯಾವುದೋ ಕಾರಣಗಳಿಂದ ಆ ಬೆಳವಣಿಗೆಯು ಮುಂದು ವರೆಯಲಿಲ್ಲ. ಅದೇ ಹಂತದಲ್ಲಿ ಉಳಿಯಿತು.

ಕೋತಿಗಳಿಗೆ ಸಾಧ್ಯವಾಗದೆ ಇರುವ, ಈ ಸೌಲಭ್ಯವನ್ನು ಮನುಷ್ಯನು ಕಾಲಕ್ರಮೇಣ ಸಾಧಿಸಿಕೊಂಡ ಮೇಲೆ, ಹೆಬ್ಬೆರಳ ತುದಿಯಿಂದ ಇತರ ಬೆರಳು ಗಳ ತುದಿಯನ್ನು ಇಕ್ಕಳದಂತೆ ಹಿಡಿಯಲು ಕಲಿತ ಮೇಲೆ, ಆಯುಧಗಳನ್ನು ಸೃಷ್ಟಿಸಲು ತುಂಬಾ ಅನುಕೂಲವಾಯಿತು. ಸ್ವರಕ್ಷಣೆಗೂ ಹಾಗೂ ಬೇಟೆ ಯಾಡಲು, ತಕ್ಕ ಆಯುಧಗಳನ್ನು ಮಾನವನು ರಚಿಸಿಕೊಂಡ. ಕಾಲಾನು ಕಾಲದಲ್ಲಿ ಇತರ ಪ್ರಾಣಿಗಳ ಮೇಲೆ ಮಾನವನು ಹತೋಟಿಯನ್ನೂ ಹೊಂದಿದ. ಹೀಗಾಗಲು ಪ್ರಗತಿ ಹೊಂದುತ್ತಿದ್ದ, ವಿಕಸಿಸುತ್ತಿದ್ದ, ಅವನ ಮನಸ್ಸು ಹಿರಿಯ ಹೊಣೆಯನ್ನು ವಹಿಸಿತು. ದಿಟ. ಆದರೆ ಆ ಮನಸ್ಸು ದೇಹದಲ್ಲಿ ದೊರಕಿದ ಸೌಲಭ್ಯವನ್ನು ಜಾಣತನದಿಂದ ಬಳಸಿಕೊಂಡಿತು ಎನ್ನಬೇಕು.

ಗಾಯತ್ರೀಜಪ

ಹೆಬ್ಬೆರಳಿನಿಂದ ಇತರ ಬೆರಳುಗಳನ್ನು ಸಂಪೂರ್ಣವಾಗಿ ಮುಟ್ಟುವ ಈ ಅತ್ಯುಪಯುಕ್ತ ಸೌಲಭ್ಯವನ್ನು ಮಾನವ ಪಡೆದ. ಅದರ ಸಂಕೇತವಾಗಿ, ಅದನ್ನು ಮರೆಯದೆ ಇರಲಿ ಎಂದು ಗಾಯತ್ರೀಜಪವನ್ನು ಮಾಡುವಾಗ, ಈ ರೀತಿ ಲೆಕ್ಕವಿಟ್ಟರು ಎಂದು ನಾನನ್ನುತ್ತಿಲ್ಲ. ಕಣ್ಣಿಗೆ ಕಂಡ ಸೌಲಭ್ಯವನ್ನು ಜಪದ ಎಣಿಕೆಗೂ ಬಳಸಿಕೊಂಡರು ಎನ್ನಬೇಕು.

ಆದರೂ ಒಂದು ಕಿರು ಸಂದೇಹವು ಮನಸ್ಸಿನ ಮೂಲೆಯಲ್ಲಿ ಎಲ್ಲೋ ಕಾಡುತ್ತಿದೆ. ಬ್ರಹ್ಮಾಂಡದ ಮೂಲವನ್ನೇ ಅಧ್ಯಯನ ವಿಷಯವನ್ನಾಗಿಟ್ಟು ಕೊಂಡ ಪುರಾತನ ಋಷಿಗಳು, ಪ್ರಚಂಡ ಮನನಿಗರು, ಪಿಂಡಾಂಡದ ಮೂಲವನ್ನೂ ಪ್ರಗತಿಯನ್ನೂ ದರ್ಶನಿಸಿದ್ದರೋ ಏನೋ ? ಈ ಸೌಲಭ್ಯವು ಮಾನವನಿಗೆ ದೊರಕಿದ ಸಂಕೇತವಾಗಿಯೇ, ಮುಖ್ಯವಾದ ಗಾಯತ್ರೀಜಪಕ್ಕೆ ಈ ಸೌಲಭ್ಯದ ಬಳಕೆಯನ್ನು ನಿಯಮಿಸಿದರೋ? ಎನ್ನುವ ಅಸ್ಪಷ್ಟ ಅನುಮಾನ.

ಪ್ರತ್ಯಕ್ಷ

"ಆ ಸಾಧುವಿಗೆ ದೇವರು ಪ್ರತ್ಯಕ್ಷನಾಗಿದ್ದನಂತಪ್ಪ, ಅಪ್ಪರಮಟ್ಟಿನ ಮಹಾತ್ಮ" ಎಂದು ಸಂತರನ್ನು ಜನತೆಯು ಗೌರವಿಸುತ್ತಿತ್ತು. ಪ್ರತ್ಯಕ್ಷ ಎಂದರೆ ಏನು ? ಪ್ರತಿ–ಅಕ್ಷ, ನಮ್ಮ ಕಣ್ಣೆದುರಿಗೆ ಕಾಣಿಸುವುವು. ಕಣ್ಣುಗಳು, ಸಾಕ್ಷಾತ್ ಅಂದರೆ ಸ-ಅಕ್ಷಾತ್ ಕಣ್ಣುಗಳಿಂದಲೇ, ಕಂಡುದನ್ನು ಕಣ್ಣುಳ್ಳವನು ನಂಬಲೇಬೇಕು.

ಏನೋ ತುಂಬಾ ಸುಲಭವಾದ ವಿಷಯ ಇದಕ್ಕೆ ಮನನ ಏಕೆ ಬೇಕು ಅನ್ನಿಸಬಹುದು. ಆದರೆ ಅರೆಕ್ಷಣ ಯೋಚಿಸಿದರೆ ಗಭೀರವಾದ ಸಮಸ್ಯೆಗಳು ಹೆಡೆಯೆತ್ತುತ್ತವೆ.

ಕಣ್ಣಿಗೆ ಕಾಣಿಸುವುದು ಎಂದರೆ ವಿಜ್ಞಾನದ ರೀತಿಯಾಗಿ ವಿವರಗಳೇನು ?

ಎದುರಿರುವ ವಸ್ತು

ಕಣ್ಣಿನ ಎದುರಿರುವ ವಸ್ತುವಿನ ಮೇಲೆ, ಈಗ ನನಗೆ ಬರೆಯುತ್ತಿರುವ ಹಾಳೆಯ ಮೇಲೆ ; ನಿಮಗೆ, ಅಚ್ಚಾದ ಹಾಳೆಯ ಮೇಲೆ ; ಬೆಳಕು ಬಿದ್ದಿರುತ್ತದೆ. ಬೆಳಕಿಲ್ಲದಿದ್ದರೆ ಹಾಳೆಯು ಕಾಣಿಸುವುದಿಲ್ಲ. ಬರೆಯಲೂ ಅಸಾಧ್ಯ. ಈ ವಸ್ತುಗಳ ಮೇಲೆ ಬಿದ್ದ ಬೆಳಕು ಅಲೆಯಲೆಯಾಗಿ ನಮ್ಮ ಕಣ್ಣಿನತ್ತ, ಸೆಕೆಂಡಿಗೆ 1.86,248 ಮೈಲುಗಳ ವೇಗದಲ್ಲಿ ಪಸರಿಸುತ್ತದೆ. ವಸ್ತುವಿನ ಅಂದರೆ ನಮ್ಮ ನಿದರ್ಶನದಲ್ಲಿ ಹಾಳೆಗಳ ಮೇಲೆ ಬಿದ್ದ ಬೆಳಕು ಎಲ್ಲೆಲ್ಲೂ ಪಸರಿಸುತ್ತದೆ. ಒಂದು ರೀತಿಯಲ್ಲಿ ಬೆಳಕಿನ ಆ ಅಲೆಗಳೆಲ್ಲಾ ವ್ಯರ್ಥ. ಯಾವ ಯಾವ ಅಲೆಗಳು ನಮ್ಮ ಕಣ್ಣಿನತ್ತ ಹರಿದು ಬರುತ್ತವೋ, ಅವು ನಮ್ಮ ಕಣ್ಣುಗಳ ತರಹಾವಾರಿ ಸ್ವಯಂಚಾಲಿತ ಲೆನ್ಸ್‌ಗಳ ಮೂಲಕ, ಬಗ್ಗಿಸಲ್ಪಟ್ಟು ಬಿಗ್ಗಿಸಲ್ಪಟ್ಟು ಕಣ್ಣುಗಳ ಹಿಂದೆ ಇರುವ 'ರೆಟಿನಾ' ಎಂಬ ದೃಷ್ಟಿಯನ್ನು ಅರ್ಥ ಮಾಡಿ ಸುಪ್ಪತ್ತಿಗೆಯ ಮೇಲೆ ತಲೆ ಕೆಳಗಾಗಿ ಹಾಗೂ ಅತ್ಯತಿ ಸಣ್ಣದಾಗಿ ಬಿಂಬಿಸುತ್ತದೆ.

ಬೆಳಕಿನ ಈ ಅಲೆಗಳ ಶಕ್ತಿಯು ರಸಾಯನಿಕ ಪ್ರತಿಕ್ರಿಯೆಗಳಿಂದ ವಿದ್ಯುತ್ ಶಕ್ತಿಯಾಗಿ, ದೃಷ್ಟಿಯ ನರಗಳನ್ನು ಉದ್ರೇಕಿಸುತ್ತವೆ. ಮೆದುಳಿನಲ್ಲಿರುವ ದೃಷ್ಟಿಯ ಕೇಂದ್ರಕ್ಕೆ ಈ ಸುದ್ದಿಯು ಮುಟ್ಟಿದಾಗ, ಅದು ಹಿಂದಿನ ಅನುಭವಗಳ ನೆನಪನ್ನೂ ಬಳಸಿಕೊಂಡು, "ನಾ ಕಾಣುತ್ತಿರುವುದು ಇದು" ಎಂಬ ಅರಿವನ್ನು ಉಂಟುಮಾಡುತ್ತದೆ. ನಮ್ಮ ನಿದರ್ಶನದಲ್ಲಿ ಹಾಳೆ ಮತ್ತು ಅಕ್ಷರಗಳು ಕಂಡವು ಎಂದಂದುಕೊಳ್ಳುತ್ತೇವೆ.

ಗಮನಕ್ಕೆ ಬರದು

ಆದರೆ ರಸ್ತೆಯಲ್ಲಿ ಬೈಸಿಕಲ್ಲಿನ ಮೇಲೆ ಹೋಗುವಾಗ, ರಸ್ತೆಯ ಮೇಲೆ ಇರಬಹುದಾದುವನ್ನು ಕಾಣುತ್ತೇವೆ, ಗಮನಿಸುತ್ತೇವೆ. ರಸ್ತೆಯ ಅಂಚಿನಲ್ಲಿರುವ ಕಂಬಗಳೂ ಕಟಕಟೆಗಳೂ ಪಾದಚಾರಿಗಳೂ ಕೂಡ ತಮ್ಮ ತಲೆಕೆಳಕಾದ ಕಿರುಬಿಂಬವನ್ನು ಸೈಕಲ್ ಸವಾರನ ರೆಟಿನಾ ಮೇಲೆ ಮೂಡಿಸುತ್ತವೆ. ಅವೂ ದೃಷ್ಟಿಯ ಕೇಂದ್ರಕ್ಕೆ ಸುದ್ದಿಯನ್ನು ಮುಟ್ಟಿಸುತ್ತವೆ. ಆದರೆ ನಮ್ಮ ಗಮನಕ್ಕೆ ಬರುವುದಿಲ್ಲ.

ಏಕೆ ?

ರಸ್ತೆಯಲ್ಲಿ ಬೈಸಿಕಲ್ಲನ್ನು ನಡೆಸುವಾಗ, ಆಗಬಹುದಾದ ಅಪಘಾತಗಳನ್ನು ನಿವಾರಿಸಬೇಕು. ಹಾಗಾಗಬೇಕಾದರೆ ರಸ್ತೆಯ ಮೇಲೆ ಅಪಘಾತವನ್ನೆಸಗಬಹುದಾದ, ಸಂದರ್ಭಗಳನ್ನು ಗಮನಿಸಬೇಕು. ಗಮನಿಸಬೇಕು ಎಂದಾಗ ನೋಡಿದರೆ ಮಾತ್ರ ಸಾಲದು ಎಂಬ ಅರ್ಥವೂ ಅಡಕವಾಗಿರುತ್ತದೆ. ಅಂದರೆ ಮೆದುಳಿನಲ್ಲಿರುವ ದೃಷ್ಟಿಯ ಕೇಂದ್ರವು, ಗ್ರಹಿಸಿದ ಸುದ್ದಿಯು, ನಮ್ಮ ಮನಸ್ಸಿನ ಗಮನಿಸುವ ಭಾಗಕ್ಕೆ ಅನ್ವಯವಾಗುವುದಕ್ಕೆ ಮುನ್ನ ಎಲ್ಲೋ ಒಂದು ಪರದೆ ಇದೆ. ಒಂದು ಅಡಚಣೆಯಿದೆ. ಈ ಪರದೆಯನ್ನೂ, ಈ ಅಡಚಣೆಯನ್ನೂ ನಮ್ಮ ಮನಸ್ಸೇ ಸೃಷ್ಟಿಸಿಕೊಂಡಿದೆ. ಮಾಯಾಪರದೆ ಇದು, ಮಾಯೆಯ ಅಂತರ ಪಟ.

*

ಈ ಚಿತ್ರ ಗಮನಿಸಿ



ಈ ಚಿತ್ರವನ್ನು ನೋಡಿ. ಕಾಳಕಪ್ಪಿನ ಮೇಲೆ ನಿಮ್ಮ ಗಮನವನ್ನು ಹರಿಸಿದರೆ ಇಬ್ಬರು ಮುಪ್ಪಿನ ಮುದುಕರ 'ಸಿಲ್ಹುಟಿ' ಕಾಣಿಸುತ್ತದೆ. ಆದರೆ ಬೆಳಂಬೆಳಗುವ ಬಿಳಿಯುದರ ಮೇಲೆ ಗಮನವನ್ನು ಹರಿಸಿ. ಸುಂದರವಾದ ಪುಷ್ಪಕರಂಡವು ಕಾಣಿಸುತ್ತದೆ.

ಮನಸ್ಸನ್ನು, ಅಂದರೆ ನಮ್ಮ ಸ್ವಾಧೀನದಲ್ಲಿರುವ ತೋರ ಮನಸ್ಸನ್ನು, ಯಾವ ಭಾಗಕ್ಕೆ ಗುರಿಯಿಡುತ್ತೆವೋ, ಅದೇ ನಮ್ಮ ಗಮನಕ್ಕೆ ಬರುವುದು. ನಾವು ಪ್ರತಿ ಅಕ್ಷವಾಗಿ ಕಂಡುದುದೆಲ್ಲವೂ 'ಸತ್ಯ' ಎಂದು ಹೇಳಬರುವುದಿಲ್ಲ. ಗಮನಿಸುವ ಮನಸ್ಸು ಯಾವುದನ್ನು ಕಾಣುತ್ತದೆಯೋ, ಅದೇ ಆ ಕಾಲಕ್ಕೆ ಸತ್ಯ ಮತ್ತು ನಿತ್ಯ. ಮರುಕ್ಷಣ ಗಮನಿಸುವ ಮನಸ್ಸು, ಅಲ್ಲೇ ಶಾಶ್ವತ ವಾಗಿರುವುದನ್ನು ಕಂಡಾಗ, ಅದೂ ಆ ಕಾಲಕ್ಕೆ ಸತ್ಯ ಮತ್ತು ನಿತ್ಯ.

ಕ್ಷಣಾಂಶ ಕಂಡ ಮುಪ್ಪಿನ ಮುದುಕ ಮುದುಕಿಯರೂ, ಆ ಕ್ಷಣಾಂಶದಲ್ಲಿ ಸತ್ಯ ಮತ್ತು ನಿತ್ಯ. ಮರು ಕ್ಷಣಾಂಶ ಕಂಡ ಸುಂದರವಾದ ಪುಷ್ಪ ಕರಂಡವೂ ಆ ಕ್ಷಣಾಂಶದಲ್ಲಿ ಸತ್ಯವೂ ಹೌದು, ನಿತ್ಯವೂ ಹೌದು.

ಅಂದರೆ ಸತ್ಯ ದರ್ಶನವು ಕ್ಷಣಾಂಶದದ್ದಾದರೂ, ಆ ಅಲ್ಪ ಕಾಲಾವಧಿಯಲ್ಲಿ ನಿತ್ಯವಾದಂತೆಯೇ ಇರುತ್ತದೆ, ಶಾಶ್ವತವಾದಂತೆಯೇ ಭಾಸವಾಗುತ್ತದೆ. ಯೌವನದ ಮಧುಚಂದ್ರದ ಸ್ಮರಣೆ ಇದ್ದಂತೆ. ಆದರೆ ಗಮನವು ಸೆಕೆಂಡು ಮಾತ್ರ ಹೊರಳಿದಾಗ ಮುಂದೆ ಗಮನಕ್ಕೆ ಬಂದುದೇ ಸತ್ಯ, ಅದೇ ನಿತ್ಯ, ಎಂದು ಭಾಸವಾಗುತ್ತದೆ, ಮುಪ್ಪಡರಿದವರ ಸಿಲ್ಹುಟಿಗಳಂತೆ.

ಯಾವುದು ಸತ್ಯ ? ಯಾವುದು ಮಿಥ್ಯ ?

ಇವುಗಳಲ್ಲಿ ಸತ್ಯವಾದುದು ಯಾವುದು ? ಮಿಥ್ಯವಾದುದು ಯಾವುದು ? ಕಾಲನ, ಕ್ಷಣಾಂಶ ಮನಸನ್ನು ಕ್ಷಣಕ್ಕೂ ಮರೆಸುತ್ತಿರುವ ಹಾಗೂ ಮರೆಸುತ್ತಿರುವ ಕಾಲನ ದೃಷ್ಟಿಯಿಂದ ನೋಡಿದರೆ, ಮುಪ್ಪಿನ ಸಿಲ್ಹುಟಿಗಳೂ, ಸುಂದರ ಸತ್ಯ. ಸುಂದರ ಪುಷ್ಪ ಕರಂಡವೂ ಮಿಥ್ಯ.

ಅಂದರೆ ಕಾಲನ ದೃಷ್ಟಿಯಿಂದ ಕೆಚ್ಚಿದ್ದರೆ, ದೈವಾನುಗ್ರಹವು ಆ ರೀತಿ ಫಲಿಸಿದರೆ, ಸತ್ಯವೂ, ಸುಂದರವೂ, ಮಿಥ್ಯವೂ ಮುಪ್ಪೂ ಇವೆಲ್ಲವೂ ಒಂದೇ. ಇವೆಲ್ಲವೂ ಶೂನ್ಯ. ಸೊನ್ನೆ. ಮನಸ್ಸಿನ ಗಮನದಿಂದಾಗಿ ಈ ದ್ವಂದ್ವ; ಈ ಭೇದ ; ಈ ಭಿನ್ನತೆ.

ಮನಸ್ಸಿನ ಗಮನವು ಮನಸ್ಸನ್ನು ಮೆಟ್ಟಿ ಮುಂದಡಿಯಿಟ್ಟಾಗ, ದೇವರು ಪ್ರತಿ ಅಕ್ಷನಾಗುವುದೂ ಇಲ್ಲ. ಪ್ರತಿಯಾದ ಅಕ್ಷಿಯು ಅವನನ್ನು ಕಾಣಲೂ ಅಸಾಧ್ಯ. ಏಕೆಂದರೆ ಈ ದ್ವಂದ್ವವೇ ಇರುವುದಿಲ್ಲ.

ಮನಃಶಾಸ್ತ್ರದ ಮೊದಲ ಮೊದಲ ಪಾಠಗಳಲ್ಲಿ ಕಲಿಸುವ ಈ ಚಿತ್ರ ಪ್ರತ್ಯಕ್ಷ ಪ್ರಮಾಣದ ಮಿಥ್ಯತೆಯನ್ನು ಎಷ್ಟು ಸುಗಮವಾಗಿ, ಗಮನಕ್ಕೆ ತರುತ್ತದೆ ! !

"ಸಂಭವಾಮಿ ಯುಗೇ ಯುಗೇ"

ಮಾನವನ ರಚಿತ ಚರಿತ್ರೆಯಲ್ಲಿ ವಿಜ್ಞಾನದ ಪ್ರಗತಿಯು ಸರಾಗವಾಗಿ ನಡೆದುಬಂದಿಲ್ಲ. ಒಂದು ಕಾಲದಲ್ಲಿ ಅಸಾಧ್ಯ ಪ್ರಗತಿಯನ್ನು ತೋರಿ, ಹಲವು ಶತಮಾನಗಳ ಕಾಲ ಕುಂಟುತ್ತ ನಡೆದು, ತಿರುಗಿ ಒಮ್ಮೆ ಆಸ್ಫೋಟನೆಯಾದಂತೆ ಜಾಜ್ವಲ್ಯಮಾನವಾಗಿ, ನಂತರ ತಿರುಗಿ ಮಂಕಾಗಿ ಮತ್ತೊಮ್ಮೆ ಎಚ್ಚರಗೊಂಡು ಪ್ರಜ್ವಲಿಸುತ್ತಲೇ ನಡೆದುಬಂದಿದೆ.

ಮೊತ್ತ ಮೊದಲು

ಮಾನವನ ರಚಿತ ಚರಿತ್ರೆಯಲ್ಲಿ ಕ್ರಿ.ಪೂ. 600 ಸ್ಮರಿಸಬೇಕಾದುದು. ನಮ್ಮಲ್ಲಿ ಇದಕ್ಕೆ ಶತಶತಮಾನಗಳ ಹಿಂದಿನಿಂದಲೂ ವಿಜ್ಞಾನದ ಹಾಗೂ ಸಂಸ್ಕೃತಿಯ ಪ್ರಗತಿಯಾಗಿದ್ದರೂ, ಅದನ್ನು ಬರವಣಿಗೆಗೆ ಇಳಿಸಲಿಲ್ಲ. ವದ್, ಮಾತು, ಮಾತುಗಳು ಮೂಲಕ ಅವನ್ನು ನೆನಪಿನಲ್ಲಿಡಲಾಯಿತೇ ಹೊರತು ಬರೆದಿಡಲಿಲ್ಲ. ಪಾಶ್ಚಾತ್ಯರಲ್ಲಿ ಕ್ರಿಸ್ತ ಪೂರ್ವದ 600ರ ವೇಳೆಗೆ ಮಿಲಿಟಸ್, ಎಲಿಯಾ, ಸಮೋಸ್ ಮತ್ತಿತರ ರಾಜ್ಯಗಳಲ್ಲಿ ಮನನಿಗರು ಬ್ರಹ್ಮಾಂಡದ ವಿಶ್ಲೇಷಣೆಯನ್ನು ಮಾಡತೊಡಗಿದರು. ಇದರ ಹುಟ್ಟು ಹೇಗೆ ಆಗಿರಬಹುದು ? ಬೆಳೆದು ಬಂದ ರೀತಿ ಯಾವುದು ? ವಿಧವಿಧವಾಗಿ ಕಾಣುವ, ಭಿನ್ನಭಿನ್ನವಾಗಿ ತೋರುವ ಈ ಎಲ್ಲದಕ್ಕೂ ಸಾಮಾನ್ಯ ರೀತಿ ನೀತಿಗಳಾವುದಾದರೂ ಇದೆಯೇ ? ಇದ್ದರೆ ಅವು ಯಾವುವು ? ಎಂದೆಲ್ಲಾ ಮನನ ಮಾಡಲಾರಂಭಿಸಿದರು. ಪಾಶ್ಚಾತ್ಯ ವಿಜ್ಞಾನಕ್ಕೆ ಅವರು ಹಾಕಿದ ಅಡಿಗಲ್ಲೇ ಮೊದಲದು. ನಾಲ್ಕು ಮೂಲವಸ್ತುಗಳು, ನಾಲ್ಕು ತೆರನ ಗುಣಗಳು, ಒಂದೇ ತೆರನ ಮೂಲಭೂತ ಅಣುಗಳು ; ಇವೆಲ್ಲವೂ ಒಂದೇ ನಿಯಮದಂತೆ ನಡೆದುಕೊಳ್ಳುತ್ತವೆ ಎಂದು ಅವರುಗಳ ಊಹೆ. ಅದನ್ನು ಕಂಡುಹಿಡಿಯಲು ಹಾಗೂ ಸ್ಥಿರೀಕರಿಸಲು ಪ್ರಾರಂಭಿಸಿದರು. ಸಾಕಷ್ಟು ಶ್ರೇಯಸ್ಸನ್ನೂ ಪಡೆದರು. ಧರ್ಮ, ವೈದ್ಯ, ಖಗೋಳಶಾಸ್ತ್ರ, ಸಂಗೀತ. ಇತ್ಯಾದಿ ಹಲವಾರು ಜ್ಞಾನಗಳನ್ನೂ

ಒಂದೇ ಹಂದರದ ಮೇಲೆ ಕೂಡಿಸಲು ಪೈತಾಗರಾಸ್ ಮತ್ತಿತರರು ಶ್ರಮಿಸಿದರು. ಮೂರು ಶತಮಾನಗಳ ಸ್ವರ್ಣಯುಗ ನಡೆಯಿತು.

ಹದಿನೇಳನೆಯ ಶತಮಾನ

ನಂತರ ವಿಜ್ಞಾನದ ಪ್ರಗತಿಯಲ್ಲಿ ಸ್ಮರಿಸಬಹುದಾದುದು ಕ್ರಿ.ಶ. ಹದಿನೇಳನೆಯ ಶತಮಾನ. ಹನ್ನೆರಡನೆಯ ಶತಮಾನದಲ್ಲಿ ರೋಜರ್ ಬೇಕನ್, ಪೀಟರ್, ಪೆರಿಗ್ರಿನ್, ಆಲೋಚನಾದಿ ದಿಗ್ವಿಜಯದ ನಾಂದಿಯನ್ನು ಹಾಡಿದರು. ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಸಲರ್ನೋ, ಬೊಲೋನ, ಪ್ಯಾರಿಸ್‌ನ ಶಿಶು ವಿಶ್ವವಿದ್ಯಾನಿಲಯಗಳು ಮೊಗ್ಗು ಬಿರಿದಂತೆ ವಿಕಸಿಸುತ್ತಿದ್ದವು. ಆದರೆ ಸಾಕಷ್ಟು ಪ್ರಗತಿಯಾಗಲಿಲ್ಲ. 1600ರಲ್ಲಿ ಪ್ರಾರಂಭವಾಯಿತು ಎರಡನೆಯ ಸ್ವರ್ಣಯುಗ. ಕೆಪ್ಲರ್, ಗಿಲ್ಬರ್ಟ್, ಗೆಲಿಲಿಯೋ, ಪಾಸ್ಕಲ್, ಡೆಕಾರ್ಟೆಸ್, ಲೈಬ್‌ನಿಟ್ಸ್, ಹಾಯ್ಗನ್ಸ್, ಹಾರ್ವೆ ಮತ್ತು ನ್ಯೂಟನ್ !! ಪ್ರಾಜ್ವಲ್ಯಮಾನವಾದ ಯುಗ. ಆದರೆ 18ನೆಯ ಶತಮಾನಕ್ಕೆ ವಿಜ್ಞಾನದ ಮುನ್ನಡೆಯು ಕುಂಟಿತು.

ಹತ್ತೊಂಭತ್ತನೆಯ ಶತಮಾನದಲ್ಲಿ ಮತ್ತು ಈ ಶತಮಾನದಲ್ಲಿ ವಿಜ್ಞಾನವು ಚಂಡಪ್ರಚಂಡವಾಗಿ ಆಸ್ಫೋಟಿಸಿದೆ. ಭಿನ್ನಭಿನ್ನವಾದುವು ಎಂದು ಪ್ರತ್ಯೇಕಿಸಲ್ಪಟ್ಟ ಶಾಸ್ತ್ರಗಳೆಲ್ಲವೂ ವಿಭಿನ್ನತೆಯನ್ನು ಕಳೆದುಕೊಳ್ಳಲಾರಂಭಿಸಿದರು. ವಿದ್ಯುಚ್ಛಕ್ತಿಯೂ, ಮ್ಯಾಗ್ನಟಿಸಂ, ಒಂದಾದುವು. ಬೆಳಕು, ಬಣ್ಣ, ರೇಡಿಯೇಷನ್, ಎಲ್ಲವೂ ಹರ್ಟ್ಸಿಯನ್ ತರಂಗಗಳು ಎಂದು ಒಂದಾದುವು. ರಸಾಯನ ಶಾಸ್ತ್ರದ ತಳಪಾಯವು ಭೌತಶಾಸ್ತ್ರದ ಅಣುವಿಜ್ಞಾನದಲ್ಲಿ ಕಾಣಿಸಿತು. ಮನುಷ್ಯನ ದೇಹದಲ್ಲಿನ ನರಗಳ ಮತ್ತು ಗ್ರಂಥಿಗಳಿಂದಾದ ಸಂಪರ್ಕವು ಎಲೆಕ್ಟ್ರೋ ಕೆಮಿಕಲ್ ಪರಿವರ್ತನೆಗಳು ಎಂದು ತಿಳಿದು ಬಂದಿತು. ಶಾಖ, ಬೆಳಕು, ವಿದ್ಯುತ್, ಸಾಮಾನ್ಯ ಚಲನ ಶಕ್ತಿ; ಭಿನ್ನಭಿನ್ನವಾಗಿ ಕಾಣುವ ಈ ಶಕ್ತಿಗಳೆಲ್ಲವೂ ಪರಸ್ಪರ ಪರಿವರ್ತನೆಯಾಗಬಹುದು ಎಂದು ಸ್ಥಿರವಾಯಿತು. ಶಕುತಿ ಮತ್ತು ವಸ್ತು; ಭಿನ್ನಭಿನ್ನವಾದ ಇವೆರಡೂ ಪರಸ್ಪರ ಪರಿವರ್ತನೆಯಾಗಬಹುದು, ಎಂಬುದು ಸಿದ್ಧಾಂತವಾಯಿತು. ವಸ್ತು ಎಂದು ಘನತೆಯೇನೂ ಇರಬೇಕಾಗಿಲ್ಲ ; ಪವಿತ್ರತೆಯೇನೂ ಉಳಿದಿಲ್ಲ. ಅದು ಶಕ್ತಿಯಾಗಬಹುದು ; ಅಂತೆಯೇ ಶಕ್ತಿಯನ್ನು ಕಟ್ಟಿಟ್ಟರೆ ವಸ್ತುವಾಗುತ್ತದೆ ಎಂಬುದೂ ಖಂಡಿತವಾಯಿತು. ಚಂದ್ರನು ಮನಸಿಗ ಮಾನವನ ಕಾಲ ಕೆಳಗೆ ಬಿದ್ದ. ಮರಿ ಸೂರ್ಯನನ್ನು ಪ್ರಯೋಗಶಾಲೆಯಲ್ಲಿ ಹೆರಲೂ ಸಾಧ್ಯವಾಗಿದೆ.

ಎಲ್ಲಿಗೆ ?

ಇಪ್ಪತ್ತನೆಯ ಶತಮಾನದಲ್ಲಿ ವಿಜ್ಞಾನದ ಪ್ರಗತಿಯು ಕುಪ್ಪಳಿಸುತ್ತಾ ಮುನ್ನಡೆದಿದೆ. ಕ್ರಿ. ಪೂ. 600ರ ಸಮಯಕ್ಕೆ Hop ಮಾಡಿತು. 1600 ಹೊತ್ತಿಗೆ Skip ಮಾಡಿತು. ಈಗ Jump ಮಾಡಲು ಸಿದ್ಧವಾಗಿದೆ. ಎಲ್ಲಿಗೆ ?

ಮಾನವನ ಮನಸ್ಸು ಕುತೂಹಲದಿಂದ ಉದ್ರೇಕಗೊಂಡಾಗ ವಿಜ್ಞಾನವು ಪ್ರಗತಿಯನ್ನು ಹೊಂದುತ್ತದೆ, ಮುನ್ನಡೆಯುತ್ತದೆ. ಮಾನವನ ಜ್ಞಾನ ಭಂಡಾರವು ಸಹಸ್ರಾರು ಮಾರ್ಗಗಳಲ್ಲಿ ಅಭಿವೃದ್ಧಿಯಾಗುತ್ತದೆ. ಮುಂದುವರಿದಂತೆಲ್ಲಾ ಅಸಂಖ್ಯಾತ ಹೊಸ ಹೊಸ ಸಮಸ್ಯೆಗಳೂ ಉದ್ಭವಿಸುತ್ತವೆ. ಕುತೂಹಲಕ್ಕೆ ಕೊನೆಯೇ ಇಲ್ಲ. ಅಂತ್ಯವೇ ಇಲ್ಲ.

ಮಾನವನ ಮನಸ್ಸು ಅನುಕಂಪದಿಂದಲೂ ತಳಮಳಿಸುತ್ತದೆ. ಇತರರ ನೋವು ಸಂಕಟಗಳಿಗೆ ಪರಿತಪಿಸುತ್ತದೆ. ಆದಿಮಾನವನ ಕಾಲದಿಂದಲೂ ಇದು ಹೀಗೆಯೇ, ಅದೇ ಪ್ರಮಾಣದಲ್ಲಿ, ಅದೇ ಹಂತದಲ್ಲಿ. ಕಲೆಯು ಸಹಸ್ರಾರು ರೂಪಗಳಲ್ಲಿ ವರ್ಣಚಿತ್ರ, ರೇಖಾಚಿತ್ರ, ಕಾವ್ಯ, ಕತೆ, ಕಾದಂಬರಿ, ಶಿಲ್ಪ ಇತ್ಯಾದಿಗಳಲ್ಲಿ ಪರಿತಪಿಸುವ ಪ್ರವೃತ್ತಿಯ ಸಾರ್ಥಕತೆಯನ್ನು ಪಡೆಯುತ್ತದೆ. ಈ ತೆರನ ಜ್ಞಾನವು ವ್ಯಕ್ತಿಯ ಸ್ವಂತ ಜ್ಞಾನ ಅವನದೇ ಆದ ಅನುಭವ, ಅದನ್ನವನು ಕಲಾ ರೂಪು ಸಹಸ್ರಗಳಲ್ಲಿ ಹೊರಗೆಡವಿದರೆ ಇತರರೂ ಆನಂದಿಸುತ್ತಾರೆ. ಈ ತೆರನ ಕಲಾ ಔನ್ನತ್ಯವೂ, ವಿಜ್ಞಾನದ ಪ್ರಗತಿಯಂತೆಯೇ ಕುಪ್ಪಳಿಸುತ್ತಾ ನಡೆದಿದೆ. ಈ ದೃಷ್ಟಿಯಲ್ಲೂ ಸ್ವರ್ಣಯುಗಗಳು ಮಾನವನ ಇತಿಹಾಸದಲ್ಲಿ ಕಾಣಬರುತ್ತವೆ.

ಯುಗಪುರುಷನ ಅವತಾರ

ಸ್ವರ್ಣಯುಗಗಳ ಪ್ರಾರಂಭಕ್ಕೆ ಆದರ ಹಿಂದಿನ, ದಿನಗಳ, ಶತಮಾನಗಳ ಮೌಢ್ಯವೇ ಪ್ರೇರಕ. ಮೌಢ್ಯವನ್ನು ಹೊಡೆದಟ್ಟಲು ಯುಗಪುರುಷರು ಅವತರಿಸುತ್ತಾರೆ. ವಿಜ್ಞಾನದಲ್ಲಿ ಆಗಲಿ, ಕಲೆಗಳಲ್ಲಾಗಲೀ ಆತನಕ ಕವಿದು ಕೊಂಡಿರುವ ಸ್ತಬ್ಧವಾದ ಕೆಸರನ್ನು ತೆಗೆದು, ನವ್ಯ ನೂತನ ಕ್ರಾಂತಿಯನ್ನು ಹೂಡುತ್ತಾರೆ. ಮಾನವನನ್ನು ದೈವೀ ಧ್ಯೇಯದತ್ತ ನಡೆಸುತ್ತಾರೆ.

ವಿಶಾಲ ಬುದ್ಧಿಯ ವ್ಯಾಸರು ಶ್ರೀ ಕೃಷ್ಣನ ಬಾಯಿನಿಂದ, "ಸಂಭವಾಮಿ ಯುಗೇ ಯುಗೇ" ಎಂದು ನುಡಿಸಿದುದು ಪ್ರಾಯಶಃ ಈ ದಿವ್ಯವಾದ ಅರ್ಥದಲ್ಲೇ ಇರಬೇಕು.

Jump ಮಾಡುತ್ತಿರುವುದು, ಅವನ ಬಳಿಗೇ !

ಐನ್‌ಸ್ಟೈನರ ನಗೆಕಿಡಿ

ನೊಬೆಲ್ ಪಾರಿತೋಷಕವನ್ನು ಸ್ವೀಕರಿಸಲು ಸ್ಟಾಕ್‌ಹೋಂಗೆ ವಿಜ್ಞಾನಿಗಳು ಹೋಗುತ್ತಾರೆ. ಎರಡು ಮೂರು ದಿನಗಳು, ಅತ್ಯಂತ ಸಂಭ್ರಮ ಮತ್ತು ಸಡಗರದ ದಿನಗಳು. ಬೆಳಗಿನ ಫಲಾಹಾರ, ವೈಜ್ಞಾನಿಕ ಸಂಸ್ಥೆಗಳ ಭೇಟಿ, ಅಲ್ಲಿನ ಸ್ಥಳೀಯ ವಿಜ್ಞಾನಿಗಳೊಂದಿಗೆ ವಿಚಾರ ವಿನಿಮಯ, ಮಧ್ಯಾಹ್ನದ ಭಾರೀ ಔತಣ, ಸಂಜೆಯ ಸಮೃದ್ಧಿಯ ಚಹಾ ಕೂಟ, ರಾತ್ರಿಯ ದನಕ ಹೇಳಬೇಕಾಗಿಲ್ಲ; ಊಟಉಪಚಾರ, ಊಟಕ್ಕಿಂತ ಉಪಚಾರದ ಅಮಲೇ ಸುಸ್ತುಬಡಿಸುತ್ತೆ.

ಇದರ ಮಧ್ಯೆ ಸಾಂಪ್ರದಾಯಿಕ ಸಭೆಗಳು.

ಗುಜುಗುಜು

ಇಷ್ಟೆಲ್ಲಾ ಗುಜುಗುಜು ಆದಮೇಲೆ ನೊಬೆಲ್ ಪಾರಿತೋಷಕವನ್ನು ಪಡೆದವರು ಒಂಡೆರಡು ದಿನಗಳು ಆರಾಮವಾಗಿರಲು ಬಯಸುವುದು ಸ್ವಾಭಾವಿಕ. ಈ ಹಂಬಲವನ್ನು ನೊಬೆಲ್ ಸಂಸ್ಥೆಯವರು ಈಡೇರಿಸುತ್ತಾರೆ. ಸಮೀಪದ ಹಳ್ಳಿಯೊಂದರಲ್ಲಿ ಆರಾಮವಾಗಿ, ಸ್ವಚ್ಛಂದ ರೀತಿಯಲ್ಲಿರಲು, ವ್ಯವಸ್ಥೆ ಮಾಡುತ್ತಾರೆ. ಒಂದೆರಡು ದಿನಗಳು ವಿಶ್ರಾಂತಿ ಪಡೆಯಲಿ ಎಂದು.

ಪ್ರಶಸ್ತಿಯನ್ನು ಪಡೆದ ವರ್ಷ ಹಳ್ಳಿಗೆ ವಿರಾಮವಾಗಿರಲು ಐನ್‌ಸ್ಟೈನ್ ಹೋಗಿದ್ದರು. ಜತೆಯಲ್ಲಿ ಇತರ ಶಾಸ್ತ್ರಗಳಲ್ಲಿ ಪ್ರಶಸ್ತಿಯನ್ನು ಪಡೆದ ಐದಾರು ವಿಜ್ಞಾನಿಗಳು ಇದ್ದರು. ರಾತ್ರಿಯ ಅನೌಪಚಾರಿಕ ಊಟವಾದ ನಂತರ ಎಲ್ಲರೂ ಕಾಡಹರಟೆಯನ್ನು ಕೊಚ್ಚಲು ನಮ್ಮಂತೆಯೇ ಕುಳಿತರು. ಎಲ್ಲರಿಗೂ ಐನ್‌ಸ್ಟೈನರ ಮೇಲೆ ಕಣ್ಣು, "ಈ ಪ್ರಚಂಡ, ಇಷ್ಟು ಉದಾತ್ತವಾದ ಭೌತಿಕ ನಿಯಮವನ್ನು ಹೇಗೆ ಗುರುತಿಸಿದ ? ಪರೀಕ್ಷಾ ಪ್ರಯೋಗಗಳನ್ನು ಹೇಗೆ ನಡೆಸಿದ ? ಇವನ್ನು ತಿಳಿಯಲು ತೀವ್ರ ಕುತೂಹಲ. ಅವರಲ್ಲೊಬ್ಬ ಹಿರಿಯ ಐನ್‌ಸ್ಟೈನರನ್ನು ಕೇಳಿದ Re-search ಅನ್ನು ಹೇಗಯ್ಯಾ ನಡೆಸಿದ" ಎಂದು.

ಕಂಬಳಿಹುಳುಗಳಂತಿದ್ದ ಹುಬ್ಬುಗಳ ಕೆಳಗಿದ್ದ ಐನ್‌ಸ್ಟೈನರ ಕಣ್ಣುಗಳು ಮಿಟುಕಿದುವು. ಅವರು,

"ನೋಡಿದುದನ್ನು ಅರ್ಥಮಾಡಿಕೊಂಡು, ಅದರ ಕಾರಣ ಹೀಗಿರಬೇಕು ಎಂದು ಸಿದ್ಧಾಂತಮಾಡುವುದು ನನ್ನ Re-search ವಿಧಾನ. ಉದಾಹರಣೆಗೆ:

"ಈ ಮೇಜಿನ ಮೇಲೆ ಜೀರುದುಂಬಿಯೊಂದು ಕುಳಿತಿದೆ, ಅನ್ನಿ. ಮೇಜನ್ನು ಬಲವಾಗಿ ತಟ್ಟಿ, ಹಾರು ಎನ್ನುತ್ತೇನೆ. ಅದು ಹಾರತ್ತದೆ.

ಮೇಜನ್ನು ತಟ್ಟಿದ ಶಬ್ದಕ್ಕೆ ಬೆಚ್ಚಿ, ಮೇಜು ಅಲುಗಾಡಿದುದನ್ನು ಗಮನಿಸಿ, ಜೀರುದುಂಬಿ ಹಾರಿತು ಎಂದು ಎಲ್ಲರೂ ತಿಳಿಯುವಂತೆ ನಾನು ತಿಳಿಯುವುದಿಲ್ಲ.

ಅದಕ್ಕೆ ಕನ್ನಡ ಗೊತ್ತಿದೆ. ನಾನು ಹೇಳಿದುದು ಅದಕ್ಕೆ ಕೇಳಿಸಿತು. ಕಾರಣ ಹಾರಿತು ಎಂದನ್ನುತ್ತೇನೆ.

ಇದನ್ನು ಸ್ಥಿರೀಕರಿಸಬೇಕಲ್ಲ! ಪರೀಕ್ಷಾ ಪ್ರಯೋಗಗಳನ್ನು ನಡೆಸುತ್ತೇನೆ. ಅದರ ಒಂದು ಕಾಲನ್ನು ಅರ್ಧಕ್ಕೆ ಕತ್ತರಿಸುತ್ತೇನೆ. ನಂತರ, ಮೇಜನ್ನು ತಟ್ಟಿ ಹಾರು ಎಂದು ಕೂಗುತ್ತೇನೆ. ಅದು ಹಾರುವುದೇ ಇಲ್ಲ. ಇದ್ದಲ್ಲೇ ಕುಂಟುತ್ತಿರುತ್ತದೆ.

ಕಿವಿಕಾಲಿನಲ್ಲಿ

ಎಲ್ಲರಂತೆ ನಾನು, "ಕಾಲಿಲ್ಲ ಅದಕ್ಕಾಗಿ ಹಾರಲಿಲ್ಲ" ಎಂದು ತೀರ್ಮಾನಿಸುವುದಿಲ್ಲ. ನಾನು ಹೇಳಿದ್ದು ಈಗ ಕೇಳಿಸಲಿಲ್ಲ. ಏಕೆ? ಅದರ ಕಿವಿಗೆ ಕೇಳಿಸದೆ ಇರಬೇಕು. ಮೊದಲು ಕೇಳಿಸಿತು. ಈಗ ಇಲ್ಲ. ಮೊದಲು ಕಾಲಿತ್ತು. ಈಗ ಇಲ್ಲ. ಆದುದರಿಂದ ಅದರ ಕಿವಿ ಅದರ ಕಾಲಿನಲ್ಲಿದೆ ಎಂದು ತೀರ್ಮಾನಿಸುತ್ತೇನೆ.

"ವೈಜ್ಞಾನಿಕ ಸಂಶೋದನೆಯ ರೀತಿಯೋ ಇದು"

ಎಂದು ಹೇಳಿ ಐನ್‌ಸ್ಟೈನ್ ಕಣ್ಣುಗಳನ್ನು ಮತ್ತೊಮ್ಮೆ ಮಿಟುಕಿಸಿದ.

ಜತೆಯಲ್ಲಿದ್ದ ಇತರ ನೊಬೆಲ್ ವಿಜೇತರು ಐನ್‌ಸ್ಟೈನರ ಹಾಸ್ಯ ಪ್ರವೃತ್ತಿಗೆ ತಲೆದೂಗಿದರು.

ಜೀರುದುಂಬಿಗೆ ಕನ್ನಡವು ಗೊತ್ತಿದೆ; ಅದರ ಕಾಲಿನಲ್ಲಿ ಕಿವಿ ಇದೆ. ಈ ಎರಡೂ ಆಲೋಚನೆಗಳು ಐನ್‌ಸ್ಟೈನರಿಗೆ ಹೇಗೆ ತೋಚಿತು? ಸಾಮಾನ್ಯ

ವಾಗಿ ಯಾರಿಗೂ ಹೊಳೆಯುದೆ ಇರುವ ಈ ನವ್ಯ ಆಲೋಚನೆಗಳು ಯಾವ ಪ್ರೇರಕದಿಂದ ಐನ್‌ಸ್ಟೈನರಲ್ಲಿ ಉಂಟಾದುವು ?

ಒಂದು ವಿಷಯುವನ್ನು ಯೋಚಿಸಿದಾಗ ಅದಕ್ಕೆ ಸಂಬಂಧಪಟ್ಟ ವಿಷಯುಗಳನ್ನು ಸ್ಮರಣೆಗೆ ತಂದುಕೊಳ್ಳುವುದು ಮನಸ್ಸಿನ ಚುರುಕನ್ನು ಅವಲಂಬಿಸಿರುತ್ತದೆ. ಉದಾ: ಹಾಲು ಎಂದಾಗ ಹಾಲನ್ನು ಕೊಡುವ ಹಸು, ಎಮ್ಮೆ, ಆಡುಗಳು ಸ್ಮರಣೆಗೆ ಬರಬಹುದು. ಚುರುಕು ಬುದ್ಧಿಗೆ ಅನುಗುಣವಾಗಿ, ಕಳ್ಳೀಹಾಲು, ಕ್ಲಿಯೋಪಾತ್ರ ಸ್ನಾನ ಮಾಡುತ್ತಿದ್ದ ಕತ್ತೆ ಹಾಲುಗಳೂ ಸ್ಮರಣೆಗೆ ಬರಬಹುದು. ಆದರೆ ಹಾಲು ಎನ್ನುವ ಪದದಂತೆ ಇರುವ ಆದರೆ ಗುಣಗಳಲ್ಲಿ ತದ್ವಿರುದ್ಧವಾದ ವಸ್ತುವು, ಆಲ್ಕೋಹಾಲು, ಸ್ಮರಣೆಗೆ ಬಂದರೆ ನಗುವು ಬರುತ್ತದೆ. ಹಾಲು ಎನ್ನುವ ಅಕ್ಷರಗಳು, ಹಾಲಿಗೂ ಆಲ್ಕೋಹಾಲಿಗೂ ಸಂಬಂಧವನ್ನು ಕಲ್ಪಿಸಿದೆಯೋ ಹೊರತು ಮತ್ತೆ ಯಾವ ಗುಣ ಸಮಾನತೆಯೂ ಸಂಬಂಧವೂ ಇಲ್ಲವೇ ಇಲ್ಲ.

ಅಂದರೆ ಅಸಾಮಾನ್ಯವಾದ, ನವ್ಯವಾದ ಸಂಬಂಧವನ್ನು ಎರಡು ಭಿನ್ನ ಭಿನ್ನವಾಗಿರುವ ವಸ್ತುಗಳಲ್ಲಿ ಕಲ್ಪಿಸಿದರೆ ನಗೆಯು ಉಂಟಾಗುತ್ತದೆ.

ಆದರೆ ಇಂತಹದೇ ಚುರುಕು ಮನಸ್ಸಿರುವವನು, ಕುತೂಹಲದಿಂದ ಪ್ರೇರಿತನಾಗಿ ವೈಜ್ಞಾನಿಕ ಸಮಸ್ಯೆಗಳನ್ನು ಬಿಡಿಸುತ್ತಿದ್ದಾಗ, ಇದೇ ತೆರನ ನವ ಆಲೋಚನೆಗಳು ಮೂಡುತ್ತವೆ. ಹೊರ ದೃಷ್ಟಿಗೆ ತೀವ್ರ ಅಸಂಬದ್ಧವಾಗಿ ಕಾಣಿಸಿದರೂ ಪ್ರಯೋಗಾನಂತರ ಸುಸಂಬದ್ಧವಾಗಿಯೇ ಪರಿಣಮಿಸುತ್ತದೆ. ವಿಜ್ಞಾನದಲ್ಲಿ ಪವಾಡದಂತೆ ಕಾಣಿಸುವ ಸುಮಾರು ಫಲಿತಾಂಶಗಳು ಈ ರೀತಿಯಲ್ಲಿ ಬಹಿರಂಗವಾಗುತ್ತದೆ.

ಅಂದ ಮೇಲೆ ಚುರುಕು ಮನಸ್ಸು ಇರಬೇಕು, ಇಂತಹವರು ಅಲಿಪ್ತರಾಗಿದ್ದಾಗ, ನಗೆಗಾರರಾಗಬಲ್ಲರು. ಆದರೆ ಕುತೂಹಲದಿಂದ ಪ್ರೇರಿತರಾದರೆ, ವೈಜ್ಞಾನಿಕ ಸಂಶೋಧನಕಾರರಾಗಬಹುದು.

ಚುರುಕು ಬುದ್ಧಿಯ ಐನ್‌ಸ್ಟೈನ್ ಮಹಾಶಯನು ಸುರಸ ಸಂಭಾಷಣೆಯಲ್ಲಿ ಉತ್ತಮ ನಗೆಗಾರನಾಗಿ, ಹಾಗೂ ಭೌತವಿಜ್ಞಾನದಲ್ಲಿ ಅದ್ವಿತೀಯ ಸಂಶೋಧಕನೂ ಆಗಿದ್ದುದು, ಈ ಕಾರಣದಿಂದ.

ದ್ವಾಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ.

ತಯೋರನ್ಯಃಪಿಪ್ಪಲಂ ಸ್ವಾದ್ವತ್ತಿ.

ಅನಶ್ನನನ್ಯೋ ಅಭಿಚಾಕ ಶೀತಿ. ಮುಂ. 3.1.1

ಸಯುಜಾ=ಯಾವಾಗಲೂ ಜತೆಯಲ್ಲಿರುವ, ಸಖಾಯಾ=ಮಿತ್ರರಾಗಿರುವ, ದ್ವಾಸುಪರ್ಣ=ಎರಡು ಪಕ್ಷಿಗಳು, ಸಮಾನಂ ವೃಕ್ಷಂ=ಒಂದೇ ವೃಕ್ಷವನ್ನು, ಪರಿಷ ಸ್ವಜಾತೇ=ಆಲಂಗಿಸಿಕೊಂಡಿವೆ.

ತಯೋಃ=ಅವೆರಡರಲ್ಲಿ, ಅನ್ಸಃ=ಒಂದು, ಸ್ವಾದು=ರುಚಿಯಾದ, ಪಿಪ್ಪಲಂ=ಹಣ್ಣನ್ನು, ಅತ್ತಿ=ತಿನ್ನುತ್ತಿದೆ, ಅನ್ಯಃ=ಇನ್ನೊಂದು, ಅನಶ್ನನ್=ತಿನ್ನದೆ, ಅಭಿಚಾಕಶೀತಿ=ನೋಡುತ್ತಿದೆ.

ಚುರುಕು ಮನಸ್ಸು ಎಂಬ ವೃಕ್ಷದಲ್ಲಿ, ಸರಿಸಮಾನವಾದ, ಸಖರೂ ಆದ ಎರಡು ಪ್ರೇರಕಗಳಿವೆ. ಒಂದು ಕುತೂಹಲದಿಂದ, ರುಚಿಯಾದ ವಿಜ್ಞಾನದ ಫಲವನ್ನು ತಿನ್ನುತ್ತದೆ. ಇನ್ನೊಂದು ಏನನ್ನೂ ತಿನ್ನದೆ ತೆಪ್ಪಗೆ ನಗುತ್ತದೆ ಎಂದೂ ತಿಳಿಯಬಹುದು. ಅಲ್ಲವೇ ?

ನಫ್ಸೆ

'ಅಲ್ಲಾ'ನಿಗೆ ಸಂಪೂರ್ಣವಾಗಿ ಶರಣಾಗುವುದೇ ಇಸ್ಲಾಂ ಧರ್ಮದ ಅಂತರಾರ್ಥ. ಈ ಲೋಕದ ಬಾಳು ಆಸೆಯಿಂದ ಪ್ರೇರಿತವಾದುದು, ಸ್ವಾರ್ಥ ಮಯವಾದುದು ; ಇಂತಹ ಬಾಳನ್ನು ವಿಹಿತ ರೀತಿಯಲ್ಲಿ 'ಅಲ್ಲಾ'ಗೆ ಒಪ್ಪುವಂತೆ ನಡೆಸಬೇಕಾದರೆ, ಹಲವು ನೀತಿ ರೀತಿಗಳು ಅಗತ್ಯ. ಇವನ್ನು ಪವಿತ್ರ ಕುರಾನಿನಲ್ಲಿ ಹಜರತ್ ಪೈಗಂಬರು ನುಡಿದಿದ್ದಾರೆ. ಓದುಬರಹ ಬಾರದಿದ್ದರೂ, ಅಲ್ಲಾವಿನ ಮಹಾಕರುಣೆಯಿಂದಾಗಿ, ದೇವದೂತ ಗೇಬ್ರಿಯಲ್‌ನ ನೆರವಿನಿಂದ ಹಜರತ್ ಪೈಗಂಬರರು ಬಾಳಿನ ಮೂಲ 'ರಿಟ'ವನ್ನು ಅರಿತರು. ಕುರಾನಿನಲ್ಲಿ ಅದನ್ನು ಸ್ಪಷ್ಟವಾಗಿ ನುಡಿದರು. ಪ್ರಪಂಚದ ಯಾವ ಮೂಲೆಯಲ್ಲಿದ್ದರೂ, ಸತ್ಯಾರಾಧಕರಿಗೆ, ಕುರಾನ್ ಪವಿತ್ರ ಗ್ರಂಥವಾಯಿತು. ಅರಿವಿನ ಕೈದೀವಿಗೆಯಾಯಿತು. ನಫ್ಸೆ ಎಂಬುದನ್ನು ಕುರಾನ್‌ದಲ್ಲಿ ವಿಶ್ಲೇಷಿಸಲಾಗಿದೆ. ಸರ್ವಾಂತರ್ಯಾಮಿ ಒಂದು ಅಂಶ ಎಂಬ ಕಲ್ಪನೆಯು ನಫ್ಸೆ ಪದದಲ್ಲಿದೆ. ಎಲ್ಲೆಲ್ಲೂ ಇದು ಇರುವುದರಿಂದ ದಿ ಸ್ಪಿರಿಟ್–ಸಹಸ್ರ ಶೀರ್ಷಾ ಪುರುಷನಂತೆ ನಫ್ಸೆಗೂ ವಿರಾಡ್ರೂಪವಿರಬೇಕು.

ಮೂರು ಮುಖ್ಯವಾದ ನಫ್ಸೆಯ ರೂಪಗಳನ್ನು ಸ್ಮರಿಸಿಕೊಳ್ಳೋಣ. ಅತಿಮುಖ್ಯವಾದ, ಆಧ್ಯಾತ್ಮಿಕವಾದ ವಿಷಯವಾದುದರಿಂದ, ದೈನಂದಿನ ಅನುಭವಗಳೊಂದಿಗೆ ನಫ್ಸೆಯ ರೂಪಗಳನ್ನು ಅರಿಯುವುದು ಸುಲಭವೂ, ಸಮಂಜಸವೂ ಆಗಿದೆ.

*

ಒಡಲಿನ ಗುಡಿಯಲ್ಲಿ

ಯಾವುದಾದರೂ ಒಂದು ಅಡಿಗೆಯ ಪದಾರ್ಥವು ಒಬ್ಬರಿಗೆ ತುಂಬಾ ಇಷ್ಟವಾಗಿರುತ್ತದೆ. ಕೆಲವರಿಗೆ ಸಿಹಿ, ಕೆಲವರಿಗೆ ಖಾರ, ಮತ್ತೆ ಕೆಲವರಿಗೆ

ಉದ್ದಿನವಡೆ! ತುಸು ಹಸಿವಾದಾಗ, ಅನಿರೀಕ್ಷಿತವಾಗಿ, ಬಿಸಿಬಿಸಿಯಾದ ಉದ್ದಿನವಡೆಗಳು ಯಥೇಚ್ಛವಾಗಿ ದೊರೆತರೆ, ಅದರ ಆಸೆ ಇದ್ದವರಿಗೆ, ತಿನ್ನು ವಾಗ ಅಂತಹವರು ಬ್ರಹ್ಮಾನಂದವಾಯಿತು ಎಂದು ಬಾಯಿ ತುಂಬ ನಾಲಿಗೆ ಯನ್ನು ಹೊರಳಿಸಿ, ಹಲ್ಲುಗಳ ಸಂದಿನಲ್ಲಿ ಸಿಕ್ಕಿಕೊಂಡಿರಬಹುದಾದ ಚೂರನ್ನು ಹೊರದೂಡಲೆತ್ನಿಸುತ್ತಾರೆ. ಹೊಟ್ಟೆಗೆ ಊಟ, ಕಣ್ಣಿಗೆ ನೋಟ, ಮೈಕೈಗಳಿಗೆ ಆಟ–ಈ ರೀತಿ ಒಡಲ ವಿವಿಧ ಅಂಗಗಳೂ ತೃಪ್ತಿಯನ್ನು ಪಡೆಯುತ್ತವೆ.

ವಸ್ತುನಿಷ್ಠವಾದ ಈ ತೆರನ ಸುಖವನ್ನು ಪಡೆಯುವಾಗ, ಒಡಲಿನ ವಿವಿಧ ಭಾಗಗಳಲ್ಲಿ ಸುಖದ ಅನುಭವವಾದಾಗ, ಆ ಆ ಭಾಗಗಳಲ್ಲಿರುವ ಸರ್ವಾಂತರ್ಯಾಮಿ ಅಂಶವೂ ಸುಖಪಡಬೇಕು. ಸರ್ವಾಂತರ್ಯಾಮಿ ಎಂದಾಗ, ಎಲ್ಲೆಲ್ಲೂ ಇರಲೇಬೇಕು ಎಂಬುದು ಸ್ಪಷ್ಟ. ಸರ್ವಾಂತರ್ಯಾ ಮಿಯ ಆಟ ಇದು ಎಂದರೂ ಸರಿ, ಚೇಷ್ಟೆ ಇದು ಎಂದರೂ ಆಯಿತು.

ಈ ತೆರನ ಅನುಭವವನ್ನು 'ನಫ್ಸೆ ಅಮ್ಮಾರ' ಎಂದರು, ಹಜರತ್ ಪೈಗಂಬರರು. ಒಡಲಿನ ಗುಡಿಯಲ್ಲಿ ಅಡಗಿರುವ ಅಂತರ್ಯಾಮಿ ಎಂದರು.

ಎಂತಹ ಸರಳ ಸತ್ಯ!

*

ಅಂತರ್ಯಾಮಿಯ ಆಟ

ಸ್ವಲ್ಪ ವಯಸ್ಸು ಬಂದನಂತರ, ಹಿಂದಿನ ಸುಖನೆನಪುಗಳನ್ನು ಸ್ಮರಿಸಿ ಕೊಳ್ಳುವುದರಲ್ಲಿ ಸುಖವನ್ನು ಕಾಣಬಹುದು. ತುರುಬಿಲ್ಲದವರು, ತುರುಬನ್ನು ನೆನಸಿಕೊಂಡು ಮನಸ್ಸಿನಲ್ಲಿ ಸುಖಪಡುವುದು ಗಾದೆಯ ಮಾತಾಗಿದೆ. ಎಂದೋ ಅನುಭವಿಸಿದ್ದ ಸುಖವು ಮನಸ್ಸಿನಲ್ಲಿ ಸ್ಮರಣೆಯಾಗಿ ಹಸಿರಾಗಿಯೇ ಉಳಿದಿರು ತ್ತದೆ. ಮನಸ್ಸಿನಲ್ಲಿ ಅದನ್ನು ಮೆಲಕು ಹಾಕುತ್ತಾ, ತುಂಬಾ ದಿವಸಗಳಾದ ಮೇಲೆಯೂ, ಸುಖಪಡಬಹುದು. ಆಗ ಒಡಲಿಗೆ ಯಾವ ತೊಡಕೂ ಇರುವು ದಿಲ್ಲ.

ಮನಸ್ಸು ಎಂಬುದು ವಸ್ತುವಲ್ಲ. ಆದರೆ ಅದರ ದೆಸೆಯಿಂದ ಸುಖದ ಅನುಭವವು ಉಂಟಾಗುತ್ತದೆ. ಸರ್ವಾಂತರ್ಯಾಮಿಯ ಮನಸ್ಸಿನಲ್ಲಿಯೂ ಇರಲೇಬೇಕು. ಸ್ಮರಣೆಯ ಸುಖವನ್ನು ಅನುಭವಿಸುವಾಗ ಅವನೂ ಪಾಲು ಗೊಳ್ಳಲೇಬೇಕು. ಅಂದರೆ ಈ ತೆರನ ಸುಖವೂ ಅಂತರ್ಯಾಮಿಯ ಒಂದು ಆಟ, ಒಂದು ಚೇಷ್ಟೆ!

ಈ ತೆರನ ಅನುಭವವನ್ನು ಹಜರತ್ ಪೈಗಂಬರರು "ನಫ್ಸೆ ಲವ್ವಾಮ" ಎಂದರು. ಮನಸ್ಸಿನ ಒಳಗೆಲ್ಲೆಲ್ಲೂ ಹುದುಗಿರುವ, ಮನಸ್ಸಿನ ತಿರುಳಾದ ನಫ್ಸೆ ಎಂದರು.

ಎಷ್ಟು ದಿಟ !

ಜೀವನದ ಅನುಭವವು ಸಾಕಷ್ಟು ಆದಮೇಲೆ, ಅರಿವು ಸುಮಾರು ಪರಿಪೂರ್ಣವಾದಾಗ, ಮನನಿಗಳಿಗೆ ತನ್ನದೆನಿಸಿಕೊಂಡ ಒಡಲು ಮತ್ತು ಮನಸ್ಸು; ಇವೆರಡರ ಆಟ ಚೇಷ್ಟೆಗಳನ್ನು ಕಂಡು ಸ್ಮರಿಸಿದಾಗ, ತುಸು ನಗುವು ಬರುತ್ತದೆ. ಈ ಮಕ್ಕಳಾಟಿಗೆಯಲ್ಲಿ, ನಾನು ಮಗ್ನನಾಗಿದ್ದೆನೆ ? ಇವನ್ನೆ ಪರಮ ಸುಖ ಎಂದು ನಂಬಿದ್ದೆನೆ ? ಎಂಬ ಯೋಚನೆಯು ಮೂಡುತ್ತದೆ. ಆಗ ಅವುಗಳಿಂದಾಗಿ ಅವು ಮರುಗಳಿಗೆಯಲ್ಲಿ ಪಟ್ಟ ಕಷ್ಟಗಳೂ, ಸಂಕಟಗಳೂ ನೆನಪಾಗುತ್ತವೆ. ಆ ತೆರನ ತಾತ್ಕಾಲಿಕ ಸುಖವೂ ಬೇಡ ; ತರುವಾಯದ ದುಃಖವೂ ಬೇಡ. ಏರುವುದೂ ಬೇಡ, ಇಳಿಯುವುದೂ ಬೇಡ ; ಆದಷ್ಟು ಮಟ್ಟಿಗೆ ಶಾಂತಿಯೂ ದೊರಕಿದರೆ ಧನ್ಯ ಎಂದೆನ್ನುವ ಮನೋಭಾವವು ಉಂಟಾಗುತ್ತದೆ.

ಹಿತವಾದ ಅರಿವು

ಈ ಮನೋಭಾವವು ಅಧಿಕವಾದಾಗ ಪೂರ್ಣಗಮನವು ಅದರತ್ತ ಹರಿದಾಗ, ಧ್ಯಾನ ಮಾಡಿದಂತಾಗುತ್ತದೆ. ಕೊನೆಯ ಹಂತದಲ್ಲಿ ಸಮಾಧಿ ಸ್ಥಿತಿಯೂ ಲಭಿಸುತ್ತದೆ. ಯಾವ ಏರಿಳಿತಗಳೂ ಇಲ್ಲದೆ, ದ್ವಂದ್ವಮಯವಾದ ಅನುಭವಗಳೆಲ್ಲವೂ ಮಾಯವಾದಾಗ, ಹಿತವಾದ ಅರಿವು ಮಾತ್ರ ಉಳಿದಿರುತ್ತದೆ.

ಅನುಭವ ಮಂಟಪದ ಅನುಭಾವಿಗಳು ಇವನ್ನು 'ಪ್ರಸಾದಿ ಸ್ಥಳ' ಎಂದರು. 'ಪ್ರಸಾದ' ಎಂದರೆ Tranquillity ಎಂಬ ಅರ್ಥ ; ಸಂಸ್ಕೃತದಲ್ಲಿ.

ಕುಂಡಿಲಿನ ಶಕ್ತಿಯು ಚೇತನಗೊಂಡು, ಸಹಸ್ರಾರದಲ್ಲಿ ಐಕ್ಯವಾಯಿತು ಎಂದರು ತಾಂತ್ರಿಕರು.

ಅನಿರ್ವಚನೀಯವಾದ ಮನಸ್ಸಿನ ಮೇರೆಯನ್ನು ದಾಟಿಹೋದ. ಈ ತೆರನ ಆನಂದವನ್ನು ಬ್ರಹ್ಮ ಎಂದು ಅರಿತವರಿಗೆ ಬ್ರಹ್ಮ ಸಾಕ್ಷಾತ್ಕಾರವಾಯಿತು. ಎಲ್ಲ ತೆರನ ಭಯವೂ ಹೋಯಿತು ಎಂದು ಉಪನಿಷದ್ಕಾರರು ನುಡಿದರು.

The Birth of Christ in me ಎಂದರು ಕ್ರಿಸ್ತ ಸಂತ ಅನುಭಾವಿಗಳು. ಹಜರತ್ ಪೈಗಂಬರು ಈ ಅನುಪಮ ಅನುಭವವನ್ನು 'ನಫ್ಸೆ ಮುತ್ಮಇನ್ನಾ' ಎಂದರು. ಸರ್ವಾಂತರ್ಯಾಮಿಯು ಶಾಂತಿಪೂರ್ಣನಾಗಿದ್ದಾನೆ. ದ್ವಂದ್ವಾನುಭವದ ಗಡಿಮೀರಿದ್ದಾನೆ, ಎಂದರು.

*

ನಫ್ಸೆಯ ಮೂರು ಮುಖ್ಯ ದರ್ಶನಗಳನ್ನು ಅಧ್ಯಯನ ಮಾಡಿದಾಗ, ನಮ್ಮ ದೈನಂದಿನ ಅನುಭವದೊಂದಿಗೆ ಸಮೀಕರಿಸಿದಾಗ, ಹಜರತ್ ಪೈಗಂಬರಿಗೆ ಸತ್ಯದರ್ಶನವಾಗಿತ್ತು. ಅಲ್ಲಾನ ಮಹಾಕರುಣೆಯಿಂದ, ಸಂತ ಗೇಬ್ರಿಯಲ್‌ಇನ ನೆರವಿನಿಂದ, ಅಕ್ಷರಸ್ಥನಲ್ಲದಿದ್ದರೂ, ಆತ್ಮಸಾಕ್ಷಾತ್ಕಾರವೂ, ಬ್ರಹ್ಮಸಾಕ್ಷಾತ್ಕಾರವೂ, ಆನಂದಾನುಭವವೂ ಲಭ್ಯವಾಗಿತ್ತು, ಎಂಬುದು ಸುಸ್ಪಷ್ಟವಾಗುತ್ತದೆ.

'ನಫ್ಸೆ' ಮನನಕ್ಕೆ ಯೋಗ್ಯವಾದ ವಿಷಯ.

ಶಕುನ-ಮತ್ತು ವಿಜ್ಞಾನಿ

ನೀಲ್ಸ್ ಬೋರ್ ಎಂಬವ ಭೌತಶಾಸ್ತ್ರದ ಪ್ರಚಂಡ ವಿದ್ವಾಂಸ. ಐನ್‌ಸ್ಟೈನ್, ಮಾಕ್ಸ್‌ಪ್ಲಾಂಕ್, ಶ್ರೋಢಿಂಗರ್ ಅಂತಹ ಮೇಧಾವಿಗಳ ಸರಿಸಾಟಿಯಾಗಿದ್ದವ. ನೊಬೆಲ್ ವಿಜೇತ. ಭೌತವಿಜ್ಞಾನವೇ ಅವನ ಬಾಳ ಉಸಿರು ಎಂದರೆ ಉತ್ಪ್ರೇಕ್ಷೆಯೇನು ಅಲ್ಲ. ನಮ್ಮ ದೇಶದಲ್ಲಿ ಕೀರ್ತಿಶೇಷರಾದ ಡಾ॥ ಸರ್ ಸಿ. ವಿ. ರಾಮನ್ ಅವರಂತೆಯೇ ನೀಲ್ಸ್ ಬೋರ್‌ಅನು ಕೂಡ.

ಅವನ ಕುರಿತ ಒಂದು ರಮ್ಯ ಚುಟುಕವಿದೆ. ಅವನು ಕಾಯಕ ನಡೆಸುತ್ತಿದ್ದ ಸ್ವಂತ ಕೋಣೆಯಲ್ಲಿ, ಬಾಗಿಲಿನ ಮೇಲೆ, ಮೊಳೆ ಹೊಡೆದು, ಕುದುರೆಯ ಲಾಳವೊಂದನ್ನು ತೂಗಿ ಹಾಕಿದ್ದ. ವಿಜ್ಞಾನಿಯನ್ನು ಭೇಟಿಯಾಗಲು ಗೆಳೆಯ ಪತ್ರಿಕೋದ್ಯಮಿಯು ಒಮ್ಮೆ ಬಂದನಂತೆ. ಗೋಡೆಯ ಮೇಲಿದ್ದ ಕುದುರೆಯ ಲಾಳವನ್ನು ಕಂಡನಂತೆ. ಆಶ್ಚರ್ಯದಿಂದ ಹುಬ್ಬೆತ್ತಿ,

"ಅಯ್ಯಾ ! ಮಿತ್ರ ! ಪ್ರಚಂಡನಾದ ಹೆಸರಾಂತ ವಿಜ್ಞಾನಿ, ನೀನು. ನಿನಗೂ ಇಂತಹ ಮೂಢನಂಬಿಕೆಗಳಿವೆಯೇ ? ಕುದುರೆಯ ಹಳೆಯ ಲಾಳವು ಅಕಸ್ಮಾತ್ ಸಿಕ್ಕಿದರೆ, ಅದನ್ನು ತಂದಿಟ್ಟುಕೊಂಡರೆ ಅದೃಷ್ಟ ಖುಲಾಯಿಸುತ್ತದೆ, ಎಂದು ಮಂದಿ ಜನರು ನಂಬುತ್ತಾರೆ. ಹಾಗೆ ಮಾಡುತ್ತಾರೆ. ಆದರೆ ನೀನು ! ಸೂಕ್ಷ್ಮಮತಿಗೆ ಪ್ರಸಿದ್ಧವಾದ, ವಿಶ್ಲೇಷಣಾ ಮನಸ್ಸಿನವನೆಂದು ಕೀರ್ತಿಗಳಿಸಿರುವ ನೀನು ! ಕುದುರೆಯ ಲಾಳವನ್ನು ಗೋಡೆಯ ಮೇಲೆ ಪ್ರತಿಷ್ಠೆ ಮಾಡಿದ್ದೀಯಲ್ಲ ! ಅಚ್ಚರಿಯಪ್ಪ ನನಗೆ. ಕುದುರೆಯ ಲಾಳವು ಅದೃಷ್ಟವನ್ನು ತಂದೀಯುತ್ತದೆ ಎಂದು ನೀನೂ ನಂಬುವೆಯಾ ?"

ಎಂದು ಕೇಳಿದನಂತೆ. ಜಟ್ಟಂತ ನೀಲ್ಸ್ ಬೋರ್ ಉತ್ತರಿಸಿದನಂತೆ.

ನಾನೇಕೆ ಒಲ್ಲೆ

"ಛೇ ! ಛೇ, ಅಂತಹ ಮೂಢನಂಬಿಕೆಯ ನೆರಳಿನ ಅಂಚೂ ನನ್ನಲ್ಲಿಲ್ಲ.

ಆದರೆ ಅದನ್ನು ತಂದು ಅಲ್ಲಿ ನೇತುಬಡಿದ ನನ್ನ ಶಿಷ್ಯ, ಕುದುರೆಯ ಈ ಲಾಳವು, ನಂಬಿದವರಿಗೂ ಅದೃಷ್ಟವನ್ನು ತರುತ್ತದೆ. ನಂಬದೆ ಇದ್ದವರಿಗೂ ಕೂಡ ಅದೃಷ್ಟ ಬಡಿಯುವಂತೆ ಮಾಡುತ್ತದೆ ಎಂದು ಹೇಳಿದ. ಹಾಗಾದರೆ ಹಾಕು, ನಂಬಿಕೆಯು ನನಗೇನೂ ಇಲ್ಲ. ಆದರೂ ಅದೃಷ್ಟ ಬಡಿಯುವು ದಾದರೆ ನಾನ್ಯಾಕೆ ಒಲ್ಲೆ ಎನ್ನಲಿ" ಎಂದ.

ಶಕುನಗಳಿಗೂ ವಿಜ್ಞಾನಿಗಳಿಗೂ ಇರುವ ನಂಟು ಈ ರೀತಿಯದು. ಏಕೆ ಹೀಗೆ ? ಸ್ವಲ್ಪವೂ ನಂಬಿಕೆಯಿಲ್ಲ ಎಂದು ಹೇಳುವುದು. ಆದರೆ ಅವನ್ನು ಬಿಡದೆ ಇರುವುದು. ಇಂತಹ ವಿತಂಡ ವರ್ತನೆಗೆ ಕಾರಣ ?

ಯಾವ ವಿಜ್ಞಾನಿಯಾದರೂ, ಹುಟ್ಟುವಾಗ ಮಾನವ ಶಿಶುವಾಗಿ ತಾನೆ ಹುಟ್ಟುವುದು. ಶೈಶವದಲ್ಲಿ, ಬಾಲ್ಯದಲ್ಲಿ ಮತ್ತು ಯೌವನ ವಯಸ್ಸಿನಲ್ಲಿ, ಬೆಳೆಯುವಾಗಲೆಲ್ಲ ಹುಟ್ಟಿದ ಮನೆ, ಕಲಿಸುವ ಶಾಲೆ ಮತ್ತು ಸುತ್ತಲಿನ ಹತ್ತಿರದ ಪರಿಸರ, ಇವುಗಳಿಂದ ತನ್ನ ಜ್ಞಾನ ಭಂಡಾರವನ್ನು ತುಂಬಿಕೊಳ್ಳು ತ್ತಾನೆ. ಆ ಕಾಲದಲ್ಲಿ ತನ್ನ ಬುದ್ಧಿಶಕ್ತಿಯನ್ನು ಹರಿತಮಾಡಿಕೊಳ್ಳುತ್ತಾನೆ. ಕಣ್ಣಾರೆ ಕಂಡ ವಿಷಯಗಳು ಇಂತಹವು ಈ ಕಾರಣಗಳಿಂದ ಈ ಈ ರೀತಿ ನಡೆದಿರಬಹುದು ಎಂದು ವಿಶ್ಲೇಷಿಸಲು ಕಲಿಯುತ್ತಾನೆ. ಮನಸ್ಸು ಹರಿತ ವಾದಂತೆಲ್ಲ, ಮನನದ ಚುರುಕು ಹೆಚ್ಚಿದಂತೆಲ್ಲ Reason ತಾರ್ಕಿಕ ಸ್ವಭಾ ವವು ಹೆಚ್ಚುತ್ತದೆ. ಆನಂತರವೇ ಅವನು ವಿಜ್ಞಾನಿ ಎನಿಸಿಕೊಳ್ಳುವುದು. ಲಕ್ಷಾಂತರ ಜನರು,ಸಾವಿರಾರು ವರ್ಷಗಳಿಂದ ಮೆಡಿಟರೇನಿಯನ್ ಸಮುದ್ರದ ಮೇಲೆ ಪ್ರವಾಸ ಮಾಡುವಾಗ, ಅಚ್ಚ ನೀಲಿಯಾಕಾಶವನ್ನು ಕಂಡಿದ್ದರು. ಕಂಡು ಆನಂದಿಸಿದ್ದರು. ಆದರೆ ಡಾ॥ ರಾಮನ್ ಅವರು ಅದನ್ನು ಕಂಡು ಪುಳಕಿತರಾದಾಗ, ಈ ಅಚ್ಚನೀಲಿಯ ಬಣ್ಣ ಹೇಗೆ ಉಂಟಾಯಿತು ಎಂದು ಯೋಚಿಸತೊಡಗಿದರು. ಸೂಕ್ಷ್ಮವಾದ ದೃಷ್ಟಿ, ಅದನ್ನು ಅರಿಯುವ ಹರಿತ ಬುದ್ಧಿ ಮತ್ತು ಕುತೂಹಲ, ಇವೇ ವಿಜ್ಞಾನಿಯ ಲಕ್ಷಣಗಳು.

ಆದರೆ ಶೈಶವ ಮತ್ತು ಬಾಲ್ಯದಲ್ಲಿ ಹುಟ್ಟುವಮನೆಯಲ್ಲಿ ಮತ್ತು ಮೊದಲ ಶಾಲೆಗಳಲ್ಲಿ ರೂಢಿಸಿಕೊಂಡ ವಿಷಯಗಳು, ಹಚ್ಚ ಹಸಿರಾಗಿ ಮನಸ್ಸಿನ ಹಗೇವುಗಳಲ್ಲಿ ಇದ್ದೇ ಇರುತ್ತವೆ. ಘಟ ಬಿದ್ದ ಮೇಲೆ ಅವು ನಿರ್ನಾಮವಾಗುವುದು. ಬೆಳೆದ ಮೇಲೆ ವಿಚಾರಶಕ್ತಿಯನ್ನು ಅಭಿವೃದ್ಧಿ ಪಡಿಸಿಕೊಂಡರೂ, ಮನಸ್ಸಿನ ಹಗೇವುಗಳಲ್ಲಿರುವ ಬಾಲ್ಯದ ನಂಬಿಕೆಯ ಕಾಳುಗಳು ಬೆಂದು ಹೋಗುವುದಿಲ್ಲ.

ಸ್ವಭಾವಕ್ಕೆ ಸಲ್ಲ

ವಿಚಾರಶಕ್ತಿಯು ಪ್ರಬಲಗೊಂಡ ಮೇಲೆ, ಅಂತಹ ಶಕುನ ಗಿಕುನಗಳಲ್ಲಿ ಸ್ವಲ್ಪವೂ ನಂಬಿಕೆಯಿಲ್ಲ ಎಂದವ ಯಥಾರ್ಥವನ್ನೇ ನುಡಿಯುತ್ತಾನೆ. ಸುಳ್ಳನ್ನೇನೂ ಅವ ನುಡಿಯುವುದಿಲ್ಲ. ಸುಳ್ಳು ಹೇಳಬೇಕು ಎಂದು ಅವನಿಗೆ ಅನಿಸುವುದೂ ಇಲ್ಲ. ಹೇಳಿ ಕೇಳಿ ಅವ ನಿಜವಾದ ವಿಜ್ಞಾನಿಯಾಗಿರುತ್ತಾನೆ. ಸತ್ಯಾರಾಧಕನಾಗಿರುತ್ತಾನೆ. ಅವ ಯಾಕೆ ಸುಳ್ಳು ಹೇಳ ಬಯಸಬೇಕು ? ವಿಜ್ಞಾನಿಯ ಸ್ವಭಾವಕ್ಕೆ ಅದು ಸಲ್ಲ.

ಆದರೂ ಅವನ ಮನಸ್ಸಿನ ಹಗೇವುಗಳಲ್ಲಿ ಬಾಲ್ಯ, ಶೈಶವದಲ್ಲಿ ಶೇಖರಿಸಿಡಲ್ಪಟ್ಟ ನಂಬಿಕೆಗಳು ಎನ್ನುವ ಕಾಳುಗಳು ತೆನೆಯೊಡೆಯುತ್ತಲೇ ಇರುತ್ತವೆ. ತೋರ ಮನಸ್ಸಿಗೆ ಅವು ಗರಿ ಎತ್ತಿದರೆ, ಆಗ ಅವನ ವಿಚಾರಪರ ಮನಸ್ಸು ಅಂತಹ ಮೂಢ ನಂಬಿಕೆಗೆ ಸ್ಥಳವಿಲ್ಲ ಎಂದು ಅಟಾಟೋಪ ಮಾಡುತ್ತದೆ. ಮನಸ್ಸಿನ ಹಗೇವುಗಳಲ್ಲಿರುವ ನಂಬಿಕೆಗಳನ್ನು ಸುಟ್ಟು ಹಾಕಲು ಸಾಧ್ಯವಿಲ್ಲ. ಪ್ರಬಲ ಶಕ್ತಿಯನ್ನು ಹೊಂದಿರುವ ವಿಚಾರಪರತೆಯನ್ನು ಮೆಟ್ಟಿಡುವ ಹಾಗೂ ಇಲ್ಲ. ಪರಿಸ್ಥಿತಿಯು ಈ ಗೊಂದಲದಲ್ಲೇ ಉಳಿದರೆ ಮನಸ್ಸು ಪಲ್ಲಟವಾಗುತ್ತದೆ. ಹಾಗಾಗದೆ ಇರಲು ವಿಚಾರಪರ ಮನಸ್ಸು ಉಪಾಯವೊಂದನ್ನು ಅರ್ಥಮಾಡಿಕೊಳ್ಳುತ್ತದೆ. ಖಾಜಿ ನ್ಯಾಯ ಮಾಡಿದಂತೆ.

1) ಈ ನಂಬಿಕೆಗಳೆಲ್ಲವೂ, ಶುದ್ಧ ಮೌಢ್ಯದಿಂದ ಕೂಡಿದುವು. ಇದು ಶತಾಂಶ ನೂರರಷ್ಟು ಸತ್ಯ.

2) ಆದರೆ ಈ ಶಕುನಗಳನ್ನು ಅನುಸರಿಸುವುದರಿಂದ ಯಾವ ದುಷ್ಪರಿಣಾಮವೂ ಆಗುವುದಿಲ್ಲ. ಅಂದ ಮೇಲೆ ನಂಬಿಕೆಯು ಇರದಿದ್ದರೂ, ಶಕುನಗಳನ್ನು ಗಮನಿಸಿದರೆ ತಪ್ಪಲ್ಲ.

3) ವಿಚಾರಪರ ಮನಸ್ಸಿಗೆ ಎಲ್ಲ ವಿಷಯಗಳೂ ಸಂಪೂರ್ಣವಾಗಿ ತಿಳಿದುಬಂದಿವೆ ಎಂದು ಹೇಳುವಂತಿಲ್ಲ. ಇಂದು ಶಕುನ ಎಂದು ಹೇಳಿಸಿಕೊಳ್ಳುವ ವಿಷಯಗಳು, ನಾಳೆ ವೈಜ್ಞಾನಿಕವಾಗಿ, ಸಕಾರಣವಾದುವು ಎಂದು ಪ್ರಯೋಗಗಳಿಂದ ಖಚಿತವಾಗಬಹುದು. ಆದಕಾರಣ ಶಕುನ ಇತ್ಯಾದಿಗಳನ್ನು ಮೂದಲಿಸಬಾರದು.

ಪ್ರತ್ಯಕ್ಷವಾಗಿ ಅವುಗಳನ್ನು ತಲೆಯ ಮೇಲೆ ಕೂರಿಸಿಕೊಳ್ಳುವುದೂ ಪೆದ್ದುತನ. ಆದರೆ ಪರೋಕ್ಷವಾಗಿಯಾದರೂ ಅವನ್ನು ಒದ್ದು ತಳ್ಳುವುದು ಅಷ್ಟೇ ಹೆಡ್ಡುತನ.

4) ವಿಚಾರಪರ ವೈಜ್ಞಾನಿಕ ಮನಸ್ಸು ಈ ರೀತಿ ಆಳ ಮನಸ್ಸಿನಲ್ಲಿ (Un conscious) ಒಂದು ಪದರದಲ್ಲಿ ಮನ ಮಥನ ಮಾಡಿ–ಶಕುನವನ್ನು ಹುಡುಕಿಕೊಂಡು ಹೋಗಬೇಡ. ಆದರೆ ಅದೇ ಅದು ಆಗಿಬಂದರೆ ಒಲ್ಲೆ ಎನ್ನಲೂ ಬೇಡ. ಎಂಬ ತೀರ್ಮಾನಕ್ಕೆ ಬರುತ್ತದೆ.

ಅಂದರೆ ಹುಟ್ಟು ಮಾನವ ಗುಣ, ಆದಿಮಾನವನಂತೆ ಶಕುನ ಇತ್ಯಾದಿ ನಂಬಿಕೆಗಳನ್ನು ಹೊಂದುವುದು. ವೈಜ್ಞಾನಿಕವಾದ, ವಿಚಾರಪರವಾದ ಮನಸ್ಸು ಅಭಿವೃದ್ಧಿ ಹೊಂದಿದಂತೆಲ್ಲ, ಅಂತಹ ನಂಬಿಕೆಗಳು, ಮೌಢ್ಯ ಎಂದು ತೀರ್ಮಾನಿಸುವುದು. ಹುಟ್ಟು ಮತ್ತು ಕಲಿಕೆಯ ಎರಡೂ ಸ್ವಭಾವಗಳಿಗೆ ಹೊಂದಾಣಿಕೆ ಮಾಡುವುದೇ ನೀಲ್ಸ್ ಬೋರ್‌ಅನ ನಡವಳಿಕೆಗೆ ಕಾರಣ, ಎನಿಸುತ್ತದೆ.

ಮನಸ್ಸಿನ ಮರ್ಕಟತನ

ಹತ್ತಾರು ಬಾರಿ ಜಾತಕಫಲವು ಶುದ್ಧ ಸುಳ್ಳಾದ ಕಾರಣ, ಜಾತಕವೇ ಶುದ್ಧ ಮೋಸ ಎಂದು ಡಂಗೂರ ಹೊಡೆಯುವವನು ಮಗನ ಮದುವೆಯ ಲಗ್ನವನ್ನು ನಿಷ್ಕರ್ಷೆ ಮಾಡಲು ಜ್ಯೋತಿಷಿಯ ಬಳಿಗೆ ಹೋಗುವುದು ಹಾಸ್ಯಾಸ್ಪದವಾಗಿ ಕಂಡರೂ, ಮನಸ್ಸಿನ ಮರ್ಕಟತನವನ್ನು ಅರಿಯ ಬಯಸಿ ದವರಿಗೆ ಸುಸ್ಪಷ್ಟವರ್ತನೆ ಎಂದನಿಸುತ್ತದೆ.

ಮೊದಲು ಮನುಷ್ಯ, ಬೆಳೆದ ಮೇಲೆ ವಿಜ್ಞಾನಿ ಎಂಬ ಮೂಲಭೂತ ವಾದುದನ್ನು ಅರಿತರೆ ವಿಚಿತ್ರ ವರ್ತನೆಗಳ ಕಾರಣವು ಸುಲಭವಾಗಿ ತಿಳಿಯು ತ್ತವೆ.

ಹಣೆಯ ಬರಹ

"ಬ್ರಹ್ಮ ಬರೆದುಬಿಟ್ಟಿರುತ್ತಾನಪ್ಪ, ಹುಟ್ಟುವಾಗಲೇ ಹಣೆಯಲ್ಲಿ. ಅದರ ಹಾಗೆ ಬಾಳು ನಡೆಯುತ್ತೆ. ತಿಪ್ಪರಲಾಗ ಹಾಕಿದರೂ ಅದನ್ನು ಅಳಿಸಿ ಬೇರೆ ಬರೆಯುವುದಕ್ಕಾಗುಲ್ಲ" ಎಂದು ಹೇಳಿ, ಮನಸ್ಸಿಗೆ ತುಸು ಸಮಾಧಾನ ವನ್ನು ತಂದುಕೊಳ್ಳುತ್ತೇವೆ; ಸೋಲಾದಾಗ. ಕೇವಲ ಮೂಢನಂಬಿಕೆ ಇದಾದರೂ, ಆ ಕಾಲದಲ್ಲಿ ಮನಸ್ಸಿಗೆ ಸಮಾಧಾನವನ್ನು ಕೊಟ್ಟೇ ಕೊಡುತ್ತದೆ. ಏಕೆ ? ನಾವು ಕೈಗೊಂಡ ಕೆಲಸವು, ನಮ್ಮ ಲೋಪ ದೋಷಗಳಿಂದ ಕೆಟ್ಟು ಹೋಯಿತು, ಅನ್ನಿ. ನಮ್ಮದು ತಪ್ಪು ಎಂದರೆ ಮನಸ್ಸಿಗೆ ಕಿರಿಕಿರಿಯಾಗುತ್ತದೆ, guilt complex, ಅಪರಾಧ ಮನೋಭಾವವು ಕುಕ್ಕಲಾರಂಭಿಸುತ್ತದೆ. ಕೆಲಸವು ಹಾಳಾದುದರ ಜತೆಗೆ ಇದೊಂದು ಬೇರೆ ಕೊರಗಿಸುತ್ತದೆ. ಆಗ "ನಮ್ಮದಲ್ಲ ತಪ್ಪು; ಬ್ರಹ್ಮ ಹಾಗೆ ಆಗಲೇ ಬರೆದಿಟ್ಟು ಬಿಟ್ಟಿದ್ದಾನೆ" ಎಂಬ ಯೋಚನೆಯು ಮೂಡಿದರೆ guilt complex ಕುಕ್ಕುವುದಾದರೂ ತಪ್ಪುತ್ತೆ. ಆದರೆ ಇದೇ ಅಭ್ಯಾಸವನ್ನು ರೂಢಿಸಿಕೊಂಡರೆ, ಮಾಡಿದ ತಪ್ಪಿನ ಅರಿವು ಗೊತ್ತಾಗದೆ ಇದ್ದರೆ, ಮುಂದಾದರೂ ತಿದ್ದಿಕೊಳ್ಳುವುದು ಹೇಗೆ ? ಎಡವಿದ ಕಾಲು, ಎಡವಿದ್ದರಿಂದಲೇ, ಎಡವುತ್ತಲೇ ಇರುತ್ತದೆ. ಕಲಿಯುವುದಾಗಲೀ ಪ್ರಗತಿ ಹೊಂದುವುದಾಗಲಿ ಅಸಾಧ್ಯವಾಗುತ್ತದೆ.

ಹಣೆಯ ಭಾಷೆ

ಬ್ರಹ್ಮ ಪ್ರಾಯಶಃ ಏನನ್ನೂ ಬರೆದಿರುವುದಿಲ್ಲವೇನೋ ? ಮಸಲಾ ಮಾತಿಗೆ, ಬರೆದಿದ್ದ ಎಂದು ಒಪ್ಪಿಕೊಳ್ಳೋಣ. ಅದನ್ನು ಓದಿ ಅರ್ಥಮಾಡಿಕೊಂಡು, ಸೂಕ್ತ ಪರಿಹಾರ ಕ್ರಮವನ್ನು ಆಚರಿಸಲು ಆಗದೆ ಇದ್ದರೆ, ಅದು ಇದ್ದರೇನು ? ಇಲ್ಲದಿದ್ದರೇನು ?

ಬ್ರಹ್ಮ ಬರೆಯದೆ ಇದ್ದರೂ, ನಾವು ನಮ್ಮ ಹಣೆಯಲ್ಲಿ ಬರೆದಿಡುತ್ತೇವೆ ನಮ್ಮ ಮಾತೃಭಾಷೆಯಲ್ಲಲ್ಲ : ಪಿತೃಭಾಷೆಯಲ್ಲಲ್ಲ ; ರಾಷ್ಟ್ರಭಾಷೆಯಲ್ಲಲ್ಲ.

ಆದರೆ ಪ್ರಪಂಚದಲ್ಲಿರುವ ಮನನಿಗರೆಲ್ಲರಿಗೂ ಸ್ಪಷ್ಟವಾಗಿ ತಿಳಿಯುವಂತಹ ಗೆರೆಗಳ ಭಾಷೆ. ಹಸ್ತರೇಖೆಗಳನ್ನೂ, ಪಾದರೇಖೆಗಳನ್ನೂ ಓದಿ ಅರ್ಥಮಾಡಿ ಕೊಳ್ಳುವ ಶಾಸ್ತ್ರಗಳು ಇವೆ, ಎಂದು ಅಂತಹ ಶಾಸ್ತ್ರಿಗಳು ಹೇಳುತ್ತಾರೆ. ಅವು ಗಳ ಬಗ್ಗೆ ಸಾಮಾನ್ಯರು ಅನುಮಾನಪಟ್ಟರೂ ಹಣೆಯ ರೇಖಾಶಾಸ್ತ್ರದ ವಿಷಯದಲ್ಲಿ ಯಾರೂ ಸಂದೇಹ ಪಡಬೇಕಾಗಿಲ್ಲ. ಮನೋವೈದ್ಯ, ವಿಜ್ಞಾನಿ ಗಳೆಲ್ಲರ ಸಮ್ಮತ ಪಡೆದ ಸಾಸ್ತ್ರ.

•

ಯಾವುದಾದರೂ ಒಂದು ಅನಿರೀಕ್ಷಿತವಾದ ಅನುಭವವು ಆದಾಗ, ಆಶ್ಚರ್ಯವುಂಟಾಗುತ್ತದೆ. ಹುಬ್ಬುಗಳನ್ನೆತ್ತುತ್ತೇವೆ. ಹಣೆಯು ಆಗ ಜಿಂಕ್ ಷೀಟಿನಂತೆ ಗೆರೆಗೆರೆಯಾಗುತ್ತದೆ. ಕೆಲವು ಕ್ಷಣಗಳಲ್ಲಿ ಆಶ್ಚರ್ಯದ ಮನೋ ಭಾವವು ತಣ್ಣಗಾದ ಕೂಡಲೇ ಹಣೆಯೂ ಎಂದಿನಂತೆ ಸಾಫಾಗುತ್ತದೆ.

ಮನಸ್ಸಿನ ಸೂಚಿ

ಆಶ್ಚರ್ಯದ ಜತೆಗೆ ಆತಂಕವೂ ಉಂಟಾದರೆ, ಆಗ ಹುಬ್ಬೆತ್ತುವುದ ರೊಂದಿಗೆ, ಹುಬ್ಬುಗಳು ಗಂಟನ್ನೂ ಕಟ್ಟಿಕೊಳ್ಳುತ್ತವೆ; ಒಂದೆರಡು ಕ್ಷಣ. ಆಗ ಹುಬ್ಬುಗಳ ಮಧ್ಯೆ ಮೂಗಿನ ಮೇಲ್ಗಡೆಯಲ್ಲಿ ಉದ್ದುದ್ದ ರೇಖೆಗಳು ಕಾಣಬರುತ್ತವೆ,ಪರಸ್ಪರವಾಗಿ ಹುಬ್ಬಿನ ತುದಿಗಳು ಹತ್ತಿರ ಹತ್ತಿರ ಒತ್ತಲ್ಪಡು ವುದರಿಂದ, ಈ ರೇಖೆಗಳು ಉಂಟಾಗುತ್ತವೆ. ಕೋಪವು ಬಂದಾಗಲೂ ಹೀಗೆಯೇ. ಆದರೆ ಕೋಪ, ಆತಂಕ, ಆಶ್ಚರ್ಯ ಇವುಗಳು ಇಳಿದ ಕೂಡಲೇ ಹಣೆಯ ಗೆರೆಗಳು ಮಾಯವಾಗುತ್ತವೆ. Face is the index of the mind ಎಂಬ ನಾಣ್ಣುಡಿಯ ಒಂದು ಮುಖ್ಯ ಭಾಗವು ಹಣೆಯ ಮೇಲೆ ಕಾಣಬರುವ ರೇಖೆಗಳಿಗೆ ಅನ್ವಯವಾಗುತ್ತದೆ.

ನಗುವನ್ನು ತರುವಂತಹ ಪ್ರಸಂಗಗಳು ಆದುವು ಎನ್ನಿ. ಆಗ ಮುಖವು ಅಗಲವಾಗುವಂತೆ ಹಣೆಯು ಅಗಲವಾಗಲು ಸಾಧ್ಯವಿಲ್ಲ. ಇದ್ದಂತೆಯೇ ಇರು ತ್ತದೆ. ಆದರೆ ಹಣೆಯ ಎರಡೂ ಕೊನೆಗಳಲ್ಲಿ ಕಣ್ಣಿನ ಹೊರಪಕ್ಕದಲ್ಲಿ ಸೂರ್ಯನ ಕಿರಣಗಳು ಹೊಮ್ಮಿದಂತೆ, ಗೆರೆಗಳು ಏಳುತ್ತವೆ.

ಈ ತೆರನ ಹಣೆಯ ಬರಹಗಳು ವ್ಯಕ್ತಿಯ ದೇಹ ರಚನೆಯಿಂದಲೂ ಮಾರ್ಪಾಡಾಗುತ್ತವೆ. ತೆಳ್ಳಗೆ ಇರುವ, ಸಣಕಲ ಮನುಷ್ಯನಲ್ಲಿ ಹಣೆಯ ಅಡ್ಡಡ್ಡ ಏಳುವ ಗೆರೆಗಳು ಹೆಚ್ಚು ಸ್ಪಷ್ಟವಾಗಿರುತ್ತವೆ, ಸುಮಾರು ದಥಿಯ

ನಾಗಿದ್ದವನ ಕಣ್ಣ ಪಕ್ಕದ ಕಿರಣಗಳ ಪ್ರಭಾವಳಿಯು ಎದ್ದುಕಾಣುತ್ತದೆ ನಕ್ಕಾಗ.

ಇಷ್ಟೆಲ್ಲವೂ ಸುಮಾರು ನಲವತ್ತರ ಪ್ರಾಯದ ತನಕ ಕಾಣಿಸುತ್ತವೆ, ನಮ್ಮ ದೇಶದಲ್ಲಿ. ಅನಂತರ ಜೀವನದ ಕಷ್ಟ ಕಾರ್ಪಣ್ಯಗಳು–ಅವುಗಳಲ್ಲಿ ಬಹುಪಾಲು ಮನಸ್ಸಿನಲ್ಲಿ ಮನಸ್ಸನ್ನು ರೂಢಿಸಿಕೊಂಡಿದುದರ ಫಲವಾಗಿಯೇ, —ಹಣೆಯ ಮೇಲೆ ಏರುವ ಗೆರೆಗಳನ್ನು ಸ್ವಲ್ಪ ಸ್ವಲ್ಪವಾಗಿ, ನಿಧಾನವಾಗಿ ಶಾಶ್ವತಗೊಳಿಸುತ್ತವೆ. ಆ ವೇಳೆಗೆ ಮುಪ್ಪು ಬಂದು ದೇಹವೂ ಶಿಥಿಲವಾಗಿರುತ್ತದೆ. ಹಣೆಯ ಗೆರೆಗಳು, ಕಣ್ಣ ಪಕ್ಕದ ಸೂರ್ಯನ ಪ್ರಭಾವಳಿಗಳು, ಶಾಶ್ವತವಾಗುತ್ತವೆ. ಅನಂತರ ಅವುಗಳನ್ನು ಗಮನಿಸಿ ಮನೋಭಾವಗಳನ್ನು ಗುರುತಿಸುವುದು ದುಸ್ಸಾಧ್ಯ.

ಮುಖ್ಯ ವಿಷಯ

ಆದರೆ ಅತಿ ಮುಖ್ಯವಾದ ಒಂದು ವಿಷಯವಿದೆ. ಅಗತ್ಯವಾಗಿ ಎಲ್ಲರೂ ಗಮನಿಸಬೇಕಾದುದು. ಪೂರ್ವವಯಸ್ಸಿನಲ್ಲಿಯೇ ಈ ಬಗೆಯ ಹಣೆಯ ರೇಖೆಗಳಿಂದ, ವ್ಯಕ್ತಿಯ ಸ್ವಾಸ್ಥ್ಯವನ್ನು ತಿಳಿಯಬಹುದು !

ಯಾವುದಾದರೂ ಅನುಭವದಿಂದ, ಮನಸ್ಸಿನಲ್ಲಿ ಭಾವೋದ್ರೇಕವಾಗುತ್ತದೆ. ಆಗ ಹಣೆಯ ಮೇಲೆ ಗೆರೆಗಳು ಏಳುತ್ತವೆ. ಸ್ವಲ್ಪ ಸಮಯದಲ್ಲಿ ಸ್ವಾಸ್ಥ್ಯವಿರುವವರಲ್ಲಿ ಭಾವೋದ್ರೇಕವೂ ಇಳಿಯುತ್ತದೆ. ಗೆರೆಗಳೂ ಅಳಿಸಿ ಹೋಗುತ್ತವೆ. ಕೆಲವರಲ್ಲಿ ಭಾವೋದ್ರೇಕವು ಇಳಿದಂತೆ ಕಾಣಿಸುತ್ತದೆ. ಅವರ ನಡವಳಿಕೆಯಿಂದ ಇದನ್ನು ತಿಳಿಯುತ್ತೇವೆ. ಆದರೆ ಹಣೆಯ ಗೆರೆಗಳು ಮಾತ್ರ ಇದ್ದೇ ಇರುತ್ತವೆ. ಗಂಟೆಗಟ್ಟಲೆ, ದಿನಗಟ್ಟಲೆ, ತಿಂಗಳುಗಟ್ಟಲೆ, ಇಂತಹವರ ಮನಸ್ಸು ತುಸು ಪಲ್ಲಟವಾಗಹತ್ತಿದ್ದರೇ ಹೀಗೆ ಗೆರೆಗಳು ಎಳೆಯ ಹಾಗೂ ಬಿರಿವ ಪ್ರಾಯದಲ್ಲಿ ಶಾಶ್ವತವಾಗಿ ಕಾಣಬರುವುದು. ಹುಚ್ಚು, ಬೆಪ್ಪು, ಶಿವಲೀಲೆಗಳ ಮೊಟ್ಟಮೊದಲ ಹಂತಗಳಲ್ಲಿ ರೋಗಿಯ ಹಣೆಯ ಮೇಲೆ ಇಂತಹ ಗೆರೆಗಳು ಶಾಶ್ವತವಾಗಿರುವುದನ್ನು ಗಮನಿಸಬಹುದು.

ಮನಸ್ಸಿನ ಪಲ್ಲಟ

ಇದೇನು ? ದೆವ್ವ ಹಿಡಿದೋರಹಾಗೆ ಮುಖ ಇದೆಯಲ್ಲಾ; ಮೋಹಿನಿ ಬಡಿದವರಹಾಗಿದಾನಲ್ಲ ; ಯಾರೋ ಮಾಟವನ್ನೋ ಶೂನ್ಯವನ್ನೋ ಮಾಡಿ

ಸಿರಬಹುದು ; ಹೀಗೆಲ್ಲಾ ಮನೆಯವರು ಅಂದುಕೊಳ್ಳಲಾರಂಭಿಸಿದರೆ, ಅಂತಹ ವ್ಯಕ್ತಿಗೆ ಮಾನಸಿಕ ಪಲ್ಲಟವು ಪ್ರಾರಂಭವಾಗಿದೆ ಎಂದು ಊಹಿಸಬಹದು. ಮೊದಲ ಹಂತದಲ್ಲಿ ಗುರುತಿಸಿದರೆ, ಯಾವ ಬೇನೆಯು ಪರಿಹಾರವಾದರೂ ಸುಲಭವಲ್ಲವೇ ? ದೈಹಿಕವಾಗಲೀ, ಮಾನಸಿಕವಾಗಲೀ.

ಸ್ಥಿರವಾದ ಈ ರೀತಿಯ ಹಣೆಯ ಬರಹವು ಗುರುತಿಸಲು ಸುಲಭ, ತಿಳಿದುಕೊಂಡು ಗಮನಿಸಿದರೆ.

ಹುಬ್ಬುಗಳ ಮಧ್ಯೆ ತಲೆಕೆಳಗಾದ ಕ್ಯಾಟೆಬಿಲ್ಲು ಅಥವಾ ಇಂಗ್ಲೀಷಿನ ವೈ ಅಕ್ಷರ ಹಾಗಿರುವ ರೇಖೆಗಳು ಇರುತ್ತವೆ. ಗ್ರೀಕ್ ಅಕ್ಷರಗಳಲ್ಲಿ ಲಾಮ್ಡಾ ಎಂಬ ಅಕ್ಷರವು ಹೀಗಿರುತ್ತದೆ. ಆದುದರಿಂದ ಪಾಶ್ಚಾತ್ಯ ಮನಃಶಾಸ್ತ್ರಿಗಳು ಲಾಮ್ಡಾ ಚಿಹ್ನೆ ಎಂದು ಕರೆಯುತ್ತಾರೆ. ಹುಬ್ಬುಗಳ ಮಧ್ಯದ ಅಂತರವು ಸ್ವಲ್ಪ ಅಗಲವಾಗಿದ್ದ ರೋಗಿಗಳಲ್ಲಿ, ಈ ರೇಖೆಯು ಗ್ರೀಕ್ ಅಕ್ಷರ ಒಮೀಗಾ ದಂತಿರುತ್ತದೆ. ಕಥಕ್ಕಳಿ ನೃತ್ಯಗಾರರು ಕಲೆಯ ಮೇಲೆ ಪ್ರಭಾವಳಿಯಂತಿರುವ ಕಿರೀಟವನ್ನು ನೋಡಿಲ್ಲವೇ, ಅದರ ಹೊರಗೆರೆಯಂತೆ, ರೋಗಿಯ ಹುಬ್ಬುಗಳ ಮಧ್ಯೆ ಕಾಣಿಸುತ್ತದೆ. ಒಮೀಗಾ ಚಿಹ್ನೆ ಎಂದು ವಿಜ್ಞಾನಿಗಳು ಇದನ್ನು ಹೆಸರಿಸಿದ್ದಾರೆ. ಇಂತವರಲ್ಲಿ ಯಾವಾಗಲೂ ಮುಖವು ಸ್ವಲ್ಪ ಸಿಂಡರಿಸಿಕೊಂಡಂತೆಯೇ ಇರುತ್ತದೆ. ಆದರೆ ನಡವಳಿಕೆಯಲ್ಲಿ ವೈನವಾಗಿಯೇ ಇರುತ್ತಾರೆ. ಹಲವಾರು ತಿಂಗಳುಗಳು ಅಥವಾ ಕೆಲವು ವರ್ಷಗಳಾದ ಮೇಲೆ ಅವರ ಮಾನಸಿಕ ಬೇನೆಯು ಹೊರಗಿನವರಿಗೆ ಸ್ಪಷ್ಟವಾಗಿ ಕಾಣಬರುತ್ತವೆ.

ಇದನ್ನು ಗುರುತಿಸಿ ಸೂಕ್ತ ಚಿಕಿತ್ಸೆಯನ್ನು ಮಾಡಿಸಿದರೆ, ತುಂಬಾ ಪರಿಣಾಮಕಾರಿಯಾಗುತ್ತದೆ. ಬೇನೆಯು ಬಲಿಯಲು ಬಿಡಬಾರದು, ಏಕೆಂದರೆ ಅನಂತರ ಚಿಕಿತ್ಸೆಯು ಅಷ್ಟು ಬೇಗ ಯಶಸ್ವಿಯಾಗುವುದಿಲ್ಲ.

'ಹಣೆಯ ಬರಹ'ವು ಬೇರೊಂದರ್ಥದಲ್ಲಿ ಶಾಸ್ತ್ರವಾಗಹತ್ತಿದೆ ಎನ್ನಬಹುದು.

ಧಾರಾಗ್ನಿ - ಕೃತಜ್ಞತೆಯ ಸಂಕೇತ

"ಅವರು ಎಂತಹ ಶ್ರೋತ್ರೀಯರಪ್ಪ! ಮಹಾನುಭಾವರು! ಮನೆಯಲ್ಲಿ ಒಂದು ದಿನವಾದರೂ ಅಗ್ನಿಹೋತ್ರ, ವೈಶ್ವದೇವ ಮಾಡುವುದನ್ನು ತಪ್ಪಿಸಿಲ್ಲ. ಧಾರಾಗ್ನಿಯನ್ನು ಇಟ್ಟುಕೊಂಡಿದ್ದಾರೆ. ನಿರಂತರವಾಗಿ ಅದು ಇರುವಂತೆ ಸಕಲ ಏರ್ಪಾಟುಗಳನ್ನೂ ಮಾಡಿದ್ದಾರೆ. ಆ ಅಗ್ನಿಯಿಂದಲೇ ಅವರ ಅಗ್ನಿಸಂಸ್ಕಾರವು, ಮರಣ ಹೊಂದಿದಮೇಲೆ, ಆಯಿತು" ಎಂದು ಸೋಮಯಾಜಿಗಳನ್ನು ಮಂದಿ ಗೌರವಿಸುತ್ತಿದ್ದರು. ಕಠಿಣ ವ್ರತವನ್ನು ಆಚರಿಸಿದವರನ್ನು ಕಂಡು ಅಚ್ಚರಿಪಟ್ಟು ಮೆಚ್ಚಿಕೊಂಡಿದ್ದರು.

ನಮ್ಮಲ್ಲಿ ಧಾರಾಗ್ನಿಯ ನಂಬಿಕೆಯು ಸುಮಾರು ದೃಢವಾಗಿದೆ. ಹಿಂದೂ ಆಚಾರ ಸಂಪ್ರದಾಯಗಳಲ್ಲಿ ಹೆಚ್ಚು ಆಸಕ್ತಿಯು ಕೀರ್ತಿಶೇಷ ಜವಹರಲಾಲರಿಗೆ ಇರಲಿಲ್ಲ. ಆದರೂ ಅವರು ಮರಣ ಹೊಂದಿದಮೇಲೆ, ಅವರ ಸ್ಮರಣೆಗೆಂದು ಅಹರ್ನಿಶಿ, ಸುಮಾರು ಖರ್ಚಿನಲ್ಲಿ ಜವಹರ್ ಜ್ಯೋತಿಯನ್ನು ನಿರಂತರವಾಗಿ ಉರಿಸುತ್ತಿದ್ದಾರೆ. ಅಖಂಡ ಜ್ಯೋತಿಯನ್ನು ಬೆಳಗಿಸುವುದೂ ಧಾರಾಗ್ನಿಯನ್ನು ರಕ್ಷಿಸಿಕೊಂಡು ಬರುವುದೂ, ವೇದಗಳ ಕಾಲದಿಂದ ನಮ್ಮಲ್ಲಿ ಬೆಳೆದು ಬಂದಿರುವ ಸಂಪ್ರದಾಯ. ಇವುಗಳ ಆಚರಣೆಯನ್ನು ಮಾಡುವಾಗ, ಮಂದಿಗೆ ಎಂತಹದೋ ಸಂತಸ. ಪೂಜ್ಯರ,ದೇವರ ಸೇವೆಯನ್ನು ಮಾಡಿದೆವು; ಶ್ರದ್ಧೆಯಿಂದ ಅವರುಗಳ ಸ್ಮರಣೆಯನ್ನು ಮಾಡಿ, ಕೃತಾರ್ಥರಾಗಿದ್ದೇವೆ ಎನ್ನುವ ಆತ್ಮತೃಪ್ತಿಯೂ ಇರುತ್ತದೆ. ದೇವರು ಮತ್ತು ಪೂಜ್ಯರು ನಮಗೆ ತುಂಬಾ ಉಪಕಾರಮಾಡಿದ್ದಾರೆ ಅವರಿಬ್ಬರಿಗೂ ನಾವು ಋಣಿಗಳು ಎಂಬ ಭಾವನೆಯೂ, ಆ ಋಣಭಾರವನ್ನು ಈ ಆಚರಣೆಗಳಿಂದ ಕಡಿಮೆಮಾಡಿಕೊಂಡೆ ಎಂಬ ತೃಪ್ತಿಯೂ, ಆಚರಿಸುವವರಲ್ಲಿ ಬಹುಶಃ ಮೂಡಿರಲೇ ಬೇಕು.

*

ವೇದಗಳ ಕಾಲದಲ್ಲಿ ಋಷ್ಯಾಶ್ರಮಗಳಲ್ಲಿ ಮುನಿಗರು ಬಾಳ ರಹಸ್ಯದ ಚಿಂತನದಲ್ಲಿ ತೊಡಗಿದ್ದರು. ಅಗ್ನಿಹೋತ್ರ, ವೈಶ್ವದೇವ, ಯಜ್ಞಯಾಗಾದಿಗಳು ಆ ಸಮಾಜದಲ್ಲಿ ಬಳಕೆಗೆ ಬಂದುವು. ಅರಣಿ ಎಂಬ ಎರಡು ಮರದ ತುಂಡುಗಳನ್ನು ಮಂತ್ರೋಚ್ಚಾರಣೆ ಮಾಡುತ್ತ ಉಜ್ಜಿ ಉಜ್ಜಿ, ಹುಟ್ಟಿದ ಬೆಂಕಿಯನ್ನು ಯಜ್ಞಕುಂಡದಲ್ಲಿ ಪ್ರತಿಷ್ಠಿಸುತ್ತಿದ್ದರು.

ದಿನಬೆಳಗಾದರೆ, ನಿತ್ಯವೂ ಮನೆಯಲ್ಲಿ ಮಾಡಲೇಬೇಕಾದ ಔಪಾಸನಕ್ಕೆ, ಈ ರೀತಿ ದಿನವೂ ಅರಣಿಗಳನ್ನು ತಿಕ್ಕಿ ಅಗ್ನಿಯನ್ನು ಉತ್ಪಾದಿಸುವುದು ಸ್ವಲ್ಪ ಪ್ರಯಾಸವೇ ! ಹಾಗೂ ಅನಗತ್ಯ. ಏಕೆಂದರೆ ಆಗಿನ ಅರಣ್ಯಮಧ್ಯದ ಆಶ್ರಮಗಳಲ್ಲಿ ಯಥೇಚ್ಛವಾಗಿ ಹಾಗೂ ಪುಕಟ್ಟಾಗಿ ಸೌದೆಯು ದೊರೆಯುತ್ತಿತ್ತು. ಸೌದೆಯನ್ನು ಕಡಿದು ತರುವುದೂ, ಆಶ್ರಮದ ಶಿಷ್ಯರ ಕಾರ್ಯಕ್ರಮವಾಗಿತ್ತು. ಹಾಗಾಗಿ ಒಮ್ಮೆ ಹಚ್ಚಿದ ಬೆಂಕಿಯನ್ನು ಸದಾ ಕಾಲ ಉರಿಸಿದರೆ, ಬೆಳಗಾಗುತ್ತಲೂ ಅರಣಿಯನ್ನು ಉಜ್ಜುವ ತಾಪತ್ರಯವಿರುವುದಿಲ್ಲ ಎಂದನಿಸಿರಬೇಕು. ಧಾರಾಗ್ನಿಯನ್ನು ಸಂಪ್ರದಾಯಕ್ಕೆ ತಂದರು. ಆಗಿನ ಕಾಲಕ್ಕೆ ಅಗತ್ಯವಾದ ಉಪಯುಕ್ತವಾದ ಸಂಪ್ರದಾಯ.

ಆದರೆ ಇಂದು ಬೆಂಕಿ ಕಡ್ಡಿಗಳನ್ನು ತಯಾರಿಸಿಕೊಂಡು ಬಳಸುತ್ತಿದ್ದೇವೆ. ಸಿಗರೇಟ್ ಲೈಟರುಗಳಿಂದ ಅಗ್ನಿ ಪ್ರಚೋದನೆಯನ್ನು ಮಾಡುತ್ತೇವೆ. ವಿದ್ಯುಚ್ಛಕ್ತಿಯ ಗುಂಡಿಯನ್ನು ಒತ್ತಿ ಮೋಟಾರನ್ನು ನಡೆಸುತ್ತಿರುವಾಗಲೇ, ಸಿಗರೇಟನ್ನು ಹೊತ್ತಿಸುವ ಸೌಲಭ್ಯವನ್ನು ಸೃಷ್ಟಿಸಿಕೊಂಡಿದ್ದೇವೆ. ಅಂದರೆ ಅಗ್ನಿ ಪ್ರಚೋದನೆಯನ್ನು ಕ್ಷಣದಲ್ಲಿ, ಯಾವ ಶ್ರಮವೂ ಇಲ್ಲದೆ ಮಾಡಬಹುದು.

ಅಲ್ಲದೆ ಅಹರ್ನಿಶಿ ಅಖಂಡವಾಗಿ ಉರಿಸಲು ಸೌದೆ ಅಥವಾ ಇದ್ದಿಲು ತುಂಬಾ ಪ್ರಮಾಣದಲ್ಲಿ ಅವಶ್ಯಕ. ಇಂಧನಗಳು ಈಗ ತುಂಬಾ ಕಡಿಮೆ ಪ್ರಮಾಣದಲ್ಲಿ, ದುಬಾರಿ ಖರ್ಚಿನಲ್ಲಿ ಮಾತ್ರ ದೊರಕುತ್ತವೆ.

ಅಂದಮೇಲೆ ಇಂದು ಧಾರಾಗ್ನಿಯನ್ನು ಇಟ್ಟುಕೊಳ್ಳುವುದು, ಅಷ್ಟೇನೂ ಜಾಣತನವಲ್ಲವೇನೋ ? ಅಗ್ನಿಪ್ರಚೋದನೆಯ ದೃಷ್ಟಿಯಿಂದ ನೋಡಿದರೆ.

ಆ ಕಾಲದಲ್ಲಿ ಅಗತ್ಯವಾಯಿತು ಅವರು ಮಾಡಿದರು. ಅಜ್ಜ ಹಾಕಿದ ಆಲದಮರ ಎಂದು ಅದಕ್ಕೇ ನೇಣುಹಾಕಿಕೊಳ್ಳುವುದು ಅಷ್ಟಾಗಿ ಜಾಣತನವಲ್ಲ. ಮಾನವನ ಜ್ಞಾನವು ಕಾಲಕಾಲದಲ್ಲಿ ಮುಂದುವರೆದರೂ,ನಾವು ಇನ್ನೂ ಹಳೆಯ ಕಾಲದ ಸ್ಮರಣೆಯಲ್ಲಿಯೇ ಮುಳುಗಿ ಮೂಗು ಹಿಡಿಯುವುದು ಕ್ಷೇಮವೂ ಅಲ್ಲ. ಶ್ರೇಯಸ್ಕರವೂ ಅಲ್ಲ.

*

ಆದರೆ ಈಗಿನ ಕಾಲದಲ್ಲೂ ಧಾರಾಗ್ನಿ, ಅಖಂಡ ಜ್ಯೋತಿಗಳನ್ನು ಆಚರಿಸುವುದರಿಂದ, ಮಂದಿಯ ಮನಸ್ಸಿಗೆ ಹಿತವಾಗುತ್ತದೆ, ಸಂತಸವಾಗುತ್ತದೆ. ಸಾವಿರಾರು ವರ್ಷಗಳಿಂದ ಆಚರಣೆಯಲ್ಲಿ ಬಂದ ಸಂಪ್ರದಾಯವು. ಮನಸ್ಸಿನಲ್ಲಿ ಬರೆ ಹಾಕಿದಂತೆ ಅಚ್ಚಾಗಿ ಹೋಗಿರುತ್ತದೆ. ಅದನ್ನು ಆಚರಿಸದೆ ಇದ್ದರೆ ಯಾವುದೋ ತಪ್ಪನ್ನು ಮಾಡಿದೆವು ಎಂಬ ಅಪರಾಧ ಮನೋಭಾವವು ಕಾಡಹತ್ತುತ್ತದೆ. ಸರಳವಾಗಿ ಆಲೋಚನೆಯನ್ನು ಮಾಡಿ, ಈ ಸಂಪ್ರಾದಾಯದ ಆಚರಣೆಯು ಅನಗತ್ಯ ಎಂಬ ತೀರ್ಮಾನಕ್ಕೆ ದೃಢವಾಗಿ ಬಂದರೆ, ಅನಂತರ ಅಪರಾಧ ಮನೋಭಾವನೆಯು ಉಳಿಯುವುದಿಲ್ಲ.

ಆದರೆ ನಮ್ಮ ಮಾನವ ಹಿಂಡಿನಲ್ಲಿ ಯೋಚನೆಯನ್ನು ಉದ್ವೇಗವಿಲ್ಲದೆ ಮಾಡುವವರು ವಿರಳ. ಹಾಗಾಗಿ ಹಿಂಡಿನ ಸುಮಾರು ಮಂದಿಗೆ ಅಜ್ಜ ಹಾಕಿದ ಆಲದಮರಕ್ಕೆ ನೇಣುಹಾಕಿಕೊಳ್ಳುವುದು ಸುಲಭವಾದ ಮತ್ತು ಸಂತಸ ಕೊಡುವ ಮಾರ್ಗ.

'ಪುರಾಣಮಿತ್ಯೇವ ನ ಸಾಧು ಸರ್ವಂ' ಎಂದು ದ್ರಷ್ಟಾರ ಕವಿಯುಲಿದಿದ್ದ.

ಪುರಾತನವಾದುದು ಎಂದಮಾತ್ರಕ್ಕೆ ಅವೆಲ್ಲವೂ ಬಲು ಯೋಗ್ಯವಾದುದು, ಅನುಕರಣೀಯವಾದುದು ಎಂದೇನೂ ಅಲ್ಲ.

ಪುರಾತನ ಋಷಿಗಳು ಮನನ ಮಾಡಿ ನುಡಿದುದರ ಅರ್ಥವನ್ನು ತಿಳಿಯಲು ಯತ್ನಿಸಲೇಬೇಕು. ಏಕೆಂದರೆ ಮಾನವನ ಚರಿತ್ರೆಯಲ್ಲಿ 5–6 ಸಾವಿರ ವರ್ಷಗಳು ಕೇವಲ ಸ್ವಲ್ಪ. ಈ ಅಂತರದಲ್ಲಿ ಮೂಲಭೂತವಾಗಿ ಮನಸ್ಸಿನ ವಿಶ್ಲೇಷಣೆಯು ಹೆಚ್ಚು ಪ್ರಗತಿಯನ್ನು ಸಾಧಿಸಿಲ್ಲ. ಆದಕಾರಣ ಈ ಅರಿಯುವಿಕೆಯು ಶ್ರೇಯಸ್ಕರ.

ಅಂದಮಾತ್ರಕ್ಕೇ, ಅವರುಗಳು ಆ ಕಾಲಕ್ಕೆ, ಸಮಾಜಕ್ಕೆ ಅಗತ್ಯವಾದುವುಗಳನ್ನು ರೂಢಿಮಾಡಿದ್ದರು, ಕಟ್ಟಳೆ ಮಾಡಿದ್ದರು. ಸಂಪ್ರದಾಯ ಬೆಳೆಸಿದ್ದರು ಎಂದುಕೊಂಡು, ಅವನ್ನೇ ಇಂದೂ ಆಚರಿಸಹೋಗುವುದು ಶುದ್ಧ ಮಂಕುತನ. ಯಾರಿಗೆ ? ಬುದ್ಧಿ ಇದ್ದು ಅದನ್ನು ಉಪಯೋಗಿಸಬಲ್ಲವರಿಗೆ.

ಇತರರಿಗೆ "ಮಹಾಜನೋ ಯೇನ ಗತಃ ಸುಪಂಥಾ !"

ಆತ್ಮದ ನಗೆ ಕಿರಣ

Laughter is the Sun-Beam of the Soul

—Thomas Mann.

ಸುಪ್ರಭಾವಿ ನಗು

ಆತ್ಮದ ನಗೆ ಕಿರಣ ಎಂದು ಅರ್ಥ ಬರುವ ಮೇಲಿನ ವಾಕ್ಯವನ್ನು, ನೋಬೆಲ್ ವಿಜೇತ, ಜರ್ಮನಿಯ ಸುಪ್ರಸಿದ್ಧ ಕಾದಂಬರಿಕಾರ ನುಡಿದಿದ್ದಾನೆ. ಈ ವಾಕ್ಯವನ್ನು ಓದಿದಾಗ, ಮುಂದೆ ಓದಲಾಗಲಿಲ್ಲ. ತಡೆದು ಹಿಡಿದು "ನನ್ನನ್ನು ಅರ್ಥ ಮಾಡಿಕೋ" ಎಂದಿತು ಆ ಪಂಕ್ತಿ. ರಸನಿಮಿಷ.

ಹುಡುಗನಾಗಿದ್ದಾಗ ಕಿಟಕಿಯ ಮೂಲಕ, ಸೂರ್ಯನ ಕೋಲು, ಕೊಠಡಿಯೊಳಗೆ ಬಿದ್ದಾಗ, ಬಲು ಹಿಗ್ಗಿನಿಂದ ಅದನ್ನು ನೋಡುತ್ತಿದ್ದೆ. ಕಣ್ ಸೆಳೆಯುವ ಬಣ್ಣಗಳಿದ್ದ, ಧೂಳಕಣಗಳು, ಅದರಲ್ಲಿ ನೃತ್ಯವಾಡುತ್ತಿದ್ದುದನ್ನು ನೋಡುವುದು ಬಲು ಖುಷಿಯಾದ ಕೆಲಸವಾಗಿತ್ತು. ಕಿರಣಗಳು ಸೂರ್ಯನಿಂದ ಹೊರಟು, ನಮ್ಮ ಭೂಲೋಕಕ್ಕೆ ಬರಲು ಸುಮಾರು ಎಂಟೂಚಿಲ್ಲರೆ ನಿಮಿಷಗಳಾಗುತ್ತದೆಂದೂ, ಸೆಕೆಂಡಿಗೆ 164,000 ಮೈಲು ವೇಗದಲ್ಲಿ ಅದು ಮಿಂಚುತ್ತದೆಂದೂ, ಆಗ ನನಗೆ ತಿಳಿದಿರಲಿಲ್ಲ ಈ ಅಜ್ಞಾನದಿಂದ ನನ್ನ ಕುತೂಹಲಕ್ಕಾಗಲೀ ಹಿಗ್ಗು ವಿಕೆಗಾಗಲಿ ಧಕ್ಕೆ ಬಂದಿರಲಿಲ್ಲ.

ಸಸ್ಯವರ್ಗಕ್ಕೆ ಸೂರ್ಯನ ಕಿರಣಗಳು ಬಾಳನ್ನು ಚೇತನಗೊಳಿಸುವ ಬಂಧುಗಳು. ಪ್ರಾಣಿವರ್ಗದಲ್ಲಿ ಕೂಡ ಅಸಂಖ್ಯಾತ ಪ್ರಾಣಿಗಳಿಗೆ ಸೂರ್ಯನ ಕಿರಣಗಳು ಎಚ್ಚರಿಸುವ ಭಂಟರು. ನಿಶಾಚರ ಪ್ರಾಣಿಗಳಿಗೆ, ಮಲಗು ಮಲಗೆಂದು ಜೋಗುಳ ಹಾಡುವ ನೆಂಟರು. ನಿರ್ಜೀವ ವಸ್ತುಗಳಿಗೂ ಸೂರ್ಯನ ಕಿರಣಗಳು ಅಗತ್ಯ. ನದಿಯ ನೀರನ್ನು ಆವಿಯಾಗಿ ಮೇಲೆತ್ತಿಕೊಂಡು ಹೋಗಿ, ಮೋಡಗಳಾಗಿ,ಲಲ್ಲೆಯಾಗಿ, ಮುಹೂರ್ತವು ಒದಗಿದಾಗ,

ಮಳೆಯನ್ನು ಎಲ್ಲೆಲ್ಲೂ ಹುಯ್ಯುವ, ಅಗತ್ಯ ಕೆಲಸಕ್ಕೆ ಸೂರ್ಯನ ಕಿರಣಗಳು ಅತ್ಯಗತ್ಯ. ಅಂದರೆ ಜೀವ, ನಿರ್ಜೀವ ವಸ್ತುಗಳಿಗೆ ಸೂರ್ಯನ ಕಿರಣಗಳು ಪ್ರಾಣದಾಯಕವಾಗಿದೆ. ಇದೆಲ್ಲ ತಿಳಿಯಲಿ ತಿಳಿಯದೆ ಇರಲಿ ಸೂರ್ಯನ ಕಿರಣಗಳ ನೃತ್ಯ ಲಾಸ್ಯವನ್ನು ನೋಡುವುದು ಬಲು ಆಪ್ಯಾಯಮಾನವಾಗಿರುತ್ತದೆ.

*

ನಗುವು ಎಲ್ಲರಿಗೂ ಸುಖವನ್ನು ಕೊಡುವುದು. ನಕ್ಕಾಗ ಮನಸ್ಸು ಪ್ರಸನ್ನವಾಗುತ್ತದೆ. ಹಣ್ಣು ಬಿರಿಯುವಂತೆ ಮುಖವು ಬಿರಿಯುತ್ತದೆ. ಮುದುಡಿಕೊಂಡಿದ್ದ ಮೈ ಕೂಡ ಸಡಿಲಗೊಳ್ಳುತ್ತದೆ. ಹಗೂರಾಗಿಯೂ ಕಾಣಿಸುತ್ತದೆ. ಕಾಲವು ಬೇಗ ಬೇಗ ಸುಸೂತ್ರವಾಗಿ ಸಾಗಿದಂತೆ ಭಾಸವಾಗುತ್ತದೆ. ನಗುವ ಕಾಲದಲ್ಲಿ ಬಾಳು ಸಾರ್ಥಕ ಎನಿಸುತ್ತದೆ. ಇಷ್ಟು ಸುಪ್ರಭಾವಿಯಾದ ನಗುವು ಹೇಗೆ ಉತ್ಪನ್ನವಾಗುತ್ತದೆ ? ನಿದರ್ಶನವೊಂದನ್ನು ಬಳಸಿಕೊಂಡು ನಗುವಿನ ಪ್ರೇರಕಗಳನ್ನು ಅರ್ಥಮಾಡಿಕೊಳ್ಳೋಣ. ನಗು ತರುವ ಸನ್ನಿವೇಶವನ್ನು ಕೀರ್ತಿಶೇಷ ಕೈಲಾಸಂನಿಂದ ಉದಹರಿಸೋಣ.

ಕೈಲಾಸಂ ಹೇಳಿದ ಕಥೆ

ಸಮಾಜದ ಸುಧಾರಣೆಯನ್ನು ಮಾಡಲೇಬೇಕು ಎಂದು ಒಬ್ಬ ಬೊಬ್ಬಿರಿಯುತ್ತಾನೆ. ಇವನು ಹೇಳುವುದು ದಿಟ; ಸುಧಾರಣೆಯು ಅಗತ್ಯ ಎಂದು ಕೇಳಿದವರಿಗೂ ಅನಿಸುತ್ತೆ. ಆದರೆ ಸುಧಾರಣೆಯನ್ನು ಕಾರ್ಯರೂಪಕ್ಕೆ ತರಲು ಅವರಿಗೆ ದುಸ್ಸಾಧ್ಯ. ಅವರಲ್ಲೊಬ್ಬ ಸುಧಾರಕನಿಗೆ ತನ್ನ ಕಷ್ಟವನ್ನು ಹೇಳಿಕೊಳ್ಳುತ್ತಾನೆ.

"ಮೈ ನೆರೆಯುವ ಮೊದಲೇ ಮಗಳಿಗೆ ಮದುವೆಯನ್ನು ಮಾಡಿಬಿಡಬೇಕು; ಇಲ್ಲದೆಹೋದರೆ ನಮ್ಮ ಜಾತಿ ಹಾಳಾಗಿಹೋಗುತ್ತದೆ" ಎಂದು ತಂದೆಯನ್ನು ಅವನ ಮುದಿತಾಯಿ ಛುಡಾಯಿಸುತ್ತಾಳೆ. ಸಂಪ್ರದಾಯಸ್ಥರ ಕುಟುಂಬ. "ಹಾಗೆಮಾಡದೆ ಇದ್ದರೆ ಬಾವೀಗೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತೇನೆ" ಎಂದು ತಾಯಿಯು ಹೆದರಿಸುತ್ತಾಳೆ.

ಬಾಲ್ಯವಿವಾಹವು, ಏನೂ ಅರಿಯದ ಹುಡುಗಿಯನ್ನು ಮದುವೆಗೆ ಅಣಿಮಾಡುವುದು; ತಪ್ಪು. ಈ ವಿಷಯದಲ್ಲಿ ಸುಧಾರಣೆಯಾಗಬೇಕು ಎಂದು

ತಂದೆಯು ಒಪ್ಪುತ್ತಾನೆ. ಆದರೆ ತನ್ನ ಹೆತ್ತ ತಾಯಿ ಆತ್ಮಹತ್ಯೆ ಮಾಡಿಕೊಂಡರೆ ಹೇಗೆ ಸಹಿಸಿಯಾನು ?

ಇಂತಹ ತೊಂಚಾವಂಚ ಪರಿಸ್ಥಿತಿಯಲ್ಲಿ ಅವ ಸಿಕ್ಕಿದ್ದಾನೆ. ಯಾವ ಪರಿಹಾರವನ್ನೂ ಅವ ಕಾಣಲಾಗಲಿಲ್ಲ.

ಸಮಾಜ ಸುಧಾರಕನೆದುರು ಈ ಸಮಸ್ಯೆಯನ್ನು ತೋಡಿಕೊಳ್ಳುತ್ತಾನೆ. ಆಗ ಅವನ ಮನಸ್ಸು ಗೋಜು ಗೋಜಾಗಿರುತ್ತೆ. ನಿರ್ಣಯಿಸಲು ಕಷ್ಟವಾಗಿ ತೊಳಲುತ್ತ ಭಾರವಾಗಿರುತ್ತದೆ.

ಸುಧಾರಕನ ಉತ್ತರವೇನು? "ಹಾಗೆ ನಿಮ್ಮ ತಾಯಿ, ಹೆದರಿಸಿದರೆ ಬಾವಿಯನ್ನು ಮುಚ್ಚಿಸಿಬಿಡು, ಮನೆಗೆ ನಲ್ಲಿಯನ್ನು ಹಾಕಿಸು" ಎಂದು.

ಇದನ್ನು ಕೇಳಿದ ಕ್ಷಣ ಸಮಸ್ಯೆಯಿದ್ದವ, ನಗುತ್ತಾನೆ. ಆಗ ಅವನ ಮನಸ್ಸಿನ ಕಳವಳವೆಲ್ಲಾ ತಾತ್ಕಾಲಿಕವಾಗಿ ಮಾಯವಾಗುತ್ತದೆ. ಬಾಳು ದುರ್ಭರವಲ್ಲ ಎನಿಸುತ್ತದೆ. ಅವನ ಸಮಸ್ಯೆಯೇನೂ ಪರಿಹಾರವಾಗಲಿಲ್ಲ. ಏಕೆಂದರೆ ಅಂತಹ ದೃಢ ರೂಢಿಯ ತಾಯಿಯು ಮೊಮ್ಮಗಳಿಗೆ ಸಕಾಲದಲ್ಲಿ ಮದುವೆಯಾಗದಿದ್ದರೆ, ಬಾವಿಯು ಮುಚ್ಚಲ್ಪಟ್ಟಿರುವ ಕಾರಣ, ಇದ್ದ ನಲ್ಲಿಗೆ ನೇಣು ಹಾಕಿಕೊಂಡು ಸಾಯುತ್ತಾಳೆ...ಅಷ್ಟೇ ! ಆದರೂ ನಗು ಬಂದಿದುದರಿಂದ ತಾತ್ಕಾಲಿಕವಾಗಿ ಮನಸ್ಸು ನಿರ್ಮಲವಾಗುತ್ತದೆ.

ಕಲ್ಪನೆಗಳು

ಸಂಪ್ರದಾಯಸ್ಥರ ಮೂಢ ನಡತೆಯೊಂದು ಸಮಸ್ಯೆಯನ್ನು ತಂದಿಟ್ಟಿದೆ. ಈ ಸಮಸ್ಯೆಯ ಒಂದು ಅಲ್ಪ ಅಂಶವನ್ನು ಹಿಡಿದು, ಅದಕ್ಕೆ ಪರಿಹಾರ ಒದಗಿಸುವುದು, ನಗುವಿಗೆ ಕಾರಣ. ಪರಿಹಾರವನ್ನು ಈ ರೀತಿ ಒದಗಿಸುವಾಗ, ಸಮಸ್ಯೆಯನ್ನು ಮೂಲಭೂತವಾಗಿ ಪರಿಹರಿಸಿದಂತಲ್ಲ;ಸಮಸ್ಯೆಗೆ ಅಡ್ಡವಾಗಿ, ಬೇರೊಂದು ರೀತಿಯ ಪರಿಹಾರವನ್ನು ಸೂಚಿಸುವುದೇ ನಗುವಿಗೆ ಕಾರಣ.

ರೂಢಿ, ಸಂಪ್ರದಾಯ ಎನ್ನುವುದು ಮನಸ್ಸಿನ ಕಲ್ಪನೆಗಳೇ ! ತಾಯಿ ಎಂಬ ವಾಂಛಲ್ಯವೂ ಮನಸ್ಸಿನಲ್ಲಿ ಆಜನ್ಮವಾಗಿ ಮೂಡಿಬಂದ ಕಲ್ಪನೆಯೇ ! ಬೆಳೆದಮೇಲೆ ಹುಲಿಯು 'ಅಮ್ಮ' 'ಅಮ್ಮ' ಎಂದು ಅರಸಿಕೊಂಡು ಹೋಗುವುದಿಲ್ಲ. ಮನಸ್ಸಿನಲ್ಲಿ ಅಡ್ಡಾದಿಡ್ಡಿಯಾಡುವ ಈ ಕಲ್ಪನೆಗಳೇ, ಮನಸ್ಸಿನ ಮುಜುಗರಕ್ಕೆ ಕಾರಣ. ವಿತಂಡ ರೀತಿಯಲ್ಲಿ ಮನಸ್ಸು ಪರಿಹಾರವನ್ನು ಸೂಚಿಸಿದರೆ ನಗು ಬರುತ್ತದೆ. ಆಗ ಮುಜುಗರವು ಸ್ವಲ್ಪ ಕಾಲವಾದರೂ

ಮಾಯವಾಗುತ್ತದೆ. ಅಂದರೆ ತಾನೇ ಕಲ್ಪನೆಗಳನ್ನು ರೂಢಿಸಿಕೊಂಡು ಮನಸ್ಸು ಮುಜುಗರ ಪಡುತ್ತದೆ. ವಿತಂಡಾತರ್ಕವನ್ನು ಹೂಡಿ, ಮನಸ್ಸು ಮುಜುಗರವನ್ನು ನಗೆಯಲ್ಲಿ ಮುಳುಗಿಸಿಬಿಡುತ್ತದೆ ಎನ್ನಬಹುದು.

*

ಅನ್ನಮಯ—ಪ್ರಾಣಮಯ—ಮನೋಮಯ

ಇಂತಹ ನಗುವು ಆತುಮಕ್ಕೆ ಯಾವ ಸಂಬಂಧವನ್ನು ಹೊಂದಿರುತ್ತದೆ? ಆತುಮ ಎಂದರೆ ಏನು ? ನಾನು ಎಂದರೆ ಏನು ?

ನಾನು ಎಂದರೆ ರಾ.ಶಿ. ಎಂದು ನನಗೆ ಗೊತ್ತು. ಊಟ ಎಂದರೆ ಬಲು ಇಷ್ಟ ನನಗೆ. ಉಂಡ ಆಹಾರವನ್ನು ಜೀರ್ಣಿಸಿ ದೇಹಕ್ಕೆ ಅಗತ್ಯವಾದುದನ್ನು ಒದಗಿಸಿ ಮಿಕ್ಕಿದ್ದನ್ನು ವಿಸರ್ಜಿಸುವುದು, ದೇಹದ ಮುಖ್ಯವಾದ ಒಂದು ಕೆಲಸ. ಇದನ್ನು ಅನ್ನಮಯ ಕೋಶ ಎನ್ನಬಹುದು.

ಸತ್ತು ಹೋಗುತ್ತೇನೆ ಅನ್ನಿ, ಆಗಲೂ ಅನ್ನಮಯ ಕೋಶವು ಇದ್ದೇ ಇರುತ್ತದೆ. ಆದರೆ ಪ್ರಾಣವು ಹೋಗಿರುತ್ತದೆ. ಆದುದರಿಂದ ಬದುಕಿರುವಾಗ ಅನ್ನಮುಮಯ ಕೋಶದ ಸುತ್ತಲೂ ಪ್ರಾಣಮಯ ಕೋಶವು ಇದೆ ಎನ್ನುವುದು ಒಪ್ಪಬೇಕಾದುದು.

ಇದೆಲ್ಲವನ್ನೂ ನಾನು ಯೋಚಿಸುತ್ತೇನೆ. ಎಲ್ಲಿ ಮತ್ತು ಹೇಗೆ ? ಮನಸ್ಸಿನಲ್ಲಿ ಅಂದರೆ ಪ್ರಾಯಶಃ ಮಿದುಳಿನಲ್ಲಿ ಯೋಚಿಸುತ್ತೇನೆ. ನನ್ನ ಸುತ್ತುಮುತ್ತಲೂ ಇರುವ ಲೋಕದ ಜ್ಞಾನವನ್ನು ಆದಷ್ಟು ಪಡೆದುಕೊಂಡು ಮನಸ್ಸನ್ನೂ ಅಭಿವೃದ್ಧಿಪಡಿಸುತ್ತೇನೆ. ಅಂದರೆ ಪ್ರಾಣಮಯ ಕೋಶದ ಸುತ್ತಲೂ ಮನೋಮಯ ಕೋಶವಿರಬೇಕು.

ಇಂತಹ ಜ್ಞಾನವನ್ನು ಪಡೆದಮೇಲೆ, ಈ ರೀತಿ ಪಡೆದುದು ಯಾವುದು ಎಂದು ಯೋಚಿಸುತ್ತೇನೆ. ಈ ತೆರನ ಜ್ಞಾನವನ್ನು ವಿಜ್ಞಾನ ಎಂದು ಗೀತಾಕಾರರು ಹೇಳಿದ್ದರು. ಅಂದರೆ ಜ್ಞಾನಮಯ ಕೋಶವನ್ನು ವಿಜ್ಞಾನಮಯ ಕೋಶವು ಮುತ್ತಿರಬೇಕು.

ಆನಂದಮಯ ಕೋಶ

ಇದನ್ನು ಅರ್ಥಮಾಡಿಕೊಂಡರೆ ಆನಂದವು, ಶಾಶ್ವತವಾದ ಆನಂದವು ಉಂಟಾಗುತ್ತದೆ. ಅಂದರೆ ಎಲ್ಲವನ್ನೂ ಆವರಿಸಿರುವ ಆನಂದಮಯ ಕೋಶವೂ ಇರಬೇಕು.

ಈ ಐದು ಕೋಶಗಳಿಗೆ ಅಧ್ಯಕ್ಷನಾಗಿ, ಪಂಚಕೋಶಗಳೂ ಸುಗಮವಾಗಿ ಪ್ರಗತಿ ಹೊಂದುವಂತೆ ನಡೆಸುವ ಪಂಚಕೋಶಾಧ್ಯಕ್ಷನೊಬ್ಬನಿರಬೇಕು.

ಅವನನ್ನೇ ಅಥವಾ ಅದನ್ನೇ ಆತ್ಮ ಎನ್ನುವುದರಲ್ಲಿ ತಪ್ಪಿಲ್ಲ.

ಅಂತಹ 'ನಾನು' ಎಂದಾಗ ಮೂಲಭೂತವಾದ ಆತ್ಮದ ಕಲ್ಪನೆಯೂ ಆಗುತ್ತದೆ. ಅವಿನಾಶಿಯಾದ ಈ ಆತುಮವು ನಮ್ಮ ಮನಸ್ಸನ್ನು ಚೇತನಗೊಳಿಸಿ ನಡೆಸುತ್ತಿರಬೇಕು. ಮನಸ್ಸಿಗೆ ಮುಜುಗರವಾಗಿ ತಳಮಳವಾದಾಗ ಆತುಮವು ನಗೆಯುಮೂಲಕ ತಾತ್ಕಾಲಿಕವಾಗಿ, ಸಮಾಧಾನವನ್ನೂ ಹಿತವನ್ನೂ ಕೊಡುತ್ತದೆ.

ಅಂದರೆ ಆತುಮದ ನಗೆಯು ಸೂರ್ಯಕಿರಣದಂತೆ ಪ್ರಾಣಚೇತಕ.

Laughter is the sun-beam of the soul.

—ಅರ್ಥಗರ್ಭಿತವಾದ, ಮನನೀಯವಾದ ವಾಕ್ಯ.

ಅಂಗೈರೇಖೆ

ಇದೆಲ್ಲ ದಿಟವೆ !

"ಕೈತೋರಿಸಿ ಅವಲಕ್ಷಣ ಎಂದು ಅನ್ನಿಸಿಕೊಂಡ ಹಾಗೆ" ಎಂಬ ಗಾದೆಯು ನಮ್ಮಲ್ಲಿ ಇದೆ. "ಬೀದೀಲಿ ಹೋಗುವ ಮಾರಿಯನ್ನು ಮನೆಗೆ ಬಾ" ಅಂತ ಕರೆದ ಹಾಗೆ ಎನ್ನುವ ಗಾದೆಯೂ ಇದೇ ಅರ್ಥವನ್ನು ಸೂಚಿಸುತ್ತದೆ. ಆದರೆ ಈ ಗಾದೆಯ ಹಿಂದೆ, ಒಂದು ದೃಢವಾದ ನಂಬಿಕೆಯೂ ಇದೆ. ಕೈ ತೋರಿಸಿ, ಹಸ್ತಸಾಮುದ್ರಿಕದ ಫಲಿತಾಂಶಗಳನ್ನು ಕೇಳುವಾಗ ಅವೆಲ್ಲಾ ದಿಟವಾದುವು ಎಂಬ ನಂಬಿಕೆ.ಫಲಿತಾಂಶಗಳು ಅವಲಕ್ಷಣವಾಗಿದ್ದರೆ, ಅವನ್ನು ಮೊದಲೇ ತಿಳಿದುಕೊಂಡು, ಈಗಿನಿಂದಲೇ ಸಂಕಟ ಪಡುವುದು ಏಕೆ? ಎನ್ನುವ ಜಾಣತನವಿದೆ, ಗಾದೆಯಲ್ಲಿ. ಆದರೆ ಹಸ್ತಸಾಮುದ್ರಿಕವನ್ನು ನಂಬುವುದು ಮೌಢ್ಯವಲ್ಲವೇ ?

ಶ್ರೀರಂಗರು ಒಮ್ಮೆ ನಗೆಯಾಡಿದರು--ಕೂಲಿನಾಲಿ ಮಾಡಿ ಜೀವನ ನಡೆಸುವ, ಬಡ ಹೆಂಗಸೊಬ್ಬಳ ಕೈನೋಡಲು ಒಬ್ಬ ಪ್ರಯತ್ನಿಸಿದ! "ಮುಸಿರೆ ತಿಕ್ಕಿ ಪಾತ್ರೆ ಬೆಳಗಿ, ನಿನ್ನ ಅಂಗೈಲಿದ್ದ ರೇಖೆಗಳೆಲ್ಲ ಅಳಿಸಿ ಹೋಗಿವೆಯಲ್ಲೇ! ಅಂದಮೇಲೆ ನಿನಗೆ ಭವಿಷ್ಯವೇ ಇಲ್ಲವಲ್ಲೇ" ಎಂದು, ಇಂತಹ ಮೌಢ್ಯವನ್ನೇ ಶ್ರೀರಂಗರು ನಗೆಯಾಡಿದ್ದು.

*

ಅಂಗೈರೇಖೆಗಳು ಹೇಗೆ ಉತ್ಪತ್ತಿಯಾದುವು? ಮುಂಗೈಮೇಲೆ ರೇಖೆಗಳು ಏಕಿಲ್ಲ? ಬೆರಳು ಮತ್ತು ಅಂಗೈಗಳಿಂದ ಏನನ್ನಾದರೂ ಹಿಡಿಯುವಾಗ, ಮುಷ್ಟಿ ಬಿಗಿಯುವಾಗ, ಅಂಗೈಯಿನ ಅಗಲವು, ಉದ್ದವು, ಎರಡೂ ಕಡಿಮೆಯಾಗುತ್ತವೆ. ಹಾಗಾದಾಗ ಗೆರೆಗಳು ಸ್ವಾಭಾವಿಕವಾಗಿ ಆಗಲೇಬೇಕು. ಮುಂಗೈಯಿಂದ ಏನನ್ನೂ ಹಿಡಿಯಲು ಅಗತ್ಯವೂ ಇಲ್ಲ, ಸಾಧ್ಯವಿಲ್ಲ. ಆದ್ದರಿಂದ ಅಲ್ಲಿ ಗೆರೆಗಳಿಲ್ಲ. ಸುಲಭವಾಗಿ ಅರ್ಥವಾಗುವ ವಿಷಯವಿದು.

ಮಗುವಿನ ಅಂಗೈಯಲ್ಲಿ

ಹುಟ್ಟಿದ ಮಗುವಿನ ಕೈಯ್ಯಿನಲ್ಲಿ ಮೂರೋ ನಾಲಕ್ಕೋ ರೇಖೆಗಳಿರುತ್ತವೆ. ಅದು ಏಕೆ? ಅದೇನನ್ನೂ ತಾಯಿ ಗರ್ಭದಲ್ಲಿ ಹಿಡಿದುಕೊಳ್ಳಬೇಕಾಗಿರಲಿಲ್ಲವಲ್ಲ ದಿಟ. ಏನನ್ನೂ ಹಿಡಿದುಕೊಳ್ಳಬೇಕಾಗಿರಲಿಲ್ಲ, ಆದರೆ ಗರ್ಭಾಶಯದಲ್ಲಿರುವಾಗ ಮಗುವು ಚೆಂಡಿನಂತೆ ಮುದುಡಿಕೊಂಡಿರುತ್ತದೆ. ಹಾಗಿದ್ದಾಗ ಹೆಚ್ಚು ಸ್ಥಳವು ಬೇಕಾಗುವುದಿಲ್ಲ. ಆಗ ಕೈಕಾಲುಗಳೂ ಮುದುಡಿಕೊಂಡಿರುತ್ತವೆ. ಮುಷ್ಟಿಯೂ ಬಿಗಿದಿರುತ್ತದೆ. ಆದುದರಿಂದಲೇ ಹುಟ್ಟಿದ ಮಗುವಿನ ಕೈಯ್ಯಿನಲ್ಲೂ ರೇಖೆಗಳಿರುತ್ತವೆ.

ಗರ್ಭಾಶಯದಲ್ಲಿ ಮಗುವು, ಪರಿಪೂರ್ಣಗೊಂಡ ಒಂದು ಸೆಲ್ಲಿನಿಂದ, ಜೀವನವನ್ನು ಆರಂಭಿಸುತ್ತದೆ. ಒಂದು ಸೆಲ್ಲು ಬೆಳೆದು ಒಡೆದು ಎರಡಾಗಿ, ಎರಡೂ ಬೆಳೆದು ಒಡೆದು ನಾಲ್ಕಾಗಿ, ಹೀಗೆ ಕೋಟ್ಯಂತರ ಸೆಲ್ಲುಗಳು ಉತ್ಪನ್ನವಾಗುತ್ತವೆ. ಹೀಗಾಗುವಾಗ ದೇಹದ ಒಂದೊಂದು ಕಾರ್ಯಕ್ಕೆ ಮೀಸಲಾಗುವ ಸೆಲ್ಲುಗಳು ಅಣಿಯಾಗುತ್ತವೆ. ಮೂಲತಃ ಒಂದೇ ಆಗಿದ್ದ ಸೆಲ್ಲಿನಿಂದಲೇ ವಿಧ ವಿಧ ಕಾರ್ಯಕ್ಕೆ ಮೀಸಲಾಗುವ ಸೆಲ್ಲುಗಳು ಹುಟ್ಟಿಕೊಳ್ಳುತ್ತವೆ. ಹೀಗಾಗುವಾಗ ಪಕ್ಕಪಕ್ಕದಲ್ಲಿದ್ದ ಸೆಲ್ಲುಗಳು, ಒಂದು ಚರ್ಮವಾಗಲು, ಇನ್ನೊಂದು ನರಸಮೂಹವಾಗಲು, ಅಣಿಯಾಗುತ್ತವೆ. ಬೆಳೆದಮೇಲೆ ಚರ್ಮವೇ ಒಂದು ತರಹ, ಮೆದುಳು ಮತ್ತು ನರಗಳೇ ಒಂದು ತರಹ ವಿಭಿನ್ನವಾಗಿ ಕಾಣಿಸಿದರೂ, ಮೂಲತಃ ಒಂದೇ ಟಿಷ್ಯೂವಿನಿಂದಲೇ ಉದ್ಭವಿಸಿದುವು.

ಚರ್ಮ – ಮನಸ್ಸಿನ ಸಂಬಂಧ

ಮೆದುಳು ಮತ್ತು ನರಗಳು, ಚರ್ಮ–ಇವುಗಳ ಭ್ರಾತೃತ್ವವನ್ನು ನಡವಳಿಕೆಯಲ್ಲಿ ಕಾಣುತ್ತೇವೆ. ಮನಸ್ಸು ಮೆದುಳಿನ ಬೆಂಬಲದಿಂದಲೇ ಕೆಲಸ ಮಾಡುತ್ತದೆ. ಮನಸ್ಸಿನ ಪರಿಸ್ಥಿತಿಗನುಗುಣವಾಗಿ ಮನುಷ್ಯನು ನಡೆದುಕೊಳ್ಳುತ್ತಾನೆ. ಇಂತಹ ನಡವಳಿಕೆಯಿಂದ ಚರ್ಮ ಮತ್ತು ಮನಸ್ಸಿನ ಪರಸ್ಪರ ಸಂಬಂಧವನ್ನು ಸುಲಭವಾಗಿ ತಿಳಿಯಬಹುದು.

1) ಎಳೆಯ ಮಗುವಿನ ಚರ್ಮಕ್ಕೆ ಕಚಗುಳಿ ಇಟ್ಟರೆ, ಅದಕ್ಕೇನೋ ಹಿಗ್ಗು, ಕಿಲಕಿಲ ನಗುತ್ತೆ.

2) ಮೈಯ್ಯನ್ನು ಹಿತವಾಗಿ ಬೇಕಾದವರು ತಡವಿದರೆ, ಎಂತಹದೋ ಸುಖವಾಗುತ್ತೆ. ದನಗಳೂ, ಇತರ ಸಾಕುಪ್ರಾಣಿಗಳಲ್ಲೂ ಈ ನಡತೆಯನ್ನು

ಕಾಣಬಹುದು. ಮನುಷ್ಯರಂತೆ ಈ ಪ್ರಾಣಿಗಳ ಮನಸ್ಸೂ ತಡವಿದಾಗ ಪ್ರಫುಲ್ಲ ವಾಗುತ್ತದೆ.

3) ಅದೇ ರೀತಿ ಮನಸ್ಸು ಖುಷಿಯಾಗಿರುವಾಗ, ಜತೆಯುವರ ಮೈಯ್ಯನ್ನು ತಡವುವಂತಾಗುತ್ತದೆ. ಆಗ ಮನಸ್ಸಿನ ಖುಷಿಯೂ ಇಮ್ಮಡಿ ಯಾಗುತ್ತದೆ.

4) ಮನಸ್ಸಿನಲ್ಲಿ ಕೋಪ ಬಂದರೆ ಮೈ ಉರಿದುಹೋಗುತ್ತೆ.

5) ರೇಗಿದಾಗ ಮೈಯ್ಯನ್ನು ಪರಚಿಕೊಳ್ಳುತ್ತಾರೆ.

6) ತುಂಬಾ ದುಃಖವಾದಾಗ ಮೈ ಮುದುಡಿಕೊಳ್ಳುತ್ತೆ. ಗರ್ಭ ದಲ್ಲಿದ್ದ ಮಗುವಿನಂತೆ ಮುದುಡಿಕೊಳ್ಳುತ್ತೆ. ಆಗ ಯಾರಾದರೂ ಮೈ ಮುಟ್ಟಿದರೆ ಕೆರಳುವಂತಾಗುತ್ತದೆ. ಆದರೆ ತಮ್ಮವರು ಹಾಗೆ ಮಾಡಿದರೆ ದುಃಖ ಶಮನವಾಗುತ್ತದೆ.

7) ಬಲಿತವರು ಪ್ರೀತಿಯಿಂದ ಕಚಗುಳಿ ಇಟ್ಟು ಆಡಿದರೆ ಪರಿಣಾಮ ತಿಳಿದೇ ಇದೆ.

8) ಗುರಾಣಿಯಂತಹ ಚರ್ಮ ಕಣಯ್ಯ (Thick Skinned) ಎಂದರೆ ಅಂತಹವನ ಬುದ್ಧಿ ಸ್ವಲ್ಪ ಮಂದ ಎಂದೇ ಅರ್ಥ.

9) ಮುಟ್ಟಿದರೆ ಮುನಿ ಎಂದರೆ ಅಸಾಧ್ಯ ಲಜ್ಜೆ ಎಂದರ್ಥ ಬರುತ್ತದೆ.

ಈ ರೀತಿ ಚರ್ಮಕ್ಕೂ ಮನಸ್ಸಿನ ಭಾವನೆಗಳಿಗೂ ನಿಕಟ ಸಂಬಂಧವಿದೆ. ಅದರಲ್ಲೂ ಅಂಗೈಯ್ಯಿಗೂ ಮನಸ್ಸಿಗೂ ಅತ್ಯಂತ ನಿಕಟ ಸಂಬಂಧವಿದೆ. ದೈನಂದಿನ ನಡವಳಿಕೆಯನ್ನು ನೋಡಿ :

1) ಕೋಪ ಬಂದಾಗ ಮುಷ್ಠಿ ಬಿಗಿದು ಝಳಪಿಸುತ್ತೇವೆ.

2) ಅಂಗೈನಿಂದ ಮೈದಡವುತ್ತಾರೆಯೇ ವಿನಾ ಮುಂಗೈನಿಂದಲ್ಲ.

3) ಯೋಚನೆ ಮಾಡುವವನು ಗಲ್ಲಕ್ಕೆ ಅಂಗೈಯ್ಯನ್ನು ಒತ್ತುತ್ತಾನೆ.

4) ಭರತನಾಟ್ಯದ ಮುದ್ರೆಗಳ ಅರ್ಥವೂ ಮನಸ್ಸಿನ ಹಾವಭಾವಗಳ ಸಂಕೇತ.

ಅಂಗೈಯ್ಯಿನ ಚರ್ಮವು ಮಿಕ್ಕ ಕಡೆ ಇರುವ ಚರ್ಮದಂತೆ ಸಡಿಲ ವಾಗಿಲ್ಲ. ಚರ್ಮದ ಕೆಳಗಿರುವ ಟಿಷ್ಯೂಗಳೊಂದಿಗೆ ದೃಢವಾಗಿ ಅಂಟಿ ಕೊಂಡಿದೆ. ಹೀಗಿರುವುದರಿಂದ ವಸ್ತುವನ್ನು ಹಿಡಿಯುವಾಗ, ಬಿಗಿತವು ದೊರೆಯುತ್ತದೆ. ಇದೇ ಕಾರಣದಿಂದ ಅಂಗೈಯ್ಯಿನಲ್ಲಿ ರೇಖೆಗಳೂ ಸುಲಭ ವಾಗಿ ಗುರುತಾಗುತ್ತವೆ.

ತೋರ–ಆಳ

ಪ್ರಗತಿಯಲ್ಲಿ ಮಾನವನು ಸುರಕ್ಷತೆಗಾಗಿ, ಸಂಘಜೀವಿಯಾದ. ತನ್ನ ಮನಸ್ಸಿನಲ್ಲಿದ್ದುದನ್ನು ಸಂಘದಲ್ಲಿ ಬಹಿರಂಗವಾಗಿ ಪ್ರದರ್ಶಿಸಲು ಅಡ್ಡಿ ಬಂದಿತು. ಸಮಾಜದಲ್ಲಿ ಪ್ರಭಾವಶಾಲಿಗಳ ಮೇಲೆ ಕೋಪ ಬಂದರೆ, ತೋರಿಸಿಕೊಳ್ಳುವುದಕ್ಕೆ ಆಗುತ್ತೇ! ಅಂತಹ ಸಂದರ್ಭಗಳಲ್ಲಿ ಜೇಬಿನಲ್ಲಿ ಮರೆಯಾಗಿ ಕೈಯಿಟ್ಟು ಬೆರಳುಗಳಿಂದ ಅಂಗೈಯ್ಯನ್ನು ಹೊಸೆಯುತ್ತೇವೆ.

ತಂದೆ ತಾಯಿ, ಹೆಂಡತಿ ಮಕ್ಕಳು, ಸೋದರ ಸೋದರಿಯರು ಇರುವ ಮನೆಯಲ್ಲಿ, ಅಂದರೆ ಮಾವ ಅಳಿಯ, ಅತ್ತೆ ಸೊಸೆ, ಅತ್ತಿಗೆ ನಾದಿನಿ ಇರುವಾಗ, ಮನಸ್ಸನ್ನು ಕದಡಿ ಅಂಗೈ ಹೊಸೆಯುವಂತೆ ಆಗಲು ಎಷ್ಟು ಅವಕಾಶ ಇರುತ್ತದೆ.

ಕಲಿಯುವ ಶಾಲೆಯಲ್ಲಿ, ಬೆಳೆಯುವ ಸಮಾಜದಲ್ಲಿ ಅಂಗೈ ಹೊಸೆಯುವಂತಾಗುವ ಸಂದರ್ಭಗಳು ಅಪರಿಮಿತ.

ಇವೆಲ್ಲಾ ತೋರ ಮನಸ್ಸಿನಲ್ಲಿ ಆಗುವ ಪ್ರತಿಕ್ರಿಯೆಗಳು.

ಆಳ ಮನಸ್ಸಿನಲ್ಲಿ ಆಗುವ ಅಲಪಟೆಗಳನಕ ಅಸಂಖ್ಯಾತ. ವನ್ಯಮೃಗಗಳ ಪ್ರೇರಕಗಳೆಲ್ಲಾ ಅಲ್ಲಿ ತಾಂಡವಾಡುತ್ತಿರುತ್ತವೆ. ಉಲ್ಬಣಗೊಂಡು ತೋರ ಮನಸ್ಸಿಗೆ ಎದ್ದಾಗಲೇ ಅವುಗಳ ಇರುವಿಕೆಯು ಕಾಣಬರುತ್ತದೆ. ಆಳಮನಸ್ಸಿನ ಆತಂಕಗಳು, ನಮ್ಮ ಅರಿವಿಲ್ಲದೆಯೇ ಅಂಗೈಯನ್ನು ಹೊಸೆಯುವಂತೆ ಮಾಡಲು ಸಾಧ್ಯ.

ಇವೆಲ್ಲವೂ ಅಂಗೈಯ್ಯಿನ ಗೆರೆಗಳನ್ನು ಬರೆದಿಡುತ್ತವೆ. ತೆಂಗಿನ ಮರದ ಮೇಲೆ ಅದರ ವಯಸ್ಸನ್ನು ಸೂಚಿಸುವ ಪಟ್ಟೆಗಳಿದ್ದಂತೆ, ಅಂಗೈಯ್ಯಿನ ಮೇಲೆ, ಮನಸ್ಸಿನ ಬೆಳವಣಿಗೆಯ ಕುರುಹಾದ ರೇಖೆಗಳನ್ನು ಕಾಣುತ್ತೇವೆಯೇ ?

ಮನಸ್ಸಿನ ಹೊಸ ಹೊಸ ಆಸೆಗಳಿಗನುಗುಣವಾಗಿ ಹೊಸ ಹೊಸ ರೇಖೆಗಳೂ ಕಾಣಬರುತ್ತವೆಯೇ ? ಹೋದ ವರ್ಷ ಅಂಗೈಯಲ್ಲಿ ಕಾಣಿಸದೇ ಇದ್ದ ರೇಖೆ, ಈ ವರ್ಷ ಕಾಣಿಸುವುದು ಎಲ್ಲರ ಅನುಭವ.

ಇಂತಹ ಲಕ್ಷಾಂತರ ಅಂಗೈ ರೇಖೆಗಳನ್ನೂ ಅವರ ಮನಸ್ಸು ಮತ್ತು ನಾಳನಡತೆಯನ್ನು ಸೂಕ್ಷ್ಮವಾಗಿ ಗಮನಿಸಿ, ಇಂತಹ ರೇಖೆಯು ಇಂತಹ ಪ್ರವೃತ್ತಿಯನ್ನು ಬಹುಪಾಲು ಸೂಚಿಸುತ್ತದೆ; ಎಂದು ಸಾಮುದ್ರಿಕರು ನಿರ್ಧರಿಸಿದರೇ! ಆದುದರಿಂದಲೇ ಕೆಲವು ವೇಳೆ ಹಸ್ತಸಾಮುದ್ರಿಕರು ನುಡಿದ ಭವಿಷ್ಯವು ಅಕ್ಷರಶಃ ದಿಟವಾಗುತ್ತದೆಯೇ ?

ಮನನ ಮಾಡಬೇಕಾದ ವಿಷಯ.

"ಅಬ್ರೂಯಾತ್ ಸತ್ಯಮಪ್ರಿಯಂ"

ಸತ್ಯವನ್ನು ನುಡಿಯಬೇಕಂತೆ. ಪ್ರಿಯವಾದುದನ್ನು ನುಡಿಯಬೇಕಂತೆ. ಆದರೆ ಸತ್ಯವಾದುದಾದರೂ ಅಪ್ರಿಯವಾದುದಾದರೆ ನುಡಿಯಬಾರದಂತೆ.

'ಸತ್ಯಮೇವ ಜಯತೆ' ಲಾಂಛನದಲ್ಲಿ ಮೆರೆಯುವ ಈ ವಾಕ್ಯವು ಸತ್ಯವಾದುದಾದರೆ, ಅಪ್ರಿಯವಾಗಬಹುದು ಎಂದು ಸತ್ಯವನ್ನು ಆಡದೆ ಇರುವ ಜನ ನಾಯಕರು ಸೋಲಬೇಕು. ಆದರೆ ಜಯಗಳಿಸುವುದನ್ನು ಕಂಡಿದ್ದೇವೆ.

ಲಾಗಾಯ್ತಿನಿಂದಲೂ ಮಾನವನ ಸ್ವಭಾವವು ಇದೇ ರೀತಿಯದು. ಉದಾತ್ತ ವಾಕ್ಯಗಳನ್ನು ಘೋಷಿಸುವುದು. ಬದನೆಕಾಯನ್ನು ತಿನ್ನುವುದು, ತೇಗುವುದು.

1847ರಲ್ಲಿ ಇಗ್ನೇಸ್ ಸೆಮ್ಮಲ್‌ವೈಸ್ ಎಂಬುವ, ಅಂದು ಯೂರೋಪಿನಲ್ಲಿ ಸುಪ್ರಸಿದ್ಧವಾಗಿದ್ದ, ವಿಯನ್ನಾದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ. ಚಿಕ್ಕ ವಯಸ್ಸು ; ಅನುಭವ ಸಾಲದು ; ಕಾರಣ ಚಿಕ್ಕ ಕೆಲಸದಲ್ಲಿದ್ದ.

ಬಾಣಂತಿ ಜ್ವರ

ಆ ಕಾಲದಲ್ಲಿ ಹೆರಿಗೆಯಾದವರು, ಘೋರ ರೂಪದ ಬಾಣಂತಿ ಜ್ವರಕ್ಕೆ ತುತ್ತಾಗುವುದು ಸರ್ವೇಸಾಮಾನ್ಯವಾಗಿತ್ತು. 'ಕೈಗಳಲ್ಲಿ ಮತ್ತು ಉಗುರು ಸಂದುಗಳಲ್ಲಿ, ಆಸ್ಪತ್ರೆಯ ವೈದ್ಯರುಗಳು ಮತ್ತು ವಿದ್ಯಾರ್ಥಿಗಳು (Cadaveric Material) ಹೆಣದ ಸೋಂಕನ್ನು ಹೊಂದಿರುತ್ತಾರೆ. ಸೋಂಕಿದ ಆ ಕೈಗಳಿಂದಲೇ ಹೆರಿಗೆಯನ್ನೂ ನಡೆಸುತ್ತಾರೆ. ಹೆಣದ ಸೋಂಕು ಬಾಣಂತಿಯ ಹಸಿ ಮೈಯನ್ನು ಹೊಕ್ಕು ಬಾಣಂತಿ ಜ್ವರವು ಉಂಟಾಗುತ್ತದೆ. ಆದಕಾರಣ, ಬಾಣಂತಿ ಜ್ವರವು ಬರದಂತೆ ಎಚ್ಚರಿಕೆ ವಹಿಸಬೇಕಾದರೆ, ವೈದ್ಯ ಸಿಬ್ಬಂದಿಯವರು ಮತ್ತು ವಿದ್ಯಾರ್ಥಿಗಳು ತಮ್ಮ ಕೈಗಳನ್ನು ಉಗುರು ಸಂದು

ಗಳನ್ನು ಕ್ಲೋರೀನ್ ಇರುವ ಸುಣ್ಣದ ತಿಳಿನೀರಿನಲ್ಲಿ ಚೆನ್ನಾಗಿ ತೊಳೆದು ಕೊಳ್ಳಬೇಕು" ಎಂದು ಅವ ಸತ್ಯದ ಅಂಚನ್ನು ಕಂಡು, ಘೋಷಿಸಿದ.

ತನ್ನ ಸ್ವಂತ ವಾರ್ಡುಗಳಲ್ಲಿ ಈ ಮುಂಜಾಗ್ರತಾಕ್ರಮವನ್ನು ಕಡ್ಡಾಯ ಆಚರಣೆಗೆ ತಂದ.

ಈ ಪ್ರಯೋಗವನ್ನು ಪ್ರಾರಂಭಿಸುವ ಮೊದಲು, ಎಂಟು ಹೆರಿಗೆಗಳಲ್ಲಿ ಒಬ್ಬರು ತೀವ್ರ ಬಾಣಂತಿ ಜ್ವರಕ್ಕೆ ಬಲಿಯಾಗುತ್ತಿದ್ದರು, ಸಾಯುತ್ತಿದ್ದರು. ಆದರೆ ಪ್ರಯೋಗವನ್ನು ನಡೆಸಿದ ವರ್ಷ ಮುವತ್ತು ಹೆರಿಗೆಗಳಲ್ಲಿ ಒಬ್ಬಳು ಮಾತ್ರ ಮರಣವಾಗುವಂತಾಯಿತು. ಮೂರನೆಯ ವರ್ಷ ನೂರು ಹೆರಿಗೆಗಳಲ್ಲಿ ಒಬ್ಬಳು ಮಾತ್ರ ಸತ್ತಳು ! !

ಅಪ್ರಿಯವಾಯಿತು

ಇಂತಹ ಅತ್ಯುತ್ತಮ ಫಲಿತಾಂಶವನ್ನು ಪಡೆದ ಸೆಮ್ಮೆಲ್ ವೈಸ್ ತಾನು ದರ್ಶಿಸಿದ ಸತ್ಯವನ್ನು ಇತರ ವೈದ್ಯರುಗಳಿಗೆ ತಿಳಿಸಿದ. ಬಲು ಹುರುಪಿನಿಂದಲೂ ನುಡಿದಿರಬೇಕು. ಸತ್ಯಪೂರ್ಣವಾದ ಈ ಮಾತು, ಅವನ ಜೊತೆಗಾರರಿಗೆ ತುಂಬಾ ಅಪ್ರಿಯವಾಯಿತು.

ಏಕೆ ಅಂತ ? ಮೊದಲ ಕಾರಣ : ವಯಸ್ಸು ಮತ್ತು ಅನುಭವದಲ್ಲಿ ಹಿರಿಯರಾಗಿದ್ದವರು, ತಮಗೆ ಕಾಣದೆ ಹೋದುದನ್ನು ಈ ಪಿಲ್ಕಟ ಕಂಡು ಹಿಡಿಯುತ್ತಾನೆಯೇ ಎಂಬ ಅಹಂಕಾರ. ಎರಡನೆಯ ಕಾರಣ : ಅಹಂಕಾರದಿಂದ ಉಂಟಾದ ಮೌಢ್ಯ ಮತ್ತು ಜಗಮೊಂಡುತನ. ಮೂರನೆಯ ಕಾರಣ: ತಮ್ಮ ಕೈಗಳು ಮತ್ತು ಉಗುರು ಸಂದುಗಳಲ್ಲಿ ಹೆಣದ ಸೋಂಕಿನ ಪದಾರ್ಥಗಳಿವೆ ಎಂಬುದು ಅವರುಗಳನ್ನು ರೇಗಿಸಿತು, ಕೆರಳಿಸಿತು.

ಇವರುಗಳೆಲ್ಲರೂ ಸಂಘೇ ಶಕ್ತಿ ಕಲೌ ಯುಗೇ ಎಂಬ ನೀತಿಗನುಸಾರವಾಗಿ, ಗುಂಪು ಕಟ್ಟಿಕೊಂಡು, ಸೆಮ್ಮೆಲ್ ವೈಸನ ವಿರುದ್ಧ ಕತ್ತಿ ಕಟ್ಟಿದರು. ವಿಯನ್ನಾದ ಆಸ್ಪತ್ರೆಯಿಂದ, ವಿಯನ್ನಾ ಪಟ್ಟಣದಿಂದ, ಅವನನ್ನು ಹೊಡೆದಟ್ಟಿದರು.

ಆ ನಂತರ ಅವ 'ಬುಡಾಪೆಸ್ಟ್'ನಗರಕ್ಕೆ ಹೋದ. ಅಲ್ಲಿನ ವೈದ್ಯರುಗಳಿಗೆ ತಾನು ಕಂಡ ಸತ್ಯವನ್ನು ವಿವರಿಸಿದ. ಅಲ್ಲಿನ ಡಾಕ್ಟರುಗಳು ವಿಯನ್ನಾದ ಮನೋಧರ್ಮವಿದ್ದವರೇ ! ಇದೇ ಮನೋಧರ್ಮವು ನಮ್ಮ ದೇಶದಲ್ಲಿ ಇಂದೂ ಹಿರಿಯ ವಿಜ್ಞಾನಿಗಳಲ್ಲಿ, ವ್ಯಾವಹಾರಿಕ ಬಾಳಿನಲ್ಲಿ ಮುಂದುವರೆದ

ಹಿರಿಯ ವಿಜ್ಞಾನಿಗಳಲ್ಲಿ, ವಿಪುಲವಾಗಿರುವುದನ್ನು ಕಣ್ಣಾರ ನಾವು ಕಾಣುತ್ತಲೇ ಇದ್ದೇವೆ. ಮಾನವನೊಂದಿಗೆ ಅಹಂಕಾರದೊಡನೆ ಹುಟ್ಟಿ ಬಂದ ಸಾಮಾನ್ಯ ಸ್ವಭಾವ ಇದು.

ಬುಡಾಪೆಸ್ಟ್‌ನಲ್ಲಿ ಯಾವ ಪ್ರಗತಿಯನ್ನು ಸಾಧಿಸಲಾಗದೆ, ಸೆಮಲ್ ವೈಸನು, "ವೈದ್ಯರುಗಳೆಲ್ಲರು, ಖೂನಿಮಾಡುವವರು ಕೊಲೆಗಾರರು" ಎಂದು ರೇಗಾಡಲಾರಂಭಿಸಿ, ಕೊನೆಗೆ ಹುಚ್ಚನಾದ, ಉನ್ಮಾದ ಹುಚ್ಚಿನಿಂದ ಎಗರಾಡುತ್ತಿದ್ದ ಅವನನ್ನು ಕೈಕಾಲು ಕೋಳ ಹಾಕಿ ನಿರ್ಬಂಧಿಸಿದರು. ಹುಚ್ಚಾಸ್ಪತ್ರೆಗೆ ಸೇರಿಸಿದರು. ದಯಾಮಯನಾದ ಅವನ ಭಗವಂತ ಅಲ್ಲಿ ಅವನಿಗೆ ಮೋಕ್ಷವನ್ನು ಸಾವಿನ ಮೂಲಕ ದಯಪಾಲಿಸಿದ.

ಹುಚ್ಚು ಹಿಡಿದು ಸತ್ತ

ಸಹಮಾನವರು ನರಳುವುದನ್ನು ಕಂಡು,ಅಕಾಲ ಮೃತ್ಯುವಿಗೆ ತುತ್ತಾಗುವುದನ್ನು ಕಂಡು ಇಗ್ನೇಸ್ ಸೆಮ್ಮಲ್ ವೈಸ್, ತುಂಬಾ ನೊಂದುಕೊಂಡಿದ್ದ. ವಿಶಾಲ ಅನುಕಂಪದಿಂದ ಪ್ರೇರಿತವಾದ ಅವನ ಮನಸ್ಸು ನರಳುವುದನ್ನು ತಡೆಗಟ್ಟಬಹುದಾದ, ಸತ್ಯದ ಒಂದು ಅಂಶವನ್ನು ಕಂಡಿತು. ಪ್ರಯೋಗ ನಡೆಸಿದಾಗ ಉತ್ತಮ ಫಲಿತಾಂಶವನ್ನೂ ಕೊಟ್ಟಿತು.

"ಸತ್ಯಂ ಬ್ರೂಯಾತ್" ಮಾಡಿದವ "ಸತ್ಯಮೇವ ಜಯತೇ" ಎಂದು ನಂಬಿದ್ದಿರಲೇ ಬೇಕು.

ಆದರೆ ಈ ನುಡಿಯನ್ನು ಕೇಳಿಸಿಕೊಂಡವರಿಗೆ, ಇದು ಅಪ್ರಿಯವಾಗಿತ್ತು. ಫಲಿತಾಂಶ:ಸೆಮ್ಮಲ್ ವೈಸ್, ಯಾವ ಮುನ್ನಡೆಯನ್ನೂ ತದನಂತರ ಸಾಧಿಸಲಾರದೆ, ತಲೆ ಕೆಡಸಿಕೊಂಡು ಹುಚ್ಚು ಹಿಡಿದು ಸತ್ತುಹೋದ.

"ಸತ್ಯಮೇವ ಜಯತೇ" ಎಂದು ಸೆಮ್ಮಲ್ ವೈಸನಿಗೆ ಹುಚ್ಚು ಹಿಡಿಸಿಕೊಂದವರೆಲ್ಲ ಡಾಕ್ಟರುಗಳೂ, ಸಂಸ್ಕೃತದ ಪರಿಚಯವಿದ್ದಿದ್ದರೆ, ಘೋಷಿಸುತ್ತಿದ್ದರೋ ಏನೋ ?

"ಅಬ್ರೂಯಾತ್ ಸತ್ಯಮಪ್ರಿಯಂ"–ವ್ಯಾವಹಾರಿಕ ಬಾಳಿಗೆ ಎಷ್ಟು ಅಗತ್ಯವಾದ ನೀತಿ. "ಸತ್ಯಮೇವ ಜಯತೆ" ಧ್ಯೇಯವಾದಿಯಾದ ಹುತಾತ್ಮನ ದಿವ್ಯಮಂತ್ರ.

ಮಾನವಕುಲದ ಬೆಳಕು

ಅವಿನಾಶಿಯಾದ, ಚಿರಂಜೀವಿಯಾದ, ಅಧಿ ಆತ್ಮವಾದ ಸತ್ಯದ ಬಾಳನ್ನು ನಡೆಸಲು ಉದ್ರೇಕಗೊಂಡವರು,"ಸತ್ಯಂ ಬ್ರೂಯಾತ್" ಮಾಡಬೇಕು.

ಆಗ ವ್ಯಾವಹಾರಿಕವಾಗಿ ಅವರುಗಳು ಸೆಮ್ಮಲ್ ವೈಸ್ ಆಗುತ್ತಾರೆ, ಸಾಯುತ್ತಾರೆ. ಆದರೆ ಆಧ್ಯಾತ್ಮಿಕವಾಗಿ, ಮಾನವಕುಲದ ಬಾಳ ಬೆಳಕಾಗಿ, ದೇಹ ಮತ್ತು ಮನಸ್ಸು ಎರಡನ್ನೂ ಕಳಚಿಕೊಂಡು, ಸಾಯುಜ್ಯವನ್ನು ಪಡೆದು ಅಮರರಾಗುತ್ತಾರೆ.

*

ಆದರೆ ಈ ಬಾಳಿನಲ್ಲಿ ಎರಡೂ ಧ್ಯೇಯಗಳನ್ನು ಪರಸ್ಪರವಾಗಿ ಅಳವಡಿಸಿ ಕೊಂಡು, "ಈಸಬೇಕು, ಇದ್ದು ಜೈಸಬೇಕು" ಎಂಬ ಕೆಚ್ಚು ಇರುವವರಿಗೆ—

"ಅಬ್ರೂಯಾತ್ ಸತ್ಯಂ ಅಪ್ರಿಯಂ"

ಎನ್ನುವ ಹಿತೋಪದೇಶವು ಎಷ್ಟು ಸುಂದರ, ಎಷ್ಟು ಅಗತ್ಯ ! !

*

ಮನನ ಮಾಡುವ ಶಕ್ತಿಯಿದ್ದವರು ಇದನ್ನು ಅಧ್ಯಯನ ಮಾಡಬೇಕು.

ಕ್ರಾಂತಿಕಾರೀ ಯೌವನ

"ಕಾಲವು ಕೆಟ್ಟುಹೋಯಿತಪ್ಪ ! ಅನುಭಾವಿ ಹಿರಿಯರ ಮಾತನ್ನು ಇಂದಿನ ಯುವಕರು ಕೇಳಿಸಿಕೊಳ್ಳುವುದೇ ಇಲ್ಲ. ಹೇಳಿದಂತೆ ಕೇಳದಿದ್ದರೂ ಪರವಾಗಿಲ್ಲ. ಅಸಡ್ಡೆಯಿಂದ ನಮ್ಮನ್ನು ನೋಡದೆ ಇದ್ದರೆ, ನಿಕೃಷ್ಟವಾಗಿ ಕಾಣದೇ ಇದ್ದರೆ ಸಾಕು. ನಮ್ಮನ್ನು ಕಂಡರೆ ಅಲಕ್ಷ್ಯವಂತಿರಲಿ, ಅಸಡ್ಡೆ ಇರಲಿ, ಆದರೆ ಹೀನಾಮಾನವಾಗಿ ಎದುರೆದುರಿಗೇ ಅನ್ನಬೇಕೇ ? ಇಂತಹ ಪ್ರವೃತ್ತಿಯು ಲೋಕ ಕಲ್ಯಾಣದ ದೃಷ್ಟಿಯಿಂದ ಒಳ್ಳೆಯ ಶುಭ ಸೂಚನೆಯಲ್ಲ ಎಂದು ಹಿರಿಯರು ಅನ್ನುವುದನ್ನು ಇಂದು ಎಲ್ಲೆಲ್ಲೂ ಕೇಳುತ್ತೇವೆ. ಹೀಗನ್ನುವ ಹಿರಿಯರು ತುಂಬಾ ಮನನೊಂದು, ತಾಳ್ಮೆಯಿಂದ ಪರಿಸ್ಥಿತಿಯನ್ನು ಗಮನಿಸಿ, ಆಳವಾಗಿ ಹಾಗೂ ಅನುಕಂಪದಿಂದ ಯೋಚಿಸಿ, ಹೀಗೆ ನುಡಿಯುತ್ತಾರೆ. ತಮ್ಮ ಮನಸ್ಸಿನ ಆಳದಲ್ಲಿರುವ ಆತಂಕವನ್ನೂ ಕೊರಗನ್ನೂ ತೋಡಿಕೊಳ್ಳುವ ಸಲುವಾಗಿ.

ಮನನ ಮಾಡಬೇಕಾದ ವಿಷಯ

ಇದೇ ಮೊದಲೇ ?

ಈ ಮಾತು ಇಂದು ಮಾತ್ರ ಕೇಳಿಬರುತ್ತದೆಯೇ ? ಹಿಂದೆಂದೂ ಹಿರಿಯರು ಈ ರೀತಿ ನುಡಿದಿರಲಿಲ್ಲವೇ ?

ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲದಲ್ಲಿಯೂ, ಹಿರಿಯರು ಉತ್ಸಾಹೀ ಯುವಕರನ್ನು ಕುರಿತು ಇದೇ ರೀತಿಯ ಮಾತುಗಳನ್ನು ಆಡುತ್ತಲೇ ಇದ್ದಾರೆ. ಅಂದಮೇಲೆ ಇಂದು ಮಾತ್ರ ಯುವಕರು ಕ್ರಾಂತಿ ಮನೋಭಾವವನ್ನು ತೋರಿಸುತ್ತಾರೆ ಎಂಬುದು ಸುಳ್ಳು. ಕ್ರಾಂತಿಕಾರೀ ಮನೋಭಾವವನ್ನು ಇಂದು ಪ್ರದರ್ಶಿಸುವಾಗ, ಅತ್ಯುದ್ವೇಗವು ಕಾಣಬರಬಹುದು. ಅದಕ್ಕೆ ಕಾರಣ ಕಾಲಧರ್ಮ. ಇಂದು, ಹಿಂದೆಂದೂ ಇರದೆ ಇದ್ದ, ಜೀವನದ ರಭಸದ ಗತಿಯು ಅತ್ಯುಗ್ರವಾಗಿದೆ. ಯಾಂತ್ರಿಕ ಪ್ರಗತಿಯಿಂದಾಗಿ

ೇಹಶ್ರಮದ ಕೆಲಸಗಳು ಅಗತ್ಯವಿಲ್ಲ ಇಂದು. ಕಾರಣ ವ್ಯವಧಾನವು ಮತ್ತು ಶ್ರಾಂತಿ ಸಮಯವು ಹೆಚ್ಚಾಗಿದೆ. ಅನಗತ್ಯವಾದ ಈ ಕಾಲವನ್ನು ತುಂಬಲು, ಅನಗತ್ಯವಾದ ಪರಿಮಿತ ರಂಜನಾ ಕಾರ್ಯಕ್ರಮಗಳು ಆರಂಭವಾಗಿದೆ. ಂಜನಾ ಕಾರ್ಯಕ್ರಮಗಳು ವ್ಯಾಯಾಮ, ಶಿಕಾರಿಯನ್ನು ಅವಲಂಬಿಸ ೇಕಾದುದಾಗಿರಬಹುದು ಅಥವಾ ಜೂಜು ಹಾದರಗಳಲ್ಲಿ ಪರ್ಯವಸಾನ ಾಗಬಹುದು. ಇವೆರಡನ್ನೂ ವರ್ಜಿಸಿದರೆ, ಆಗ ಉಳಿಯುವುದು ಜೀವನದ ಇಂದಿನ ಮಾದರಿಯ ವಿರುದ್ಧ ಕ್ರಾಂತಿ. ಕಾಲಧರ್ಮದ ಸಲುವಾಗಿ ಯುವಕರ ಇಂದಿನ ಕ್ರಾಂತಿಯು ಉದ್ವೇಗವಾಗಿದೆ ಎನ್ನಬಹುದು.

ಈ ರೀತಿ ತರ್ಕಿಸುವುದು ನ್ಯಾಯವೇ ? ಹಿಂದಿನ ಕಾಲದಲ್ಲಿ ಕೂಡ ಯುವಕರು ಹಿರಿಯರ ವಿರುದ್ಧ ಬಂಡೇಳುತ್ತಿದ್ದರೆ ?

*

ಪ್ರಾಚೀನ ಕಾಲದಲ್ಲಿ

ವೇದಗಳನ್ನು ರಚಿಸಿದ ಸಹಸ್ರಾರು ವರ್ಷಗಳ ಅಂತರದಲ್ಲಿ ಮಧ್ಯ ಏಷ್ಯಾದಿಂದ ವಲಸೆ ಬಂದಿದ್ದ ಆರ್ಯರು ಉತ್ತರ ಭಾರತದ, ಅದರಲ್ಲೂ ಂಮಾಲಯದ ತಪ್ಪಲಿನ ಬಳಿ ಹರಿಯುವ ನದಿಗಳ ದಡಗಳಲ್ಲಿ ವಾಸಿಸತೊಡಗಿ ದರು. ಸಾಕಷ್ಟು ನೀರು ಒದಗುತ್ತಿತ್ತು. ಬೇಕಾದಷ್ಟು ನೆಲವು ಇತ್ತು. ಜನ ಸಂಖ್ಯೆಯು ಅಲ್ಪವಾಗಿತ್ತು. ಸ್ಥಳೀಕ ನಿವಾಸಿಗಳಾದ 'ದಸ್ಯು' ಜನರ ಕಾಟ ಒಂದನ್ನು ಬಿಟ್ಟರೆ, ಪ್ರಕೃತಿಯ ಅಟಾಟೋಪಗಳ ಹಾವಳಿಯನ್ನು ಬಿಟ್ಟರೆ ಆರ್ಯರಿಗೆ ಇತರ ಯಾವ ಅನಾನುಕೂಲಗಳೂ ಇರಲಿಲ್ಲ. ಆದಕಾರಣ, ಅವ ರಲ್ಲಿ ಬುದ್ಧಿಜೀವಿಗಳಾದ ಹಲವರು ಸುತ್ತಲೂ ಪಸರಿಸಿರುವ ಜನ, ವನ, ನಭೋದೃಶ್ಯಗಳನ್ನು ಕಂಡು ಮನನ ಮಾಡಲಾರಂಭಿಸಿದರು. ತಾವು ಸತ್ಯ ಎಂದು ಕಂಡುದುದನ್ನು, ತಮ್ಮ ಅಂತಃಸಾಕ್ಷಿಯು ಒಪ್ಪಿಕೊಂಡ ನಂತರ ಆಸ್ಥೆಯಿಂದ ಕಲಿಯಲು ಬಂದ ಶಿಷ್ಯರಿಗೆ ಬೋಧಿಸುತ್ತಿದ್ದರು. ತಾವು ಕಂಡ ಸತ್ಯದರ್ಶನವನ್ನು ಮಾತುಗಳ ಮೂಲಕ ಬಹಿರಂಗಪಡಿಸಿದರು. ಮನದಾಳ ದಿಂದ, ಹೃದಯದ ಚಿಲುಮೆಯಿಂದ ಬುಗ್ಗೆಯಂತೆ ರಭಸದಿಂದ ಉಕ್ಕಿಬಂದ ಮಾತುಗಳು, ಪದ್ಯರೂಪದಲ್ಲಿರಲೇಬೇಕು, ಸಂಕ್ಷಿಪ್ತವಾದ ಮಂತ್ರಗಳಾಗಲೇ ಬೇಕು.

ಕುಶಾಗ್ರಮತಿಯು, ಹಿರಿಯ ಅನುಭವವನ್ನು ಪಡೆದು, ವಿಶ್ವಕುಟುಂಬಿ

ಗಳಾದ ಇಂತಹ ಹಲವಾರು ಮನನಿಗರು ನುಡಿದು ಘೋಷಿಸಿದುದೇ "ವೇದ ಗಳು" ಎಂದು ಇಂದೂ ಚಿರಂಜೀವಿಯಾಗಿರುವ ವಾಕ್ಯಗಳು.

ಆಗಲೂ ಒಬ್ಬನಿದ್ದ

ಸಂಗತ್‌ಸಮೃದ್ಧಿಯಾಗಿದ್ದ ಅಂತಹ ಆರ್ಯರ ಕಾಲದಲ್ಲಿ, ಸಕಲ ಜನರ ಗೌರವಕ್ಕೂ ಪಾತ್ರರಾದ, ಹಿರಿಯರಾದ ಋಷಿಗಳ ವಿರುದ್ಧ ಯುವಕರು ಬಂಡೇಳುವುದು ಸಾಧ್ಯವೇ ? ಸಮಾಜವು ಅಲ್ಪಸಂಖ್ಯಾತರಿರುವುದರಿಂದ, ಅನಿವಾರ್ಯವಾಗಿ ಬಿಗುವಾಗಿದ್ದ ಕಾಲದಲ್ಲಿಯೂ ಯುವಕರು ಬಂಡೇಳು ವುದು ಸಾಧ್ಯವೇ ? ಜಮದಗ್ನಿ, ವಸಿಷ್ಠ, ಭಾರದ್ವಾಜ, ಆತ್ರೇಯ, ಆಂಗೀ ರಸ, ಶತಪಥ, ಆಪಸ್ತಂಭ, ಪರಾಶರ, ಜಾಬಾಲಿ ಇತ್ಯಾದಿ ಅತಿ ಮಾನವ ರಾದ ಋಷಿಗಳು ಮಂತ್ರಗಳನ್ನು ಘೋಷಿಸಿದರು, ಶಿಷ್ಯರನ್ನು ಮಂತ್ರ ಮುಗ್ಧರನ್ನಾಗಿಸಿದರು.

ಇಂತಹ ಘಟಾನುಘಟಿಗಳು ಇದ್ದ ಕಾಲದಲ್ಲಿಯೇ, ಒಬ್ಬ ಯುವಕ ನವ್ಯ ಮಂತ್ರವೊಂದನ್ನು ರಚಿಸಿ ಘೋಷಿಸಿದ.

ಪ್ರ ತವ್ಯಸೀಂ ನವ್ಯಸೀಂ ಧೀತಿಂ ಅಗ್ನಯೇ
ವಾಚೋಮತಿಂ ಸಹಸಃಶೂನವೇ ಭರೇ

ಎಂದ. ತವ್ಯಸೀಂ=ಉದಾತ್ತವಾದುದೂ; ನವ್ಯಸೀಂ=ನವ್ಯನೂತನ ವಾದುದೂ; ಧೀತೀಂ=ಧೀಶಕ್ತಿಯುಳ್ಳದುದೂ ಆದ, ವಾಚೋಮತಿಂ= ಬುದ್ಧಿಯ ಮಾತುಗಳು ಎಂದರೆ ಪ್ರಾರ್ಥನೆಯನ್ನು; ಸಹಸಃಶೂನವೇ=ಸಾಹ ಸದ ಮಗುವಾದ; ಅಗ್ನಯೇ=ಅಗ್ನಿದೇವನಿಗೆ; ಪ್ರಭರೇ=ಅರ್ಪಿಸಿ; ಹಾಡು ತ್ತೇನೆ ಎಂದು ಅರ್ಥ ಬರುವ ಮಂತ್ರ. ವೇದಗಳಲ್ಲಿ ಪ್ರಸಿದ್ಧವಾದ ಒಂದು ಮಂತ್ರ.

ಇದನ್ನು ನುಡಿದ ಯುವಕ ಋಷಿಯು ಪೊಗರನ್ನು ನೋಡಿ, ಕೆಚ್ಚನ್ನು ಕಾಣೆ, ಹಿಂದೆಂದೂ ಯಾರೂ ನುಡಿಯದೆ ಇದ್ದ, ನವ್ಯವಾದ ಪ್ರಾರ್ಥನೆ ಯನ್ನು ಈ ಪಿಲ್ಲು ನುಡಿಯುತ್ತೇನೆ ಎನ್ನುತ್ತಾನೆ. ಇದನ್ನು ಕೇಳಿದವರು ಇದೂ ಸತ್ಯ, ಇದೂ ಸ್ಮರಣಾರ್ಹ ಎಂದು ವೇದಗಳಲ್ಲಿ ಸೇರಿಸಿದ್ದಾರೆ.

ಎದುರು ಬೀಳುವ ಪ್ರವೃತ್ತಿ

ಅಂದರೆ ಯುವಜನ ಕ್ರಾಂತಿಯು, ಹಿರಿಯರನ್ನು ಎದುರು ಬೀಳುವ ಪ್ರವೃತ್ತಿಯು ಆಜನ್ಮಸಿದ್ಧವಾದ,ಜೀವದೊಂದಿಗೇ ಲಗತ್ತಿಸಿದ ಒಂದು ಗುಣ.

ಈ ಗುಣವಿರದಿದ್ದರೆ ಮಾನವನ ಮುನ್ನಡೆಯು ಅಸಾಧ್ಯ, ಗುಣದ ಹೊರ ಪ್ರದರ್ಶನವು ಸುತ್ತಲಿರುವ ಜೀವನದ ವೇಗವನ್ನು ಅವಲಂಬಿಸಿರುತ್ತದೆ.ಅಷ್ಟೇ ಹೊರತು,ಹಿಂದೆಂದೂ ಆಗದೆ ಇದ್ದ ಯುವಜನರ ಕ್ರಾಂತಿಯು ಇಂದು ಆರಂಭವಾಗಿದೆ ಎನ್ನುವುದು ಶುದ್ಧ ಮಂಕುತನ. ಹೀಗನ್ನುವ ಹಿರಿಯರನ್ನು ಯುವಕರು ನಿಕೃಷ್ಟವಾಗಿ ನೋಡುವುದು ಪ್ರಕೃತಿ ಸಹಜ, ನ್ಯಾಯ, ಹಿರಿಯರು ಮನನ ಮಾಡಬೇಕಾದ ವಿಷಯ. ವಯಸ್ಸಿನಲ್ಲಿ ಹಿರಿಯರಾದವರು ಜ್ಞಾನದಲ್ಲೂ ಹಿರಿಯರಾಗಬೇಕಾದರೆ ಮನನ ಮಾಡಲೇಬೇಕು.

ಹಣತೆಯ ಜ್ವಾಲೆ

ಕಣ್ಣಿಗೆ ತಂಪು

ಹಣತೆಯ ಬೆಳಕಿನಲ್ಲಿ ಓದಿದರೆ ತಂಪಾಗುತ್ತೆ, ಕಣೋ ; ಎಲೆಕ್ಟ್ರಿಕ್ ದೀಪದಲ್ಲಿ ಓದಿದರೆ ಕಣ್ಣು ಕೆಟ್ಟುಹೋಗುತ್ತೆ–ಎಂದು ನಮ್ಮ ಮುತ್ತಜ್ಜಿ ಹೇಳುತ್ತಿದ್ದುದು ಜ್ಞಾಪಕವಿದೆ. ಆಗ ನನಗೆ 8–10ರ ಪ್ರಾಯ. ಆಕೆಗೆ ನೂರರ ಪ್ರಾಯ. ನಮ್ಮನೆಗೆ ಎಲೆಕ್ಟ್ರಿಕ್ ದೀಪ ಬಂದ ಒಂದು ವರ್ಷದಲ್ಲಿ ಆಕೆ ತೀರಿಕೊಂಡಳು.

ಝಗಝಗಿಸುವ, ಸ್ಪಷ್ಟ ಕಾಣಿಸುವ ಎಲೆಕ್ಟ್ರಿಕ್ ದೀಪದ ಮುಂದೆ ಹಣತೆ ಬೆಳಕು ಏನು ಸುಖ ? ತಂಪು, ಉಷ್ಣ ಇವೆಲ್ಲಾ ಸ್ಪಷ್ಟವಾಗಿ ಅರ್ಥ ಕೊಡದ ಕೇವಲ ಪದಗಳು. ಆದರೂ ಹಬ್ಬ ಹರಿದಿನಗಳಲ್ಲಿ, ಹಸೆ ಪಕ್ಕದಲ್ಲಿ, ಎಣ್ಣೆ ಬತ್ತಿಯ ದೀಪವನ್ನು ಹಚ್ಚಿಟ್ಟರೆ, ಅದೂ ಚೆಂದ ಕಾಣಿಸುತ್ತದೆ. ಲಕ್ಷಣ ವಾಗಿಯೂ ಇರುತ್ತದೆ.

ತಿಲಕದಂತೆ ರೂಪವಿರುವ ಹಣತೆಯ ಜ್ವಾಲೆಯನ್ನು ಸೂಕ್ಷ್ಮವಾಗಿ ನೋಡಿದರೆ, ತಳದಲ್ಲಿ ದಪ್ಪನಾಗಿದ್ದು ಏರುತ್ತ ಏರುತ್ತ ಗೆರೆಯಂತಾಗುವುದು ಕಾಣಿಸುತ್ತದೆ. ಬೀಸಿದ ಗಾಳಿಗೆ ಅನ್ವಯಿಸಿ ಹಣತೆಯ ಜ್ವಾಲೆಯು ಲಲ್ಲೆ ಯಾಡುತ್ತದೆ. ಜ್ವಾಲೆಯನ್ನು ಎಚ್ಚರದಿಂದ ನೋಡಿದರೆ, ತುಂಬಾ ಪ್ರಕಾಶ ಮಾನವಾಗಿರುವ ಹೊರವಲಯವೊಂದು ಕಾಣಿಸುತ್ತದೆ. ಮಿಲಿಮೀಟರಿನ ಐವತ್ತನೆಯ ಒಂದು ಭಾಗದಷ್ಟು ಮಾತ್ರ ದಪ್ಪವಿರಬಹುದಾದ ಇದನ್ನು ಜ್ವಾಲೆಯ ಹೊರ ಮೈ ಎನ್ನಬಹುದು. ತೆಳುವಾದ ಈ ಗೋಪುರದ ಮಧ್ಯ ದಲ್ಲಿ, ಪ್ರಕಾಶವಾಗಿರದ ತುಸು ಕಪ್ಪಗಿರುವ ಒಳಗೋಪುರವನ್ನೂ ಕಾಣ ಬಹುದು. ಹಣತೆಯ ಎಣ್ಣೆಯನ್ನು ಹೀರಿಕೊಂಡ ಬತ್ತಿಯು ಹತ್ತಿಕೊಂಡಾಗ ಎಣ್ಣೆಯು ಛಿದ್ರಛಿದ್ರವಾಗಿ, ಅನಿಲವಾಗಿ ರಭಸದಿಂದ ಮೇಲೇಳುವುದು, ಈ ಒಳಗೋಪುರದಲ್ಲಿ. ಜ್ವಾಲೆಯ ಹೊರಮೈಯ್ಯಿನಲ್ಲಿ ಅನಿಲಗಳು, ಗಾಳಿಯಲ್ಲಿ

ರುವ ಆಕ್ಸಿಜನ್ ಒಂದಿಗೆ ಸೇರಿಕೊಂಡು ಪ್ರಜ್ವಲಿಸುತ್ತದೆ, ಆದುದರಿಂದ ಅಲ್ಲಿ ತೀವ್ರ ಶಾಖವೂ ಇರುತ್ತದೆ. ತುಂಬಾ ಬೆಳಕೂ ಉತ್ಪನ್ನವಾಗುತ್ತದೆ. ಬತ್ತಿಯು ತೊಟ್ಟು ತೊಟ್ಟಾಗಿ ಹೀರಿಕೊಂಡ ಎಣ್ಣೆಯನ್ನು, ಈ ಕಾವು,ಛಿದ್ರಛಿದ್ರ ಮಾಡಿ ಗಾಳಿಯಲ್ಲಿನ ಆಕ್ಸಿಜನ್ ಒಂದಿಗೆ ಕೂಡಿಸಿ ಉರಿಸುತ್ತದೆ. ಒಮ್ಮೆ ಕಡ್ಡಿಗೀರಿ ಬತ್ತಿಯನ್ನು ಹಚ್ಚಿದರೆ, ಹಣತೆಯ ಎಣ್ಣೆಯೆಲ್ಲವೂ ಮುಗಿಯುವತನಕ ಜ್ವಾಲೆಯು ಉರಿಯುತ್ತದೆ. ಇಷ್ಟು ಎಲ್ಲರಿಗೂ ತಿಳಿದ ವಿಷಯ.

ಎಣ್ಣೆಯು ಹೈಡ್ರೊ ಕಾರ್ಬನ್ಸ್ ಎಂಬ ರಾಸಾಯನಿಕ ಮೂಲ ಗುಂಪಿಗೆ ಸೇರಿದ ವಸ್ತು. ಪೆಟ್ರೋಲ್, ಸೀಮೆಯೆಣ್ಣೆ ಇವೂ ಆ ಗೋತ್ರದವೇ. ಗಾಳಿಯಲ್ಲಿರುವ ಆಕ್ಸಿಜನ್ ಒಂದಿಗೆ ಇದು ಸಂಪರ್ಕ ಪಡೆದಾಗ, ಕಡ್ಡಿಗೀರಿ ಹಚ್ಚಿಸುವಂತಹ ಚೇತಕವು ಮೊದಲ ಉರಿಯನ್ನು ಪ್ರಾರಂಭಿಸಿದರೆ, ನಂತರ ಎಣ್ಣೆಯು ಮುಗಿಯುವವರೆಗೂ, ಒಂದು ರೀತಿಯ 'ಚೈನ್ ರೀ-ಆ್ಯಕ್ಷನ್' ನಡೆದು, ಜ್ವಾಲೆಯು ಉರಿಯುತ್ತದೆ. ಉರಿದ ಮೇಲೆ, ಕರಕಲು ಇಂಗಾಲ, ಕಾರ್ಬನ್ ಡೈ ಅಥವಾ ಮಾನೋ ಆಕ್ಸೈಡ್ ಮತ್ತು ನೀರಿನ ಆವಿ, ಇವೇ ಪರಿಣಾಮಗಳು.

ಕುತೂಹಲಕಾರಿ

ಇಷ್ಟೇ ನಮಗೆ 1900ರ ತನಕ ತಿಳಿದಿದ್ದುದು.

ಹಣತೆಯ ಜ್ವಾಲೆಯ ಹೊರ ಮೈಯ್ಯಿನಲ್ಲಿ ರಾಸಾಯನಿಕ ಪರಿವರ್ತನೆಗಳು, ಸೆಕೆಂಡಿಗೆ ಮೂರು ಸಾವಿರ ಅಡಿಗಳಿಗಿಂತ ವೇಗವಾಗಿ ನಿರಂತರವಾಗಿ ನಡೆಯುತ್ತಿದೆ ಎಂದು ವಿಜ್ಞಾನಿಗಳು ಹೇಳಿದರೆ ಆಶ್ಚರ್ಯವಾಗುತ್ತದೆ. ಇದನ್ನು ಕಂಡುಹಿಡಿದ ಕತೆಯು ಪತ್ತೇದಾರಿ ಕತೆಗಳಿಗಿಂತ ಕುತೂಹಲಕಾರಿಯಾಗಿದೆ.

*

ರಾಸಾಯನಿಕ ವಸ್ತುಗಳ ಮಾಲಿಕ್ಯೂಲುಗಳಲ್ಲಿ ಕೇಂದ್ರದಂತಿರುವ ಮೈ ಮತ್ತು ಅದಕ್ಕೆ ಲಗತ್ತಿಸಿರುವ ತೋಳುಗಳು, ಈ ಎರಡು ವಿಭಾಗಗಳನ್ನು ಗುರುತಿಸಬಹುದು. ರಾಸಾಯನಿಕ ವರ್ತನೆ ಮತ್ತು ಪರಿವರ್ತನೆಗಳಲ್ಲಿ, ಒಂದು ಮಾಲಿಕ್ಯೂಲಿನ ತೋಳು ಕಿತ್ತಲ್ಪಟ್ಟು, ತೋಳಿಲ್ಲದ ಇನ್ನೊಂದು ಮಾಲಿಕ್ಯೂಲಿಗೆ ಲಗತ್ತಾಗುತ್ತದೆ. ಈಗೀಗ ನಮ್ಮಲ್ಲಿ 'ಆರ್ಗನ್ ಟ್ರಾನ್ಸ್‌ಪ್ಲಾಂಟ್' ಮಾಡುವುದಿಲ್ಲವೇ, ಇಂತಹುದನ್ನು ಮಾಲಿಕ್ಯೂಲುಗಳು ಪುರಾತನ ಕಾಲ

ದಿಂದಲೂ ಮಾಡುತ್ತಲೇ ಇವೆ. ಮಾಲಿಕ್ಯೂಲುಗಳ ತೋಳುಗಳನ್ನು ರ್ಯಾಡಿಕಲ್ಸ್ ಎಂದು ಕರೆಯುತ್ತಾರೆ. ಹೀಗಾಗುತ್ತಿರಬಹುದು ಎಂದು ವಿಜ್ಞಾನಿಗಳು ಊಹಿಸಿದ್ದರೇ ಹೊರತು, ಬಿಚ್ಚಿಕೊಂಡು ಅಲಾಯಿದಾ ಇರುವ ಇಂತಹ ತೋಳುಗಳನ್ನು ಯಾರೂ ಪ್ರತ್ಯಕ್ಷ ಕಂಡಿರಲಿಲ್ಲ. ಇಂತಹ 'ಫ್ರೀ ರ್ಯಾಡಿಕಲ್ಸ್' ಅನ್ನು ಕಾಣುವಷ್ಟು ಪ್ರಗತಿಯು ವಿಜ್ಞಾನದಲ್ಲಿ ಸಾಧಿತವಾಗಿರಲಿಲ್ಲ.

ಪ್ರಯೋಗ ಟ್ಯೂಬಲ್ಲಿ ಕೊಳ್ಳಿಪಿಶಾಚಿ

1900ರಲ್ಲಿ ಅಮೆರಿಕಾದ ಮೋಸಸ್ ಗಾಮ್ಬರ್ಗ್ ಎಂಬ ಪ್ರಚಂಡ, ಟ್ರೈಫೀನ್ಸೆಲ್ ಮೀಥೈಲ್ ಬ್ರೋಮೈಡ್‌ನಿಂದ, ಬ್ರೋಮೀನ್ ಅನ್ನು ತೆಗೆದು, ಜಿಂಕ್ ಅನ್ನು ಅಟಕಾಯಿಸಲು ಪ್ರಯೋಗಗಳನ್ನು ನಡೆಸುತ್ತಿದ್ದ. ಆಕ್ಸಿಜನ್ ಇಲ್ಲದ ವಾತಾವರಣದಲ್ಲಿ ಈ ಪ್ರಯೋಗವನ್ನು ನಡೆಸಿದಾಗ, ಪ್ರಯೋಗದ ಟ್ಯೂಬಿನಲ್ಲಿ ಅಚ್ಚ ಹಳದಿಯಾಗಿರುವ,ಕೊಳ್ಳಿಪಿಶಾಚಿಯಂತಿರುವ ವಸ್ತುವು ಕಾಣಿಸಿತು. ಪರೀಕ್ಷಾನಂತರ ಇದು, ಮೂರು ಫೀನ್ಸೆಲ್ ತೋಳುಗಳು ಮಾತ್ರ ಎಂದು ಖಚಿತವಾಯಿತು. ಆ ನಂತರ 1928ರಲ್ಲಿ ಜರ್ಮನಿಯ ಎಫ್.ಎ. ಪಾನೆತ್ ಎಂಬವ ಪ್ರಯೋಗಗಳನ್ನು ನಡೆಸಿ, ಇಂತಹ ಫ್ರೀರ್ಯಾಡಿಕಲ್ಸ್‌ಗಳು ಸೆಕೆಂಡಿನ ಮೂರು ಸಾವಿರ ಭಾಗಗಳಲ್ಲಿ ಒಂದು ಭಾಗದಷ್ಟು ಮಾತ್ರ ಆಯುಷ್ಯವನ್ನು ಹೊಂದಿರುತ್ತವೆ ಎಂದು ಸಿದ್ಧಾಂತ ಮಾಡಿ ತೋರಿಸಿದ.

ಹಣತೆಯ ಜ್ವಾಲೆಯಲ್ಲಿ ಮಾಲಿಕ್ಯೂಲುಗಳ ಈ ತೆರನ, ಬದಲಿ ತೋಳು, ಜಮಾವಣೆಯು, ಅಸಂಖ್ಯಾತವಾಗಿ ಅತ್ಯತಿ ವೇಗದಿಂದ ನಡೆಯುತ್ತಿರುತ್ತದೆ ಎಂಬುದನ್ನು ಸ್ಪೆಕ್ಟ್ರಮಿಟರ್‌ನ ನೆರವಿನಿಂದ ಪತ್ತೆ ಹಚ್ಚಲಾಗಿದೆ. ಈ ಪರಿವರ್ತನೆಗಳ ವೇಗವನ್ನು ಏರಿಳಿಸುವ ಮಾರ್ಗಗಳನ್ನು ಕಂಡುಹಿಡಿಯಲಾಗಿದೆ. ಹಂತ ಹಂತದಲ್ಲಿ ಕ್ಷಣಾಂಶಕಾಲ ಮಾತ್ರ ಬಾಳುವ, ಸಹಸ್ರಾರು ವಸ್ತುಗಳನ್ನೂ ಗುರುತಿಸಲಾಗಿದೆ.

*

ಬದುಕು—ಸಾವು

ಹಣತೆಯ ಜ್ವಾಲೆಯಂತೆಯೇ ಮನುಷ್ಯರ ಬಾಳ್ವೆ ನಶ್ವರವಾದುದು ಎಂದು ಹಿರಿಯರಾದ ಮುನಿಗರು ಅಂದುದುಂಟು. ಆದರೆ ಹಣತೆಯ ಜ್ವಾಲೆಯು ಒಂದೆರಡು ತಾಸು ಇರುತ್ತದೆ–ಹಣತೆಯಲ್ಲಿರುವ ಎಣ್ಣೆಗನುಗುಣವಾಗಿ.ಹಣತೆಯ ಒಂದೆರಡು ತಾಸು, ಮನುಷ್ಯನ ಎಪ್ಪತ್ತೋ, ಎಂಭತ್ತು ವರ್ಷ.

ಆದರೆ ಆ ಒಂದೆರಡು ತಾಸಿನ ಹಣತೆಯ ಜ್ವಾಲೆಯಲ್ಲಿ, ಅಸಂಖ್ಯಾತ ಕಣಗಳು; ಕ್ಷಣಾಂಶ ಮಾತ್ರ ಬಂದು ಜನ್ಮ ತಾಳಿ, ಒಂದು ರೂಪವನ್ನು ಹೊಂದಿದ್ದು, ನಂತರ ಹೊಸ ರೂಪ ಮತ್ತು ಹೊಸ ಜನ್ಮವನ್ನು ತಾಳುತ್ತವೆ. ಜನ್ಮಜನ್ಮಾಂತರಗಳ ಬದಲಾವಣೆಯು ಅತ್ಯಧಿಕ ವೇಗದಲ್ಲಿ ಪ್ರವಹಿಸುತ್ತಲೇ ಇರುತ್ತದೆ.

ಈ ತೆರನ ರಾಸಾಯನಿಕ ಜನ್ಮಜನ್ಮಗಳು, ಮನುಷ್ಯನಲ್ಲಿಯೂ ಸತತ ವಾಗಿ ನಡೆಯುತ್ತಲೇ ಇದೆ, ಬದುಕಿರುವವರೆಗೆ. ಇವು ಈ ರೀತಿ ನಡೆಯು ತ್ತಲೇ ಇರುವುದರಿಂದ ಬದುಕಿದ್ದೇವೆ, ಅವು ನಿಂತರೆ ಸಾವು ಆಡರಿತು ಎಂದು.

ಅಂದರೆ ಫ್ರೀರ್‍ಯಾಡಿಕಲ್ಸ್ ಇನ ಬಾಳು ಕ್ಷಣದ ಅಲ್ಪಾಂಶ. ಈ ಅಲ್ಪಾಂಶ ಗಳೆಲ್ಲವೂ ಜತೆಗೂಡಿದರೆ ಮನುಷ್ಯನ ಬಾಳ್ವೆ, ಅವುಗಳಂತೆ ಇವನೂ ನಶ್ವರವೇ!

*

ಮನುಷ್ಯನಲ್ಲಿ ಮನಸ್ಸು

ಆದರೆ ಮನುಷ್ಯನಲ್ಲಿ ಮನಸ್ಸು ಎಂಬುವುದೂ ಇದೆ. ವಸ್ತುವಲ್ಲದಿದ್ದರೂ, ಪ್ರತ್ಯಕ್ಷ ಕಾಣಲಾಗದಿದ್ದರೂ, ಇದು ಇದೆ ಎನ್ನುವುದರಲ್ಲಿ ಸಂಶಯವಿಲ್ಲ. ಸಾಕಷ್ಟು ಸಾಕ್ಷ್ಯಗಳು ಮನಸ್ಸು ಎಂಬ ಚೈತನ್ಯ ಒಂದಿದೆ ಎಂಬುದನ್ನು ಖಂಡಿತ ಪಡಿಸುತ್ತವೆ.

ಮನಸ್ಸಿನ ಕೆಲವು ಯೋಚನೆಗಳು, ತಲ ತಲಮಾರಿನಿಂದ, ಸಹಸ್ರಾರು ವರ್ಷಗಳಿಂದ, ಅನಂತವಾಗಿ, ಮನುಷ್ಯರಲ್ಲಿ ಮೂಡಿಬಂದಿವೆ. ಮನುಷ್ಯನ ವ್ಯಕ್ತಿಶಃ ಬಾಳು ನಶ್ವರವಾದರೂ, ಇಂತಹ ಹಿತವೀವ ಯೋಚನೆಗಳು ಪರಂ ಪರೆಯಾಗಿ ಪ್ರವಹಿಸುತ್ತಲೇ ಇವೆ. ಶತಮಾನ, ಶತಮಾನಗಳಲ್ಲಿ ಇಂತಹ ಯೋಚನೆಗಳ ದೃಢತೆಯೂ ಹೆಚ್ಚುತ್ತಿದೆ. ಅಂತಹ ಒಂದು ಯೋಚನೆ, ಬ್ರಹ್ಮನೆಂಬ ಆದಿ ಮೂಲವಾದ ವಸ್ತುವಿದೆ ಎಂಬುದು. ಜನಾಂಗ ಜನಾಂಗದ ಪ್ರಗತಿಗನುಸಾರವಾಗಿ ಇದನ್ನು ದೇವರು, ಅಲ್ಲ, ಟಾಓ, ಅಹೂರಮಾಜ್ದಾ ಇತ್ಯಾದಿ ಹೆಸರುಗಳಿಂದ ಕರೆದರು. ಅದು ಅವಿನಾಶಿಯಾದುದು ಎಂದೂ ಅಂದರು.

ಅಂದರೆ ನಶ್ವರವಾದ ಮನುಷ್ಯನಲ್ಲಿ ಅವಿನಾಶಿಯಾದ ಈ ಆಲೋಚ ನೆಯು ಮೂಡಿಬಂದಿದೆ. ಇದು ಶಾಶ್ವತವಾದುದು, ಅನಾದಿ ಅನಂತವಾದುದು.

ಈ ತೆರನ ಚಿರಂಜೀವಿಯಾಗಿರುವ ಯೋಚನೆಯು, ಮಾನವನ ಬಾಳ ಪ್ರವಾಹದಲ್ಲಿ ಎದ್ದು ಕಾಣುವ ಯೋಚನೆಯು 'ಫ್ರಿ ರ್‍ಯಾಡಿಕಲ್ಸ್'ನಲ್ಲಿ ಇಲ್ಲ, ಎಂದು ನಾವು ತಿಳಿದಿದ್ದೇವೆ.

ತ್ರುತಿ ಎಂಬ ಅಳತೆ

ಕಾಲವನ್ನು ವಿಭಜಿಸುವಾಗ, ಸಾಮಾನ್ಯ ಬಳಕೆಯಲ್ಲಿ ಒಂದು ಸೆಕೆಂಡ್ ಅನ್ನು ತುಂಬಾ ಚಿಕ್ಕದು ಎಂದು ಅಂದುಕೊಂಡಿದ್ದೇವೆ. ವೈಜ್ಞಾನಿಕರು ಇದನ್ನು ಈಗೀಗ ಅಗತ್ಯವಾದುದರಿಂದ ಸಹಸ್ರಾರು, ಭಾಗಗಳನ್ನಾಗಿ ಮಾಡಿದ್ದಾರೆ, ಕೆಲವು ಪ್ರಯೋಗಗಳಲ್ಲಿ.

ನಮ್ಮ ಋಷಿಗಳು, ಸಹಸ್ರಾರು ವರ್ಷಗಳ ಹಿಂದೆ, ಮಾನವನ ಜ್ಞಾನ ಭಂಡಾರವು ತುಂಬಾ ಕಡಿಮೆಯಾದಾಗ, ಕಾಲದ ಎಣಿಕೆಗೆ 'ತ್ರುತಿ' ಎಂಬ ಅಳತೆಯನ್ನು ಬಳಸುತ್ತಿದ್ದರು— 33750 ತ್ರುತಿಗಳು ನಮ್ಮ ಈಗಿನ ಒಂದು ಸೆಕೆಂಡ್.

ಅಂದರೆ ಫ್ರೀ ರ್‍ಯಾಡಿಕಲ್ಸ್ ಇನ ಬಾಳ ಪ್ರಮಾಣವನ್ನು ಅಳೆಯಲು ತ್ರುತಿಯು ಸಾಕಾಗಿತ್ತು!

ಪೂರ್ವಿಕರು ತ್ರುತಿಯ ಕಲ್ಪನೆಯನ್ನು ಏಕೆ ಮಾಡಿದರು? ಅಂತಹ ಅಗತ್ಯವೇನಿತ್ತು? ಫ್ರೀ ರ್‍ಯಾಡಿಕಲ್ಸ್ ಇನ ಬಾಳಿನ ಸ್ಪಷ್ಟ ಚಿತ್ರವು ಅವರಿಗೆ ಕಂಡಿತ್ತೇ? ಅತ್ಯಂತ ನಶ್ವರವಾದ ಅವುಗಳಲ್ಲಿಯೂ ಅವಿನಾಶಿಯಾದ ಅಂಶ ವಿದೆ ಎಂದು ಅಂದರು. ಹಣತೆಯ ಬೆಳಕಿನಲ್ಲಿ ಮನನ ಮಾಡಿದ ಹಿರಿಯರಿಗೆ ತಿಳಿದುಬಂದ ವಿಷಯವು ಎಲೆಕ್ಟ್ರಿಕ್ ಬೆಳಕಿನಲ್ಲಿ ಓದುವ ನಮಗೆ ತಿಳಿಯದೆ ಇರುವುದು ಸೋಜಿಗ ಅಲ್ಲವೇ?

ಕನಸು ಕಾಣುವುದನ್ನು ಕಲಿಯಿರಿ

ಆ ಕನಸು

ಹತ್ತೊಂಭತ್ತನೆ ಶತಮಾನದ ಮೊದಲ ಭಾಗದಲ್ಲಿ ರಸಾಯನಶಾಸ್ತ್ರದ ಮುನ್ನಡೆಗೆಲ್ಲಾ ಜರ್ಮನಿಯು ತೌರೂರಾಗಿತ್ತು. ಘೆಂಟ್ ವಿಶ್ವವಿದ್ಯಾನಿಲಯದಲ್ಲಿ ರಸಾಯನಶಾಸ್ತ್ರದ ಪ್ರಾಧ್ಯಾಪಕನಾಗಿದ್ದ ಫ್ರೀಡ್‌ರಿಕ್ ಅಗಸ್ಟ್‌ವ್ಹಾನ್ ಕೆಕುಲೆ ಎಂಬುವನು 1865ರಲ್ಲಿ ಮಧ್ಯಾಹ್ನ ಮಲಗಿದ್ದಾಗ ಒಂದು ಕನಸನ್ನು ಕಂಡ. ಎಚ್ಚರವಾದಾಗ ಕನಸು ಹಚ್ಚ ಹಸುರಾಗಿ ಕಣ್ಣಿಗೆ ಕಟ್ಟಿದಂತಿತ್ತು. ಆತ ಬರೆದುದು ಹೀಗೆ —

"ಅಗ್ಗಿಷ್ಟಿಕೆಯ ಎದುರಿಗೆ ಕುರ್ಚಿಯನ್ನು ತಿರುಗಿಸಿ ಕುಳಿತೆ. ಹಾಗೆಯೇ ಝೋಂಪು ಆವರಿಸಿತು. ತಿರುಗಿ ಆ್ಯಟಂ ನನ್ನ ಕಣ್ಣೆದುರಿಗೆ ಥಂಗಿ ಚಿಮ್ಮಲಾರಂಭಿಸಿದುವು. ಈ ಬಾರಿ ಸಣ್ಣ ಸಣ್ಣವು ಹಿನ್ನೆಲೆಯಲ್ಲಿ ವಿನಯವಂತರಂತೆ ನೆರೆದಿದ್ದುವು. ಹಿಂದಿನ ಅನುಭವಗಳಿಂದ ತುಂಬಾ ಚುರುಕಾಗಿದ್ದ ನನ್ನ ಮನಸ್ಸಿನ ಕಣ್ಣುಗಳು ತುಸು ದೊಡ್ಡ ದೊಡ್ಡದಾದ ರಚನೆಗಳನ್ನು ಕಾಣಲಾರಂಭಿಸಿದುವು. ವಿಧ ವಿಧ ರಚನೆಗಳು, ಉದ್ದುದ್ದದ ಸಾಲುಗಳು ಹತ್ತಿರ ಹತ್ತಿರ ಒತ್ತಲ್ಪಟ್ಟುವು ಕೆಲವು. ಎಲ್ಲವೂ ಸರ್ಪಗಳಂತೆ ಒಂದಕ್ಕೊಂದು ಹೆಣೆದುಕೊಂಡು ಬಳುಕುತ್ತಿದ್ದುವು. ಅರೆ ! ಅಲ್ಲಿ ನೋಡು ಅದೇನು ? ಒಂದು ಸರ್ಪವು ತನ್ನ ಬಾಲವನ್ನು ಕಚ್ಚಿಕೊಂಡಿದೆ. ಆ ದೃಶ್ಯವು ನನ್ನ ಕಣ್ಣ ಮುಂದೆ ಅಣಕಿಸುತ್ತಾ ಗಿರಿಗಿಟ್ಟಲೆ ಸುತ್ತುತ್ತಿದೆ. ಮಿಂಚು ಹೊಳೆದಂತಾಗಿ ಎಚ್ಚರಗೊಂಡೆ. ಕನಸು ಕಾಣುವುದನ್ನು ಕಲಿಯೋಣ ಮಿತ್ರರೇ !"

ಆ್ಯಟಂಗಳು ಜತೆ ಜತೆ ಕೂಡಿ ಮಾಲಿಕ್ಯೂಲುಗಳಾದುವು. ಆದರೆ ದೊಡ್ಡ ದೊಡ್ಡ ಸ್ಥಿರವಾದ ಮಾಲಿಕ್ಯೂಲುಗಳು ಹೇಗೆ ರಚಿತವಾಗಬಹುದು ಎಂದು ಕೆಕುಲೆ ಯೋಚಿಸುತ್ತಿದ್ದ. ಎಷ್ಟು ಯೋಚಿಸಿದರೂ ಉತ್ತರ ಸಿಗಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಅವನಿಗೆ ಝೋಂಪು ಬಂತು. ಆಗ ಕಂಡ ಕನಸಿನ

ವಿವರಣೆ: ಹಾವು ತನ್ನ ಬಾಲವನ್ನು ಕಚ್ಚಿಕೊಂಡುದನ್ನು ಕಂಡ,ಮಾಲಿಕ್ಯೂಲು ಗಳೂ ಅದೇ ರೀತಿ ತನ್ನ ಬಾಲವನ್ನು ತಾನೇ ಕಚ್ಚಿಕೊಂಡು ಸ್ಥಿರವಾಗುತ್ತದೆ. ಫ್ರಿ ರ್ಯಾಡಿಕಲ್ಸ್ ಗೆಟ್ ಟೈಡ್ ಆಫ್ ಎಂದು ಹೊಳೆಯಿತು.

ಆಳ ಮನಸ್ಸು

ಯಾವುದೋ ಒಂದು ಸಮಸ್ಯೆಯನ್ನು ಬಿಡಿಸಲು ಪ್ರಯತ್ನಿಸುತ್ತೇವೆ. ಅಂದರೆ ನಮ್ಮ ತೋರ ಮನಸ್ಸಿನಿಂದ, ದಿ ಕಾನ್‌ಷಿಯಸ್ ಮೈಂಡ್ ಎಷ್ಟೆಲ್ಲ ವಿಚಾರ ನಡೆಸಿದರೂ ಉತ್ತರವು ದೊರಕುವುದಿಲ್ಲ. ಹಾಳಾಗಿಹೋಗಲಿ ಎಂದು ಬೇಸರಗೊಂಡು ಮಲಗುತ್ತೇವೆ. ನಿದ್ರೆಯು ಹತ್ತಿದಾಗ, ತೋರ ಮನಸ್ಸು ಕೆಲಸ ಮಾಡುವುದಿಲ್ಲ. ಆದರೆ ಆಳ ಆಳಮನಸ್ಸು ಕೆಲಸ ಮಾಡು ತ್ತಲೇ ಇರುತ್ತದೆ. ಎಚ್ಚರವಾಗಿದ್ದಾಗ ನಾವು ವಿಚಾರ ಮಾಡಿದುದು, ನಿದ್ರೆ ಬಂದಾಗ ಮನಸ್ಸಿಗೆ ವ್ಯಕ್ತವಾಗುತ್ತದೆ. ಆಳಮನಸ್ಸು ಆ ಸಮಸ್ಯೆಯನ್ನು ಬಿಡಿಸತೊಡಗುತ್ತದೆ. ತೋರಮಸ್ಸಿಗೆ ಇರುವ ಹಿಡಿತಡೆಗಳು ಆಳಮನಸ್ಸಿ ಗಿಲ್ಲ. ಹಾಗಾಗಿ ಆಳಮನಸ್ಸಿಗೆ ಉತ್ತರವು, ಕಂಪ್ಯೂಟರಿನಲ್ಲಿ ದೊರೆಯುವಂತೆ, ಸುಲಭವಾಗಿ ದೊರೆಯುತ್ತದೆ. ಆ ಆಳಮನಸ್ಸಿನಲ್ಲಿ ದೊರೆತ ಉತ್ತರವು, ನಿದ್ರೆಯನ್ನು ಮಾಡುತ್ತಿರುವವನಿಗೆ ಹೇಗೆ ಕಾಣಿಸಬೇಕು ? ಕನಸಿನ ಮೂಲಕ ನೈಜಸ್ಥಿತಿಯನ್ನು ಅವಲಂಬಿಸಿದರೂ, ಅದನ್ನು ವಿಚಿತ್ರ ರೀತಿಯಲ್ಲಿ, ಕನಸಿನ ಲೋಕದ ಸ್ವರೂಪದಲ್ಲಿ ಪ್ರದರ್ಶಿಸುತ್ತದೆ. ನಾವು ಎಚ್ಚರಗೊಂಡಾಗ, ಕಂಡಿದ್ದ ಕನಸು ಇನ್ನೂ ಕಾಣಿಸುತ್ತಲೇ ಇರುತ್ತದೆ. ಸಮಸ್ಯೆಯನ್ನೂ ಕನ ಸನ್ನೂ ಸಮನ್ವಯ ಮಾಡುವುದು ಆಗ ಸುಲಭ. ಸುಲಭ ಎಂದರೆ-ಸಮಸ್ಯೆ ಯನ್ನು ಕುರಿತು ತಪಿಸಿದವರಿಗೆ.

ಕೆಕುಲೆಯು, ತಾನು ಕಂಡ ಕನಸಿನಿಂದಾಗಿ, ಮಾಲಿಕ್ಯೂಲುಗಳು ಈ ರೀತಿ ಸ್ಥಿರವಾಗಬಹುದು ಎಂದು ನುಡಿದ ಭವಿಷ್ಯವು,"ಆರ್ಗೇನಿಕ್ ಕೆಮಿಸ್ಟ್ರಿಯಲ್ಲೆಲ್ಲಾ ಅತ್ಯಮೋಘವಾದ ಭವಿಷ್ಯ" ಎಂದು ವಿಜ್ಞಾನಿಗಳು ಅಂದಿದ್ದಾರೆ. ಇಂದಿನ ವಿಜ್ಞಾನದ ಆಧಾರ ಸ್ಥಂಭಗಳಲ್ಲಿ ಅದು ಒಂದು. ಕೆಲವು ಆರ್ಗೇನಿಕ್ ಮಾಲಿ ಕ್ಯೂಲುಗಳು,ಬಾಲವನ್ನು ನುಂಗಿದ ಹಾವಿನಂತೆ, ಬಂಧಿತವಾದುವು. ಕ್ಲೋಸ್ಡ್ ರಿಂಗ್ಸ್ ಎಂಬುದೇ ಆ ಸಿದ್ಧಾಂತದ ತಿರುಳು.

*

ವಿಯು ಕನಸು

ಕನಸುಗಳ ಮೂಲಕ, ಬಿಡಿಸಲಾರದ ಹಲವಾರು ಸಮಸ್ಯೆಗಳಿಗೆ ವಿಜ್ಞಾನಿ ಳು ಪರಿಹಾರವನ್ನು ಕೆಕುಲಿಯಂತೆ ಕಂಡುಹಿಡಿದಿದ್ದಾರೆ.

ಕವಿಗಳಾದರೋ ನಿದ್ರಾ ಕನಸಿಗಿಂತ ಹಗಲುಗನಸಿಗರು. ಎಚ್ಚರವಾಗಿರು ಾಗಲೇ ಅವರುಗಳು ವಾಸ್ತವ ಪರಿಸ್ಥಿತಿಯನ್ನು ಮರೆತು ಊಹಾಲೋಕದಲ್ಲಿ ಹರಿಸುತ್ತಾರೆ. ದಿನವೆಲ್ಲಾ ಹೀಗೆ ಮಾಡುತ್ತಾರೆ ಎಂದಲ್ಲ. ಆದರೆ ಅವಕಾಶ ೊರೆತಾಗ ಹೀಗೆ ಹಗಲುಗನಸು ಕಾಣುವುದು ಅವರ ಜಾಯಮಾನ ಅಥವಾ ೈಶಿಷ್ಟ್ಯ. ನಿದ್ರಾಕನಸಿನಲ್ಲಿ ಆಗುವಂತೆ, ಈ ಹಗಲುಗನಸಿಗರಲ್ಲಿ ಕೂಡ, ೋರ ಮನಸ್ಸಿನ ಹಿಡಿತಡೆಗಳು ಮಾಯವಾಗಿರುತ್ತವೆ. ಆಗ ಅವರುಗಳ ಳಮನಸ್ಸು, ಕಂಪ್ಯೂಟರಿನಂತೆ, ಅವರಿಗೆ ನೆರವಾಗುತ್ತದೆ. ಆಗ ಅವರ ೋರಮನಸ್ಸಿಗೆ ಕಂಡುದನ್ನು ಕಾವ್ಯವನ್ನಾಗಿ ಸೃಷ್ಟಿಸುತ್ತಾರೆ. ಸ್ಫೂರ್ತಿ ಂದು ಮನಸ್ಸಿನ ಈ ಸ್ಥಿತಿಯನ್ನು ಕರೆಯುತ್ತಾರೆ. ಸ್ಫೂರ್ತಿಯು ಉದ್ಭವಿಸ ೇಕಾದರೆ, ಯಾವುದೋ ಭಾವನಾಸ್ಥಿತಿಯು ಅವರನ್ನು ಮುಳುಗಿಸಿರಬೇಕು. ಂತಹ ಸ್ಥಿತಿಯು ದಿನದಿನವೂ ಹಲವಾರು ಬಾರಿ ಒದಗಿರಬಹುದು. ಹಾಗಾ ಾಗಲೆಲ್ಲ ಅವರು ಕವನಗಳನ್ನು ಕಟ್ಟಲು ಅಸಾಧ್ಯ. ಆದರೆ ಕೆಲವೊಮ್ಮೆ, ಅಯ್ಯೋ ! ಅನುಭವಿಸಿದುದನ್ನು ಬಾಯಿ ತೆರೆದು ಹಾಡಲು ಸಾಧ್ಯವಾಗ ಲ್ಲ" ಎಂದು ಪರಿತಪಿಸಿದಾಗ, ಸಂಪೂರ್ಣವಾಗಿ ಸೋತೆ ಎಂದೆನಿಸಿದಾಗ, ರಣಾಗತಿಯಾದೆ ಎಂದು ಕರಗಿದಾಗ ಈ ಸ್ಫೂರ್ತಿಯು ಒದ್ದುಕೊಂಡು ಬರು ್ತದೆ. ಆಗ ಕವನವು ಸ್ವಯಂರಚಿತವಾಗುತ್ತದೆ ಎನ್ನಬಹುದು. ಕವನವು ೊರಬಿದ್ದ ಮೇಲೆ ಸಾಮಾನ್ಯಸ್ಥಿತಿಗೆ ಹಿಂತಿರುಗಿದಾಗ, ತಾನು ಬರೆದ ಕವನದ ೂರ್ಣ ಅರ್ಥವು ಕವಿಗೆ ಹೊಳೆಯದೇ ಇರಲು ಸಾಧ್ಯ.

ರಾಬರ್ಟ್ ಬ್ರೌನಿಂಗ್ ಭಾವನಾ ಸಮಾಧಿಯಲ್ಲಿದ್ದಾಗ ಒಂದು ಕವನ ನ್ನು ಬರೆದನಂತೆ. ಐದಾರು ದಿನಗಳ ನಂತರ ಸ್ನೇಹಿತರು ಕೂಡಿದಾಗ, ದನ್ನು ಓದಿದನಂತೆ. "ಅದರ ಅರ್ಥವೇನು, ನೀನು ಏನನ್ನು ಹೇಳಬಯ ದ್ದೆ" ಎಂದೊಬ್ಬ ಸ್ನೇಹಿತನು ಕೇಳಿದನಂತೆ. ಸ್ವಲ್ಪ ಹೊತ್ತು ತಲೆಯನ್ನು ೆದುಕೊಂಡು, ಬ್ರೌನಿಂಗ್ ಎಂದನಂತೆ, "ಅದನ್ನು ಬರೆದಾಗ ಭಗವಂತನಿಗೆ ುತ್ತು ನನಗೆ ಅದರ ಅರ್ಥವು ಗೊತ್ತಿತ್ತು. ಈಗ. ಭಗವಂತನೊಬ್ಬನಿಗೇ ದರ ಅರ್ಥವು ತಿಳಿದಿದೆ" ಎಂದು.

ಕಲಾಕಾರ

ಕವಿಗಳಲ್ಲಿ ಮಾತ್ರವಲ್ಲ, ಎಲ್ಲ ಕಲೆಗಾರರಲ್ಲೂ ಸ್ಫೂರ್ತಿಯ ಅಗತ್ಯವು ಇದ್ದೇ ಇದೆ. ಚಿತ್ರಗಾರನು ರಚಿಸಿದ ಎಲ್ಲಾ ವರ್ಣಚಿತ್ರಗಳಲ್ಲೂ ಸ್ಫೂರ್ತಿಯ ಕೈವಾಡವನ್ನು ಕಾಣಲು ಅಸಾಧ್ಯ. ಆದರೆ ಕೆಲವು ಅಮರವಾಗುತ್ತವೆ. ಕಂಡವರ ಹೃನ್ಮನಗಳನ್ನು ಸೆಳೆದುಕೊಳ್ಳುತ್ತವೆ. ಶಿಲ್ಪಿಯಾಗಲಿ, ಸಂಗೀತಗಾರ ನಾಗಲೀ, ಈ ನಿಯಮಕ್ಕೆ ಹೊರತಲ್ಲ. ಆತನ ಇಂದಿನ ಸಂಗೀತ ಕಚೇರಿಯು ಯಾಕೋ ಕಳೆ ಕಟ್ಟಲಿಲ್ಲ ಎಂದಾಗ, ಸಂಗೀತಗಾರನಿಗೆ ಅಂದು ಸ್ಫೂರ್ತಿಯ ಅಭಾವವಿತ್ತು, ಭಾವ ಸಮಾಧಿಯಲ್ಲಿ ಅವ ಮುಳುಗಲಾಗಲಿಲ್ಲ ಎಂದು ಅರ್ಥ.

ಅಂದರೆ ವಿಜ್ಞಾನದಲ್ಲಿಯಾಗಲೀ, ಕಲೆಗಳಲ್ಲಿಯೇ ಆಗಲಿ, ಕನಸು ಬೀಳುವ ಸ್ವಭಾವವು ಅತ್ಯುಪಯುಕ್ತವಾದುದು. ಇದು ಏನು, ಇದು ಏಕೆ, ಎನ್ನುವ ಸ್ವಾಭಾವಿಕ ಕುತೂಹಲವು ಕೆರಳಿಸಿದರೆ ವಿಜ್ಞಾನಿಯಾಗುತ್ತಾನೆ. ಅನುಕಂಪದಿಂದ ನಡೆದುಕೊಂಡಾಗ ಕಲಾಗಾರನಾಗುತ್ತಾನೆ. ಆದರೆ ಇವೆರಡೂ ಮನುಷ್ಯನ ಮನಸ್ಸಿನಲ್ಲಿ ನಡೆಯುವ ವೃತ್ತಿಗಳು. ಮನುಷ್ಯನ ಮನಸ್ಸನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾದರೆ ಅವನ ತೋರಮನಸ್ಸು ಸಾಧ್ಯವಾದಷ್ಟು ಒದ್ದಾಡಬೇಕು, ವಿಚಾರ ಮಾಡಬೇಕು, ಪರಿತಪಿಸಬೇಕು. ಫಲಿತಾಂಶವು ದೊರಕದಿದ್ದರೆ, ತೋರಮನಸ್ಸನ್ನು ಮರೆಯಬೇಕು. ನಿದ್ರೆ ಯಲ್ಲಿ ಇದು ಸಾಧ್ಯ. ಹಗಲುಗನಸಿನಲ್ಲಿಯೂ ಇದು ಸಾಧ್ಯ. ಯಶಸ್ವಿಯಾಗಿ ತೋರಮನಸ್ಸನ್ನು ಮೆಟ್ಟಿಟ್ಟರೆ, ಆಗ ಕೆಲವು ವೇಳೆ ಸ್ಫೂರ್ತಿಯು ಉದ್ಭವಿಸು ತ್ತದೆ. ಕನಸಿನ ಭಾಷೆಯಲ್ಲಿ ಫಲಿತಾಂಶದ ಸುಳಿವು ತಿಳಿಯುತ್ತದೆ.

ನಮ್ಮ ಬಾಳಿನಲ್ಲಿ ವ್ಯಾವಹಾರಿಕ ಜೀವನದಲ್ಲಿ, ದಿನದಿನವೂ ಸಮಸ್ಯೆಗಳು ಉದ್ಭವಿಸುತ್ತವೆ. ನಮ್ಮ ಅನುಭವದ ಹಿನ್ನೆಲೆಯಲ್ಲಿ, ಕೈಲಾದಷ್ಟು ವಿಚಾರ ಮಾಡಿದರೆ ಹಲವಾರು ಸಮಸ್ಯೆಗಳನ್ನು ಪರಿಹರಿಸುತ್ತವೆ. ಆದರೆ ಕೆಲವು ಗೋಜುಕಟ್ಟಿಕೊಂಡಿರುವ ಸಮಸ್ಯೆಗಳು ಉಳಿಯುತ್ತವೆ. ಹೀಗೆ ಮಾಡಿದರೆ ಮುಂದೆ ಹೇಗೋ, ಹಾಗೆ ಮಾಡಿದರೆ, ಹೀಗೆ ಮಾಡಿದರೆ ಎಂಬ ಸಂಶಯವು ಭೇತಾಳನಂತೆ ಬೆನ್ನನ್ನು ಹತ್ತುತ್ತದೆ.

ಮನಸ್ಸಿನ ಕಂಪ್ಯೂಟರ್

ಅಂತಹ ಕೊರಗಿಸುವ ಪರಿಸ್ಥಿತಿಯಲ್ಲಿ, ಯಥಾಶಕ್ತಿ ವಿಚಾರ ಮಾಡಿದ ಮೇಲೆ, "ಶರಣಾದೆ, ಇನ್ನು ಮುಂದೆ ನನ್ನಿಂದ ಯೋಚಿಸಲು ಅಸಾಧ್ಯ"

ಎಂದುಕೊಂಡು, ಆ ವಿಚಾರವನ್ನು ಅಲ್ಲಿಗೇ ಮುಕ್ತಾಯಗೊಳಿಸಬೇಕು. ಪರಿ ತಪಿಸಿದ್ದು ಸಾಕಾಗಿದ್ದರೆ, ಇದನ್ನೇ ತಪಸ್ಸು ಎಂದೂ ಕರೆಯಬಹುದು. ಆಗ ನಿದ್ರೆಯಲ್ಲಿ ಕನಸಾಗಿಯೋ ಅಥವಾ ಎಚ್ಚರವಾಗಿದ್ದಾಗ ಹಗಲುಗನಸಾಗಿಯೋ, ಆಳ ಮನಸ್ಸಿನ ಕಂಪ್ಯೂಟರು: ಪರಿಹಾರ ಮಾರ್ಗವನ್ನು ಸೂಚಿಸುತ್ತದೆ. ದುಃಖಭರವಾಗಬಹುದಾದ ಬಾಳು ಹಿತದಿಂದ ಕೂಡುತ್ತದೆ. ಸಂಶಯವು ಆ ಮುಂದೆ ಕಾಡುವುದಿಲ್ಲ.

ಆದುದರಿಂದ ಓದುಗರೇ ! ಕನಸು ಕಾಣುವುದನ್ನು ಅಭ್ಯಾಸ ಮಾಡಿ ಕೊಳ್ಳಿ. ನನಗೆ ಕುಶಾಗ್ರ ಬುದ್ಧಿಯಿದೆ, ಎಂದು ತೋರಮನಸ್ಸನ್ನು ಪೂರ್ಣ ವಾಗಿ ನಂಬಬೇಡಿ ಎನ್ನಬೇಕು. ಮನನ ಮಾಡಬೇಕಾದ ವಿಷಯ.

"ಏಕಂ ಸಮಾರಾಧನಂ"
ಕನಸು ಮತ್ತು ನಾಟಕ

'ಭಕ್ತ ಪ್ರಹ್ಲಾದ' ನಾಟಕವು ಆಡಲ್ಪಡುತ್ತಿತ್ತು. ವಿಷ ಹಾಕಿದ್ದ ಆಹಾರ ವನ್ನು ಪ್ರಹ್ಲಾದನಿಗೆ ಕೊಟ್ಟು ತಿನ್ನಿಸುವ ಸನ್ನಿವೇಶ. ನಾಟಕದಲ್ಲಿ ಸಂಪೂರ್ಣ ಮಗ್ನನಾಗಿದ್ದ ಸಾಧು ಸ್ವಭಾವದ ಪ್ರೇಕ್ಷಕನೊಬ್ಬನಿಗೆ ತಡೆಯಲಾಗಲಿಲ್ಲ. "ಅದನ್ನು ತಿನ್ನಬೇಡ, ಮಗು, ವಿಷ ಹಾಕಿದೆ" ಎಂದು ಗಟ್ಟಿಯಾಗಿ ಕೂಗಿ ಹುಷಾರ್ ಕೊಟ್ಟ. ಹಾಗೆ ಅರಚುವಾಗ ಇದು ನಾಟಕ ಎನ್ನುವ ಪರಿಜ್ಞಾನವೇ ಇರಲಿಲ್ಲ. Identification ಅಷ್ಟು ದೃಢವಾಗಿತ್ತು. ಇದನ್ನು ಕೇಳಿದ ಕೂಡಲೆ ಇನ್ನೊಬ್ಬ ಖಿಲಾಡಿ ಪ್ರೇಕ್ಷಕ, "ಪರವಾಗಿಲ್ಲ, ತಿನ್ನೋ ಮಗು, ಬರಿ ಕಡಲೆಕಾಯಿ ಅದು" ಎಂದು ತಾನು ಅರಚಿದ. ಮನರಂಜನೆಗೆಂದು ಇಬ್ಬರೂ ನಾಟಕಕ್ಕೆ ಹೋಗಿದ್ದರು. ಇಬ್ಬರಿಗೂ, ಸಮನಾದ ಆರಾಧನೆಯ ವೈಭವವು ದೊರೆಯಿತು, ಒಂದೇ ಸನ್ನಿವೇಶದಿಂದ, ಭಿನ್ನ ಭಿನ್ನ ಸ್ವಭಾವಗಳು ಇದ್ದರೂ, ಭಿನ್ನ ಭಿನ್ನ ರುಚಿಗಳು ಇದ್ದರೂ.

*

ನಿದ್ರೆ ಮಾಡುವಾಗ ಬೀಳುವ ಕನಸುಗಳೂ ನಾಟಕಗಳಂತೆಯೇ ಇರುತ್ತವೆ. ಕಾಲ ಪ್ರಮಾಣದಲ್ಲಿ ಮಾತ್ರ ಅಪಾರ ವ್ಯತ್ಯಾಸ. ನಾಟಕಗಳಲ್ಲಿರುವಂತೆಯೇ ಕನಸುಗಳಲ್ಲಿಯೂ ಹಲವಾರು ಪಾತ್ರಧಾರಿಗಳಿರುತ್ತಾರೆ. ಚಿತ್ರ ವಿಚಿತ್ರ ವೇಷಧಾರಿಗಳು ಊಹಾತೀತವಾದ ನಡವಳಿಕೆಗಳು ಅಸಮಂಜಸವೆನಿಸುವ ಸನ್ನಿವೇಶಗಳು.

"ಕೆಂಪೇಗೌಡ ರಸ್ತೆಯಲ್ಲಿ ಸಂಜೆ ಹೋಗುತ್ತಿದ್ದೆ. ಬಸ್ ಬಳಿ ನಿಂತಿದ್ದ ಸುಂದರ ಯುವಕ ನನ್ನ ಬಳಿಗೆ ಸರ್ರಂತ ಬಂದ. ಭಾರೀ ನದಿಯೊಂದರಲ್ಲಿ ಇಬ್ಬರೂ ದೋಣಿಯೊಂದರಲ್ಲಿ ಕುಳಿತು ವಿಹಾರಕ್ಕೆ ಹೊರಟಿದ್ದೆವು. ಭರ್ಜರಿ

ಾಸೆ ಹೊತ್ತಿದ್ದ ಸಂನ್ಯಾಸಿಯೊಬ್ಬ ನೀರಿನ ಮೇಲೆ ನಡೆದುಕೊಂಡು ನಮ್ಮ
ೋಣಿಯ ಹತ್ತಿರಕ್ಕೆ ಬಂದ. ಅವನನ್ನು ನೋಡಿದ ಕೂಡಲೇ ತುಂಬಾ
ೆದರಿಕೆಯಾಯಿತು. ಈಗೇನು ಮಾಡುವುದು ಎಂದು ಯುವಕನನ್ನು ತಬ್ಬಿ
ೊಳ್ಳಲು ಹೋದೆ; ದೋಣಿಯಲ್ಲಿ ಯಾರೂ ಇರಲಿಲ. ನಾನೊಬ್ಬಳೇ !
ಿನ್ನೇನಪ್ಪ ಗತಿ ಎಂದು ಎದೆ ಡಬ ಡಬ ಮಾಡಹತ್ತಿತು. ದೋಣಿ ಅಂಬಿ
ಂತೆ ಹಾರಿತು. ದೊಡ್ಡ ಜಲಪಾತ, ದೋಣಿ ತಲೆಕೆಳಗಾಯಿತು. ನೀರಿನಲ್ಲಿ
ಿದ್ದೆ. ಜಲಪಾತದ ನೀರಿನಲ್ಲಿ ಎರಡೂ ತೋಳುಗಳನ್ನು ಮೇಲಕ್ಕೆತ್ತಿಕೊಂಡು
ಗ್ನಳಾಗಿ ಬೀಳುತ್ತಿದ್ದೆ. ತಳಾತಳಗಿದ್ದ ಕೊಳದಲ್ಲಿ ಸುಪ್ಪತ್ತಿಗೆ ಹಾಕಿತ್ತು.
ಅದರ ಮೇಲೆ ಬಿದ್ದೆ ಒದ್ದೆ ಒದ್ದೆಯಾಗಿ. ಎಚ್ಚರವಾಯ್ತು, ದೀಪ ಹಚ್ಚಿದೆ.
ಬೆಳಗಿನ ಝಾಮ ನಾಲ್ಕರ ಸಮಯವಾಗಿತ್ತು. ಮೈಯೆಲ್ಲಾ ಬೆವತಿತ್ತು"
ಬ್ಬಾಕೆಗೆ ಬಿದ್ದ ಕನಸು; ಕನಸಿನಲ್ಲಿ ಆಕೆ ಕಂಡ ಅಸಂಬದ್ಧ ಎನಿಸುವ ನಾಟಕ.

ನಾಲ್ವತ್ತರ ಪ್ರಾಯ. ತುಂಬು ದೇಹ. ಕೈ ತುಂಬಾ ಸಂಬಳ. ವಿದ್ಯಾರ್ಥಿ
ಗಳ ಮೆಚ್ಚುಗೆಯನ್ನು ಮತ್ತು ಗೌರವವನ್ನು ಗಳಿಸಿದ್ದ ಕಾಲೇಜ್ ಅಧ್ಯಾಪಕಿ.
ಅವಿವಾಹಿತೆ. ಶಿಸ್ತು ಸಂಯಮಗಳ ಜೀವನ. ಉದಾತ್ತ ಧ್ಯೇಯವಾದಿ.
ಪುರುಷರಿಗಿರುವಂತೆಯೇ ಸ್ತ್ರೀಯರಿಗೂ ಸಮಾನ ಹಕ್ಕುಗಳಿರಬೇಕು ಎಂದು
ದೃಢವಾಗಿ ನಂಬಿದ್ದಳು.

*

ಮನುಷ್ಯನ ಆಸೆ ಎಂಬುದೊಂದಕ್ಕೆ ಇತಿಮಿತಿಯಿಲ್ಲ. ಸಿನಿಮಾ ಸ್ಟಾರ್
ನೋಡಿದಾಗ ಹಾಗಾಗಬೇಕು ಅಂತ, ಕುಸ್ತಿಪಟುವನ್ನು ಕಂಡರೆ ಹಾಗಿರ
ಬೇಕು ಅಂತ, ಕಾರಿನಲ್ಲಿ ಹೋಗುವ ಮಂತ್ರಿಯನ್ನು ಕಂಡಾಗ ನಾನೂ ಹಾಗಿ
ದ್ದರೆ ಎಂದು, ಪ್ರವಚನ ಮಾಡುವ ಕಂತಶ್ರೀ ಇರುವ ಸಂನ್ಯಾಸಿಯನ್ನು
ಂಡರೆ ನಾನೂ ಹಾಗಿರಬಾರದೆ ಅನಿಸುತ್ತೆ. ಇವುಗಳಲ್ಲಿ ಕೆಲವು ಆಸೆಗಳು ಮಿಕ್ಕವು
ಗಳಿಗಿಂತ ಹೆಚ್ಚು ಪ್ರಬಲವಾಗಿರುತ್ತವೆ, ಈ ಆಸೆಗಳು ರೂಪಾಂತರಗೊಂಡು,
ನಸಿನಲ್ಲಿ ನಾಟಕವಾಡುತ್ತವೆ. ಒಂದೊಂದು ಆಸೆಯೂ ಒಂದೊಂದು ಪಾತ್ರ
ವನ್ನು ವಹಿಸುತ್ತದೆ. ಅಸಂಬದ್ಧ ಕನಸು ಎನಿಸಿದರೂ, ಸುಸಂಬದ್ಧ ನಾಟಕವೂ
ಆಗಿರುತ್ತದೆ–ಅಂತರಾರ್ಥವನ್ನು ಪತ್ತೆ ಹಚ್ಚಿದರೆ.

ಮೊದಲು ಉದಹರಿಸಿದ ಕನಸಿನಲ್ಲಿ ಎಂದಿನಂತೆ ಕೆಂಪೇಗೌಡ ರಸ್ತೆಯಲ್ಲಿ
ಕಾಲೇಜಿನಿಂದ ಹಿಂತಿರುಗುತ್ತಾ ಇದ್ದಳು. ಅವಿವಾಹಿತೆ. ಸಿನಿಮಾ ಪೋಸ್ಟರು

ಕಂಡಿರಬೇಕು. ಅವಳದೊಂದು ಹುದುಗಿದ್ದ ಆಸೆ ಸುಂದರಯುವಕನ ಪಾತ್ರ ವನ್ನು ವಹಿಸಿಕೊಂಡಿತು. ದೋಣಿವಿಹಾರದ ಕಟ್‌ಸೀನ್, ಆಕೆಯ ಮನಸ್ಸಿನಲ್ಲಿಯೇ ಶಿಕ್ಷಕನಾಗಿದ್ದ Super Ego, ಶಿಕ್ಷಿಸುವ ಸಂನ್ಯಾಸಿಯ ಪಾತ್ರವನ್ನು ಧರಿಸಿದ. ಅಧ್ಯಾತ್ಮಶಕ್ತಿಯನ್ನು ಹೊಂದಿದ್ದ ಅವ ನೀರಿನ ಮೇಲೆ ನಡೆದು ಬಂದ. ಬೆದರಿದಳು. ತಬ್ಬಿಕೊಳ್ಳಲು ಹೋದರೆ, ಆಸರೆಯೇ ಇಲ್ಲ. ಬಾಳ ಪ್ರವಾಹದಲ್ಲಿ ಗೊತ್ತುಗುರಿಯನ್ನು ಕಾಣದೆ ಆಕೆಯು ಈ ತನಕ ಬಾಳಿದ ದೃಶ್ಯ ನದಿಯ ಪ್ರವಾಹವಾಗಿ ಕಾಣಿಸಿಕೊಂಡಿತು. ಶರವೇಗದಲ್ಲಿ, ಶರ ಸುಮನನಿಂದ ಬಲುದೂರ ದೋಣಿಸಾಗಿತು. ಜಲಪಾತ, ಪ್ರಪಾತ. ಮುಂದೆ ಸಾವು ಶೂನ್ಯ. ಅಂದಮೇಲೆ ಯಾತರ ಭಯ, ಯಾವುದರ ಆಸೆ ? ಎರಡೂ ತೋಳುಗಳನ್ನೆತ್ತಿಕೊಂಡು, ರವಿವರ್ಮನ ಚಿತ್ರದಲ್ಲಿ ಗಂಗೆಯು ಇಳಿದು ಬರುವಂತೆ ತಾನು ಪಾತ್ರಧಾರಿಯಾದಳು. ಯಾವ ಅಡ್ಡಿ ಆತಂಕ ಗಳೂ, ಬಂಧ ನಿರ್ಬಂಧಗಳೂ ಇರದೆ, ನಗ್ನಳಾಗಿ ತಾಯಿ ಗರ್ಭದಿಂದ ಹೊರ ಬಂದಂತೆ, ತಾಯ ಗರ್ಭಕ್ಕೆ ಹಿಂತಿರುಗುವ ದೃಶ್ಯವನ್ನು ಅನುಭವಿಸಿದಳು. ಕಂಡದ್ದು ಮಾತ್ರವಲ್ಲ, ಅಲ್ಲಿ Placenta ಸುಪ್ಪತ್ತಿಗೆಯು ಅಣಿಯಾಗಿತ್ತು. ತಾಯ ರಕ್ಷಣೆಯ, ಯಾವ ಹೊಣೆಯೂ ಇರದೆ ಸುಖವಾಗಿ ಸಂತೃಪ್ತಿಯಿಂದ ಮಲಗಿದಳು. ಒನ್ದೆ ಒದ್ದೆಯಾಗಿದ್ದಳು ಬೆದರಿದುದರಿಂದ, ಬಯಸಿದುದರಿಂದ.

ಈ ರೀತಿ ವಿಶ್ಲೇಷಣೆಯನ್ನು ಮಾಡಿದರೆ ಕನಸು ಅಸಂಬದ್ಧವಾಗಿದ್ದರೂ, ಕನಸು ಎಂಬ ನಾಟಕವು ಸುಸಂಬದ್ಧವಾಗಿಯೇ ಇದೆ. ಅವಳ ಬಾಳಿನಲ್ಲಿ ನಡೆದುದಕ್ಕೂ ಅವಳ ಆಸೆ ಆಕಾಂಕ್ಷೆಗಳಿಗೂ ಒಂದು ಸೇತುವೆ ಕಟ್ಟಿ ರಚಿಸಲ್ಪಟ್ಟ ನಾಟಕ. ಅವಳೇ ರಚಿಸಿದ ನಾಟಕ, ಮನಸ್ಸಿನ ಆಳಗಳಲ್ಲಿ ಅವಳ ಮನಸ್ಸಿನಲ್ಲಿ ಹುದುಗಿದ್ದ ಆಸೆಗಳೂ,ಭಯಗಳೂ ವಿಧವಿಧ ಪಾತ್ರಗಳನ್ನು ವಹಿಸಿಕೊಂಡುವು. ಈ ರೀತಿ ಕನಸು ನಾಟಕವಾಡಿದಾಗ, ಸಾಧು ಪ್ರೇಕ್ಷಕ, "ಅದನ್ನು ತಿನ್ನಬೇಡ ಮಗು, ವಿಷ ಹಾಕಿದೆ" ಎಂದು ಅರಚಿದ ಹಾಗೆ, ಈಕೆಯೂ ಒಂದೊಂದು ಪಾತ್ರದಲ್ಲಿಯೂ Identification ಅನ್ನು ಸಂಪೂರ್ಣವಾಗಿ ಅನುಭವಿಸಿದ್ದಳು. ಖಿಲಾಡಿ ಪ್ರೇಕ್ಷಕನು, "ಪರವಾಗಿಲ್ಲ ತಿನ್ನು ಮಗು. ಬರೀ ಕಡಲೇಕಾಯಿ" ಎಂದು ಕೂಗಿದ ಹಾಗೆ ಈಕೆಯೂ ದೋಣಿವಿಹಾರಕ್ಕೆ ಸುಂದರ ಯುವಕನೊಡನೆ ಹೊರಟಿದ್ದಳು.

ನಾಟಕವನ್ನು ನೋಡಿ, ಭಿನ್ನ ಭಿನ್ನ ಸ್ವಭಾವದ ಪ್ರೇಕ್ಷಕರಿಬ್ಬರೂ ಸಂತಸ ಪಟ್ಟು,ಮನಸ್ಸನ್ನು ಹಗುರಮಾಡಿಕೊಂಡರು. ಸ್ವಂತ ಬಾಳಿನ ಕಷ್ಟ ಕಾರ್ಪಣ್ಯ ಗಳನ್ನು ತುಸು ಮರೆಯುವಂತಾಗಿತ್ತು.

ನಾಟಕದಂತಿರುವ ಕನಸನ್ನು ಕಂಡು, ಭಿನ್ನ ಭಿನ್ನ ಸ್ವಭಾವವಿರುವ ಒಂದೇ ಮನಸ್ಸು ಎಲ್ಲ ಸ್ವಭಾವಗಳಿಗೂ ಆಡಲು ಅವಕಾಶವನ್ನು ಕೊಟ್ಟು ಅನಂತರ ಹಗುರಾಯಿತು. ಕಷ್ಟಕಾರ್ಪಣ್ಯಗಳೆಲ್ಲವೂ ಮನಸ್ಸನ್ನು ತಾನೇ ಕ್ಷೋಭಿಸು ವುದು ಅತಿಯಾಗಿ. ಅವುಗಳು ಮನಸ್ಸನ್ನು ಕುಕ್ಕುವುದು ಈ ಕನಸಿನ ನಾಟಕ ವನ್ನು ನೋಡಿದ ನಂತರ ಕಡಿಮೆಯಾಯಿತು.

ಕನಸು ಎಲ್ಲರಿಗೂ ಒದಗುವ ಸೌಲಭ್ಯ. ಪ್ರಕೃತಿಯು ಇತ್ತ ಬಳುವಳಿ.

"ಭಿನ್ನರುಚೇರ್ಜನಸ್ಯ ಏಕಂ ಸಮಾರಾಧನಂ."

ಅಳತೆ – ಆನಂದ

ಯಾವುದಾದರೂ ವಸ್ತುವನ್ನು ಕಂಡಾಗ ಅದರ ಅಳತೆಯನ್ನು ಮಾಡಬಹುದು. ಬೆಂಕಿಪೊಟ್ಟಣವನ್ನು ಕಂಡಾಗ, ಮೂರು ಸೆಂಟಿಮೀಟರ್ ಉದ್ದ, ಎರಡು ಸೆಂಟಿಮೀಟರ್ ಅಗಲ, ಒಂದು ಸೆಂಟಿಮೀಟರ್ ದಪ್ಪ ಎಂದನ್ನಬಹುದು. ಅದೇ ರೀತಿ ಬಿಸಿ, ಥಂಡಿಯನ್ನು ಇಷ್ಟು ಡಿಗ್ರಿ ಸೆಂಟಿಗ್ರೇಡ್ ಎಂದು ಅಳೆಯಬಹುದು. ಅಂತೆಯೇ ಕಾಲವನ್ನೂ ನಿಷ್ಕರ್ಷಿಸಬಹುದು. ಇವೆಲ್ಲಕ್ಕೂ ಎಲ್ಲರೂ ಸಮ್ಮತಿಸಿದ ಒಂದು ಆಧಾರದ ಅಳತೆಯೇ, ತಳಪಾಯ 'Standard' ಎಂಬ ಆಧಾರದ ಅಳತೆಯು ಕಾಲ್ಪನಿಕ. ಆದರೂ ಅದನ್ನು ಒಪ್ಪಿಕೊಂಡು, ವಿಜ್ಞಾನವು ಅಸಾಧ್ಯ ಪ್ರಗತಿಯನ್ನು ಸಾಧಿಸಿದೆ.

ನೋವು—ಸಂತೋಷ

ಆದರೆ ನಾವು ಅನುಭವಿಸುವ ನೋವು, ಸಂತೋಷಗಳನ್ನು ಅಳೆಯುವುದಾದರೂ ಹೇಗೆ? ಹಲ್ಲುನೋವು ಬಂದಾಗ ಒಬ್ಬನು ಕಂಡಾಪಟ್ಟೆ ಒದ್ದಾಡುತ್ತಾನೆ. ಅದರ ಹಾಗೆಯೇ ಇರುವ ಹಲ್ಲುನೋವು ಬಂದಾಗ, ಮತ್ತೊಬ್ಬ, "ಛೀ, ಅದೇನು ಮಹಾ" ಎಂದನ್ನುವಂತಿರುತ್ತಾನೆ. ನೋವನ್ನು ಉಂಟುಮಾಡುವ ಬೇನೆಯೂ, ನೋವನ್ನು ಅನುಭವಿಸುವ ರೋಗಿಯ ಜಾಯಮಾನವೂ, ಎರಡೂ ರೋಗಿಯ ನರಳುವಿಕೆಯನ್ನು ನಿಷ್ಕರ್ಷಿಸುತ್ತವೆ. ರೋಗಿಯ ನರಳುವಿಕೆಯನ್ನು ಅವನು ಪ್ರದರ್ಶಿಸುವ ಮುಖಲಕ್ಷಣಗಳಿಂದ ಅಳೆಯುವಂತಿಲ್ಲ. ಅವನು ಹೇಳಿದುದನ್ನು ನಂಬುವಂತೆಯೂ ಇಲ್ಲ.

ನೋವು ಹೆರಿಗೆಯಲ್ಲೂ ಉಂಟಾಗುತ್ತದೆ. ಸಾವು ಸಂಭವಿಸಿದ ಮೇಲೆ, ಇತರರಿಗೂ ನೋವು ಅಥವಾ ದುಃಖವು ಉಂಟಾಗುತ್ತದೆ. ಪ್ರಸವ ವೈರಾಗ್ಯ, ಸ್ಮಶಾನ ವೈರಾಗ್ಯ ಈ ಮಾತುಗಳು, ಈ ತೆರನ ನೋವಿಗೆ ಉಂಟಾವ ಪ್ರತಿಕ್ರಿಯೆಗಳು, ಅಳೆಯಲು ಬರುವುದಿಲ್ಲ.

ಸುಖಸಂತೋಷಗಳೂ ಇದೇ ರೀತಿಯವು. ಹಬ್ಬದ ಊಟವನ್ನು ಮಾಡಿದ ಬಡವನ ಸಂತೋಷವು, ಮಿಡಿಉಪ್ಪಿನಕಾಯಿ ರಸವು ಅನಿರೀಕ್ಷಿತವಾಗಿ ದೊರೆತ ಶ್ರೀಮಂತನ ಸಂತೋಷವೂ ಒಂದೇ ಮಟ್ಟದ್ದಾಗಿರಬಹುದು. ಈ ತೆರನ ಸಂತೋಷವು ವಸ್ತುನಿಷ್ಠೆಯಾದುದಲ್ಲ. ಅನುಭವಿಸುವವನ ಇಷ್ಟವೂ ಮುಖ್ಯವಾಗಿರುತ್ತದೆ. ಆದಕಾರಣ ಸಂತೋಷವನ್ನು ಅಳೆಯಲು, ಸುಲಭವಲ್ಲ. ವಸ್ತುವಿನ ಉಪ್ಪು, ಹುಳಿ, ಖಾರಗಳನ್ನು ವೈಜ್ಞಾನಿಕವಾಗಿ ಅಳೆಯಬಹುದು. ಸ್ವಲ್ಪ ಶ್ರಮ ವಹಿಸಿ ಅದರ ಅಂದ, ವಾಸನೆ, ರಚನೆ ಇವುಗಳನ್ನೂ ಲೆಕ್ಕಿಸಬಹುದು. ಆದರೆ ಅನುಭವಿಸುವವನ ಇಷ್ಟವನ್ನು ಅಳೆಯುವುದಾದರೂ ಹೇಗೆ ? ಹಾಗೂ ಇಷ್ಟವು ಕಾಲಮಾನವನ್ನೂ, ವಯಸ್ಸನ್ನೂ, ಮಾನಸಿಕ ಸ್ಥಿತಿಯನ್ನೂ ಅವಲಂಬಿಸಿರುತ್ತದೆ. Too many variables. ಹಾಗಾಗಿ ಲೆಕ್ಕ ಹಾಕಲು ಬರುವುದಿಲ್ಲ.

ಹಳದಿ ಒಂದರಲ್ಲೆ

ಯಾವುದಾದರೂ ಒಂದು ವಸ್ತುವನ್ನು ಅಥವಾ ವಿಷಯವನ್ನು ವೈಜ್ಞಾನಿಕವಾಗಿ ತಿಳಿಯಬೇಕಾದಾಗ, ಆದರ ವಿವಿಧ ಅಳತೆಗಳನ್ನು ಮಾಡುವಂತಿದ್ದರೆ, ಮಾಡಿದರೆ, ಆಗ ಅದರ ಸ್ಪಷ್ಟ ಪರಿಚಯವಾಯಿತು ಎಂದನ್ನಬಹುದು. ಹಳದಿಯ ಬಣ್ಣ ಎಂದರೆ ಹತ್ತೂತರಹ ಹಳದಿಗಳು ಇರುತ್ತವೆ. ತಿಳಿ ಹಳದಿ, ನಿಂಬೆ ಹಳದಿ, ಅರಿಶಿನದ ಹಳದಿ, ಗೋಪಿ ಹಳದಿ, ಇತ್ಯಾದಿ. ಇನ್ನೂ ನಿಖರವಾಗಿ ಹೇಳಬೇಕಾದರೆ, ಅದರ Spectrum ನಲ್ಲಿ ಡಿ 1 ಡಿ 2 ಇತ್ಯಾದಿ ನಿಖರವಾದ ಅಳತೆಯಿರುವ ಫ್ರೆನ್‌ಹಾಫರ್ ಗೆರೆಗಳನ್ನು ಗುರುತಿಸಿ, ಖಚಿತವಾಗಿ, ಸೂಕ್ಷ್ಮವಾಗಿ ವಿವರಿಸಬಹುದು. ಅಂದರೆ ಯಾವುದಾದರೂ ಒಂದರ ಸ್ಪಷ್ಟ ಪರಿಚಯವು, ಸಂಪೂರ್ಣ ಅರಿವು ನಮಗಾಗಿದೆ, ಎನ್ನುವುದು, ಅದನ್ನು ಅಳತೆ ಹಾಕಿ ವಿವರಿಸುವುದರಿಂದ ಖಂಡಿತವಾಗುತ್ತದೆ.

ಗಣಿತಶಾಸ್ತ್ರಕ್ಕನುಗುಣವಾಗಿ, ಹೀಗೆ ಹೀಗೆ ಇರಬಹುದು ಎಂದು ಲೆಕ್ಕ ಹಾಕಿದ ನಂತರ ಅದು ಸರಿಯೋ ತಪ್ಪೋ ಎನ್ನುವುದನ್ನು ವಿಜ್ಞಾನಿಗಳು ಪ್ರಯೋಗಗಳಿಂದ ನಿರ್ಧರಿಸುತ್ತಾರೆ. ವೈಜ್ಞಾನಿಕ ಪ್ರಗತಿಯಲ್ಲಿ, ಅಳತೆಯು ಎಷ್ಟು ಪ್ರಮುಖ ಪಾತ್ರವನ್ನು ವಹಿಸುತ್ತದೆ, ಬೆಂಬಲವಾಗಿದೆ.

ನೋವು, ಸುಖ ; ಸಾವು, ಸಂತೋಷ ; ನಲಿಯುವುದು, ನರಳುವುದು:

ಕಾಮ, ಕೊರಗು: ವೀರ ಹೇಡಿತನ—ಈ ರೀತಿ ದ್ವಂದ್ವವಾದ ರಾಗ ಭಾವಗಳನ್ನು ಅಳೆಯಲು ಸಾಧ್ಯವಿಲ್ಲ. ಆದರೆ ದ್ವಂದ್ವಾತೀತವಾದ 'ಆನಂದ' ಎಂದು ನಮ್ಮ ಹಿರಿಯರು ನುಡಿದಿದ್ದರಲ್ಲ, ಆ ಸಚ್ಚಿದಾನಂದದ ಅರಿವು ಅಥವಾ ಅನುಭವವು ಅವರುಗಳಿಗೆ ಇತ್ತೇ ಎಂದು ಸಂಶಯವು ಮೂಡಬಹುದು. ಅವರು ಹೇಳಿದುದನ್ನು ನಂಬಬೇಕೆ ವಿನಾ ನಾವು ಅಳತೆ ಹಾಕಿ ಸಾಕ್ಷ್ಯಗಳಿಂದ ನಿರ್ಧರಿಸಲು ಬರುವುದಿಲ್ಲ.

ಬ್ರಹ್ಮಾನಂದ

ಆದರೆ ಆ ತೆರನ ಆನಂದವನ್ನು ಅನುಭವಿಸಿದವರು, ಇಷ್ಟರ ಲೆಕ್ಕದ ಆನಂದ ಎಂದು ವಿವರಿಸಿದರೆ, ಆನಂದದ ಅಳತೆಯನ್ನು ಹೇಳಿದರೆ, ಇದರ ಸ್ಪಷ್ಟ ಪರಿಚಯವಿತ್ತು ಎಂದನ್ನಲೇಬೇಕು.

ಬ್ರಹ್ಮಾನಂದವಲ್ಲಿಯಲ್ಲಿ ಎಂಟನೇ ಅನುವಾಕ್ಯದಲ್ಲಿ ಈ ರೀತಿ ಹೇಳಿದೆ—

ಬಲಿಷ್ಠನೂ, ಲೋಕಪತಿಯೂ, ಶ್ರೀಮಂತನೂ, ಸಾಧುವೂ ಆದ ಯೌವನದಿಂದ ತುಂಬಿತುಳುಕುವ ಯುವಕನ ಆನಂದವು=ಮಾನುಷ ಆನಂದ. ನೂರು ಮಾನುಷ ಆನಂದಗಳು = ಒಂದು ಮಾನುಷ ಗಂಧರ್ವ ಆನಂದಕ್ಕೆ ಸಮ. ನೂರು ಮಾನುಷ ಗಂಧರ್ವ ಆನಂದಗಳು = ಒಂದು ದೇವಗಂಧರ್ವ ಆನಂದಕ್ಕೆ ಸಮ. ನೂರು ದೇವಗಂಧರ್ವ ಆನಂದಗಳು = ಒಂದು ಪಿತೃಗಳ ಆನಂದಕ್ಕೆ ಸಮ. ನೂರು ಪಿತೃಗಳ ಚಿರಲೋಕ ಆನಂದಗಳು = ಒಂದು ಅಜಾನಜಾನಾಂ ದೇವಾನಾಂ ಆನಂದಕ್ಕೆ ಸಮ. ನೂರು ಅಜಾನಜಾನಾಂದೇವ ಆನಂದಗಳು = ಒಂದು ದೇವ ಆನಂದ. ನೂರು ದೇವ ಆನಂದಗಳು = ಒಂದು ಕರ್ಮದೇವತೆಗಳ ಆನಂದ. ನೂರು ಕರ್ಮದೇವತೆಗಳ ಆನಂದಗಳು = ಒಂದು ಇಂದ್ರನ ಆನಂದ. ನೂರು ಇಂದ್ರ ಆನಂದಗಳು = ಒಂದು ಬೃಹಸ್ಪತಿ ಆನಂದ. ನೂರು ಬೃಹಸ್ಪತಿ ಆನಂದಗಳು = ಒಂದು ಪ್ರಜಾಪತಿಯ ಆನಂದ. ನೂರು ಪ್ರಜಾಪತಿ ಆನಂದಗಳು = ಒಂದು ಬ್ರಹ್ಮಾನಂದ.

ಅಂದರೆ ದ್ವಂದ್ವಾತೀತವಾದ 'ಆನಂದ'ದ ಅನುಭವವನ್ನು ಈ ರೀತಿ ಅಳತೆ ಹಾಕಿ ಹೇಳುವ ಮಟ್ಟಕ್ಕೆ ಏರಿದವರಿಗೆ, ಅದರ ಸಂಪೂರ್ಣ ಅನುಭವವು ಇದ್ದೇ ಇತ್ತು ಎಂದು ಒಪ್ಪಬೇಕು.

ಇಂತಹವರು ಸಾಮಾನ್ಯ ಸುಖಗಳನ್ನು ಏಕೆ ಅಳತೆ ಮಾಡಲಿಲ್ಲ, ದೇಹದ

ಸುಖಗಳನ್ನು ಏಕೆ ಅಳತೆ ಹಾಕಲಿಲ್ಲ ? ಮಾನಸಿಕ ಸುಖಗಳನ್ನು ಏಕೆ ಅಳೆಯು ಹೋಗಲಿಲ್ಲ ?

ಬಿರಿಯಾ ಉಂಡವನು ಭಿಕ್ಷಕ್ಕೆ ಏಕೆ ಹೋಗುತ್ತಾನೆ ?

ಬ್ರಹ್ಮಾನಂದವನ್ನು ಅನುಭವಿಸಿದವನು, ಇತರ ಚಿಲ್ಲರೆ ಆನಂದಗಳನ್ನು ಯಾಕೆ ಗಮನಿಸುತ್ತಾನೆ ?

*

ಅಗತ್ಯವಾಗಿ ಮನನ ಮಾಡಬೇಕಾದ ವಿಷಯ.

ಎನಗೂ ಆಣೆ ರಂಗಾ

ಕಾಡು ಜೀವನವನ್ನು ನಡೆಸುತ್ತ ಪ್ರಾಣಿಗಳು ಜೀವವನ್ನು ಪ್ರಾರಂಭಿಸಿದುವು. ಚತುಷ್ಪಾದಿಯಾದ ಮೊಲವು ಅಂತಹ ಒಂದು ಪ್ರಾಣಿ. ಅದನ್ನು ತಿಂದು ಬಾಳನ್ನು ಸಾಗಿಸಲು ನರಿಯು ಹುಟ್ಟಿಕೊಂಡಿತು. ನರಿಗಳನ್ನೆದುರಿಸಲು ಹಾಗೂ ಬಾಳನ್ನು ಮುಂದುವರಿಸಲು ಮೊಲವು ಅತಿವೇಗದಿಂದ ಓಡುವುದನ್ನು ಕಲಿತಿತು. ಆದರೂ ಉಪಾಯಗಳನ್ನು ಹೂಡಿ ನರಿಯು ಮೊಲಗಳನ್ನು ಹಿಡಿದು ತಿನ್ನಲಾರಂಭಿಸಿತು. ಆಗ ಮೊಲವು ಯೋಚಿಸಿತು: "ನನ್ನ ವಂಶವು ಅಭಿವೃದ್ಧಿಯಾಗಬೇಕು. ಇಲ್ಲದಿದ್ದರೆ, ನಾನು ಸತ್ತನಂತರ, ಸತ್ತು ಸ್ವರ್ಗವನ್ನು ಪಡೆಯಬೇಕಾದರೆ, ನನ್ನ ಮಕ್ಕಳು, ಮೊಮ್ಮಕ್ಕಳು ನನಗೆ ತರ್ಪಣವನ್ನು ಕೊಡಬೇಕು. ಆಗ ನಾನು ನಿಧನಾನಂತರದ ಪ್ರಗತಿಯನ್ನು ಸಾಧಿಸಲು ಸಾಧ್ಯ. ಆದುದರಿಂದ ಆದಷ್ಟು ಮಕ್ಕಳು ಮರಿಗಳನ್ನು ಆದಷ್ಟು ಬೇಗ ಪಡೆಯಬೇಕು" ಎಂದು. ಗಂಡು ಮೊಲದ ಸದ್ಗೃಹಿಣಿಯೂ ಗಂಡನ ನೆರಳಿನಂತಿದ್ದು ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಸಮಭಾಗಿಯಾಗಿ, ಗಂಡನ ಆಲೋಚನೆಗೆ ಸಮ್ಮತಿಯನ್ನಿತ್ತಳು. ಹತ್ತು ಮರಿಗಳನ್ನು ನರಿಯು ತಿಂದರೂ. ಇನ್ನೂ ಹತ್ತುಮರಿಗಳು ಕಾಡಿನಲ್ಲಿ ಉಳಿದೇ ಇರಲು ಸಾಧ್ಯವಾಯಿತು.

"ನರಿಗಿಂತ ನನ್ನ ದೇಹವು ಚಿಕ್ಕದು. ಆದುದರಿಂದ ಅದು ನನ್ನನ್ನು ಹಿಡಿದು, ಕಡಿದು, ತಿನ್ನುತ್ತದೆ; ಅದಕ್ಕಿಂತ ಹೊರವಾದ ದೇಹವನ್ನು ನಾನು ಪಡೆದರೆ ?" ಎಂದು ಮೊಲವೊಂದು ಕ್ರಾಂತಿಕಾರೀ ಯೋಚನೆಯನ್ನು ಮಾಡಿತು. ಮುಂದೆ ಚತುಷ್ಪಾದಿಯಾದ ಕುದುರೆ, ಜೀಬ್ರಾ ಇವುಗಳು ಅವತರಿಸಿದುವು. ನರಿಯನ್ನು ಕಂಡಾಗ, ಅದನ್ನು ಹಿಂಗಾಲುಗಳಿಂದ ಒದ್ದು ಕೊಲ್ಲುವ ಶಕ್ತಿಯನ್ನುಳ್ಳ ಪ್ರಾಣಿಗಳಾದುವು.

ಆ ವೇಳೆಗೆ ನರಿಯೂ ಯೋಚಿಸಿತು : "ನನ್ನ ಒಡಲು ಬಡಕಲು.

ಆದುದರಿಂದ ಜೀಬ್ರಾ ಮತ್ತು ಕುದುರೆಗಳನ್ನು ಶಿಕಾರಿಮಾಡಲು ಕಷ್ಟವಾಗಿದೆ. ನಾನೂ ದೊಡ್ಡವನಾಗಬೇಕು" ಎಂದು. ತೋಳ, ಚಿರತೆ, ಹುಲಿ, ಸಿಂಹಗಳು ಅವತರಿಸಿದುವು. ಜೀಬ್ರಾ ಮತ್ತು ಕುದುರೆಗಳನ್ನು ಸುಲಭವಾಗಿ ಹಿಡಿದು ಹೊಡೆದು ತಿನ್ನಲಾರಂಭಿಸಿದುವು.

ಚತುಷ್ಪಾದಿಯಾದ ಆನೆ, ಡಿನಾಸಿರಸ್ ಇತ್ಯಾದಿಗಳು ಆವಿರ್ಭವಿಸಿದುವು. ಹುಲಿ ಸಿಂಹಗಳನ್ನು ಸದೆಬಡಿಯುವ ಶಕ್ತಿಯನ್ನು ಹೊಂದಿದ ಧಡೂತಿ ಪ್ರಾಣಿಗಳು.

*

ಪರಸ್ಪರ ಹತೋಟಿ

ಈ ರೀತಿಯಲ್ಲಿ ಒಂದು ಜಾತಿಯ ಮೃಗವನ್ನು ಇನ್ನೊಂದು ಜಾತಿಯ ಮೃಗವು ತಹಬಂದಿಯಲ್ಲಿಡುತ್ತಿತ್ತು. ಇಡುತ್ತಲೂ ಇದೆ. ಕಾಡಿನಲ್ಲಿ ಎಲ್ಲ ಪ್ರಾಣಿಗಳೂ ಬಾಳಬೇಕಾದರೆ, ಈ ತೆರನ ಸಹಬಾಳ್ವೆಯನ್ನು ನಡೆಸಬೇಕಾದರೆ, ಇಂತಹ ಪರಸ್ಪರವಾದ ಹತೋಟಿಯು ಅತ್ಯಗತ್ಯ. Feed–Back ವ್ಯವಸ್ಥೆ ಎನ್ನಲೂಬಹುದು.

*

ಮನುಷ್ಯನು ಅವತರಿಸಿದ ಮೇಲೆ, ಕಾಡಜೀವನವು ನಾಡಜೀವನವಾಗಲು ಪ್ರಾರಂಭವಾಯಿತು. ಮನಸ್ಸಿನ ಹಿರಿಮೆಯಿಂದಲೇ, ಮನುಷ್ಯನು ಕಾಡಮೃಗಗಳ ಮೇಲೆ ಹತೋಟಿಯನ್ನು ಪಡೆದಿರುವುದು. ಅಂದರೆ ಮನಸ್ಸೇ ಮನುಷ್ಯನ ಪ್ರಗತಿ ಸಾಧನೆಗೆ ಗಾಂಡೀವವಾಯಿತು, ಬ್ರಹ್ಮಾಸ್ತ್ರವಾಯಿತು.

ಇಂದಿನ ಮಾನವನು, ಅಂದರೆ ಕಳೆದುಹೋದ ಐದಾರು ಸಾವಿರ ವರ್ಷಗಳಿಂದೀಚಿನ ಮಾನವನು, ಮನಸ್ಸಿನ ಮೆಹನತ್ತಿನಿಂದಲೇ ಇತರ ಮಾನವರನ್ನು ಮೆಟ್ಟಿನಿಂತಿರುವನು. ಹೀಗೆ ಅನಿವಾರ್ಯವಾಗಿ ಆಗಬೇಕಾದಾಗಲೂ, ಮಾನವನ ಕುಲದ ಕೆಲವು ಮನನಿಗರಲ್ಲಿ, ಕಾಡಜೀವನವನ್ನೂ ಜನ್ಮ ಜನ್ಮಾಂತರಗಳ ಹಿಂದೆ ನಡೆಸುತ್ತಿದ್ದಾಗ, ತಾನು ಅನುಸರಿಸುತ್ತಿದ್ದ ಕಟ್ಟಳೆಯ ಸ್ಮರಣೆಯು ಆಳಮನಸ್ಸಿನಲ್ಲಿ ಹಸಿರಾಗಿ ಉಳಿದಿತ್ತು. ಒಂದು ಅತಿಯಾದರೆ ಇನ್ನೊಂದು ಹತೋಟಿಗೆ ತರುತ್ತದೆ. ಸಂಖ್ಯೆಯಲ್ಲಾಗಲೀ, ಗಾತ್ರದಲ್ಲಾಗಲೀ, ಶೌರ್ಯ

ದಲ್ಲಾಗಲೀ, ಕ್ರೌರ್ಯದಲ್ಲಾಗಲೀ. ವೇಗದಲ್ಲಾಗಲೀ, ಪೋಷದಲ್ಲಾಗಲೀ, ಒಂದು ವಿಪರಿಮಿತವಾದರೆ, ಮತ್ತೊಂದು ಅದನ್ನು ತಡೆಹಿಡಿಯುತ್ತದೆ. ಎಂಬ ಪುರಾತನ ಸ್ಮರಣೆಯು ಉಳಿದಿತ್ತು. ಈ ಸ್ಮರಣೆಯೇ ಮಾನವನ ಪ್ರಗತಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಬೆಳೆಸಿತು.

ಮಾನವನಲ್ಲಿ ಚಿಂತನೆ

ಇಂತಹ ಸ್ಮರಣೆಯ ಪ್ರಚೋದನೆಯಿಂದ, ಮಾನವನಲ್ಲಿ ಮನನಿಗರಾದ ವರು, ಈ ಬ್ರಹ್ಮಾಂಡದಲ್ಲಿ ಬಾಳುವ ನಮ್ಮೆಲ್ಲ ಜೀವಿಗಳನ್ನು ಪರಸ್ಪರ ಹತೋಟಿಯಲ್ಲಿಡುತ್ತಿರುವ ಚೇತನವು ಒಂದಿದೆ. ಅದನ್ನು ನಾವು ಪ್ರತ್ಯಕ್ಷ ಕಾಣಬೇಕು, ಮನಸ್ಸಿನ ಕಣ್ಣುಗಳಿಂದ ಕಾಣಲೇಬೇಕು. ಅದೇ ಬಾಳಿನ ಮುಖ್ಯ ಉದ್ದೇಶ, ಎಂಬ ಆಲೋಚನೆಯನ್ನು ಹಠಾತ್ತನೆ ಹೊಂದಿದರು. ಅಂತಹ ಆದಿಮೂಲವಾದ ಚೇತನವನ್ನು, ತಮಗೆ ಪ್ರಿಯವಾಗಿ ಕಾಣಿಸಿದ ಹೆಸರುಗಳಿಂದ ಕರೆದರು: ದೇವರು ಅಂದರು, ಭಗವಂತ ಅಂತ ಕರೆದರು, ಅಲ್ಲಾ ಎಂದರು, ಅಹೂರ ಮಾಸ್ದಾ ಎಂದರು, ಪುರುಷೋತ್ತಮ ಎಂದೂ ಕರೆದರು.

ಪುರುಷೋತ್ತಮ ಎಂದು ಕರೆದಾಗ, ನಮ್ಮಂತೆಯೇ ದೇವರು ಕೂಡ. ಆದರೆ ಆತ ನಮ್ಮೆಲ್ಲರಿಗಿಂತ ಅತ್ಯುತ್ತಮ ಎಂದು ಸೂಚಿಸಿದರು. God created man in his own image ಎಂದರು.

ಇಂತಹ ಆದಿಮೂಲವಾದ ಚೇತನದ ಅರಿವನ್ನು ಪಡೆಯಲು ಮನುಷ್ಯನ ಮನಸ್ಸೇ ಮೆಟ್ಟಿಲಾಯಿತು. ಅದೇ ಏರುವ ಏಣಿಯೂ ಆಯಿತು. ಅಂದರೆ ದೇವರ ಅರಿವನ್ನು ಪಡೆಯಬಹುದಾದ ಜೀವಿಯು ಮನುಷ್ಯನು ಮಾತ್ರ. ಇತರ ಜೀವಿಗಳಿಗೆ ಅಸಾಧ್ಯ ; ದೈವತ್ತ್ವವನ್ನು ಅವು ಸಾಕ್ಷಾತ್ ಹೊಂದಿದ್ದರೂ, ಅದನ್ನು ಅರಿಯುವ ಸಾಧನವು ಅವುಗಳಿಗಿಲ್ಲ.

ಪರಸ್ಪರ ಆತ್ಯಗತ್ಯ

ವಿಶಾಲ ತೆರನಾದ ಈ ದೃಷ್ಟಿಯಿಂದ ನೋಡಿದರೆ, "ಎನಗೂ ಆಣೆ ರಂಗಾ, ನಿನಗೂ ಆಣೆ" ಎಂದು ದಾಸರು ಹಾಡಿದುದು ಎಷ್ಟು ಅರ್ಥಗರ್ಭಿತ ! ನಾನು ಮಾತ್ರ ನಿನ್ನನ್ನು ಅರಿಯಲು ಸಾಧ್ಯ. ಅದೂ ನಿನ್ನ ಮಹಾಕರುಣೆ ಯಿಂದ, ನಿನ್ನ ದಾಸಾನುದಾಸ ನಾನು. ಆದರೂ ಅಲ್ಪನಾದರೂ. ಅತಿಹೀನ

ಜಾದರೂ ನಾನಿರದಿದ್ದರೆ, ನಿನ್ನನ್ನು ಅರಿಯುವವರು ಇನ್ಯಾರೂ ಇಲ್ಲವಲ್ಲ. ಆದಕಾರಣ ನಾನೂ ನೀನೂ ಪರಸ್ಪರವಾಗಿ ಅತ್ಯಗತ್ಯ.

ಎನಗೂ ಆಣೆ, ರಂಗಾ, ನಿನಗೂ ಆಣೆ,
ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ.
ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ–ರಂಗಾ.
ಎನ್ನ ನೀ ಕೈ ಬಿಟ್ಟು ಪೋದರೆ ನಿನಗೆ ಆಣೆ
ತನುಮನ ಧನದಲಿ ವಂಚಕನಾದರೆ ಎನಗೆ ಆಣೆ, ರಂಗಾ
ಮನಸು ನಿನ್ನಲಿ ನಿಲಿಸದಿದ್ದರೆ, ನಿನಗೆ ಆಣೆ.

ಅಂದರೆ ಮನಸ್ಸನ್ನು ಕಡೆಯ ಗುರಿ ಮುಟ್ಟಿಸುವ ಹೊಣೆಯು ರಂಗನದು, ಭಗವಂತನದು, ಪುರುಷೋತ್ತಮನದು. ಕೇವಲ ಮನುಷ್ಯ ಪ್ರಯತ್ನದಿಂದ ಅದು ಸಾಧ್ಯವಿಲ್ಲ. ರಂಗನ ಮಹಾಕರುಣೆಯಿಂದಲೇ ಅದು ಸಾಧ್ಯ ಎಂದರು ದಾಸವರ್ಯರು.

ಜೀವದ ಪ್ರಗತಿಯ ದೃಷ್ಟಿಯಿಂದ, ಬ್ರಹ್ಮಾಂಡವನ್ನು ಅವಲೋಕಿಸಿದರೆ ನಿನಗೂ ಆಣೆ ರಂಗ, ಎನಗೂ ಆಣೆ ಎನ್ನುವ ಪರಸ್ಪರ ಸಂಬಂಧವನ್ನು ಸೂಚಿಸುವ ಹಾಡು. ಎಷ್ಟು ಗಂಭೀರವಾದುದು, ಎಷ್ಟು ವಿಶಾಲಾರ್ಥವುಳ್ಳದ್ದು !

ಇಂಪಾದ ಹಾಡು, ಪಾಮರರನ್ನೂ ಸೆರೆಹಿಡಿಯುವ ಈ ಹಾಡು, ಅತ್ಯುತ್ತಮ ಮುನಿಗರೂ ಬಾಳ ಬೆಳಕಾಗುತ್ತದಲ್ಲ !

ಮನನ ಮಾಡಬೇಕಾದ ವಿಷಯ.

ವೈಜ್ಞಾನಿಕರ ಶೀರ್ಷಾಸನ

ದೇಹದ ಆರೋಗ್ಯವನ್ನು ಕಾಪಾಡುವುದಕ್ಕೆ 'ಆಸನ'ಗಳನ್ನು ನಿಯಮಿಸಿದರು ಹಿರಿಯರು. ತಲೆಯನ್ನು ನೆಲದ ಮೇಲಿಟ್ಟು, ಕಾಲುಗಳನ್ನು ಆಕಾಶದತ್ತ ಎತ್ತಿ, ತಲೆಕೆಳಗಾಗಿ ನಿಲ್ಲುವುದೇ ಶೀರ್ಷಾಸನ. ಆಗ ದೇಹದಲ್ಲಿನ ರಕ್ತವು ಕಡಿಮೆಯಾಗಿ, ತಲೆಯಲ್ಲಿ ರಕ್ತವು ಹೆಚ್ಚಾಗುತ್ತದೆ ಎಂದು ಕೆಲವರ ಭ್ರಮೆ. ರಕ್ತ ಸಂಚಾರವನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಲು ದೇಹವು ಸರ್ವತಂತ್ರ ಸ್ವತಂತ್ರವಾದ ಹಲವಾರು ಏರ್ಪಾಡುಗಳನ್ನು ಸ್ಥಾಪಿಸಿದೆ. ಆಕಾರಣದಿಂದ ತಲೆಕೆಳಗಾದಾಗ ಹೆಚ್ಚು ರಕ್ತವು ಮೆದುಳಿಗೆ ಹರಿಯುತ್ತದೆ ಎನ್ನುವಂತಿಲ್ಲ. ಆದರೂ ಅಲ್ಪ ಸ್ವಲ್ಪವಾಗಿ ಆ ರೀತಿ ಆಗುವುದಿಲ್ಲ ಎನ್ನಬರುವುದಿಲ್ಲ. ಇಷ್ಟು ಮಾತ್ರ ದಿಟ: ಈ ರೀತಿಯ ಶೀರ್ಷಾಸನವನ್ನು ಅಭ್ಯಾಸ ಮಾಡಿಕೊಂಡವರು, ತಮ್ಮ ಚಿಂತನಾಶಕ್ತಿಯು ಈ ಆಸನದಿಂದಾಗಿ ಉತ್ತಮವಾಯಿತು ಎಂದು ನಂಬಿದ್ದಾರೆ. ಹೀಗೆ ನಂಬಿದವರಲ್ಲಿ ನಮ್ಮ ಮಾಜಿ ಪ್ರಧಾನ ಮಂತ್ರಿಯಾಗಿದ್ದ ಜವಹರ್‌ಲಾಲ್ ನೆಹ್ರೂ ಅವರೂ ಒಬ್ಬರು. ಬಾಲ್ಯದಲ್ಲಿ ಆಂಗ್ಲ ಗೌವರ್ನೆಸ್ ಇಂದ ಸಾಕಲ್ಪಟ್ಟ, ನಂತರ ಪಾಶ್ಚಾತ್ಯ ಇಂಗ್ಲೆಂಡಿನಲ್ಲಿ ಕೌಮಾರ್ಯವನ್ನು ಕಳೆದ ನೆಹ್ರೂ ಅವರು ಭಾರತದನಂಬಿಕೆಗಳಿಗೆ ಅಷ್ಟಾಗಿ ಮಣಿದವರಲ್ಲ. ಆದರೂ ಆತ ಶೀರ್ಷಾಸನವನ್ನು ಅಭ್ಯಾಸ ಮಾಡಿಕೊಂಡಿದ್ದರು, ಅವರ ಉಪಯುಕ್ತತೆಯಲ್ಲಿ ನಂಬಿಕೆಯು ಇರದಿದ್ದರೆ ಆತ ಅಭ್ಯಾಸ ಮಾಡುತ್ತಿರಲಿಲ್ಲ.

ಮನಸ್ಸಿನ ಯೋಚನೆಗಳು

ಶೀರ್ಷಾಸನವನ್ನು ಹಾಕುವುದರಿಂದ ದೇಹಕ್ಕೆ ಒಳ್ಳೆಯದಾಗಲಿ, ಬಿಡಲಿ; ಮನಸ್ಸಿನಲ್ಲಿ ತೋರಿಬಂದ ಯೋಚನೆಗಳಿಗೆ ಶೀರ್ಷಾಸನವನ್ನು ಹಾಕಿದರೆ, ಒಳ್ಳೆಯ ಫಲಿತಾಂಶವು ಖಂಡಿತ. ಮನಸ್ಸಿನಲ್ಲಿ ಮೂಡಿಬಂದ ಯೋಚನೆಗಳಿಗೆ ಶೀರ್ಷಾಸನವನ್ನು ಹಾಕುವುದು ಹೇಗೆ ?

ಫ್ರಾನ್ಸ್ ದೇಶವು ಎಂದಿನಿಂದಲೂ ವೈನ್ ಪಾನೀಯಗಳಿಗೆ ಪ್ರಸಿದ್ಧ

ಾದುದು. ನಮ್ಮ ದೇಶದಲ್ಲಿ ದೇವರುಗಳ ಸಂಖ್ಯೆಯು ಎಷ್ಟಿದೆಯೋ ಷ್ಟೂ ತೆರನ ವೈನ್‌ಗಳು ಫ್ರಾನ್ಸಿನಲ್ಲಿದೆ ಎಂದರೆ ತಪ್ಪಿಲ್ಲ. ವೈನ್‌ಗಳನ್ನು ುದುಗೆಬ್ಬಿಸುವ ಕಡಾಯಿಗಳಲ್ಲಿ ಪ್ಯಾರಾ ಟಾರ್ಟರೇಟ್ ಎಂಬ ರಾಸಾಯನಿಕ ಸ್ತುವು ತಳದಲ್ಲಿ ಕರೆಕಟ್ಟುತ್ತದೆ. ಲೂಯಿ ಪಾಸ್ತೂರ್, ಪ್ಯಾರಾ ಟಾರ್ಟ ೇಟ್‌ಅನ್ನು ವಿಶ್ಲೇಷಿಸುತ್ತಿದ್ದ. ಇದರ ಆಗುಹೋಗುಗಳನ್ನು ಸ್ಪಷ್ಟವಾಗಿ ಳಿದರೆ, ವೈನಿನ ಗುಣವನ್ನು ಉತ್ತಮಪಡಿಸಬಹುದು ಹಾಗೂ ನಿಖರವಾಗಿಸ ಹುದು ಎನ್ನುವ ನಂಬಿಕೆ.

ಒಂದು ದಿನ, ಅವನು ತಯಾರಿಸಿಟ್ಟಿದ್ದ ಪ್ಯಾರಾ ಟಾರ್ಟರೇಟ್ ೊಲ್ಯೂಷನ್ನು ಕೆಟ್ಟುಹೋಗಿತ್ತು. ಅಂದರೆ ಒಂದು ತೆರನ ಬೂಷ್ಟು ದಕ್ಕೆ ಸೋಂಕಿತ್ತು. ಬೇಸಿಗೆ ದಿನಗಳಲ್ಲಿ ಹೀಗಾಗುವುದು ಸಾಮಾನ್ಯ. ೀಗಾದಾಗ ರಾಸಾಯನಿಕ ಅಭ್ಯಾಸಿಗಳು, ಯಾರಿಗೂ ಕೇಳದಂತೆ ದೇವರನ್ನು ಥವಾ ವಿಧಿಯನ್ನು ಶಪಿಸುತ್ತಾ, ಕೆಟ್ಟುಹೋದ ಸೊಲ್ಯೂಷನ್ ಅನ್ನು ರಂಡಿಗೆ ಚೆಲ್ಲಿಬಿಟ್ಟು, ಹೊಸದಾಗಿ ಮಡಿಯಾಗಿ ಪ್ರಯೋಗವನ್ನು ಪುನಃ ರಂಭಿಸುತ್ತಾರೆ.

ುಭದ್ರ ತಳಹದಿ

ಆದರೆ ಪಾಸ್ತೂರ್‌ನಿಗೆ ಹೀಗಾದಾಗ, ಅವ, ತನ್ನ ಯೋಚನೆಗೆ ಶೀರ್ಷಾ ನವನ್ನು ಹಾಕಿದ. ಅಂದರೆ ಪ್ಯಾರಾ ಟಾರ್ಟರೇಟ್ ಅನ್ನು ಪರೀಕ್ಷಿಸತೊಡಗಿ ಾಗ ಕಶ್ಮಲವು ಆಕಸ್ಮಿಕವಾಗಿ ಸಂಭವಿಸಿತು. ಆಕಸ್ಮಿಕದ ಈ ಕಶ್ಮಲವನ್ನೇ ಾಸ್ತೂರ್ ಪರೀಕ್ಷಿಸತೊಡಗಿದ. ಅಂದರೆ ತನ್ನ ಪ್ರಯೋಗದಲ್ಲಿ ಪ್ಯಾರಾ ಾರ್ಟರೇಟ್ ತಲೆಯಂತಿತ್ತು. ಅದನ್ನು ಕೆಳಗೆ ಮಾಡಿ, ಕಾಲಿನಂತಿದ್ದ ಕಶ್ಮಲ ವ ಎತ್ತಿ ಹಿಡಿದ. ಅದನ್ನೇ ವಿಶ್ಲೇಷಿಸತೊಡಗಿದ. ಇದರಿಂದಾಗಿ ಅವ ಫರ್ಮೆಂಟೇಶನ್' ಶಾಸ್ತ್ರಕ್ಕೆ ಸುಭದ್ರವಾದ ತಳಹದಿಯನ್ನು ಹಾಕಲು ಸಾಧ್ಯ ಾಯಿತು.

ಫರ್ಮೆಂಟೇಷನ್ ವಿಧಾನಗಳಿಂದ ಹೆಂಡ, ಸಾರಾಯಿ, ವ್ಹಿಸ್ಕಿ ಇತ್ಯಾದಿ ಳು ತಯಾರಾದುವು.

ಆದರೆ ಅದಕ್ಕಿಂತಲೂ ಮಿಗಿಲಾಗಿ, ಪವಾಡದ ಔಷಧಿಗಳು ಎನಿಸಿ ೊಂಡ, ಪೆನ್ಸಿಲಿನ್ ಸ್ಟ್ರೆಪ್ಟೋಮೈಸಿನ್ ಇತ್ಯಾದಿ ಆ್ಯಂಟಿಬಯಾಟಿಕ್ ಔಷಧಿ ಳನ್ನು ತಯಾರಿಸುವಾಗ ಫರ್ಮೆಂಟೇಷನ್ ವಿಧಾನಗಳು ಅತಿಮುಖ್ಯ

ಪಾದುವು. ಇಂದಿನ ಆ್ಯಂಟಿಬಯಾಟಿಕ್ ಔಷಧಿಗಳ ಸಾಫಲ್ಯಕ್ಕೆ ಪಾಸ್ತೂರ್ ಅಂದು ನಾಂದಿಯನ್ನು ನುಡಿದ ಎನ್ನಬಹುದು.

ಇದೇ ರೀತಿಯಲ್ಲಿ ಅಲೆಕ್ಸಾಂಡರ್ ಫ್ಲೆಮಿಂಗ್ ಕೂಡ ತನ್ನ ಯೋಜನೆಯೊಂದಕ್ಕೆ ಶೀರ್ಷಾಸನವನ್ನು ಹಾಕಿದ. 1922ರಲ್ಲಿ ಫ್ಲೆಮಿಂಗ್‌ಅನಿಗೆ ನೆಗಡಿ ಹಿಡಿದಿತ್ತು.ಬ್ಯಾಕ್ಟೀರಿಯಾಗಳನ್ನು ಅವ ಪೆಟ್ರಿತಟ್ಟೆಗಳಲ್ಲಿ ಬೆಳೆಸುತ್ತಿದ್ದ. ವರ್ಣಸಂಕರವಾಗದಂತೆ ಶುದ್ಧವಾದ ಪರಿಶುದ್ಧವಾದ ಒಂದು ಗೋತ್ರದ ಬ್ಯಾಕ್ಟೀರಿಯಾಗಳನ್ನು ಬೆಳೆಸುವ ಕಾರ್ಯಕ್ರಮ, ಅವನದು. ಇಂತಹ ಸೂಕ್ಷ್ಮವಾದ ಕೆಲಸವನ್ನು ಮಾಡುವವನಿಗೆ ನೆಗಡಿ ಹಿಡಿದರೆ ಅಪಾಯವು ಅನಿವಾರ್ಯ. ಒಂದು ಪೆಟ್ರಿತಟ್ಟೆಯ ಮುಚ್ಚಳವನ್ನು ತೆಗೆದಾಗ, ಅವನ ಮೂಗಿನಿಂದ ಒಂದು ತೊಟ್ಟು ಸಿಂಬಳವು ತಟ್ಟೆಗೆ ತಟ್ಟಂತ ಬಿತ್ತು. ತುಂಬು ತುರುಬಿನವರು ಪಲ್ಯ ಕಲೆಸುವಾಗ ಒಂದು ಕೂದಲೆಳೆ ಪಲ್ಯದಲ್ಲಿ ಮಿಶ್ರವಾಗುವುದಿಲ್ಲವೇ, ಹಾಗೆ.

ಹೀಗಾಯಿತಲ್ಲ ಅಂತ ರೇಗಿದ ಗಂಡ ಪಲ್ಯವನ್ನು ಎಸೆಯುವಂತೆ, ಫ್ಲೆಮಿಂಗ್ ಪೆಟ್ರಿತಟ್ಟೆಯನ್ನು ಸಲ್ಲಿಯ ಕೆಳಗೆ ಹಿಡಿಯಬೇಕಾಗಿತ್ತು. ಆದರೆ ಅವ ರೇಗಲಿಲ್ಲ. ನೆಗಡಿ ಇರುವಾಗ ಇಂತಹ ಸೂಕ್ಷ್ಮವಾದ ಪರೀಕ್ಷೆಗಳನ್ನು ಮಾಡುವುದು ಬೇಡ ಎಂದಂದುಕೊಂಡ. ಆ ಕೆಲಸವನ್ನು ತಾತ್ಕಾಲಿಕವಾಗಿ ನಿಲ್ಲಿಸಿದ.

ಅನಿರೀಕ್ಷಿತ ಆಶ್ಚರ್ಯ

ನೆಗಡಿಯು ವಾಸಿಯಾದಮೇಲೆ ತಿರುಗಿ ಕೆಲಸವನ್ನು ಆರಂಭಿಸಲು ಬಂದ. ಸಿಂಬಳದ ತೊಟ್ಟುಬಿದ್ದ ಪೆಟ್ರಿತಟ್ಟೆಯನ್ನು ನೋಡಿದ. ಏನಾಶ್ಚರ್ಯ ! ಸಿಂಬಳದ ತೊಟ್ಟು ಬಿದ್ದಿದ್ದ ಸ್ಥಳದ ಸುತ್ತಲೂ ಬಾಕ್ಟೀರಿಯಾಗಳು ಕರಗಿ ನಾಶವಾಗಿದ್ದುವು.

ತನ್ನ ಪೂರ್ವಯೋಜಿತ ಯೋಚನೆಗೆ ಫ್ಲೆಮಿಂಗ್ ಈಗ ಶೀರ್ಷಾಸನವನ್ನು ಹಾಕಿದ. ಮೊದಲ ಯೋಚನೆಯನ್ನು ಮರೆತ. ಸಿಂಬಳದ ತೊಟ್ಟು ಅವನ ಮನಸ್ಸಿನಲ್ಲಿ ಮುಖ್ಯವಾಯಿತು. ಮೂಗಿನ ಸಿಂಬಳದಲ್ಲಿ ಕಣ್ಣೀರು ಹರಿದು ಬಂದಿರುತ್ತದೆ. ಅಳುವವರಿಗೆ ನೆಗಡಿ ಹಿಡಿದಂತಾಗಿ ಸುರ್‌ಬುರ್ ಮಾಡುವುದು ಈ ಕಾರಣದಿಂದಲೇ. ಕಣ್ಣೀರಿನಲ್ಲಿ ಲೈಸೋಜೈಮ್ ಎಂಬ ಬ್ಯಾಕ್ಟೀರಿಯಾಗಳ ಶತ್ರುವು ಇದೆ ಎನ್ನುವುದನ್ನು ಅವ ಅನಂತರ ಸಿದ್ಧಾಂತ

ಮಾಡಿದ. ಆದರೆ ಲೈಸೋಜೈಮ್ ತುಂಬಾ ಪರಿಣಾಮಕಾರಿಯದುದಲ್ಲ. ಹಾಗಾಗಿ ಪ್ರಚಾರವನ್ನೂ ಪಡೆಯಲಿಲ್ಲ, ಪ್ರಸಿದ್ಧವಾಗಲಿಲ್ಲ.

ಪೆನ್ಸಿಲಿನ್ ಶೋಧನೆ

ಆದರೆ ಕೆಲಕಾಲಾನಂತರ ಇದೇ ರೀತಿಯಲ್ಲಿ ತಾನು ಯೋಚಿಸಿದ ಪ್ರಯೋಗದಲ್ಲಿ ಆಕಸ್ಮಿಕವು ಸಂಭವಿಸಿದಾಗ, ಅವ ಪುನಃ ತನ್ನ ಯೋಚನೆಗೆ ಶೀರ್ಷಾಸನವನ್ನು ಹಾಕಿದ. ಅದರ ಪರಿಣಾಮವೇ ಇಂದು ಜಗತ್‌ಪ್ರಸಿದ್ಧವಾದ ಪೆನ್ಸಿಲಿನ್.

ಅಂದರೆ ದೇಹದ ಸೌಖ್ಯಕ್ಕಾಗಿ ಶೀರ್ಷಾಸನವನ್ನು ಹಾಕುವಂತೆಯೇ, ಮನಸ್ಸಿನಲ್ಲಿ ಮೂಡಿಬಂದ ಯೋಚನೆಗಳಿಗೂ ಒಮ್ಮೊಮ್ಮೆ ಶೀರ್ಷಾಸನವನ್ನು ಹಾಕಿದರೆ ಪ್ರಗತಿಯು ಸಾಧ್ಯ. ಗಣೇಶನ್ನ ಮಾಡುಕ್ಕೆ ಹೋದವನು ಕೋತಿ ಮರಿಯುನ್ನು ಮಾಡಿಡಬಹುದು. ಆದರೆ ಒಮ್ಮೊಮ್ಮೆ ಕೋತಿಮರಿಯುನ್ನೇ ಮಾಡುಕ್ಕೆ ಹೋಗಿ ಗಣೇಶನ ಕೃಪೆಯುನ್ನು ಪಡೆಯುಬಹುದು.

ಮಾಯೆ ಮುಸುಕು

ಹಲ್ಲುಸಂದಿಯಲ್ಲಿ ಅಡಿಕೆ ಚೂರು ಸಿಕ್ಕಿಹಾಕಿಕೊಂಡರೆ, ಅನಂತರ ಅದನ್ನು ಹೊರತೆಗೆಯುವುದೇ ನಾಲಿಗೆಯ ಕೆಲಸವಾಗುತ್ತದೆ. ಅಪಾಯ ತರುವಂತಹ ಆಹಾರವನ್ನು ನುಂಗಿದರೆ, ವಾಂತಿಯ ಮೂಲಕ ಅದನ್ನು ಹೊಟ್ಟೆಯು ಹೊರಹಾಕುತ್ತದೆ. ಮಸಲಾ ಅಂತಹ ಪದಾರ್ಥವು ಕರುಳಿಗೆ ಇಳಿದರೆ, ಅತಿ ಸಾರದ ಮೂಲಕ ಅದನ್ನು ದೇಹವು ಅವಸರವಾಗಿ ಹೊರದೂಡುತ್ತದೆ. ದೇಹದೊಳಕ್ಕೆ ಅಪರಿಚಿತವಾದ ಯಾವ ವಸ್ತುವು ಹೋದರೂ, ಅದನ್ನು ಹೊರಹಾಕುವ ಪ್ರಯತ್ನವನ್ನು ದೇಹವು ಮೊದಲು ಕೈಗೊಳ್ಳುತ್ತದೆ. ಅದು ಸಾಧ್ಯವಾಗದಿದ್ದರೆ, ಅದರ ವಿರುದ್ಧ ಹೋರಾಡಿ, ಅಪಾಯಕಾರಿಯಾಗದಂತೆ ಮಾಡುತ್ತದೆ. ಬ್ಯಾಕ್ಟೀರಿಯಾಗಳು ದೇಹದೊಳಕ್ಕೆ ಅತಿಕ್ರಮಿಸಿದ ಮೇಲೆ, ಅವುಗಳ ವಿರುದ್ಧ ದೇಹದ ರಕ್ಷಣಾ ವ್ಯವಸ್ಥೆಗಳು ನಡೆಸುವ ಹೋರಾಟವೇ ಸಾಮಾನ್ಯವಾಗಿ ನಾವು ಕಾಣುವ ರೋಗಗಳು.

ದೇಹದಂತೆಯೇ ಮನಸ್ಸು

ದೇಹದಂತೆಯೇ, ಒಂದು ರೀತಿಯಲ್ಲಿ ಮನಸ್ಸು ಕೂಡ. ಬಾಲ್ಯದಿಂದಲೂ ಮನಸ್ಸಿನಲ್ಲಿ ಹಲವಾರು ನಂಬಿಕೆಗಳು ರೂಢಿಸಲ್ಪಟ್ಟಿರುತ್ತವೆ. ಹೊಸ ಆಲೋಚನೆಯೊಂದು ಮನಸ್ಸಿನಲ್ಲಿ ಮೂಡಿದರೆ ಅದನ್ನು ತಳ್ಳಿಹಾಕುವ ಪ್ರಯತ್ನವೇ, ಮನಸ್ಸು ಕೈಕೊಳ್ಳುವ ಮೊದಲ ಕಾರ್ಯ.

ಹೀಗೆಂದಾಗ ನೀವು ನಗಬಹುದು. ಹೊಸ ಹೊಸ ಆಲೋಚನೆಗಳಿಂದಲೇ ಮಾನವನು ಈ ಪ್ರಪಂಚದಲ್ಲಿ ಪ್ರಗತಿಯನ್ನು ಸಾಧಿಸಿರುವುದು. ಹೊಸ ಹೊಸ ಯೋಚನೆ ಮತ್ತು ಮನನಗಳಿಂದಲೇ ಇಂದು ಮಾನವನು ಚಂದ್ರ ಗ್ರಹದ ಮೇಲೆ ಮೊದಲ ಹೆಜ್ಜೆಯನ್ನಿಟ್ಟುದುದು, ದಿಟ. ಇದೆಲ್ಲವೂ ನಿಜ. ಆದರೆ ಹೊಸ ಪರಿಣಾಮಕಾರೀ ಆಲೋಚನೆಗಳು ಮೂಡಿದಾಗ, ಅದರಲ್ಲೂ ಪ್ರಚಂಡ ಬುದ್ಧಿ ಇದ್ದವರಲ್ಲಿ ಮೂಡಿದಾಗ, ಅವರುಗಳು ಅವನ್ನು ಕಂಡೂ

ೇಂಡೂ ನಿರ್ಲಕ್ಷಿಸಿದರೆ, ಆಗ ಏನೆನ್ನಬೇಕು ? ಅಂತಹ ಪ್ರಚಂಡರ ಮನಸ್ಸಿಗೂ ತಿ ಕಾಲದಲ್ಲಿ ಮಾಯೆಯು ಮುಸುಕನ್ನು ಕವಿದಿದ್ದಿತು ಎನ್ನಲೇಬೇಕು.

ಈ ಕಾರಣದಿಂದಲೇ ವಿಲ್‌ಫ್ರೆಡ್ ಟ್ರಾಟರ್ ಎಂಬ ಜಾಣ, "ನಮ್ಮ ಮನಸ್ಸಿನ ಕಾರ್ಯಕ್ರಮವನ್ನು ನಿರ್ವಂಚನೆಯಿಂದ ನೋಡಿದಾಗ, ಯಾವುದಾ ವರೂ ಹೊಸ ಯೋಚನೆಯು ಮೂಡುವ ಹಂತದಲ್ಲೇ, ಅದರ ಸ್ಪಷ್ಟ ರೂಪು ುದ್ಧವಾಗುವ ಮೊದಲೇ, ಅದಕ್ಕೆ ವಿರುದ್ಧವಾದ, ಅದನ್ನು ಒಗೆದು ಬಿಡು ಲಂತಹ ಪ್ರಯತ್ನಗಳನ್ನು ಮನಸ್ಸು ಮಾಡುತ್ತದೆ" ಎಂದು ಹೇಳಿದ. ಸತ್ವ ಪೂರ್ಣವಾದ ಮಾತುಗಳು. ಈ ನಿದರ್ಶನಗಳನ್ನು ನೋಡಿ.

ಅವರಿಗೇಕೆ ಕಾಣಿಸಲಿಲ್ಲ

ಕೋಪರ್ನಿಕಸ್ ಎಂಬ ಪ್ರಚಂಡ ಇಂದಿನ ಭೌತ ವಿಜ್ಞಾನಕ್ಕೆ ಅಡಿಪಾಯ ವನ್ನು ಹಾಕಿದವ. ಭೂಮಿಯ ಸುತ್ತಲೂ ಸೂರ್ಯ ಮತ್ತು ನಕ್ಷತ್ರಗಳು ಪ್ರದಕ್ಷಿಣೆ ಹಾಕುವುದಿಲ್ಲ. ಈ ತನಕ ನಂಬಿದ್ದ ಈ ಸಂಗತಿಯು ಸುಳ್ಳು, ತದ್ವಿ ರುದ್ಧ. ಸೂರ್ಯನ ಸುತ್ತಲೂ ಭೂಮಿಯು ಪ್ರದಕ್ಷಿಣೆ ಹಾಕುತ್ತದೆ ಎಂದವ ಿದ್ಧಾಂತ ಮಾಡಿ ಹೇಳಿದ. ಇಂತಹ ಕ್ರಾಂತಿಕಾರೀ ಸಿದ್ಧಾಂತವು ತಪ್ಪು ಎಂದು ಅವನ ಸಮಕಾಲೀನರಾದ ಸಾಂಪ್ರದಾಯಿಕರು ಕೋಪರ್ನಿಕಸ್ ಅನ್ನು ಅಲ್ಲ ಗಳೆದರು. ಈ ರೀತಿ ಅಲ್ಲಗಳೆದವರಲ್ಲಿ ಜಾಣರೂ ಇದ್ದರು. ಅವರ ಮನಸ್ಸಿ ನಲ್ಲಿ ಕೋಪರ್ನಿಕಸ್‌ನ ವಾದವು ಹಲ್ಲುಸಂದಿನ ಅಡಿಕೆ ಚೂರಾಯಿತು. ಅದನ್ನು ಅವರು ಶ್ರಮಪಟ್ಟು ತಂತಮ್ಮ ಮನಸ್ಸಿನಿಂದ ಹೊರದೂಡಿದರು. ಕೋಪರ್ನಿಕಸ್ ಅವನಿಗೆ ತೋಚಿದ ಸತ್ಯ ಅವರಿಗೇಕೆ ಕಾಣಿಸಲಿಲ್ಲ ? ಪ್ರಾಯಶಃ ಅವರು ಮಂಕುದಿಣ್ಣೆಗಳಾಗಿದ್ದಿರಬಹುದು ಅಥವಾ ಜಾಣರಾಗಿ ದ್ದರೂ ತಾತ್ಕಾಲಿಕವಾಗಿ ಮಾಯೆಯು ಮುಸುಕು ಕವಿಸಿತ್ತು ಎನ್ನಬೇಕು.

ಇಂತಹ ಕ್ರಾಂತಿಕಾರೀ ಆಲೋಚನೆಯನ್ನು ಮೂಡಿಸಿದ ಕೋಪರ್ನಿಕಸ್‌ನ ಪ್ರಚಂಡ ಮನಸ್ಸು ಕೂಡ, ಆಗಿಂದಾಗ್ಗೆ ಮಂಕು ಬಡಿದಂತೆ, ಮಾಯೆ ಮುಸುಕಿ ದಂತೆ ಬೆಪ್ಪಾಗುತ್ತಿತ್ತು.

ರಿಸ್ಟಾಟಲ್

ಅರಿಸ್ಟಾಟಲ್‌ನ ಸಿದ್ಧಾಂತವನ್ನು ಕೋಪರ್ನಿಕಸ್ ಸಂಪೂರ್ಣವಾಗಿ ಂಬಿದ್ದ. ಆಕಾಶದಲ್ಲಿ ಕಾಣಿಸುವ ಗಗನ ವಸ್ತುಗಳೆಲ್ಲವೂ ಒಂದೇ ವೇಗದಲ್ಲಿ,

ಅಚ್ಚುಕಟ್ಟಾದ ಚಕ್ರಪಥದಲ್ಲಿ ಸುತ್ತುತ್ತವೆ ಎಂದು ದೃಢವಾಗಿ ನಂಬಿದ್ದ. "Revolutions of the Heavenly Spheres" ಎಂಬ ಪುಸ್ತಕದ ಮೂರನೆ ಭಾಗದ ನಾಲ್ಕನೆಯ ಅಧ್ಯಾಯದಲ್ಲಿ ಅವ ಈ ರೀತಿ ಬರೆದಿದ್ದಾನೆ :

"ಈ ವಿಷಯವನ್ನು ಗಮನಿಸಬೇಕು. ಗಗನವಸ್ತುಗಳ ಚಕ್ರಪಥಗಳ ಡಯಾಮೀಟರ್‌ಗಳು ಬೇರೆ ಬೇರೆಯಾಗಿದ್ದರೆ, ಇತರ ಪರಿಸ್ಥಿತಿಯು ಎಂದಿನಂತೇ ಇದ್ದರೆ, ಆಗ ವಸ್ತುಗಳ ಪಥವು ನೇರವಾಗಿರುವುದಿಲ್ಲ. ಆದರೆ Ellipse ತೆರನಾಗಿರುತ್ತದೆ."

ಹೀಗೆ ಬರೆದವನು, ಈ ಪಂಕ್ತಿಗಳನ್ನು ಹೊಡೆದು ಹಾಕಿಬಿಟ್ಟ. ಅಚ್ಚಾದ ಪುಸ್ತಕದಲ್ಲಿ ಇದು ಇಲ್ಲವೇ ಇಲ್ಲ.

ಗ್ರಹಗಳ ಪಥವು Cycloid ನಂತಿರುತ್ತದೆ. Ellipse ಇನ ತರಹವೇ ಎಂಬುದು ಈಗ ಸಿದ್ಧಾಂತವಾಗಿದೆ. ಆದರೆ ಈ ಆಲೋಚನೆಯು ಮೂಡಿದ ಮೇಲೆ ಕೂಡ, ಅದನ್ನು ಬರೆದಮೇಲೆ ಕೂಡ ಕೋಪರ್ನಿಕಸ್ ಅದನ್ನು ಹೊಡೆದು ಹಾಕಿದ್ದೇಕೆ ? ಅವನಿಗೆ ಪ್ರಚಂಡ ಮನಸ್ಸಿತ್ತು ಎಂಬುದು ನಿರ್ವಿವಾದ. ಆದರೆ ಹೀಗೇಕೆ ಮಾಡಿದ ? ಮಾಯೆಯು ಆಗ ಅವನ ಮನಸ್ಸಿಗೆ ಮುಸುಕು ಹಾಕಿತ್ತು.

ಪ್ರಚಂಡ ಮನಸ್ಸು

ಹೊಸ ಹೊಸ ಯೋಚನೆಗಳು ಮೂಡಿದುದರಿಂದಲೇ ಆರ್ಕಿಮಿಡಿಸ್ ಸ್ಪೆಸಿಫಿಕ್ ಗ್ರ್ಯಾವಿಟಿಯನ್ನು ಕಂಡುಹಿಡಿದ. ನ್ಯೂಟನ್ ಗ್ರ್ಯಾವಿಟಿಯನ್ನು ಸಿದ್ಧಾಂತಪಡಿಸಿದ. ಐನ್‌ಸ್ಟೈನನು ರಿಲೆಟಿವಿಟಿ ಸಿದ್ಧಾಂತವನ್ನು ಪ್ರಕಟಿಸಿದ. ರೈಟ್‌ಸೋದರರು ಆಕಾಶದಲ್ಲಿ ಯಾನ ಮಾಡಿದರು. ಪವಾಡಗಳಂತೆ ಕಾಣಬರುವ ಇಂತಹ ಪ್ರಗತಿಯು, ಮನಸ್ಸಿನಲ್ಲಿ ಮೂಡಿಬಂದ ಆಲೋಚನೆಗಳಿಂದಲೇ. ಆದರೆ ಇಂತಹ ಯೋಚನೆಗಳು ಮೂಡಿದ ಪ್ರಚಂಡ ಮನಸ್ಸು. ಮಾಯೆಯಿಂದ ಮುಚ್ಚಲ್ಪಟ್ಟು, ಕಂಡುದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಇರುವ ಸಂದರ್ಭಗಳು ಅನೇಕಾನೇಕ. ಯೂರೀಕಾ ಎಂದು ಕೂಗಿ ಸತ್ಯದರ್ಶನವನ್ನು ಮಾಡಿಕೊಂಡ ಸಂದರ್ಭಗಳು ನೂರಾದರೆ, ಅಂತಹ ಸತ್ಯದ ದರ್ಶನವಾದರೂ, ಅವನ್ನು ಅಲ್ಲಗಳೆದು ಗಾಣದ ಎತ್ತಿನಂತೆ ಮುಂದುವರೆದ ಸಂದರ್ಭಗಳು ಲಕ್ಷ ಲಕ್ಷ.

ಹೀಗೇಕಾಗಬೇಕು ? ಅದೂ ಪ್ರಚಂಡವಾದ ಮನಸ್ಸಿರುವವರಲ್ಲಿ ! ಸತ್ಯದ ಅಂಚನ್ನು ಕಂಡಾಗಲೂ, ಅದನ್ನು ನಿರ್ಲಕ್ಷಿಸುವಂತೆ ಮಾಡುವ ಮನಸ್ಸಿನ ಕುರುಡು ಏತರಿಂದ ?

ಮಾಯೆಯ ವಿರಾಟ್‌ಸ್ವರೂಪದಲ್ಲಿ ಇದೂ ಒಂದು ಮುಖವಾಡವೇನೋ ?

ಕಲ್ಲು ಹೂವು.

LICHENS-ಪಂಚಗವ್ಯ

ಬಂಡೆಗಳ ಮೇಲೆ ನೀರುನಿಡಿ ದೊರಕದೆ ಇರುವ ಬಂಜರಾದ ಕಠಿಣ ಜಾಗಗಳಲ್ಲಿ ಒಣಗಿದ ಪಾಚಿಯು ಬೆಳೆದಂತೆ, ಬಣ್ಣಬಣ್ಣದ ತೆಳುವಾದ ಹೆಕ್ಕೆಗಳನ್ನು ಕಾಣಬಹುದು. ಇಂಗ್ಲೀಷಿನಲ್ಲಿ ಇವನ್ನು Lichen ಎಂದು ಕರೆಯುತ್ತಾರೆ. ಕಲ್ಲು ಹೂವು, ಶಿಲಾವಲ್ಕ ಎಂದು ಕನ್ನಡದಲ್ಲಿ ಕರೆಯುತ್ತಾರೆ.

ಪ್ರಾಣಿವರ್ಗ, ಸಸ್ಯವರ್ಗ ಎಂದು ಎರಡು ಮುಖ್ಯಕವಲುಗಳು ಜೀವದ ಪ್ರಗತಿಯಲ್ಲಿ ಒಡೆಯುವುದಕ್ಕೆ ಪೂರ್ವಭಾವಿಯಾಗಿ ಹಲವು ಜೀವ ವಿಶೇಷಗಳಿದ್ದುವು. ಇವುಗಳ ಆಧಾರದ ಮೇಲೆ ಪ್ರಾಣಿ ಮತ್ತು ಸಸ್ಯವರ್ಗಗಳು ಪ್ರಗತಿಯನ್ನು ಸಾಧಿಸಿದುವು. ಕಲ್ಲು ಹೂವು ಈ ಆದಿಮೂಲವಾದ ಜೀವದ ಗುಂಪಿಗೆ ಸೇರಿದುದು. ಬಂಡೆಗಳ ಮೇಲೆ ಮಾತ್ರವಲ್ಲ; ಹೆಮ್ಮರಗಳ ಮೇಲೆ ಮಾತ್ರವಲ್ಲ: ಉತ್ತರ ಮತ್ತು ದಕ್ಷಿಣ ಧ್ರುವಗಳಲ್ಲಿಯೂ ಇವು ಬೆಳೆಯುವುವನ್ನು ನೋಡಬಹುದು. ಧ್ರುವ ಪ್ರದೇಶಗಳಲ್ಲಿ ಜೀವವು ಬಾಳುವುದಕ್ಕೆ ಸಾಧ್ಯವಾಗದಂತಹ ಚಳಿ ಮತ್ತು ಶೀತಗಳಿರುವೆಡೆಯಲ್ಲಿ ಕೂಡ ಕಲ್ಲು ಹೂವುಗಳನ್ನು ಕಾಣುತ್ತೇವೆ. ಮೊದಮೊದಲ ಹಂತದ ಜೀವಿಯಾದರೂ, ಅಥವಾ ಪ್ರಾಯಶಃ ಅದೇ ಕಾರಣದಿಂದಲೋ ಏನೋ, ಕಲ್ಲು ಹೂವು ವಾತಾವರಣವು ಎಷ್ಟೇ ಕ್ರೂರವಾಗಿದ್ದರೂ, ಅದಕ್ಕೆ ಹೊಂದಿಕೊಂಡು ಬಾಳುವ ಜಾಣತನವನ್ನು ಪಡೆದಿದೆ.

ಸುತ್ತಲಿರುವ ವಾತಾವರಣವು ಅಥವಾ ಪರಿಸರವು ವಿರೋಧಿಯಾದರೆ, ಮನುಷ್ಯನು ಬಾಳಲಾರದೆ ಬಲಿಯಾಗುತ್ತಾನೆ ಅಥವಾ ಅಂತಹ ಪರಿಸರದಿಂದ ದೂರ ಓಡಿಹೋಗುತ್ತಾನೆ. ಕಲ್ಲು ಹೂವಿನ ಜಾಣತನವನ್ನು ಅವ ಪಡೆದರೆ

ಭಿಸಿದ ಪರಿಸರಕ್ಕೆ ಹೊಂದಿಕೊಂಡು ಬಾಳಬಹುದು. ಆದುದರಿಂದ ಕಲ್ಲು ಹೂವಿನ ವಿಶ್ಲೇಷಣೆಯನ್ನು ಮಾಡುವುದು ಪ್ರಯೋಜನಕರ.

ಭಿನ್ನ ಆದರೂ ಒಂದು

ಕಲ್ಲು ಹೂವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅದು ಎರಡು ತೆರನ ಜೀವಿಗಳ ಒಕ್ಕೂಟವಾಗಿದೆ ಎಂಬುದು ತಿಳಿಯುತ್ತದೆ. ಒಂದೇ ಜೀವಿಯಂತೆ ಕಂಡರೂ, ಒಂದೇ ಜೀವಿಯಂತೆ ಬಾಳಿದರೂ, ಪರೀಕ್ಷಿಸಿ ನೋಡಿದರೆ, ತುಂಬಾ ಭಿನ್ನವಾದ ಎರಡು ತೆರನ ಜೀವಿಗಳನ್ನು ಕಾಣುತ್ತೇವೆ.

ಕೆರೆ ಕೊಳಗಳಲ್ಲಿ ಪಾಚಿಯು ಕಟ್ಟಿಕೊಂಡಿರುವುದನ್ನು ನೋಡಿದ್ದೀರಿ. ಒಂದೇ ಜಾತಿಗೆ ಸೇರಿದ ಆಲ್ಗ ಎಂಬ ಜೀವಿಯೊಂದು, ಇನ್ನೊಂದು ಬೂಷ್ಟು ಜಾತಿಗೆ ಸೇರಿದ ಜೀವಿ, Fungus ಜಾತಿಯದು. ಆಲ್ಗ ಮತ್ತು ಫಂಗಸ್ ಇವೆರಡೂ ಸಂಪೂರ್ಣವಾಗಿ ಬಾಳಿನಲ್ಲಿ ಸಹಕರಿಸಿ, ಸಹಬಾಳ್ವೆಯನ್ನು ನಡೆಸುತ್ತವೆ. ಒಟ್ಟುಕೂಡಿ ಸಹಕರಿಸಿದಾಗ ಎರಡೂ ಬಾಳುತ್ತವೆ. ಬೇರೆಯಾದರೆ, ಎರಡೂ ನಾಶವಾಗುತ್ತವೆ. ಒಂದಿರದಿದ್ದರೆ ಇನ್ನೊಂದು ಬಾಳಲಾರದು, ಕ್ರೂರ ವಾತಾವರಣಗಳಲ್ಲಿ, ವಿರುದ್ಧವಾದ ಪರಿಸರದಲ್ಲಿ.

ಇವೆರಡರ ಒಕ್ಕೂಟವೆಂದರೆ, ಸಂಪೂರ್ಣವಾದ ಒಕ್ಕೂಟ. ಆಲ್ಗದ ಒಡಲಿನಲ್ಲಿ ನಡೆಯುವ ರಾಸಾಯನಿಕ ಕಾರ್ಯಗಳ ಫಲವನ್ನು ಫಂಗಸ್ ಅನುಭವಿಸುತ್ತದೆ. ಅದೇ ರೀತಿಯಲ್ಲಿ ಫಂಗಸ್ಸಿನ ಒಡಲಿನಲ್ಲಿ ನಡೆಯುವ ಕಾರ್ಯಗಳು ಆಲ್ಗಾಕ್ಕೆ ಪ್ರಯೋಜನವಾಗುತ್ತದೆ. ಅಲ್ಲದೆ ವಾತಾವರಣದಲ್ಲಿನ ಕ್ರೂರ ಪ್ರಕೃತಿಯು, ಪ್ರತ್ಯೇಕವಾಗಿದ್ದಾಗ ಇವೆರಡನ್ನೂ ಕೊಲ್ಲುತ್ತದೆ. ಆದರೆ ಒಕ್ಕೂಟದಲ್ಲಿರುವಾಗ ಏನನ್ನೂ ಮಾಡುವುದಿಲ್ಲ. ಅಷ್ಟೇ ಅಲ್ಲ! ಈ ತೆರನ ಸಂಪೂರ್ಣವಾದ ಒಕ್ಕೂಟದಿಂದ ಹೊಸ ಹೊಸ ಅಂಗಗಳನ್ನು ಬೆಳಸಿಕೊಳ್ಳಲು ಸಾಧ್ಯವಾಗುತ್ತದೆ. ಹೊಸದಾಗಿ ಸೃಷ್ಟಿಯಾದ ಈ ಅಂಗಗಳು, ವಿಧವಿಧ ವರ್ಣಗಳನ್ನು ಹೊಂದಿರುವುದರಿಂದ, ಬಂಡೆಯ ಮೇಲಿನ ಕಲ್ಲು ಹೂವಿಗೆ ತರಹಾವಾರಿ ಬಣ್ಣಗಳಿರುತ್ತದೆ.

ಜೀವ ಆರಂಭವಾದಾಗ

ಪ್ರಕೃತಿಯಲ್ಲಿ ಜೀವವು ಆರಂಭವಾದಾಗ, ಮೊದಮೊದಲ ಹಂತದ

ಜೀವಿಗಳು ಈ ರೀತಿಯ ಸಹಕಾರದ ಒಕ್ಕೂಟವನ್ನು ರಚಿಸಿಕೊಂಡು ಬಾಳಿನಲ್ಲಿ ಜಯಿಸಲು ಕಲಿತವು.

ಆದರೆ ಪ್ರಕೃತಿಯ ಪ್ರಗತಿಯಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದಿರುವ ಮನುಷ್ಯನಲ್ಲಿ, ಈ ತೆರನ ಒಕ್ಕೂಟದ ಅಗತ್ಯವೇನೂ ಇಲ್ಲ ಎನ್ನಿಸಬಹುದು. ಆದರೆ ಸೂಕ್ಷ್ಮವಾಗಿ ಅಧ್ಯಯನವನ್ನು ಮಾಡಿದರೆ, ಈ ತೆರನ ಒಕ್ಕೂಟವು ಅತ್ಯಗತ್ಯ ಎಂದು ತಿಳಿದು ಬರುತ್ತದೆ.

ಮನುಷ್ಯನ ಕರುಳುಗಳಲ್ಲಿ ಇಂದೂ ಮಿಲಿಯ ಗಟ್ಟಲೆ ಬ್ಯಾಕ್ಟೀರಿಯಾಗಳಿರುತ್ತವೆ. ಇವುಗಳ ಜತೆಗೆ ಕಣ್ಣಿಗೆ ಕಾಣಿಸುವಂತಹ ದೊಡ್ಡ ದೊಡ್ಡ ಹುಳುಗಳಿರುವುದನ್ನು ನೋಡಿದ್ದೇವೆ. ಆ ಮಗು ತಿನ್ನುವುದನ್ನು ನೋಡಿದರೆ, ಹೊಟ್ಟೆಯಲ್ಲಿ ಹುಳು ಇರಬೇಕು, ಎಂದು ಹಿರಿಯ ಅನುಭವಸ್ಥರು ಅನ್ನುತ್ತಾರೆ. ಹೊಟ್ಟೆಯಿಂದ ಹುಳುಗಳು ಹೊರಬರುವಂತೆ ಚಿಕಿತ್ಸೆಯನ್ನು ನಡೆಸುತ್ತಾರೆ.

ಮಿಲಿಯಗಟ್ಟಲೆ ಬ್ಯಾಕ್ಟೀರಿಯಾ

ಆದರೆ ಕರುಳುಗಳಲ್ಲಿರುವ ಮಿಲಿಯಗಟ್ಟಲೆ ಬ್ಯಾಕ್ಟೀರಿಯಾಗಳನ್ನು ಹೊರಹಾಕುವಂತಹ ಚಿಕಿತ್ಸೆಯನ್ನು ಯಾರೂ ಮಾಡುವುದಿಲ್ಲ; ಮಾಡುವುದು ಸಾಧ್ಯವೂ ಇಲ್ಲ.

ಏಕೆಂದರೆ, ಇಂತಹ ಬ್ಯಾಕ್ಟೀರಿಯಾಗಳಲ್ಲಿ ಹಲವಾರು ಜಾತಿಯವು ಮನುಷ್ಯನ ಸ್ವಸ್ಥಬಾಳಿಗೆ ಅತ್ಯಗತ್ಯ. ಮನುಷ್ಯನಲ್ಲಿ ರಕ್ತವು ಸಾಕಷ್ಟು ಪ್ರಮಾಣದಲ್ಲಿ ಇರಲೇಬೇಕು. ರಕ್ತಕಣಗಳು ಒಂದೆರಡು ವಾರಗಳು ಮಾತ್ರ ಕಾರ್ಯ ಮಾಡುತ್ತವೆ. ನಂತರ ಸ್ಮಶಾನಕ್ಕೆ ಅಂತಿಮ ಯಾತ್ರೆಯನ್ನು ಕೈಗೊಳ್ಳುತ್ತವೆ. ಹೊಸ ರಕ್ತಕಣಗಳು, ಯುವಕ ರಕ್ತಕಣಗಳು ಸರಬರಾಜಾಗುತ್ತಲೇ ಇರುತ್ತವೆ. ಹೊಸ ರಕ್ತಕಣಗಳು ಸಾಕಷ್ಟು ದೃಢವಾಗಿ ಉತ್ಪತ್ತಿಯಾಗಬೇಕಾದರೆ ವೈಟಮಿನ್ ಬಿ–12 ಮತ್ತು ಫೋಲಿಕ್ ಆ್ಯಸಿಡ್ ಮತ್ತು ಕಬ್ಬಿಣಗಳು ದೊರಕಬೇಕು.

ಕರುಳುಗಳಲ್ಲಿರುವ ಬ್ಯಾಕ್ಟೀರಿಯಾಗಳು ಮನುಷ್ಯನ ದೇಹಕ್ಕೆ ಅತ್ಯಗತ್ಯವಾದ ವೈಟಮಿನ್ ಬಿ–12 ಅನ್ನು ತಯಾರಿಸುತ್ತವೆ; ಅದನ್ನು ದೇಹಕ್ಕೆ ಕಾಣಿಕೆಯಾಗಿ ಒಡ್ಡುತ್ತವೆ. ಈ ಸಹಕಾರಕ್ಕೆ ಪ್ರತಿಯಾಗಿ ಮನುಷ್ಯನ ಕರುಳು ಆ ಬ್ಯಾಕ್ಟೀರಿಯಾಗಳಿಗೆ ಅಗತ್ಯವಾದ ನೆಲೆಯನ್ನೂ ಆಹಾರವನ್ನೂ ಒದಗಿಸು

ತ್ತದೆ. ಸಂಪೂರ್ಣವಾದ ಸಹಕಾರದ ಸಹಬಾಳ್ವೆಯನ್ನು ಈ ಬ್ಯಾಕ್ಟೀರಿಯಾಗಳೂ ಮತ್ತು ಮನುಷ್ಯರೂ ನಡೆಸುತ್ತಿದ್ದಾರೆ.

ಯಾವುದಾದರೂ ಕಾರಣದಿಂದ ಕರುಳಿನಲ್ಲಿರುವ ಬ್ಯಾಕ್ಟೀರಿಯಾಗಳು ಸಾಮೂಹಿಕವಾಗಿ ಹೊರಬಂದುವು ಎನ್ನಿ. ಉಗ್ರವಾಗಿ ಬಡಿದ ವಾಂತಿಭೇಧಿಗಳಿಂದ ಅಥವಾ ಅತಿಸಾರದಿಂದ ಹೀಗಾಗುವುದು ಸಾಧ್ಯ. ಕರುಳಿಗೆ ತಗುಲುವ ದೀರ್ಘಾವಧಿಯ ಕಾಯಿಲೆಗಳು. ಉದಾಹರಣೆಗೆ : ಟೈಫಾಯ್ಡ್ ಜ್ವರ (ಕ್ಲೋರೋ ಮೈಸಿಟನ್ ಮುಂತಾದುವು ಬರುವ ಮುನ್ನ). ಇಂತಹ ಪರಿಸ್ಥಿತಿಯನ್ನು ಅಂದರೆ ಸಹಬಾಳ್ವೆಗೆ ಅಗತ್ಯವಾದ ಬ್ಯಾಕ್ಟೀರಿಯಾಗಳನ್ನು ಬಹುತೇಕ ಹೊರಹಾಕಬಹುದು. ಆಗ ಕಾಯಿಲೆಯು ವಾಸಿಯಾದರೂ ಸುಸ್ತು, ನಿರ್ಬಲತೆ, ರಕ್ತಹೀನತೆ ಇವುಗಳು ಕಾಡುತ್ತವೆ. ವೈಟಮಿನ್ ಬಿ–12 ಇತ್ಯಾದಿ ಔಷಧಿಗಳನ್ನು ಕೊಡಬೇಕಾಗುತ್ತದೆ.

ಪಂಚಗವ್ಯ

ನಮ್ಮ ಹಿರಿಯರು ಒಂದು ನಿಯಮವನ್ನು ಕಾಲಾನುಕಾಲದಿಂದಲೂ ಆಚರಿಸುತ್ತಿದ್ದರು. ದೀರ್ಘಾವಧಿಯ ಕರುಳು ಬೇನೆಗಳಿಂದ ಚೇತರಿಸಿಕೊಂಡ ಮೇಲೆ, ರೋಗಿಯನ್ನು ಮಂಗಳಸ್ನಾನ ಮಾಡಿಸಿ ಒಳಕ್ಕೆ ಕರೆತಂದಾಗ, 'ಪಂಚಗವ್ಯ' ಎಂಬುದನ್ನು ಹಸಿದ ಹೊಟ್ಟೆಯಿರುವಾಗ ಕೊಡುತ್ತಿದ್ದರು.

ಹಸುವಿನ ಹಾಲು, ಮೊಸರು, ಗಂಜಲ, ಬೆಣ್ಣೆ, ಸಗಣಿ–ಇವುಗಳನ್ನು ಒಂದು ಪ್ರಮಾಣದಲ್ಲಿ ಕಲಸಿ ಕುಡಿಸುತ್ತಿದ್ದರು. ಗಂಜಲ, ಸಗಣಿ, ಎಂದರೆ ಈಗ ಥೂ ಥೂ ಎನ್ನುವಂತಾಗುತ್ತದೆ, ದಿಟ. ಆದರೆ ಹಸುವಿನ ಕರುಳಿನಲ್ಲಿ, ಮನುಷ್ಯನ ಕರುಳುಗಳಲ್ಲಿರುವುದಕ್ಕಿಂತ ಹೆಚ್ಚಾಗಿ, ಮಿತ್ರಬ್ಯಾಕ್ಟೀರಿಯಾಗಳು ಇರುತ್ತವೆ. ಸಗಣಿಯಲ್ಲಿ ಅಧಿಕವಾಗಿ, ಗಂಜಲದಲ್ಲಿ ಅಲ್ಪಸ್ವಲ್ಪ, ಹಾಲಿನಲ್ಲಿ ಇನ್ನೂ ವಿರಳವಾಗಿ, ಮಿತ್ರ ಬ್ಯಾಕ್ಟೀರಿಯಾಗಳು ಇರುತ್ತವೆ. ಹಾಲನ್ನು ಹೆಪ್ಪಿಟ್ಟು ಮೊಸರು ಮಾಡುವಾಗ, ಹುದುಗು ಬರುವಂತೆ ಮಾಡುವುದು ಕೆಲವು ಬ್ಯಾಕ್ಟೀರಿಯಾಗಳು Lacto Bacillus Caseii ಮೊಸರಿನಲ್ಲಿ ಮತ್ತು ಬೆಣ್ಣೆಯಲ್ಲಿ ಇವು ಅಧಿಕವಾಗಿರುತ್ತವೆ.

ಪಂಚಗವ್ಯವನ್ನು ಸೇವಿಸಿದಾಗ, ಮನುಷ್ಯನ ಕರುಳಿಗೆ, ಮನುಷ್ಯನಿಗೆ ಅಗತ್ಯವಾದ ಮಿತ್ರ ಬ್ಯಾಕ್ಟೀರಿಯಾಗಳು ಸಾಕಷ್ಟು ಪ್ರಮಾಣದಲ್ಲಿ ಒದಗಿ

ಸಲ್ಪಡುತ್ತದೆ. ಕಾಯಿಲೆಯಿಂದ ಅವನ ಕರುಳುಗಳಲ್ಲಿ ಕಡಿಮೆಯಾದ ಅಥವಾ ನಿರ್ವೀರ್ಯವಾದ ಮಿತ್ರಬ್ಯಾಕ್ಟೀರಿಯಾಗಳ ಬದಲು, ಹೊಸದಾದ ನವ ಚೇತನವನ್ನು ಹೊಂದಿರುವ ಮಿತ್ರಬ್ಯಾಕ್ಟೀರಿಯಾಗಳು ದೊರಕುತ್ತವೆ. ಅಂದರೆ ಬೇನೆಯಿಂದ ಚೇತರಿಸಿಕೊಳ್ಳುವುದಕ್ಕೆ ತುಂಬಾ ಸಹಾಯವಾಗುತ್ತದೆ.

ಆದುನಿಕ ವೈದ್ಯ ವಿಜ್ಞಾನಿಗಳು ಇಂತಹ ಪರಿಸ್ಥಿತಿಗಳಲ್ಲಿ, Lacto Bacillus Caseii ಮತ್ತು ಈ ತೆರನ ಬ್ಯಾಕ್ಟೀರಿಯಾಗಳ ಕಷಾಯವನ್ನು ರೋಗಿಗಳಿಗೆ ಕುಡಿಸುತ್ತಾರೆ.

ವಿವರವಾದ ಈ ವಿಜ್ಞಾನವು ನಮ್ಮ ಪೂರ್ವಿಕರಿಗೆ ತಿಳಿದಿತ್ತೋ ಇಲ್ಲವೋ ಹೇಳಬರುವುದಿಲ್ಲ. ಪ್ರಾಯಶಃ ತಿಳಿದಿರಲೇ ಇಲ್ಲ. ಆದರೂ ಅನುಭವದಿಂದ, ಅವರುಗಳು ಪಂಚಗವ್ಯವನ್ನು ನಿಯಮ ಮಾಡಿದ್ದರು. ಇಂದಿನ ವೈಜ್ಞಾನಿಕ ದೃಷ್ಟಿಯಿಂದ ಎಷ್ಟು ಸಮಂಜಸ !

ಹೊಟ್ಟೆಯಲ್ಲಿ ತೀಕ್ಷ್ಣವಾದ ಆ್ಯಸಿಡ್ ಇರುತ್ತದೆ. ಶತ್ರುಬ್ಯಾಕ್ಟೀರಿಯಾಗಳು ಆಕಸ್ಮಾತ್ ಆಹಾರದೊಂದಿಗೆ ಹೊಟ್ಟೆಗೆ ಹೋದಾಗ, ಆ್ಯಸಿಡ್ ಅವುಗಳನ್ನು ಸುಟ್ಟುಹಾಕುತ್ತದೆ. ಮಿತ್ರ ಬ್ಯಾಕ್ಟೀರಿಯಾಗಳು ಹೋದರೂ ಇದೇ ಗತಿ. ಆದರೆ ಬೆಣ್ಣೆಯನ್ನು ಸೇವಿಸಿದರೆ (ಪಂಚಗವ್ಯದಲ್ಲಿ), ಬೆಣ್ಣೆಯು ಹೊಟ್ಟೆಗೆ ತೆಳು ಪೊರೆಯಾಗಿ ಹರಡುತ್ತದೆ. ಆಗ ಆ್ಯಸಿಡ್ ಹೊಟ್ಟೆಗೆ ಸ್ರವಿಸಲು ಸಾಧ್ಯವಿಲ್ಲ. ಈ ಅಂತರದಲ್ಲಿ ಪಂಚಗವ್ಯದಲ್ಲಿರುವ ಮಿತ್ರಬ್ಯಾಕ್ಟೀರಿಯಾಗಳು ಕರುಳಿಗೆ ನುಸುಳಿ ಹೋಗಲು ಸುಲಭ. ಕರುಳು ಅವುಗಳಿಗೆ ತೌರುಮನೆಯಿದ್ದಂತೆ. ಅಲ್ಲಿ ಪುನಃ ಸಹಬಾಳ್ವೆಯನ್ನು ಪ್ರಾರಂಭಿಸಬಹುದು.

ಲಿಚನ್, ಕರುಳಿನಲ್ಲಿರುವ ಸಹಬಾಳುವ ಮಿತ್ರಬ್ಯಾಕ್ಟೀರಿಯಾಗಳು ; ಪಂಚಗವ್ಯ. ಜೀವದ ಒಂದೇ ಸೂತ್ರವು ಸಹಬಾಳ್ವೆಯ ಸೂತ್ರವು ಎಷ್ಟು ಅಮೋಘವಾದುದು !

ಆರ್ಥರ್ ಕೀಸ್ಲರ್

ಪುನಃ ಪುನಃ ಓದಿದಾಗಲೆಲ್ಲ ಹೊಸ ಹೊಸದಾದ, ಹೆಚ್ಚು ಗಾಢವಾದ ಅರ್ಥವನ್ನು ಕೊಡುವ ಆಧುನಿಕ ಪುಸ್ತಕವೊಂದನ್ನು ಮೇಲಿಂದ ಮೇಲೆ ಓದುತ್ತೇನೆ. The Act of Creation ಎಂದು ಆ ಪುಸ್ತಕದ ಹೆಸರು. ಅದರ ಗ್ರಂಥಕರ್ತನೇ ಆರ್ಥರ್ ಕೀಸ್ಲರ್. ಹಂಗೆರಿಯಲ್ಲಿ ಜನ್ಮ ತಾಳಿ, ಆಸ್ಟ್ರಿಯಾದಲ್ಲಿ ವಿದ್ಯಾಭ್ಯಾಸವನ್ನು ಮಾಡಿದ ಈತ, ಬ್ರಿಟಿಷ್ ಪ್ರಜೆಯಾದ ಹೊನೆಗೆ.

1931ರಲ್ಲಿ ಈತ ಎಲ್ಲಾ ಧ್ಯೇಯವಾದಿ ವಿದ್ಯಾರ್ಥಿಗಳಂತೆಯೇ ಕಮ್ಯೂನಿಸ್ಟ್' ಆದ. ತಿಳಿನೀರಿನ ಸರಸ್ಸಿಗೆ ಬಾಯಾರಿದವನು ಹೋದಂತೆ ಕಮ್ಯೂನಿಸಂ ಬಳಿಗೆ ಹೋದೆ ಎಂದು ಅರ್ಥಬರುವಂತೆ ಅವನೇ ಹೇಳಿಕೊಂಡಿದ್ದಾನೆ. 1938ರಲ್ಲಿ ಅದರಿಂದ ಹೊರಬಿದ್ದ. "ಮುಳುಗಿ ಸಾಯುತ್ತಿದ್ದ ಕೋಟ್ಯಂತರ ಹೆಣಗಳು, ಪಟ್ಟಣಗಳ ಭಗ್ನಾವಶೇಷಗಳು, ಇವುಗಳಿಂದ ತುಂಬಿದ್ದ ವಿಷಪೂರಿತವಾದ ಹೊಳೆಯಂತಿದ್ದ ಕಮ್ಯೂನಿಸಂನಿಂದ ಪಾರಾದೆ. ಪಾರಾಗುವುದಕ್ಕೆ, ವಿಷದ ಆ ಹೊಳೆಯಿಂದ ಎದ್ದು ಹೊರಬರಲು, ನನ್ನಲ್ಲಿ ಹೊಸದಾಗಿ ಮೂಡಿದ್ದ ಬಾಳನಂಬಿಕೆಗಳು ಸಹಾಯವಾದುವು" ಎಂದು ಅವನೇ ಹೇಳಿದ್ದಾನೆ.

ಹೊಸದಾಗಿ ಮೂಡಿದ ಅಂತಹ ಪರಿಣಾಮಕಾರಿಯಾದ ಬಾಳ ನಂಬಿಕೆಗಳು ಯಾವುವು ?

*

ಟಿಕಿ ಬಳಿ ಕಳೆದ ಗಂಟೆಗಳು

ಸ್ಪೆಯಿನ್ನಿನಲ್ಲಿ ಯಾದವೀಕಲಹವಾಗುತ್ತಿದ್ದಾಗ, ಕಮ್ಯೂನಿಸಂ ಇನ ಉಜ್ವಲ ಭಂಟ ಎಂದುಕೊಂಡು ಕೀಸ್ಲರ್ ಕಮ್ಯೂನಿಸ್ಟರ ಪಕ್ಷದಲ್ಲಿ ಸ್ವಯಂ ಸೇವಕನಾಗಿ ಸೇರಿಕೊಂಡ. 'ಹುಚ್ಚುಮುಂಡೆ ಮದುವೆಯಲ್ಲಿ ಉಂಡವನೇ

ಜಾಣ.' ಆದರೆ ಯಾದವೀ ಕಲಹದಂತಹ ಹುಚ್ಚುಮುಂಡೆ ಮದುವೆಯಲ್ಲಿ ಕೀಸ್ಲರ್ ಉಣ್ಣಲಿಲ್ಲ; ಬದಲು ಗೂಢಚಾರಿ ಎಂಬ ಕುಪ್ರಸಿದ್ಧಿಯನ್ನು ಹೊಂದಿ ಸೆರೆಸಿಕ್ಕಿಹಾಕಿಕೊಂಡ. ಇವನನ್ನು ಕೂಡಿಟ್ಟಿದ್ದ ಕಾರಾಗೃಹದಲ್ಲಿ ನೂರಾರು ಬಂದಿಗಳು ಇದ್ದರು. ಬೆಳಗಾದರೆ ಹಲವಾರು ಬಂದಿಗಳನ್ನು ಕರೆದುಕೊಂಡು ಹೋಗಿ ಗುಂಡಿಟ್ಟು ಕೊಲ್ಲುವುದು ವಾಡಿಕೆಯಾಗಿತ್ತು. ದಿನ ಬೆಳಗಾದರೆ "ನನ್ನ ಸರದಿ ಈ ದಿನವೋ" ಎಂದು ಕೀಸ್ಲರ್ ಯೋಚಿಸುತ್ತಿದ್ದ. ಆ ದಿನಗಳ ವರದಿಯನ್ನು 'The Hours by the Window' ಎಂಬ ಪುಸ್ತಕದಲ್ಲಿ ಓದಬಹುದು. ಆದರಿಂದ ಉದ್ಧರಿಸಿದ ಪಂಕ್ತಿಗಳು ಹೀಗಿವೆ—

ನಲವತ್ತನೇ ನಂಬರಿನ ಬಂದೀ ಕೊಠಡಿಯ ಕಿಟಕಿಯ ಬಳಿ ನಿಂತಿದ್ದೆ. ಕಬ್ಬಿಣದ ತಂತಿಯೊಂದರಿಂದ ಗೋಡೆಯ ಮೇಲೆ ಗಣಿತದ ಫಾರ್ಮುಲಾ ಗಳನ್ನು ಗೀರುತ್ತಿದ್ದೆ. ಬಾಲ್ಯದಲ್ಲಿ ಕಲಿತಿದ್ದ ಯೂಕ್ಲಿಡ್ಡಿನ ಲೆಕ್ಕಗಳನ್ನು ಮಾಡತೊಡಗಿದೆ. ಮೊದ ಮೊದಲು ಸಾಧ್ಯವಾಗಲಿಲ್ಲ. ಕಡೆಗೆ ಸ್ಮರಣೆಗೆ ಬಂದು ಲೆಕ್ಕವನ್ನು ಪೂರ್ಣಗೊಳಿಸಿದೆ. ಆಗ ಬೌದ್ಧಿಕ ಹೆಮ್ಮೆಗಿಂತಲೂ ಹೆಚ್ಚಾಗಿ, ಸುಂದರವಾದುದನ್ನು ಕಂಡಂತೆ, ಸಂತಸದ ಹಿಗ್ಗು ಉಂಟಾಯಿತು.

ಹಠಾತ್ತನೆ ಹೊಳೆದ ಕಾರಣ

ಈ ತೆರನ ಸೌಂದರ್ಯಾನುಭವವು ಏಕೆ ಇಷ್ಟು ಸಂತಸವನ್ನು ಕೊಟ್ಟಿತು? ಎಂದು ಯೋಚಿಸಿದೆ. ಹಠಾತ್ತನೆ ಕಾರಣವು ಸ್ಪಷ್ಟವಾಗಿ ಕಾಣಿಸಿತು.

ಗೋಡೆಯ ಮೇಲೆ ಗೀಚಿದ ನಿಖರವಾದ ಪ್ರಮಾಣವಿರುವ ಸಂಕೇತ ಗಳಿಂದ, ಪ್ರಮಾಣಾತೀತವಾದುದರ ದರ್ಶನವನ್ನು ಪಡೆಯಬಹುದು ಎನ್ನು ವುದೇ ಸಂತಸಕ್ಕೆ ಕಾರಣ, ಎಂದು ದೃಢವಾದ ನಂಬಿಕೆಯು ಮನಸ್ಸಿನಲ್ಲಿ ಮೂಡಿತು. ಇಂತಹ ನಂಬಿಕೆಯು ಉಂಟಾದಾಗ "ಇದೇ ಅತ್ಯಚ್ಚುಕಟ್ಟು. ಇದೇ ಅತ್ಯಚ್ಚುಕಟ್ಟು" ಎಂಬ ಭಾವನೆಯೂ ಮೂಡಿತು. ಆದರೆ ಇದರ ಹಿನ್ನೆಲೆಯಲ್ಲಿ ಮನಸ್ಸಿನಲ್ಲೆಲ್ಲೋ ಯಾವುದೋ ಒಂದು ಕಿರಿ ಕಿರಿ ಮಾಡು ತ್ತಿತ್ತು. ಇದೇನು ಎಂದು ಅದರತ್ತ ಮನಸ್ಸು ಹರಿಸಿದೆ. "ಇವತ್ತೋ, ನಾಳೆಯೋ ನಿನ್ನ ಗುಂಡಿಕ್ಕಿ ಕೊಲ್ಲುತ್ತಾರೆ" ಎಂದು ಕಿರಿ ಕಿರಿಯು ತಿಳಿಸಿತು. ಮಿಕ್ಕೆಲ್ಲ ಮನಸ್ಸೂ "ಇಷ್ಟೇ ತಾನೆ? ಈ ಅಲ್ಪಕ್ಕೆ ಯಾಕೆ ಮನ ಕೊಡುತ್ತೀ?"

"ಇದಕ್ಕಿಂತ ಗಹನವಾದ ಅನುಭವಗಳಿಲ್ಲವೇ, ಅಭ್ಯಾಸ ಮಾಡಲಿಕ್ಕೆ" ಎಂದು ನಿಶ್ಚಯದಿಂದ ಹೇಳಿತು.

ಆಗ ಶಾಂತಿಯ ನದಿಯಲ್ಲಿ. ಅಂಗತನಾಗಿ ಮಲಗಿ ತೇಲುತ್ತಿದ್ದಂತಿತ್ತು. ಮೌನ ಸೇತುವೆಗಳ ಅಡಿಯಲ್ಲಿ ಸಾಗುತ್ತಿದ್ದಂತಿತ್ತು. ಎಲ್ಲಿಂದಲೂ ಹರಿದು ಬಂದಿರಲಿಲ್ಲ. ಅಶಾಂತಿ ನದಿಯು, ಎಲ್ಲಿಗೂ ಹರಿದು ಹೋಗುತ್ತಿರಲಿಲ್ಲ. ಅನಂತರ ಶಾಂತಿಯ ನದಿಯೂ ಇರಲಿಲ್ಲ, ನಾನೂ ಇರಲಿಲ್ಲ. 'ನಾನು' ಎಂಬುದು ಉಳಿದಿರಲಿಲ್ಲ.

*

ಈ ಪಂಕ್ತಿಗಳನ್ನು ಬರೆದವನು ಪಾಶ್ಚಾತ್ಯ ಪ್ರಚಂಡ, ಈ ಶತಮಾನ ದಲ್ಲಿರುವವ, ವಿಜ್ಞಾನ, ಕಲೆ ಇವುಗಳಲ್ಲಿ ಅಸಾಮಾನ್ಯ ಜ್ಞಾನವನ್ನೂ ಹೊಂದಿದ್ದವ. ಈ ಕ್ಷಣವೋ ಮರುಕ್ಷಣವೋ ಗುಂಡಿಕ್ಕಿ ಕೊಲ್ಲುವರು, ಪ್ರಾಣ ಹೋಗುವುದು, ಸಾವು ಸನ್ನಿಹಿತ, ಎಂದು ಸ್ಪಷ್ಟವಾಗಿ ತಿಳಿದಿರುವಾಗ, ಬಂದಿಖಾನೆಯ ಕೊಠಡಿಯಲ್ಲಿ ಇಂತಹ ಅನುಭವವಾಯಿತು.

ಅವು ಅತ್ಯಂತ ಅಲ್ಪವಾದ ವಿಷಯ. ಅದರಿಂದ ಏಕೆ ಕಿರಿಕಿರಿ ಎನ್ನುವ ಹಂತವನ್ನು ಮುಟ್ಟಿದ್ದ.

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ
ತಥಾ ಶರೀರಾಣಿ ವಿಹಾಯ ಜೀರ್ಣಾ
ಅನ್ಯಾನಿ ಸಂ ಯಾತಿ ನವಾನಿ ದೇಹೀ ॥ (ಗೀತಾ II - 22)

ಹಳೆಯ ಬಟ್ಟೆಗಳನ್ನು ಕಳಚಿಹಾಕಿ, ಹೊಸ ಬಟ್ಟೆಗಳನ್ನು ಮನುಷ್ಯರು ತೊಡುವಂತೆ, ಆತ್ಮನೂ, ಹಳೆಯ ದೇಹವನ್ನು ತ್ಯಜಿಸಿ, ಹೊಸ ದೇಹವನ್ನು ತೊಡುತ್ತಾನೆ.

—ಎಂದು ಗೀತಾಚಾರ್ಯರು ನುಡಿದುದನ್ನು ಆರ್ಥರ್ ಕೀಸ್ಲರ್ ತನ್ನ ಜೀವನದಲ್ಲಿ, ಸಾವು ಸನ್ನಿಹಿತವಾಗಿದ್ದ ಸಂಕ್ರಮಣದ ಕಾಲದಲ್ಲಿ, ಸ್ವಯಂ ಅನುಭವಿಸಿದ. ಅಂದರೆ ನಮ್ಮ ಭಾಷೆಯಲ್ಲಿ ಅವ ಆತ್ಮ ಸಾಕ್ಷಾತ್ಕಾರವನ್ನೂ, ಬ್ರಹ್ಮ ಸಾಕ್ಷಾತ್ಕಾರವನ್ನೂ ಮಾಡಿಕೊಂಡಿದ್ದ ಎಂದನ್ನಬೇಕು.

ನಾನು ಹೋದರೆ

ಶಾಂತಿಯ ನದಿಯು ಎಲ್ಲಿಂದಲೂ ಹರಿದು ಬಂದಿರಲಿಲ್ಲ. ಎಲ್ಲಿಗೂ ಹರಿದು ಹೋಗುತ್ತಿರಲಿಲ್ಲ ಎಂದಾಗ, ಕ್ಷೀರ ಸಾಗರದಲ್ಲಿ ವಟಪತ್ರದ ಮೇಲೆ ನಿಶ್ಚಿಂತನಾಗಿ ಪವಡಿಸಿದ ನಿತ್ಯಾನಂದಮಯಿಯಾದ ಬಾಲಕೃಷ್ಣನ ನೆನಪು ನಮಗೆ

ಬರುವುದು ಸಹಜ. ಅವಿನಾಶಿಯಾದ ಆನಂದಮಯವಾದ ಅನುಭವವನ್ನು ಈ ರೀತಿ ಕತೆಯ ಮೂಲಕ ಹೇಳುವುದು ಬಲು ಚೆನ್ನು.

ಶಾಂತಿಯ ನದಿಯೂ ಇರಲಿಲ್ಲ. ನಾನೂ ಇರಲಿಲ್ಲ. 'ನಾನು' ಎಂಬುವುದೂ ಉಳಿದಿರಲಿಲ್ಲ. ಎಂತಹ ಮಹಾ ವಾಕ್ಯಗಳು ! ಸೆರೆಮನೆಯಲ್ಲಿ ಸಾವನ್ನು ಎದುರು ನೋಡುವ ಪಾಶ್ಚಾತ್ಯನಿಂದ !

'ನಾನು' ಹೋದರೆ, ಅಹಂಕಾರವು ನಾಶವಾದರೆ, ಮಮಕಾರವು ಮುಗಿದುಹೋದರೆ ವೈಕುಂಠವು ಕಟ್ಟಿಟ್ಟ ಬುತ್ತಿ ಎಂದು ಕನಕದಾಸರು ನುಡಿದಿದ್ದರು.

ತನು ನಿನ್ನದೆಂದ ಬಳಿಕ ಎನಗೆ ಬೇರೆ ಮನವಿಲ್ಲ
ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ
—ಇಂತೀ ತ್ರಿವಿಧವೂ ನಿಮ್ಮದೆಂದ ಬಳಿಕ
ಎನಗೆ ಬೇರೆ ವಿಚಾರವುಂಟೇ, ಕೂಡಲ ಸಂಗಮ ದೇವಾ

ಎಂದು, ಶಿವನಿಗೆ ಸಂಪೂರ್ಣವಾಗಿ ಶರಣು ಆಗಿದ್ದ, ಮಮಕಾರವನ್ನು ಹಿಂಗಿಕೊಂಡಿದ್ದ ಅನುಭವ ಮಂಟಪದ ಬಸವಣ್ಣನವರು ನುಡಿದಿದ್ದರು.

ಇದೇ ಅನುಭವವನ್ನು ಆರ್ಥರ್ ಕೀಸ್ಲರ್ ಸೆರೆಮನೆಯಲ್ಲಿ ಪಡೆದು, ಅದೇ ಅರ್ಥಬರುವ ಮಹಾವಾಕ್ಯವನ್ನು ಹೃದಯದಾಳದಿಂದ ನುಡಿದಿದ್ದ. ಮನಸ್ಸಿನ ಯಾವ ಮಾಟವೂ, ಬುದ್ಧಿಯ ಯಾವ ಚುರುಕೂ, ಅಡೆ ತಡೆಯಾಗಲಿಲ್ಲ.

*

ಅಪೂರ್ವ ಪಶ್ಚಿಮದಲ್ಲಿ

ಇಂತಹ ಅಪೌರುಷೇಯವಾದ ಅನುಭವವನ್ನು ಪಡೆದು, ಬ್ರಿಟಿಷರ ನೆರವಿನಿಂದ ಸೆರೆಯನ್ನು ಬಿಡಿಸಿಕೊಂಡು, ಬ್ರಿಟನ್ನಿನಲ್ಲಿ ನೆಲೆಸಿದ ಆರ್ಥರ್ ಕೀಸ್ಲರ್, ಆ ನಂತರ ಬರೆದುದು ನಮ್ಮನ್ನು ದೆವ್ವ ಹಿಡಿದಂತೆ ಹಿಡಿದುಕೊಳ್ಳುವುದು ಅನಿವಾರ್ಯ. ಕುತೂಹಲದಿಂದ ಓದಲು ಶುರುಮಾಡಿದರೆ, ಆ ನಂತರ ಪಂಕ್ತಿ ಪಂಕ್ತಿಗೂ ಮನನ ಮಾಡುವಂತೆ ಪ್ರೇರೇಪಿಸುತ್ತದೆ. ಈ ಕಲಿಯುಗದಲ್ಲಿ ಅದೂ ಅಪೂರ್ವ ಪಶ್ಚಿಮದಲ್ಲಿ ತನುಮನಗಳ ಬೇಡಿಕೆಗಳನ್ನೇ ಧ್ಯೇಯವನ್ನಾಗಿರಿಸಿಕೊಂಡಂತಿರುವವರಲ್ಲಿ, ಸತ್ಯ ದರ್ಶನವನ್ನು ಮಾಡಲು ಸಾಧ್ಯ ಎಂದು ಆರ್ಥರ್ ಕೀಸ್ಲರ್ ಸಾಕ್ಷಿ ನೀಡಿದ್ದಾನೆ.

ಉಪ್ಪಿನ ಪಾಠ

ಸಮುದ್ರದಲ್ಲಿ ಆರಂಭ

ಪ್ರಾಣಿ ಜೀವವು ಸಮುದ್ರದಲ್ಲಿ ಆರಂಭವಾಯಿತು. ಉಪ್ಪು ನೀರಿನಿಂದ ಕೂಡಿದ ಸಮುದ್ರದಲ್ಲಿ ಈಜಾಡುತ್ತಿರುವಾಗ, ಅಂತಹ ನೀರನ್ನು ಬಳಸಿ ಕೊಂಡು ಬಾಳಲು ಕಲಿತುಕೊಂಡಿತು. ಕೋಟ್ಯಂತರ ವರ್ಷಗಳಾದ ಮೇಲೆ ನೆಲವು ದೃಢವಾದಾಗ, ಸಮುದ್ರ ಜೀವಿಗಳು ನೆಲದ ಮೇಲೆ ವಲಸೆ ಹೂಡಲು ಪ್ರಯತ್ನಿಸಿದುವು; ಅವುಗಳ ದೇಹವು ಸೂಕ್ತ ಮಾರ್ಪಾಡುಗಳನ್ನು ಮಾಡಿ ಕೊಳ್ಳಬೇಕಾಯಿತು. ಸಮುದ್ರದಲ್ಲಿರುವ ಉಪ್ಪು ನೀರನ್ನೇ ತಮ್ಮ ದೇಹ ದೊಳಗೆ ಅಳವಡಿಸಿಕೊಂಡಿತು. ಹೀಗಾಗಿ ಇಂದು ಮಾನವದೇಹದಲ್ಲಿ ಸಂಚರಿ ಸುವ ರಕ್ತ ಮತ್ತು ಲಿಂಫ್‌ಗಳು ಉಪ್ಪುನೀರಿನ ಆಧಾರವನ್ನೇ ಪಡೆದಿವೆ. ಕಬ್ಬು ಹೆಚ್ಚುವಾಗ ಬೆರಳಿಗೆ ಗಾಯವಾಗಿ ರಕ್ತ ಬಂದರೆ, ಬಾಯಿಗಿಟ್ಟು ಕೊಳ್ಳುವ ಪ್ರಾಣಿಸ್ವಭಾವವು ನಮ್ಮಲ್ಲಿ ಇನ್ನೂ ಉಳಿದುಬಂದಿದೆ. ಆಗ ರಕ್ತವು ಉಪ್ಪುಪ್ಪಾಗಿರುತ್ತದೆ ಎಂದು ಸುಲಭವಾಗಿ ತಿಳಿಯುತ್ತದೆ.

ತುಂಬಾ ವಾಂತಿ ಭೇದಿಗಳಾಗಿ, ದೇಹದಲ್ಲಿನ ಉಪ್ಪು, ನೀರು ಕಡಿಮೆ ಯಾದಾಗ ರೋಗಿಯು ಅಸ್ಥಾವಸ್ಥೆಗಿಳಿಯುತ್ತಾನೆ. ಆಗ ಉಪ್ಪುನೀರಿನ ಸಲೈನ್ ಇಂಜಕ್ಷನ್ನುಗಳೇ ಸೂಕ್ತ ಚಿಕಿತ್ಸೆ. ದೇಹಕ್ಕೆ ಉಪ್ಪುನೀರು ಅತ್ಯಗತ್ಯ ಎನ್ನುವುದಕ್ಕೆ ಇದೊಂದು ನಿದರ್ಶನ.

ಕಾಡುಮೃಗಗಳಿಗೂ ಉಪ್ಪು ಅಗತ್ಯ. ಹಲವಾರು ಕಾಡುಮೃಗಗಳು, ಹತ್ತಾರು ಮೈಲಿ ದೂರ ನಡೆದು ಉಪ್ಪುಪ್ಪಾಗಿರುವ ಚೌಳು ಮಣ್ಣನ್ನು ನೆಕ್ಕುತ್ತವೆ. ಉಪ್ಪಿನ ಅಗತ್ಯವನ್ನು ಆ ರೀತಿ ಪೂರೈಸಿಕೊಳ್ಳುತ್ತವೆ. ಇಂತಹ ಚೌಳು ಪ್ರದೇಶಗಳನ್ನು ಸಾಲ್ಟ್‌ಲಿಕ್ಸ್ ಎಂದು ಕರೆಯುತ್ತಾರೆ.

ದೇಹಕ್ಕೆ ಅತ್ಯಗತ್ಯವಾದ, ಆದುದರಿಂದಲೇ ಬಲು ರುಚಿಯಾಗಿ ಕಾಣಿ ಸುವ ಉಪ್ಪು ಮಾನವನ ಕುತೂಹಲವನ್ನು ಕೆರಳಿಸಿತು.

ಸಮುದ್ರದ ನೀರಿನಿಂದ ಉಪ್ಪನ್ನು ಒಣಗಿಸಿ ತೆಗೆದ. ನಂತರ ಅದನ್ನು ಶುದ್ಧಿಮಾಡಿ ಬಳಸಲು ಆರಂಭಿಸಿದ. ಇಂದಿಗೂ ನಮ್ಮ ದೇಶದಲ್ಲಿ ಬಳಸಲಾಗುವ ಉಪ್ಪು ಈ ತೆರನದ್ದೇ!

ಸಾಲ್ಟ್‌ಲಿಕ್ಸ್‌ನಂತಿರುವ ಕೆಲವು ಗುಡ್ಡಗಳಲ್ಲಿ ಉಪ್ಪಿರುವುದು ಕಂಡು ಬಂದಿತು. ಸಿಂಧ್ ಪ್ರದೇಶದಲ್ಲಿ ಇಂತಹ ಚೌಳು ಗುಡ್ಡಗಳಿವೆ. ಸಿಂಧ್ ಪ್ರಾಂತ್ಯದ ಪರಿಸರದಲ್ಲೇ ಆರ್ಯರು ಭಾರತಕ್ಕೆ ವಲಸೆ ಬಂದಾಗ ಮೊದಲು ಉಳಿದುಕೊಂಡಿದ್ದು. ಚೌಳು ಗುಡ್ಡಗಳಿಂದ ಅವರುಗಳು ಉಪ್ಪನ್ನು ಪ್ರತ್ಯೇಕಿಸಿದರು. ಸಿಂಧ್ ಪ್ರಾಂತ್ಯ, ಆದಕಾರಣ ಸೈಂಧಲವಣ ಎಂದು ಹೆಸರಿಟ್ಟರು. ಆಗಿನ ಕಾಲದ ವೈದ್ಯರುಗಳು, ಅಂದರೆ ಆಯುರ್ವೇದದ ಮೂಲಸ್ಥರು, ಸೈಂಧಲವಣವನ್ನು ಈಗ ನಾವು ಸಾಲ್ಟೈನ್ ಉಪಯೋಗಿಸುವಂತೆ, ಚಿಕಿತ್ಸೆಗೆ ಬಳಸಲು ಪ್ರಾರಂಭಿಸಿದರು.

ಸೈಂಧಲವಣವೂ, ಸಮುದ್ರದ ಉಪ್ಪೂ, ರಾಸಾಯನಿಕವಾಗಿ ಒಂದೇ, ಎರಡೂ ಸೋಡಿಯಂ ಕ್ಲೋರೈಡೇ! ಆದರೆ ಸೈಂಧಲವಣದಲ್ಲಿ, ಮಣ್ಣಿನಲ್ಲಿರುವ ಇತರ ಲವಣಗಳು ಅಲ್ಪ ಪ್ರಮಾಣದಲ್ಲಿರುತ್ತವೆ. ಸಮುದ್ರದಿಂದ ತಯಾರಿಸಿದ ಉಪ್ಪು ಶುದ್ಧವಾಗಿರುತ್ತದೆ. ಇತರ ಲವಣಗಳು ಸೈಂಧಲವಣದಲ್ಲಿರುವುದರಿಂದ, ಅದು ಕೆಲವು ರೋಗಗಳಲ್ಲಿ ಪ್ರಯೋಜನವನ್ನುಂಟು ಮಾಡುತ್ತದೆ ಎಂದು ಆಯುರ್ವೇದದ ನಂಬಿಕೆ. ಆದುದರಿಂದಲೇ ಆಯುರ್ವೇದದಲ್ಲಿ ಸೈಂಧಲವಣಕ್ಕೆ ಹೆಚ್ಚು ಪ್ರಾಶಸ್ತ್ಯ.

ಉಪ್ಪು ಅಂದರೆ ? !

ಉಪ್ಪು ಅಂದರೆ ಏನು ? ಇದರ ರಚನೆಯೇನು ? ಎಂದು ಮಾನವ ಸಂಶೋಧನೆಯನ್ನು ನಡೆಸಿದ. ವಿದ್ಯುತ್ತಿನ ಪ್ರಭಾವದಿಂದ ಉಪ್ಪನ್ನು ಛಿದ್ರಿಸಿದ. ಆಗ ತಿಳಿದು ಬಂತು: ಉಪ್ಪು ಸೋಡಿಯಂ ಮತ್ತು ಕ್ಲೋರೀನ್‌ಗಳ ಒಕ್ಕೂಟ ಎಂದು.

ಸೋಡಿಯಂ, ಸುಡುವಂತಹ ಒಂದು ಮೂಲವಸ್ತು, ಎಲಿಮೆಂಟ್. ಕೈಯ್ಯಿಗೆ ಇದು ತಾಕಿದರೆ ಕೈಸುಟ್ಟುಹೋಗುತ್ತೆ. ಕಾಗದದ ಮೇಲೆ ಇಟ್ಟರೆ ಕಾಗದ ಸುಟ್ಟು ಹೋಗುತ್ತೆ. ಅಂತಹ ಉರುಬಿನ ವಸ್ತು ಅದು.

ಕ್ಲೋರೀನ್ ಒಂದು ಎಲಿಮೆಂಟ್ ; ಸಾಮಾನ್ಯವಾಗಿ ಅನಿಲದ ರೂಪದಲ್ಲಿರುತ್ತದೆ. ಮೂಗಿನ ಸೆಲೆಯನ್ನು ಕೊರೆಯುವಂತಹ ವಾಸನೆ ಇದಕ್ಕೆ.

ುಡಿಯುವ ನೀರನ್ನು ಶುದ್ಧೀಕರಣ ಮಾಡಲು ಈ ಅನಿಲವನ್ನು ಉಪ ಯೋಗಿಸುತ್ತಾರೆ. ನೀರಿನಲ್ಲಿರಬಹುದಾದ ಬ್ಯಾಕ್ಟೀರಿಯಾಗಳು, ಕ್ಲೋರೀನಿನ ಸಂಪರ್ಕವಾದಾಗ ವಿಷಕನ್ಯೆಯ ಸಂಪರ್ಕವಾದಂತಾಗಿ ಸತ್ತುಹೋಗುತ್ತದೆ. ಕ್ಲೋರೀನ್ ಇಂತಹ ಕಿಚ್ಚಿನ ಅನಿಲ.

ಉರುಬಿನ ಸೋಡಿಯಂ, ಕಿಚ್ಚಿನ ಕ್ಲೋರೀನ್, ಇವೆರಡೂ ರಾಕ್ಷಸ ಗುಣವನ್ನು ಹೊಂದಿದುವೇ. ದೇಹದ ಎಲ್ಲ ಸೆಲ್ಲುಗಳಿಗೂ ತೀವ್ರಾಪಾಯ ವನ್ನು ತರುವಂತವೇ. ಆದರೆ ಇವೆರಡೂ ಭೇಟಿಯಾದರೆ, ಕೂಡಿದರೆ, ಆಗ ಎರಡರ ಉರುಬೂ, ಒಂದನ್ನೊಂದು ಕಟ್ಟಿಕೊಳ್ಳುವುದರಲ್ಲಿಯೇ ಮುಕ್ತಾಯ ಗೊಳ್ಳುತ್ತದೆ. ಇದರ ಪರಿಣಾಮ : ಜೀವಿಗೆ ಅತ್ಯಗತ್ಯವಾದ ವಸ್ತುವನ್ನು ಕರು ಣಿಸಿ ಕೊಡುವುದು. ಎಂತಹ ಸೋಜಿಗ ! ದೇಹವನ್ನು ಸುಡುವಂತಹ ಎರಡು ರಾಕ್ಷಸ ವಸ್ತುಗಳು, ಸಂಯೋಜಿತವಾದ ಮೇಲೆ, ಅತ್ಯಗತ್ಯ ಮತ್ತು ಪ್ರಿಯ ವಾದ ಮಿತ್ರನಾಗುವುದು !

ಶತ್ರುಶಕ್ತಿಗಳ ಸಂಯೋಜನೆ

ಮನನ ಮಾಡಿದಾಗ ಒಮ್ಮೆ ಅನಿಸಿತು : ರಾಕ್ಷಸಗುಣವುಳ್ಳ ಇವೆರಡೂ ಶತ್ರು ವಸ್ತುಗಳನ್ನು, ಶತ್ರು ಶಕ್ತಿಗಳನ್ನು ಸಂಯೋಜಿಸಿದ ಶಕ್ತಿಯು ಒಲವು ಎಂದು. ಒಲವು ಎಂದಾಗ ಬಹಳ ವಿಶಾಲವಾದ ಅರ್ಥದಲ್ಲಿ ಬಳಸುತ್ತಿದ್ದೇನೆ. ಒಲವು ಸೆಳೆಯುವಂತಹ ಆದಿಮೂಲ ಪ್ರವೃತ್ತಿ. ಸೆಳೆಯುತ್ತದೆಯೇ ಹೊರತು ಅದು ಮುನ್ನುಗ್ಗಿ ನೂಕುವುದಿಲ್ಲ. ಸೋಡಿಯಂ ಮತ್ತು ಕ್ಲೋರೀನ್‌ಗಳು ಪರಸ್ಪರ ಸೆಳೆಯಲ್ಪಟ್ಟಾಗ, ಒಲವಿನಿಂದ ಬಂಧಿತವಾದಾದಾಗ, ಅವುಗಳ ರಾಕ್ಷಸ ಪ್ರವೃತ್ತಿಯು ಮಾಯವಾಗುತ್ತದೆ. ಅವುಗಳ ಒಕ್ಕೂಟವಾದ ಮೇಲೆ ದೈವೀಪ್ರವೃತ್ತಿಯು ಪ್ರಸನ್ನವಾಗುತ್ತದೆ. ಆದಕಾರಣ ಉಪ್ಪು ಜೀವಿಗೆ ಹಿತ ವನ್ನು ಸಾಧಿಸಿಕೊಡುತ್ತದೆ.

ಉಪ್ಪಿನ ರಚನೆ, ಬಾಳಿನಿಂದ ನಾವು ಕಲಿಯಬೇಕಾದುದು ಸಾಕಷ್ಟಿದೆ. ಏಕೆಂದರೆ ಇಂತಹ ಅಧ್ಯಯನವು ಬ್ರಹ್ಮಾಂಡದ ಮೂಲದ ಅರಿವನ್ನೇ ಮಾಡಿ ಕೊಡಬಹುದು.

ಬ್ರಹ್ಮಾಂಡದಲ್ಲಿ ಒಂದು ನಿಯಮವನ್ನು ಕಾಣುತ್ತೇವೆ. ಅಣುಗಳು, ಅವುಗಳ ಒಕ್ಕೂಟವು ಮಾಲಿಕ್ಯೂಲ್. ಇವುಗಳ ಒಕ್ಕೂಟವು ಎಲಿಮೆಂಟ್ಸ್. ಇವುಗಳು ಕೂಡಿದರೆ ವಸ್ತುಗಳು. ವಸ್ತುಗಳಲ್ಲಿ ಜೀವ ಎಂಬ ಗುಣ ಕಂಡು

ಬಂದರೆ, ಸಸ್ಯವರ್ಗ, ಪ್ರಾಣಿವರ್ಗ. ಈ ಕಡೆಯ ವರ್ಗದ ತುತ್ತುದಿಯಲ್ಲಿ ನಾವು, ಮಾನವರು. ಭೂಮಂಡಲದಲ್ಲಿ ನಾವು. ಭೂಮಂಡಲದಂತಹ ಹತ್ತಾರು ಮಂಡಲಗಳ ಪರಸ್ಪರ ಸೆಳೆತವೇ ಸೂರ್ಯಮಂಡಲ. ಕೋಟ್ಯಂತರ ನಕ್ಷತ್ರಗಳೂ ಸೂರ್ಯಮಂಡಲಗಳೇ. ಅಣುವಿನಲ್ಲಿ ಕಾಣಬರುವ ವ್ಯವಸ್ಥೆಯೇ ಗಗನದಲ್ಲಿ ಕಾಣಬರುವ ನಕ್ಷತ್ರ ಮಂಡಲಗಳ ವ್ಯವಸ್ಥೆ.

ಅಂದರೆ ಒಂದು ಮೂಲಭೂತವಾದ ಗುಣವನ್ನು ತಿಳಿದುಕೊಂಡರೆ, ಆ ಗುಣವೇ ಬ್ರಹ್ಮಾಂಡದ ಮೂಲಭೂತವಾದ ಗುಣ ಎಂದು ಅರಿಯಬಹುದು.

ಉಪ್ಪಿನಲ್ಲಿ, ಶತ್ರುಶಕ್ತಿಗಳನ್ನು ಒಲವು ಬಂಧಿಸಿದೆ ಎಂದೆ. ಆದುದರಿಂದಲೇ ಉಪ್ಪು ಪ್ರಿಯವಾಯಿತು ಎಂದೆ.

ವಿಶಾಲ ಒಲವು

ಮಾನವನ ನಡವಳಿಕೆಯನ್ನು ನೋಡೋಣ. ಅವನಲ್ಲಿರಬಹುದಾದ ಹಲವಾರು ದುಷ್ಟ ಪ್ರವೃತ್ತಿಗಳಲ್ಲಿ ಮದ ಮಾತ್ಸರ್ಯ ಎಂಬೆರಡೂ ಇವೆ. ಮದವೇರಿದವ, ಇತರರ ಎದುರು ತನ್ನ ಅಹಂಕಾರವನ್ನು, ಜಬರ್ದಸ್ತಿಯನ್ನು ಪ್ರದರ್ಶಿಸಿ, ಅವರನ್ನೂ ಸಂಕಟಪಡಿಸಿ, ತಾನೂ ಕೆಡುತ್ತಾನೆ, ಸ್ವಲ್ಪ ಕಾಲದ ಮೇಲಾದರೂ. ಆದರೆ ಅಂತಹ ಮದಾಂಧಕಾರಿಯು ಕೂಡ, ಒಲವಿನಿಂದ ತನ್ನತ್ತ ಬಂದು ಕತ್ತನ್ನು ತೋಳುಗಳಿಂದ ಬಳಸುವ ಮಗುವಿನೆದುರು ಮದ ತೋರಿಸುತ್ತಾನೆಯೇ ? ಮಗುವಿನ ಮುಗ್ಧ ಒಲವು ಅವನ ಮದವನ್ನು ಕಟ್ಟಿಡುತ್ತದೆ.

ಬಯಸಿದಂತೆ ತಾನಿರಲು ಆಗದಿದ್ದಾಗ, ಇತರರು ಆ ರೀತಿ ಬಾಳಿದರೆ, ಮತ್ಸರವು ಹೆಡೆಯೆತ್ತುತ್ತದೆ. ಮೈಯನ್ನು ಮನಸ್ಸನ್ನು ಉರಿಸಿ ದಹಿಸುತ್ತದೆ. ಆದರೆ ತನ್ನ ಒಲವಿನ, ಪಿತೃವಾಕ್ಯ ಪರಿಪಾಲಿಸುವ, ಮಗನೇ ಆ ರೀತಿ ಬಾಳಿದರೆ, ಮತ್ಸರವು ಬರುವುದಿಲ್ಲ. ಮಗನ ಒಲವು ಮತ್ಸರವನ್ನು ನಾಶಮಾಡುತ್ತದೆ.

ಅಂದರೆ ವಿಶಾಲವಾದ ಒಲವು ಮನಸ್ಸಿನಲ್ಲಿ ಹರಡಿದರೆ ದುಷ್ಟ ಪ್ರವೃತ್ತಿಗಳೆಲ್ಲವೂ ನಾಶವಾಗುತ್ತವೆ. ರುಚಿಯಾದ ಶುಚಿಯಾದ ಬಾಳನ್ನು ಆನಂತರ ನಡೆಸಲು ಸಾಧ್ಯ.

ಉಪ್ಪು ಕಲಿಸುವ ಈ ಪಾಠವನ್ನೇ, ಎಲ್ಲಾ ಮತಧರ್ಮಗಳೂ ಸಾರುತ್ತಿವೆ.

ಎಷ್ಟು ಸುಲಭ ಈ ಪಾಠ ; ಆದರೆ ಆಚರಣೆಯಲ್ಲಿ ಎಷ್ಟು ಕಷ್ಟ !!

ಚಿರಂಜೀವಿ

ಬೆಳಕಿನ ವೇಗವು ಸೆಕೆಂಡಿಗೆ 1,86, 284 ಮೈಲಿಗಳಂತೆ. ಬೆಳಕಿನ ಕಣ
ು photons ಈ ವೇಗದಲ್ಲಿ ಚಲಿಸುತ್ತವಂತೆ. ಸೌರಬ್ರಹ್ಮಾಂಡದಲ್ಲಿ ಈ
ಗಕ್ಕಿಂತ ಹೆಚ್ಚಾಗಿ ಯಾವುದೂ ಚಲಿಸಲು ಅಸಾಧ್ಯ ಎಂಬುದು ಐನ್‌ಸ್ಟೈನರ
ದ್ಧಾಂತಗಳಲ್ಲಿ ಮುಖ್ಯವಾದ ಅಂಶ.

ಈ ವೇಗದ ಶತಾಂಶ ತೊಂಭತ್ತರಷ್ಟು ವೇಗದಲ್ಲಿ ಮನುಷ್ಯನನ್ನು ಚಲಿಸು
ತೆ, ಮಸಲ, ಮಾಡಿದರೆ, ಆಗ ಅವನ ನಾಡಿಯು ಬಡಿತವು ನಿಮಿಷಕ್ಕೆ
2 ಇರುವ ಬದಲು, ನಿಮಿಷಕ್ಕೆ 36 ಆಗುತ್ತದೆಂದು ಲೆಕ್ಕ ಹಾಕಿದ್ದಾರೆ.
ಳಕಿನ ವೇಗದ ಶತಾಂಶ 98 ರಷ್ಟು ವೇಗದಲ್ಲಿ ಮನುಷ್ಯನು ಚಲಿಸುತ್ತಿದ್ದರೆ,
ವನ ನಾಡಿಯು ಬಡಿತವು 20ರಷ್ಟಕ್ಕೆ ಇಳಿಯುತ್ತದಂತೆ. ಬೆಳಕಿನ ವೇಗದಲ್ಲಿ
ವ ಚಲಿಸಲು ಸಾಧ್ಯವಾದರೆ ಆಗ ಅವನ ನಾಡಿಯು ಬಡಿತವು ಸ್ತಬ್ಧವಾಗುತ್ತ
ತೆ. ಅಂದರೆ ಅವ ಸತ್ತ ಅಂತಲ್ಲ ; ಆ ಸ್ಥಿತಿಯಲ್ಲಿ ಅವನ ಹೃದಯವು
ಡಿದುಕೊಳ್ಳುವ ಅಗತ್ಯವಿರುವುದಿಲ್ಲ ಅಂತ ಅರ್ಥ. ಈ ವಿವರಗಳನ್ನು ಗಣಿತ
ಸ್ತ್ರದ ಪ್ರಕಾರ ಸಿದ್ಧಾಂತ ಮಾಡಲಾಗಿದೆಯೇ ಹೊರತು,. ಮನುಷ್ಯನನ್ನಾ
ಲೀ ಅಥವಾ ಇತರ ಯಾವುದೇ ವಸ್ತುವನ್ನಾಗಲೀ ಆ ವೇಗದ ಪ್ರಮಾಣ
ಲ್ಲಿ ದಿಟವಾಗಿ ಚಲಿಸುವಂತೆ ಮಾಡಲು ಅಸಾಧ್ಯವಾಗಿದೆ.

ಆದರೆ ಹಲವಾರು ವಿಜ್ಞಾನಿಗಳು, ಬೆಳಕಿನ ವೇಗಕ್ಕಿಂತಲೂ ಹೆಚ್ಚಾದ
ೇಗದಲ್ಲಿ ಕೆಲವು ಕಣಗಳು—particles ಚಲಿಸಲು ಸಾಧ್ಯ ಎಂದು ಗಣಿತ
ಸ್ತ್ರದ ಪ್ರಕಾರವೇ ಸಿದ್ಧಾಂತ ಮಾಡಿದ್ದಾರೆ. ಸೌರಬ್ರಹ್ಮಾಂಡದಲ್ಲಿ ಆ ಬೆಳ
ವೇಗಕ್ಕಿಂತಲೂ ಹೆಚ್ಚಾದ ವೇಗದಲ್ಲಿ ಕೆಲವು ಕಣಗಳು ಚಲಿಸುತ್ತಲೂ
ವೆ ಎಂದೂ ಹಲವರು ನಂಬಿದ್ದಾರೆ.

ಮಾರ್ಕಂಡೇಯನು ಚಿರಂಜೀವಿ ಎಂದು ನಮ್ಮ ಹಿರಿಯರು ಹೇಳಿದರು.

ಹಾಗೆ ಅವರೆಂದಾಗ ಮಾರ್ಕಂಡೇಯನು ನಮ್ಮಂತೆಯೇ ದೇಹವನ್ನು ಹೊಂದಿದ್ದನು, ಆ ಸ್ಥಿತಿಯಲ್ಲೇ ಅವ ಚಿರಂಜೀವಿಯಾದ ಎಂದೇನೂ ಹೇಳಲಿಲ್ಲ.

ನಮಗಿರುವಂತೆಯೇ ಮಾರ್ಕಂಡೇಯನಿಗೂ ದೇಹವಿತ್ತು. ಒಂದು ಕಾಲದಲ್ಲಿ ನಮ್ಮಂತೆಯೇ ಅವನೂ ಮನಸ್ಸನ್ನು ಹೊಂದಿದ್ದ. ಮನಸ್ಸಿನಿಂದ ಹಲವಾರು ದೇಹದ ಕೆಲಸಗಳನ್ನು ನಡೆಸುತ್ತಲೂ ಇದ್ದಿರಬೇಕು, ನಮ್ಮಂತೆಯೇ.

ಆದರೆ ಮನಸ್ಸನ್ನು ಪೂರ್ಣ ಹತೋಟಿಗೆ ತಂದುಕೊಂಡು ಒಂದೇ ಗುರಿಯತ್ತ ಕೇಂದ್ರೀಕೃತವಾಗುವಂತೆ ಆತ ಮನಸ್ಸನ್ನು ನಡೆಸಲು ಶಕ್ತನಾಗಿದ್ದ ಎಂದು ಊಹಿಸುವುದು ನ್ಯಾಯಸಮ್ಮತವಾಗಿದೆ. ಭೂತಕನ್ನಡಿಯ ಸಹಾಯದಿಂದ ಬೆಳಕಿನ ಅಲೆಗಳನ್ನು ಕೇಂದ್ರೀಕರಿಸಿ ಕಾಗದವನ್ನು ಸುಡುವುದಿಲ್ಲವೇ, ಅದೇ ರೀತಿ ಮನಸ್ಸಿನ ತರಂಗಗಳನ್ನೂ ತಾನು ಇಚ್ಛಿಸಿದ ಗುರಿಯತ್ತ ಮಾರ್ಕಂಡೇಯ ಕೇಂದ್ರೀಕರಿಸಲು ಕಲಿತಿದ್ದ ಎಂದು ಒಪ್ಪಬಹುದು.

ಮನಸ್ಸು ಒಂದು ರೀತಿಯ ಶಕ್ತಿ ಎಂದು ಸುಲಭವಾಗಿ ಹೇಳಬಹುದು. ಆದರೆ ಈ ತನಕ ನಾವು ಕಂಡಿರುವ, ಶಾಖದ ಶಕ್ತಿಯಂತಾಗಲೀ Heat energy, ಬೆಳಕಿನ ಶಕ್ತಿಯಂತಾಗಲೀ Light energy ಅಥವಾ ರೇಡಿಯೋ ಅಥವಾ ಕ್ಷ–ಕಿರಣಗಳಂತಹ Radiation enegy ಯಂತಾಗಲೀ,ಹಾಗೂ Gravitational energy ಅಂತಾಗಲೀ, ಮನಃ ಶಕ್ತಿಯು ಇಲ್ಲ ಎನ್ನಬಹುದು.

ಮನಃಶಕ್ತಿಯು ಇದೆ ಎಂದು ನಂಬಲು ಸಾಕಷ್ಟು ಸಾಕ್ಷ್ಯಗಳಿದ್ದರೂ, ಅದರ ರೀತಿ ನೀತಿಗಳನ್ನು ಅರಿಯಲು ಮಾನವನಿಗೆ ಈ ತನಕ ಸಾಧ್ಯವಾಗಿಲ್ಲ. ಆದರೆ ಮನೋಶಕ್ತಿಯು ಬೆಳಕಿನ ವೇಗಕ್ಕಿಂತಲೂ ಹೆಚ್ಚಾದ ವೇಗದಲ್ಲಿ ಚಲಿಸಬಹುದು, ಚಲಿಸುತ್ತಲೂ ಇದೆ ಎಂದು ನಮ್ಮ ಅನುಭವಗಳಿಂದಲೇ ತಿಳಿಯಬಹುದು.

ಮನಃಶಕ್ತಿಯ ಕ್ರೋಢೀಕರಣ, ಅದರ ಪ್ರಯೋಗ, ಇವೇ ನಮ್ಮ ಹಿರಿಯ ಋಷಿಗಳ ಹವ್ಯಾಸವೂ ಆಗಿತ್ತು. ವ್ಯಾಸಂಗವೂ ಆಗಿತ್ತು; ಹಾಗಾಗಿ ಅವರು ಮನಸ್ಸಿನ ತರಂಗಗಳ ಮೇಲೆ ಹತೋಟಿ ಇಟ್ಟುಕೊಂಡು ಬೆಳಕಿನ ವೇಗಕ್ಕಿಂತಲೂ ಮಿಗಿಲಾದ ವೇಗದಲ್ಲಿ ಮನಸ್ಸನ್ನು ಚಲಿಸುತ್ತಿದ್ದರು ಎನ್ನಬಹುದು. ಹಾಗಾಗಿ, ಆ ಸ್ಥಿತಿಯಲ್ಲಿ ತಾವು ಕಲಿತುದುದನ್ನು ಜನರಿಗೆ ತಿಳಿಸುವಾಗ, ಮಾರ್ಕಂಡೇಯನ ಕಲ್ಪನೆಯನ್ನು ಮುಂದಿಟ್ಟಿರಬಹುದು.

ದೇಹದ ಮೇಲೆ ಮನಸ್ಸು ಸುಮಾರು ಹತೋಟಿಯನ್ನು ಪಡೆದಿದೆ.

ಆದರೆ ದೇಹದ ಮುಖ್ಯ ಕಾರ್ಯಗಳು ಮನಸ್ಸಿನ ನೇರ ಹತೋಟಿಗೆ ಹೊರ
ಗಾಗಿವೆ. ಉದಾ : ಹೃದಯುದ ಬಡಿತ. ಮನಸ್ಸು ಮನಸ್ಸಿನ ಹತೋಟಿಯಲ್ಲಿ
ಪೂರ್ಣವಾಗಿ ಇಲ್ಲದ ಕಾರಣ, ರಾಗ ದ್ವೇಷಗಳು ಕಾಡುತ್ತಿರುವ ಕಾರಣ,
ಪ್ರಕೃತಿಯು ಈ ರೀತಿ, ಮುಖ್ಯ ದೇಹಕಾರ್ಯಗಳನ್ನು ಮನಸ್ಸಿನ ಹತೋಟಿ
ಯಿಂದ ಹೊರತೆಗೆದು ಸ್ವಯಂಚಾಲಿತವನ್ನಾಗಿ ಮಾಡಿದೆ.

ಆದರೆ ಮನಸ್ಸನ್ನು ಮನಸ್ಸೇ ಪೂರ್ಣ ಹತೋಟಿಯಲ್ಲಿಟ್ಟುಕೊಂಡರೆ, ಅಂದರೆ ರಾಗ ದ್ವೇಷಗಳ ಬಾಧೆ ಇರದಂತಾದರೆ, ಆಗ ದೇಹದ ಎಲ್ಲ ಕಾರ್ಯಗಳೂ ಮನಸ್ಸಿನ ಹತೋಟಿಗೆ ಬರುವುದು ಸುಲಭ ಸಾಧ್ಯ.

ಮಾರ್ಕಂಡೇಯನು ಚಿರಂಜೀವಿ ಎಂದಾಗ, ತನ್ನ ದೇಹದ ಮೇಲಿನ ಪೂರ್ಣ ಹತೋಟಿಯನ್ನು ತನ್ನ ಮನಸ್ಸಿನಿಂದಲೇ ಅವ ಸಾಧಿಸಿದ್ದ. ಹಾಗಾಗಿ ಮನೋಶಕ್ತಿಯು ಪ್ರಬಲವಾಗಿತ್ತು, ರಾಗ ದ್ವೇಷ, ಆಸೆ ನಿರಾಸೆಗಳಿಂದ ಬಾಧಿತವಾಗಿರಲಿಲ್ಲ ಎಂಬ ಅರ್ಥ ಬರುತ್ತದೆ. ಅಂತಹವನು ತನ್ನ ಮನಸ್ಸನ್ನು ಬೆಳಕಿನ ವೇಗದಲ್ಲಿ ಚಲಿಸುವಂತೆ ಮಾಡಿದಾಗ, ದೇಹದ ಕ್ರಿಯೆಗಳು ಸ್ತಬ್ಧವಾಗಿರುತ್ತವೆ ಎಂದು ಐನ್‌ಸ್ಟೈನರ ಸಿದ್ಧಾಂತದಂತೆಯೇ ಒಪ್ಪಬಹುದು. ಅಂತಹ ಸಮಾಧಿಸ್ಥಿತಿಯಲ್ಲಿರುವ ಮಾರ್ಕಂಡೇಯನು, ಬ್ರಹ್ಮಾಂಡದ ಅರಿವನ್ನು ಪಡೆಯುವ ಮನಸ್ಸಿರುವುದರಿಂದ, ಜೀವಂತನೇ ಹೌದು. ಹಾಗೂ ದೇಶ ಕಾರ್ಯಗಳು ಸ್ತಬ್ಧವಾಗಿರುವುದರಿಂದ, ಜೀವ, ಸಾವು ಎಂಬ ದ್ವಂದ್ವದಿಂದ ಹೊರತಾಗಿಯೂ ಇರುವನು.

ಚಿರಂಜೀವಿಯ ಕಲ್ಪನೆಯು ಇಂದಿನ ವಿಜ್ಞಾನ ದೃಷ್ಟಿಯಿಂದ ಸಮರ್ಥನೀಯವಾಗಿದೆ ಎನ್ನಬಹುದಲ್ಲವೇ ?

ಕರ್ಮಣಿ ಏವ ಅಧಿಕಾರಸ್ತೆ

ವಿಶಾಲಬುದ್ಧಿಯವರೆಂದು ಸುಪ್ರಸಿದ್ಧರಾದ ವ್ಯಾಸಮಹರ್ಷಿಗಳು ರಚಿಸಿದ ಭಗವದ್ಗೀತೆಯಲ್ಲಿ ಎರಡನೆಯ ಅಧ್ಯಾಯದ ನಲವತ್ತೇಳನೆ ಶ್ಲೋಕವು ಹೀಗಿದೆ :—

ಕರ್ಮಣಿ ಏವ ಅಧಿಕಾರಸ್ತೆ ಮಾ ಫಲೇಶು ಕದಾಚನ
ಮಾ ಕರ್ಮ ಫಲಹೇತುಃ ಭೂಃಮಾ ತೇ ಸಂಗೇ ಅಸ್ತು ಅಕರ್ಮಣಿ

ಕರ್ಮಣಿ ಏವ=ಕೆಲಸಮಾಡುವುದರಲ್ಲಿಯೇ, ತೇ=ನಿನಗೆ, ಅಧಿಕಾರಃ =ಅಧಿಕಾರವಿರಬೇಕು. ಫಲೇಶು=ಫಲಿತಾಂಶದಲ್ಲಿ, ಕದಾಚನ=ಎಂದಿಗೂ, ಮಾ=ಆಗದಿರಲಿ. ಕರ್ಮ ಫಲಹೇತುಃ=ಕೆಲಸಕ್ಕೆ ತಕ್ಕ ಕಾಸು, ಅಥವಾ ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ ಎಂಬ ಫಲದ ಆಸೆಯು ಕಾರಣವು, ಮಾ ಭೂಃ= ನಿನಗೆ ಆಗದಿರಲಿ, ಅಕರ್ಮಣಿ=ಕರ್ಮವನ್ನು ಮಾಡದೆ ಬಿಡುವುದರಲ್ಲಿ, ತೇ=ನಿನಗೆ, ಸಂಗಃ=ಪ್ರೀತಿಯು, ಮಾ ಅಸ್ತು=ಆಗದೆ ಇರಲಿ.

ಯಾವುದಾದರೂ ಕೆಲಸವನ್ನು ಮಾಡಬೇಕು, ಯಾವುದನ್ನೂ ಮಾಡದೆ ತೆಪ್ಪಗಿರಬಾರದು. ಮಾಡಿದ ಕೆಲಸಕ್ಕೆ ಪ್ರತಿಫಲವನ್ನು ಅಪೇಕ್ಷಿಸಬಾರದು. ಕೆಲಸವನ್ನು ಮಾಡುವುದಷ್ಟೇ ನಮ್ಮ ಅಧಿಕಾರ, ನಮ್ಮ ಹೊಣೆ. ಸ್ವಲ್ಪ ವಿಚಿತ್ರವಾದ ಉಪದೇಶ.

ಬಾಳಿನ ದೈನಂದಿನ ಕೆಲಸ ಮಾಡುವವರಿಗೆ ಈ ಉಪದೇಶವು ಸ್ವಲ್ಪ ವಿಪರೀತವೇ ! ಆಧ್ಯಾತ್ಮಿಕವೆಂಬ ದೃಷ್ಟಿಯಿಂದ ಹೀಗೆ ಋಷಿಗಳು ಹೇಳಿದರು ಅಂದರೆ, ದೇವರ ಪೂಜೆಯನ್ನು ಮಾಡು, ಆದರೆ ಸ್ವರ್ಗವು ದೊರಕುತ್ತದೆ ಎಂಬ ಆಸೆಯಿಂದ ಮಾಡಬೇಡ ಎಂದರೆ, ನನಗೆ ಯಾವ ಕಾಳಜಿಯೂ ಆಗುವುದಿಲ್ಲ. ಗಂಧ ಪುಷ್ಪಗಳಿಂದ ಪೂಜೆಯನ್ನು ಮಾಡಿಸಿಕೊಳ್ಳುವ ದೇವರಲ್ಲಾಗಲೀ, ಹಸಿವೇ ಇರದ, ಮಾಲಿನ್ಯವೇ ಇರದ ಸ್ವರ್ಗಲೋಕದಲ್ಲೇ ಆಗಲೀ ಎಳ್ಳಷ್ಟೂ ನನಗೆ ನಂಬಿಕೆಯಿಲ್ಲ. ಎಳೆಯ ಮಕ್ಕಳ ಕಟ್ಟುಕತೆಗಳಂತಿರುವ ಈ

ಂಬಿಕೆಗಳು ಮನುಷ್ಯರಲ್ಲಿ ಬಹುಸಂಖ್ಯಾತರಿಗೆ ನೆಮ್ಮದಿಯನ್ನೂ ಸಂತಸವನ್ನೂ ೊಟ್ಟಿದೆ. ಅಂದಮಾತ್ರಕ್ಕೆ ಇದು ಸತ್ಯ ಎನ್ನಬರುವುದಿಲ್ಲ. ಮನುಷ್ಯರಲ್ಲಿ ಹುಸಂಖ್ಯಾತರು, ವಿಚಾರಮಾಡುವ ದೃಷ್ಟಿಯಿಂದ ಇನ್ನೂ ಎಳೆಯ ುಕ್ಕಳು ಎಂದು ತೀರ್ಮಾನಿಸಬೇಕು, ಅಷ್ಟೇ!

ವ್ಯಾವಹಾರಿಕ ದೃಷ್ಟಿಯಿಂದ ವಿಚಾರ ಮಾಡೋಣ. ಬಾಳಿನಲ್ಲಿ ದಿನ ನವೂ ಎದುರಿಸಬೇಕಾದ ನಿದರ್ಶನಗಳನ್ನು ಕುರಿತು ಯೋಚಿಸೋಣ.

ಾಲೆಯ ಮಗು

ಬಕುಳ ಏಳು ವರ್ಷದ, ಶಾಲೆಗೆ ಹೋಗುವ ಮಗು. ಶಾಲೆಯಲ್ಲಿ ನಿಯ ುಸಿದ ಮನೆಯ ಪಾಠಗಳನ್ನು ಬರೆದು ಮುಗಿಸಲು ಅವಳಿಗೆ ಅಸಾಧ್ಯ ಬೇಸರ. ಂದು ಕಡೆ ಅಪ್ಪ ಹೆದರಿಸಬೇಕು, ಇನ್ನೊಂದು ಕಡೆ ಅಮ್ಮ ಕೋಡುಬಳೆಯ ಸೆಯನ್ನು ತೋರಿಸಬೇಕು; ಆಗ ಅವಳು ಮನೆಯ ಪಾಠಗಳನ್ನು ಹೇಗೋ ುಗಿಸಿಡುತ್ತಾಳೆ. ಈ ಮಗುವಿಗೆ ಓದಿನ ಮೇಲೆ ಸ್ವಾಭಾವಿಕ ಇಷ್ಟವೇ ಇಲ್ಲ ೇನೋ. ಯಾಕೆ ಸುಮ್ಮಗೆ ಸತಾಯಿಸುತ್ತೀರಿ. ಹೊರವಾಗಿ ಬೆಳೆದು ಮನೆ ೆಲಸವನ್ನು ಲಕ್ಷಣವಾಗಿ ಮಾಡುವುದನ್ನು ಕಲಿತರೆ ಸಾಲದೇ, ಎಂದು ುಮ್ಮೊಮ್ಮೆ ಅನ್ನಿಸಿತ್ತು. ಆ ವರ್ಷದ ಪರೀಕ್ಷೆಯಲ್ಲಿ ರ್‍ಯಾಂಕ್ ತೆಗೆದು ೊಂಡಳು. ಮೂರು ಪುಸ್ತಕಗಳನ್ನು ಬಹುಮಾನವಾಗಿ ಪಡೆದು ತಂದಳು. ಹುಮಾನ ಬಂದ ಪುಸ್ತಕಗಳನ್ನು ಓದಬೇಕು ಎಂಬ ಕಡ್ಡಾಯವೇನೂ ಇಲ್ಲ. ುಂದಿನ ವರ್ಷದ ಪಠ್ಯಪುಸ್ತಕಗಳೂ ಅವಲ್ಲ. ಆದರೂ ಊಟಕ್ಕೆ ಕರೆದರೆ ್ವಲ್ಪ ತಡೀಮ್ಮಾ, ಇದೊಂದು ಕತೆ ಮುಗಿಸಿಬಿಟ್ಟು ಬರ್‍ತೀನಿ ಎಂದು ಬಕುಳ ೋಗರೆಯುವಳು. ಊಟ ಮಾಡಿಬಿಟ್ಟು ಓದು ಎಂದು ಅಮ್ಮ ಗದರಿಸಿದರೆ, ಡಗೈಯಲ್ಲಿ ಪುಸ್ತಕವನ್ನು ಹಿಡಿದುಕೊಂಡು ಓದುತ್ತಾ, ಬಲಗೈಯ್ಯಲ್ಲಿ ುಣ್ಣುವ ತುತ್ತನ್ನು ಸರಿಯಾಗಿ ನೋಡದೆ ತಿನ್ನುತ್ತಿದ್ದಳು. ಆ ಮೂರೂ ುಸ್ತಕಗಳನ್ನು ಓದಿ ಮುಗಿಸುವತನಕ ಅವಳಿಗೆ ನೆಮ್ಮದಿಯಿಲ್ಲ.

ಓದಿನಮೇಲೆ ಅವಳಿಗೆ ತುಂಬಾ ಆಸೆಯಿದೆ. ಹೊಸ ಪುಸ್ತಕದ ಹೊಸ ಚಾರಗಳು, ಅವಳಲ್ಲಿ ಕುತೂಹಲವನ್ನು ಉಂಟುಮಾಡುತ್ತದೆ ಎಂಬುದು ್ವತಃ ಸಿದ್ಧ.

ಆದರೆ ಮನೆಯ ಪಾಠಗಳನ್ನು ಓದಲು ಅಥವಾ ಮುಗಿಸಲು ಏಕೆ

ಬೇಸರ ? ಕಡ್ಡಾಯವಾದುದನ್ನು ಮಾಡಬೇಕಾದಾಗ, ಕಡ್ಡಾಯದ ಮೇಲಿನ ಸ್ವಾಭಾವಿಕವಾದ ವಿರೋಧವು ಬೇಸರವನ್ನು ತರುತ್ತದೆ. ಪಾಠಗಳ ಮೇಲಿನ ವಿರೋಧವಲ್ಲ, ಓದಿನ ಮೇಲಿನ ವಿರೋಧವಲ್ಲ.

ಪ್ರೇರಣೆ; ಕುಮ್ಮಕ್ಕು

ಮನೆಯ ಪಾಠಗಳನ್ನು ಮಾಡಲೇಬೇಕಾದಾಗ, ಅಪ್ಪನ ಶಿಕ್ಷೆಯ ಭಯವು ಒಂದು ಕಡೆ, ಅಮ್ಮನು ಕೋಡುಬಳೆಯನ್ನು ಕೊಡುವ ಆಸೆ ಇನ್ನೊಂದು ಕಡೆ, ಮಾರನೆಯ ದಿನ ಶಾಲೆಯಲ್ಲಿ ಮಾಸ್ತರು ಮೆಚ್ಚುತ್ತಾರೆ, ಸಹಪಾಠಿಗಳಿಗಿಂತ ನೀನು ಜಾಣೆ ಎನ್ನುತ್ತಾರೆ ಎನ್ನುವ ಮನ್ನಣೆಯ ಆಸೆ-ಮನೆಯ ಪಾಠಗಳನ್ನು ಮಾಡಿ ಮುಗಿಸಲು, ಇವು ಮೂರು ಪ್ರೇರಕಗಳು, ಕುಮ್ಮಕ್ಕುಗಳು. ಮನ್ನಣೆಯಾಗಲೀ ಕೋಡುಬಳೆಯಾಗಲೀ, ಬಕುಳಳು ನಿರೀಕ್ಷಿಸುವ ಪ್ರತಿಫಲ. ಅಪ್ಪನ ಗದರಿಕೆಯು ಬಕುಳಳು ಬಯಸದೆ ಇರುವ ಪ್ರತಿಫಲ. ಮನೆಯ ಪಾಠಗಳನ್ನು ಮುಗಿಸಬೇಕಾದಾಗ, ಈ ಫಲಗಳು ಬಕುಳಳ ಮನಸ್ಸಿನಲ್ಲಿ ಕಾಡುತ್ತಿರುತ್ತವೆ.

ಆದರೆ ಬಹುಮಾನದ ಪುಸ್ತಕಗಳನ್ನು ಓದುವಾಗ, ಕಡ್ಡಾಯವೂ ಇಲ್ಲ. ಇತರರಿಂದ, ಅಂದರೆ ಅಪ್ಪ, ಅಮ್ಮ, ಮಾಸ್ತರು ಇವರುಗಳಿಂದ ಯಾವ ಪ್ರತಿಫಲದ ಆಸೆಯೂ ಇರುವುದಿಲ್ಲ. ತನಗೆ ಇಷ್ಟವಾಯಿತು, ತಾನು ಓದಿದಳು, ತಾನು ಹಿಗ್ಗಿದಳು.

ಓದುವುದು ಒಂದು ಕೆಲಸ, ಒಂದು ಕರ್ಮ. ಪ್ರತಿಫಲಾಪೇಕ್ಷೆಯಿಲ್ಲದೆ ಓದುವುದು ಸುಖ. ಪ್ರತಿಫಲಾಪೇಕ್ಷೆಯಿಂದ ಓದುವುದು ಬೇಸರವೇ.

ಅಂದರೆ ವ್ಯಾಸಮಹರ್ಷಿಗಳು ನುಡಿದುದು, ನಮ್ಮ ವ್ಯಾವಹಾರಿಕ ಜೀವನದಲ್ಲಿ ಕೂಡ ಅರ್ಥಪೂರ್ಣವಾಗಿದೆ. ನಮ್ಮ ಮನಸ್ಸಿನ ನಡವಳಿಕೆಯ ರೂಪರೇಷೆಗಳನ್ನು ಸ್ಪಷ್ಟವಾಗಿ ಗುರುತಿಸಿ, ಋಷಿಗಳು ಸೂತ್ರದಂತಿರುವ ಈ ಉಪದೇಶವನ್ನು ಮಾಡಿದರು ಎನ್ನಲೇಬೇಕು.

ಎಳೆಯ ಮಗು, ಇನ್ನೂ ಬುದ್ಧಿ ತಿಳಿಯದ ಮಗು, ಅಂತಹವಳಿಗೆ ಮನೆಯ ಪಾಠಗಳು ಬೇಸರ ತಂದಿರಬಹುದು. ಬಹುಮಾನ ಬಂತಲ್ಲ ಎಂಬ ಹೆಮ್ಮೆಯಲ್ಲಿ ಅವನ್ನು ಓದಿದಳು ಎಂದು ಯಾರಾದರೂ ಅನ್ನಬಹುದು.

ಪ್ರಾರಬ್ಧ ಕರ್ಮ

ಬಿ.ಎ. ಪರೀಕ್ಷೆಗೆ ಓದುತ್ತಿದ್ದಾಗ, ನನ್ನ ಆತ್ಮೀಯನೊಬ್ಬ, ಪಠ್ಯಪುಸ್ತಕವಾಗಿದ್ದ ಹ್ಯಾಮ್ಲೆಟ್ ಅನ್ನು, ಅದಕ್ಕಿಂತ ಹೆಚ್ಚು ಶ್ರದ್ಧೆಯಿಂದ, ಹ್ಯಾಮ್ಲೆಟ್ ನಾಟಕದ ಮೇಲೆ ಪ್ರಕಟಿತವಾದ ವಿಮರ್ಶನಾ ಗ್ರಂಥಗಳನ್ನು ಓದಿದ್ದ. ಯಾಕಾದರೂ ಷೇಕ್ಸ್‌ಪಿಯರ್ ಹುಟ್ಟಿದನೋ, ಹುಟ್ಟಿದರೂ ಚಿಂತೆಯಿಲ್ಲ, ನಾಟಕವನ್ನು ಯಾಕಾದರೂ ಬರೆದನೋ ನಮ್ಮನ್ನು ಗೋಳುಹುಯ್ದುಕೊಳ್ಳುವುದಕ್ಕೆ ಎಂದು ವರ್ಷದಾದ್ಯಂತ, ಲೊಟಕುತ್ತಲೇ ಇದ್ದ. ಆ ನಾಟಕವನ್ನು ಓದಿ ಅವ ಸಂತೋಷವನ್ನು ಪಟ್ಟ ಎಂದು ನನಗನ್ನಿಸಲೇ ಇಲ್ಲ. ಇದೊಂದು ಪ್ರಾರಬ್ಧ ಕರ್ಮ ಎಂದೇ ಅವನು ಓದಿದ.

ಪರೀಕ್ಷೆಯಲ್ಲಿ, ಇಂಗ್ಲೀಷಿನಲ್ಲಿ ಫಸ್ಟ್‌ಕ್ಲಾಸನ್ನು ಗಿಟ್ಟಿಸಿದ. ಅದು ಬೇರೆ ಮಾತು.

ಆಮೇಲೆ ಅವನು ಲಾಯರ್ ಪರೀಕ್ಷೆಗೆ ಹೋದ. ವೈದ್ಯ ಕಾಲೇಜಿಗೆ ನಾನು ಜಾರಿಬಿದ್ದೆ. ಎರಡು ಮೂರು ವರ್ಷ ಅವನ ಭೇಟಿಯಾಗಲಿಲ್ಲ. ಆನಂತರ ಅವ ಬೆಂಗಳೂರಿನಲ್ಲಿ ನೆಲೆಸಿದ. ತಿಂಗಳಿಗೊಮ್ಮೆಯೋ ಎರಡು ಬಾರಿಯೋ ಭೇಟಿಯಾಗುತ್ತಿದ್ದ ನನ್ನನ್ನು.

ಒಂದೊಂದು ಬಾರಿ, ಆ ಮಾತು ಈ ಮಾತುಗಳ ಮಧ್ಯೆ ಹ್ಯಾಮ್ಲೆಟ್ಟಿನಿಂದ ಪಂಕ್ತಿಗಳನ್ನು ಉದಹರಿಸುತ್ತಿದ್ದ. "ಲೋ, ಆ ನಾಟಕವನ್ನು ನಾನೂ ಆಸ್ಥೆಯಿಂದ ಓದಿದ್ದೆ. ಆದರೆ ಯಾವ ಪಂಕ್ತಿಗಳ ನೆನಪೂ ಬರುವುದಿಲ್ಲವಲ್ಲೋ, ನಿನಗೆ ಹೇಗೆ ಅಷ್ಟು ಚೆನ್ನಾಗಿ ಸ್ಮರಣೆಯಲ್ಲಿದೆ" ಎಂದು ಕೇಳಿದೆ. "ಬಿ.ಎ. ಪರೀಕ್ಷೆಯ ಸೂತಕ ಮುಗಿದುಹೋಯಿತು, ನೋಡು. ಆಮೇಲೆ ಭಾರೀ ಭಾರೀ ಲಾ ಪುಸ್ತಕಗಳನ್ನು ಓದಬೇಕಾಯಿತು. ಅವುಗಳೋ ಅಸಾಧ್ಯ ಬೋರ್ ಹೊಡೆಯುವಂತಹವು. ಅವನ್ನು ಓದುವಾಗ ತುಂಬಾ ಬೇಜಾರಾದರೆ, ಹ್ಯಾಮ್ಲೆಟ್ ಅನ್ನು ಓದುತ್ತಿದ್ದೆ. ಈ ಮೂರು ನಾಲ್ಕು ವರ್ಷಗಳಲ್ಲಿ ಹತ್ತಿಪ್ಪತ್ತು ಬಾರಿ ಹ್ಯಾಮ್ಲೆಟ್ ಅನ್ನು ಪುನಃ ಪುನಃ ಓದಿದೆನೇನೋ ಕಣೋ, ಅದಕ್ಕೆ ನೆನಪಿನಲ್ಲಿದೆ" ಎಂದವ ಹೇಳಿದ.

ಅದೇ ಅದಕ್ಕೆ ಪ್ರತಿಫಲ

ಅಂದರೆ ಬುದ್ಧಿ ತಿಳಿದ ಪ್ರೌಢನಿಗೂ, ಬಕುಳಳಿಗೆ ಅನ್ವಯಿಸಿದ ವಿಶ್ಲೇ

ಷಣೆಯೋ ಅನ್ವಯಿಸುತ್ತದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

Virtue is it's own reward ಎನ್ನುತ್ತಾರೆ. ಒಳ್ಳೆಯ ಕೆಲಸವನ್ನು ಮಾಡುವುದರಿಂದ ಮನಸ್ಸಿಗೆ ಸಂತಸವುಂಟಾಗುತ್ತದೆ, ಸಂತಸವೇ ಆ ಕೆಲಸದ ಪ್ರತಿಫಲ. ಬೇರೆ ಯಾವ ಪ್ರತಿಫಲವನ್ನೂ ನಿರೀಕ್ಷಿಸಬಾರದು.

Honesty is the best policy ಎಂದರು. ಬಾಳಿನಲ್ಲಿ ಬದುಕಲು ಈ ಪಾಲಿಸಿಯು, ಈ ನಿಯಮವು ಸಹಾಯಕಾರಿಯಾಗಬಹುದು. ಆದರೆ ಹಾಗಾದಾಗ ಅದು Virtue ಆಗಿರುವುದಿಲ್ಲ. Honesty ಯು virtue ಆಗಬೇಕಾದರೆ, ಮನಸ್ಸಿಗೆ ಸಂತಸ, ಸಮಾಧಾನಗಳನ್ನು ಕೊಡಬೇಕಾದರೆ, Honesty for the sake of honesty ಆಗಬೇಕು.

ಇವೆಲ್ಲ ಅರ್ಥಗಳನ್ನೂ ಸೂಚಿಸುವ, "ಕರ್ಮಣ್ಯೇವಾಧಿಕಾರಸ್ತೇ" ದಿಟವಾಗಲೂ ಮನನ ಮಾಡಬೇಕಾದ ವಿಷಯ.

ಯಾವುದನ್ನಾದರೂ ಓದಿದಾಗ, ಅಥವಾ, ನೋಡಿದಾಗ, ಹಾಗೂ ಕೇಳಿದಾಗ, ಒಮ್ಮೊಮ್ಮೆ ಒಂದು ಸಾಮಾನ್ಯ ರೂಢಿಯಲ್ಲಿರುವ ಪದವು ಬಹಳ ಗಹನವಾದ ಅರ್ಥವನ್ನು ಮಿಂಚಿಸುತ್ತದೆ. ಮುಂದೆ ಅದೊಂದು ಅರ್ಥವನ್ನು ಬಿಟ್ಟು ಇನ್ನೇನನ್ನೂ ಯೋಚಿಸಲು ಬರುವುದಿಲ್ಲ.

ಹಲವಾರು ಬಾರಿ ಹೀಗಾದಾಗ, ಮನನ ಮಾಡಲೇ ಬೇಕಾದಾಗ ನಮ್ಮ ಪುರಾತನ ಮನನಿಗರು ಅಂದುದಕ್ಕೂ, ಈಗಿನ ವೈಜ್ಞಾನಿಕ ನೂತನ ಸಂಶೋಧನೆಗಳಿಗೂ ಬಹಳಷ್ಟು ಹೋಲಿಕೆಯು, ಅಥವಾ ಸಮತ್ವವು ಕಾಣಿಸಿತು. ಇವುಗಳನ್ನು ಬರೆದಿಟ್ಟೆ. ಅರೆಕ್ಷಣದಲ್ಲಿ ಓದಬಹುದಾದ ಮನನಗಳು. ಅವುಗಳಲ್ಲಿ ಕೆಲವನ್ನು ಈ ಕಿರು ಹೊತ್ತಗೆಯಲ್ಲಿ ಆಸ್ಥೆಯಿರುವ ಕನ್ನಡಿಗರಿಗೆ ಅರ್ಪಿಸುತ್ತಿದ್ದೇನೆ. ಇದನ್ನು ಓದಿದ ಹಲವರಾದರೂ ಮನನ ಮಾಡುವಂತಾದರೆ, ದೈವ ಕೃಪೆ ಎಂದು ಸಂತಸಪಡುತ್ತೇನೆ.

IBH

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009